ಸೋಮವಾರ, ಜನವರಿ 9, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 9 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ನವೋದಯ ಪ್ರವೇಶ ಪರೀಕ್ಷೆಯ ಅರ್ಜಿ ಸಲ್ಲಿಕೆ ಕುರಿತ ಮಾಹಿತಿ ಇಲ್ಲಿದೆ

ಆಳ-ಅಗಲ
ಸ್ಮಾರಕ ಸಂರಕ್ಷಣೆಗೆ ನಿರ್ಲಕ್ಷ್ಯ

ಗುಂಡಿನ ದಾಳಿ ಪ್ರಕರಣ: ಮೂವರ ಬಂಧನ 8
'ದಲಿತ ಸಿ.ಎಂ ಕೇಳುವ ದಿನ ದೂರವಿಲ್ಲ' 4B

ಟಾಟಾ ಸಮೂಹದ ಮುಖ್ಯಸ್ಥರ ಪ್ರತಿಕ್ರಿಯೆ
'ನಿರೀಕ್ಷೆಗೆ ತಕ್ಕಂತೆ ಪರಿಸ್ಥಿತಿ ನಿಭಾಯಿಸಿಲ್ಲ' 9

ಕನ್ನಡ ಸಾಹಿತ್ಯ ಸಮ್ಮೇಳನ: 'ಬಹಿರಂಗ ಅಧಿವೇಶನ'ದ 6 ನಿರ್ಣಯಗಳಿಗೆ ಅನುಮೋದನೆ

ಹಿಂದಿ ಹೇರಿಕೆ ವಿರುದ್ಧ ಖಂಡನೆ

ಪ್ರಜಾವಾಣಿ ವಾರ್ತೆ

ಕನಕ-ಶರೀಫ-ಸರ್ವಜ್ಞ ವೇದಿಕೆ (ಹಾವೇರಿ): ಹಿಂದಿ ಹೇರಿಕೆಗೆ ರಾಜ್ಯದಲ್ಲಿ ವ್ಯಾಪಕ ವಿರೋಧ ವ್ಯಕ್ತವಾದ ಬೆನ್ನಲ್ಲೇ, 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲೂ ಹಿಂದಿ ಅಥವಾ ಇನ್ಯಾವುದೇ ಭಾಷೆಯ ಆಕ್ರಮಣ ಮತ್ತು ಹೇರಿಕೆ ಖಂಡಿಸುವುದಾಗಿ ನಿರ್ಣಯ ಕೈಗೊಳ್ಳಲಾಯಿತು.

ಭಾನುವಾರ ನಡೆದ ಸಮ್ಮೇಳನದ 'ಬಹಿರಂಗ ಅಧಿವೇಶನ'ದಲ್ಲಿ ಸರ್ವಾನುಮತದೊಂದಿಗೆ 6 ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್ ಪಾಂಡು ನಿರ್ಣಯಗಳನ್ನು ಮಂಡಿಸಿದರು.

ನಿರ್ಣಯಗಳು: 1. 'ಕನ್ನಡ ಸಮಗ್ರ ಭಾಷಾ ಅಭಿವೃದ್ಧಿ ವಿಧೇಯಕ' ಕೂಡಲೇ ಸುಗ್ರೀವಾಜ್ಞೆ ಮೂಲಕ ಕಾನೂನಿನ ರೂಪ ಪಡೆದು ಶಿಕ್ಷಣ, ನ್ಯಾಯಾಂಗ, ಆಡಳಿತದಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ಬರಬೇಕು.

2. ಭಾರತ ಸಂವಿಧಾನದ ಎಂಟನೇ ಪರಿಚ್ಛೇದದ ಅನ್ವಯ ಎಲ್ಲಾ ಪ್ರಾಂತೀಯ ಭಾಷೆಗಳನ್ನು ಸಮಾನ ಎಂದು ಗುರುತಿಸಿದ್ದು, ಈ ಪಟ್ಟಿಯಲ್ಲಿರುವ 22 ಭಾಷೆಗಳಲ್ಲಿ 'ಕನ್ನಡ' ಕರ್ನಾಟಕದ ಸಾರ್ವಭೌಮ ಭಾಷೆ. ಇದರ ಮೇಲೆ ಹಿಂದಿ ಅಥವಾ ಇನ್ಯಾವುದೇ ಭಾಷೆಯ ಆಕ್ರಮಣ ಹಾಗೂ ಹೇರಿಕೆಯನ್ನು ಈ ಸಮ್ಮೇಳನ ತೀವ್ರವಾಗಿ ಖಂಡಿಸುತ್ತದೆ.

4ನೇ ಪುಟ ನೋಡಿ

ಹಾವೇರಿ ಹೊರವಲಯದಲ್ಲಿ ಆಯೋಜಿಸಿದ್ದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾನುವಾರ ಕಂಡುಬಂದ ಜನಸ್ತೋಮ –ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ವಲ್ಲಭಭಾಯಿ ಪಟೇಲರೇ ಗಡಿ ಸಮಸ್ಯೆಗೆ ಮೂಲ ಕಾರಣ: ದೊಡ್ಡರಂಗೇಗೌಡ

ಶ್ರೀಹಾನಗಲ್ ಕುಮಾರ ಶಿವಯೋಗಿಗಳ ವೇದಿಕೆ(ಹಾವೇರಿ): 'ಅಂದಿನ ಕೇಂದ್ರ ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲರು ಭಾಷಾವಾರು ಪ್ರಾಂತ ವಿಂಗಡಣೆಯೆಂದು ಭೂಪಟವನ್ನು ಇಟ್ಟುಕೊಂಡು ಅವೈಜ್ಞಾನಿಕವಾಗಿ ಗೆರೆಗಳನ್ನು ಎಳೆದರು. ಗಡಿ ಸಮಸ್ಯೆಗಳಿಗೆ ಅವರೇ ಮೂಲ ಕಾರಣರಾಗಿದ್ದಾರೆ' ಎಂದು 86ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಡಾ. ದೊಡ್ಡರಂಗೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಸಮ್ಮೇಳನದ ಮೂರನೇ ದಿನವಾದ ಭಾನುವಾರ ನಡೆದ 'ಗಡಿನಾಡು ಮತ್ತು ಹೊರನಾಡು ಕನ್ನಡಿಗರ ತಳಮಳಗಳು' ಗೋಷ್ಠಿಯಲ್ಲಿ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

'ಭಾಷಾವಾರು ಪ್ರಾಂತ ವಿಂಗಡಣೆ ಇತ್ತೀಚೆಗೆ ಹೊಸ ಸಮಸ್ಯೆಗಳನ್ನು ಹುಟ್ಟುಹಾಕುತ್ತಿದೆ. ಗಡಿ ಪ್ರದೇಶದಲ್ಲಿರುವ ಕೆಲವು ಹಳ್ಳಿಗಳು ಮೂರು ರಾಜ್ಯ ಸರ್ಕಾರಗಳ ಆಡಳಿತಕ್ಕೆ ಒಳಪಟ್ಟಿವೆ. ಜನ ಜೀವನದ ಸಂಸ್ಕೃತಿ ಮತ್ತು ಭಾಷೆಗೆ ಅನುಗುಣವಾಗಿ ವರ್ಗೀಕರಣವಾಗಲಿಲ್ಲ. ಭಾಷಾವಾರು ಪ್ರಾಂತ ವಿಂಗಡಣೆ ಪುನರ್ ಹೊಂದಾಣಿಕೆ ಮಾಡಬೇಕು ಎನ್ನುವುದನ್ನು ಇದು ಸೂಚಿಸುತ್ತದೆ' ಎಂದರು.

4ನೇ ಪುಟ ನೋಡಿ | ಇನ್ನಷ್ಟು ಸುದ್ದಿಗಳು 4

ಮಂಡ್ಯ ಜಿಲ್ಲೆಗೆ 87ನೇ ಸಮ್ಮೇಳನ ಆತಿಥ್ಯ

ಹಾವೇರಿ: ಮಂಡ್ಯ ಜಿಲ್ಲೆಗೆ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆತಿಥ್ಯದ ಅವಕಾಶ ಒಲಿದಿದೆ.

ಭಾನುವಾರ ಬೆಳಿಗ್ಗೆ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆ ನಂತರ ಈ ವಿಷಯವನ್ನು ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಮಹೇಶ ಜೋಶಿ ಪ್ರಕಟಿಸಿದರು.

'ತಮ್ಮ ಜಿಲ್ಲೆಯಲ್ಲೇ ಮುಂದಿನ ಸಮ್ಮೇಳನ ಸಂಘಟಿಸಬೇಕೆಂದು ಒಂಬತ್ತು ಜಿಲ್ಲೆಯವರು ಹಕ್ಕು ಮಂಡಿಸಿದ್ದರು. ಹೆಚ್ಚಿನವರು ಮಂಡ್ಯ ಜಿಲ್ಲೆಯಲ್ಲಿಯೇ ಮಾಡಬೇಕೆಂದು ಹೇಳಿದ್ದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

'ಸ್ಥಳ ಪರಿಶೀಲಿಸಿದ ನಂತರ ತಿಂಗಳೊಳಗೆ ಸಮ್ಮೇಳನ ಎಲ್ಲಿ ಸಂಘಟಿಸಬೇಕು ಎನ್ನುವುದರ ಬಗ್ಗೆ ತೀರ್ಮಾನಕ್ಕೆ ಬರಲಾಗುವುದು' ಎಂದು ಶನಿವಾರ ರಾತ್ರಿ ನಡೆದ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಹೇಶ ಜೋಶಿ ಹೇಳಿದಾಗ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಒಂದು ಹಂತದಲ್ಲಿ ಗದ್ದಲ ಉಂಟಾಗಿ ಸಭೆಯನ್ನು ಮುಂದೂಡಲಾಗಿತ್ತು.

ಜನಸಾಹಿತ್ಯ ಸಮ್ಮೇಳನ ಉದ್ಘಾಟಿಸಿದ ಕವಿ ಮೂಡ್ನಾಕೂಡು

'ಮುಸ್ಲಿಮರನ್ನು ಪ್ರತ್ಯೇಕಿಸುವ ಕಾರ್ಯಸೂಚಿ ಅಪಾಯಕಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದು ಪಂಥದ ಸ್ವಾರ್ಥ ಸಾಧನೆಗಾಗಿ ನಾವು– ಅವರು ಎಂಬ ಗೆರೆ ಎಳೆದು ಮುಸ್ಲಿಮರನ್ನು ಪ್ರತ್ಯೇಕಿಸುವ ಕಾರ್ಯಸೂಚಿಯು ಸಾಹಿತ್ಯ ಹಾಗೂ ಸಾಂಸ್ಕೃತಿಕ ವಲಯವನ್ನೂ ಪ್ರವೇಶಿಸಿರುವುದು ಅಪಾಯಕಾರಿ' ಎಂದು ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಕಳವಳ ವ್ಯಕ್ತಪಡಿಸಿದರು.

ನಗರದ ಕೆ.ಆರ್. ವೃತ್ತದ ಸಮೀಪದ ಅಲುಮ್ನಿ ಅಸೋಸಿಯೇಷನ್ ಸಭಾಂಗಣದ ಆವರಣದಲ್ಲಿನ ಮೈದಾನದಲ್ಲಿ ಭಾನುವಾರ ನಡೆದ ಜನಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, 'ಒಂದು ಪಂಥವು ಧರ್ಮವನ್ನು ಗುರಾಣಿ ಮಾಡಿಕೊಂಡು ಮುಗ್ಧ ಜನರನ್ನು ವಿಭಜಿಸುತ್ತಿದೆ. ಆ ಗುಂಪು ದೀರ್ಘಕಾಲದಿಂದ ಮುಸ್ಲಿಮರನ್ನು ರಾಜಕೀಯವಾಗಿ ಪ್ರತ್ಯೇಕಿಸುತ್ತಾ ಬಂದಿದೆ. ಅದು ಈಗ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲೂ ತನ್ನ ಕಾರ್ಯಸೂಚಿಯ ಜಾರಿಗೆ ಪ್ರಯತ್ನಿಸುತ್ತಿರುವುದಕ್ಕೆ ಹಾವೇರಿ ಕನ್ನಡ ಸಾಹಿತ್ಯ ಸಮ್ಮೇಳನವೇ ಸಾಕ್ಷಿ' ಎಂದರು.

'ಹೊರಗಟ್ಟುವುದು ಯಾವತ್ತೋ ಆರಂಭವಾಗಿದೆ'

'ಕನ್ನಡವನ್ನು ಭುವನೇಶ್ವರಿಯಾಗಿ ಮಾಡಿ ಅರಿಸಿನ, ಕುಂಕುಮದ ಬಣ್ಣಗಳನ್ನು ಲೇಪಿಸಿ ಮಂದಾಸನದ ಮೇಲೆ ಕೂರಿಸಿದಾಗಲೇ ನಮ್ಮನ್ನು ಹೊರಗಟ್ಟುವ ಕೆಲಸ ಆರಂಭವಾಗಿತ್ತು. ಅದು ಈಗ ಪೂರ್ಣಗೊಳ್ಳುತ್ತಿದೆ. ಕನ್ನಡದ ರಥವನ್ನು ಎಳೆದು, ಜಾತ್ರೆ, ಪರಿಷೆ ಮಾಡಿ ಮುಸ್ಲಿಮರನ್ನು ಹೊರಗಟ್ಟುವುದಕ್ಕೆ ಇಷ್ಟೆಲ್ಲ ಹುನ್ನಾರ ಬೇಕಿತ್ತೆ' ಎಂದು ಲೇಖಕಿ ಬಾನು ಮುಷ್ತಾಕ್ ಪ್ರಶ್ನಿಸಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಅವರು, 'ಅವರು ಕೊಲೆ ಮಾಡಿದರೂ ಚರ್ಚೆಯಾಗುವುದಿಲ್ಲ. ಆದರೆ, ನಾವು ಅಯ್ಯೋ ನೋವಾಗುತ್ತದೆ ಎಂದರೂ ದೇಶದ್ರೋಹಿಗಳಾಗುತ್ತೇವೆ ಎಂದು ಉರ್ದು ಕವಿಯೊಬ್ಬರು 1946ರಲ್ಲಿ ಹೇಳಿದ್ದರು. ಅದೇ ಸ್ಥಿತಿ ಈಗಲೂ ಇದೆ. ದ್ವೇಷ ಭಾಷಣ, ಸುಳ್ಳು ಸುದ್ದಿಗಳ ಪ್ರಾಶನದ ನಡುವೆ ನಮ್ಮ 'ನಂದಿನಿ'ಯನ್ನು ಕಳೆದುಕೊಳ್ಳುವ ಹಂತಕ್ಕೆ ಬಂದಿದ್ದೇವೆ. ಆ ಬಗ್ಗೆ ಧ್ವನಿ ಎತ್ತಬೇಕಿದೆ' ಎಂದರು.

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 4

600 ಉಕ್ರೇನ್‌ನ ಸೈನಿಕರು ಸಾವು

ಮಾಸ್ಕೊ: ಕ್ರಾಮರಸ್ಕ್‌ನಲ್ಲಿನ ತಾತ್ಕಾಲಿಕ ಸೇನಾ ನೆಲೆಯ ಮೇಲೆ ಸಶಸ್ತ್ರ ಪಡೆಗಳು ಭಾರಿ ಕ್ಷಿಪಣಿ ದಾಳಿ ನಡೆಸಿ 600ಕ್ಕೂ ಹೆಚ್ಚು ಉಕ್ರೇನ್ ಸೈನಿಕರನ್ನು ಕೊಂದಿವೆ ಎಂದು ರಷ್ಯಾ ಭಾನುವಾರ ಹೇಳಿದೆ.

10

ಒಳ ಪುಟ

'ಕಾಂಗ್ರೆಸ್‌ಗೆ ತಪಸ್ಸಿನಲ್ಲಿ ನಂಬಿಕೆ' 9

ಚಿನಕುರಳಿ

ಪ್ರಕಾಶ್ ಶೆಟ್ಟಿ

'ಜೋಶಿಮಠ ಭೂಕುಸಿತ: ಪರಿಸ್ಥಿತಿ ನಿಭಾಯಿಸಲು ಯೋಜನೆ'

ನವದೆಹಲಿ/ಡೆಹ್ರಾಡೂನ್ (ಪಿಟಿಐ): ಜೋಶಿಮಠದ ಭೂಕುಸಿತ ಪರಿಸ್ಥಿತಿ ಎದುರಿಸಲು ಅಲ್ಪ, ಮಧ್ಯಮ ಮತ್ತು ದೀರ್ಘಾವಧಿಯ ಯೋಜನೆಗಳ ಸಿದ್ಧತೆಗೆ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು ಮತ್ತು ತಜ್ಞರು ಉತ್ತರಾಖಂಡ ಸರ್ಕಾರಕ್ಕೆ ನೆರವಾಗುತ್ತಿದ್ದಾರೆ ಎಂದು ಪ್ರಧಾನ ಮಂತ್ರಿ ಕಚೇರಿ (ಪಿಎಂಒ) ಅಧಿಕಾರಿಗಳು ಹೇಳಿದರು.

ಭಾನುವಾರ ಪಿಎಂಒ ಉನ್ನತ ಮಟ್ಟದ ಪರಿಶೀಲನಾ ಸಭೆ ನಡೆಸಿದ ನಂತರ ಅಧಿಕಾರಿಗಳು, ಗಡಿ ನಿರ್ವಹಣಾ ಕಾರ್ಯದರ್ಶಿ ಮತ್ತು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸದಸ್ಯರು (ಎನ್‌ಡಿಎಂಎ) ಸೋಮವಾರ ಉತ್ತರಾಖಂಡಕ್ಕೆ ಭೇಟಿ ನೀಡಿ ಪರಿಸ್ಥಿತಿಯ ಅವಲೋಕನ ನಡೆಸಲಿದ್ದಾರೆ ಎಂದರು.

ಸುಮಾರು 600 ಸಂತ್ರಸ್ತ ಕುಟುಂಬಗಳ ತಕ್ಷಣ ಸ್ಥಳಾಂತರಕ್ಕೆ ನಿರ್ದೇಶಿಸಿದ ಒಂದು ದಿನದ ನಂತರ ಪರಿಶೀಲನಾ ಸಭೆ ನಡೆಯಿತು.

ಎನ್‌ಡಿಎಂಎ, ವಿಪತ್ತು ನಿರ್ವಹಣಾ ರಾಷ್ಟ್ರೀಯ ಸಂಸ್ಥೆ, ಭಾರತೀಯ ಭೂಸರ್ವೇಕ್ಷಣಾ ಇಲಾಖೆ, ಐಐಟಿ ರೂರ್ಕೀ, ವಾಡಿಯಾ ಇನ್‌ಸ್ಟಿಟ್ಯೂಟ್ ಆಫ್ ಹಿಮಾಲಯನ್ ಜಿಯಾಲಜಿ, ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಹೈಡ್ರೋಲಜಿ ಆಂಡ್ ಸೆಂಟ್ರಲ್ ಬಿಲ್ಡಿಂಗ್ ರಿಸರ್ಚ್ ಇನ್ಸ್ಟಿಟ್ಯೂಟ್‌ನ ತಜ್ಞರನ್ನು ಒಳಗೊಂಡ ತಂಡ ಪರಿಸ್ಥಿತಿ ಅಧ್ಯಯನ ನಡೆಸಿ, ಶಿಫಾರಸು ಮಾಡಲಿದೆ ಎಂದರು.

9ನೇ ಪುಟ ನೋಡಿ

ಕಾಂಗ್ರೆಸ್‌ನ ಪರಿಶಿಷ್ಟ ಜಾತಿ, ಪಂಗಡದ ಐಕ್ಯತಾ ಸಮಾವೇಶದಲ್ಲಿ ನಿರ್ಣಯ

ಮೀಸಲು ಹೆಚ್ಚಳ: ಸಂವಿಧಾನಬದ್ಧಕ್ಕೆ ಜ.31 ಗಡುವು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಾತಿ ಹೆಚ್ಚಿಸಿ ರಾಜ್ಯ ಸರ್ಕಾರ ರೂಪಿಸಿದ ಕಾಯ್ದೆಯನ್ನು ಜ. 31ರೊಳಗೆ ಸಂವಿಧಾನದ ಪರಿಚ್ಛೇದ-9ರ ಅಡಿ ಸೇರಿಸಬೇಕು. ಇಲ್ಲವಾದರೆ ಬಿಜೆಪಿಯ ಚುನಾವಣಾ ಹುನ್ನಾರವನ್ನು ಬಯಲಿಗೆ ಎಳೆಯಲು ಬೀದಿಗೆ ಇಳಿಯಲಾಗುವುದು' ಎಂದು ಕಾಂಗ್ರೆಸ್ ಎಚ್ಚರಿಕೆ ನೀಡಿತು.

ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯಗಳಿಗಾಗಿ ಪಕ್ಷವು ಭಾನುವಾರ ನಗರದಲ್ಲಿ ಹಮ್ಮಿಕೊಂಡಿದ್ದ ಐಕ್ಯತಾ ಸಮಾವೇಶದಲ್ಲಿ ಹತ್ತು ನಿರ್ಣಯ ಕೈಗೊಂಡಿತು. 'ಮೀಸಲಾತಿ ಹೆಚ್ಚಿಸಿರುವ ಬಿಜೆಪಿ ಸರ್ಕಾರದ ನಿರ್ಧಾರವು ಜನರನ್ನು ದಾರಿ ತಪ್ಪಿಸುವ ಹುನ್ನಾರವೇ ವಿನಾ ನ್ಯಾಯ ನೀಡುವುದಲ್ಲ' ಎಂದು ಪ್ರತಿಪಾದಿಸಿತು.

ಸದಾಶಿವ ವರದಿಗೆ ಅಸ್ತು: ಪಕ್ಷವು ಮುಂಬರುವ ಚುನಾವಣೆಯಲ್ಲಿ ಅಧಿಕಾರದ ಗದ್ದುಗೆ ಹಿಡಿದರೆ ಒಳಮೀಸಲಾತಿ ವರ್ಗೀಕರಣಕ್ಕೆ ಸಂಬಂಧಿಸಿದ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ವಿಧಾನ ಮಂಡಲದ ಮೊದಲ ಅಧಿವೇಶನದಲ್ಲಿಯೇ ಮಂಡಿಸಿ, ಎರಡೂ ಸದನದ ಒಪ್ಪಿಗೆ ಪಡೆದು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವುದಾಗಿ ಘೋಷಿಸಲಾಯಿತು.

ಐಕ್ಯತಾ ಸಮಾವೇಶದ ಮೂಲಕ ಕಾಂಗ್ರೆಸ್ ಚುನಾವಣೆಯ ರಣಕಹಳೆ ಮೊಳಗಿಸಿತು. ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿ ಹೆಚ್ಚಿಸಿ ಕಾಂಗ್ರೆಸ್



ಚಿತ್ರದುರ್ಗದಲ್ಲಿ ಕಾಂಗ್ರೆಸ್ ಭಾನುವಾರ ಹಮ್ಮಿಕೊಂಡಿದ್ದ ಪರಿಶಿಷ್ಟ ಜಾತಿ ಮತ್ತು ಪಂಗಡದ ಐಕ್ಯತಾ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಜನರು

> ರಾಜ್ಯದಲ್ಲಿ ಮುಂಬರುವ ಚುನಾವಣೆಯಲ್ಲಿ 136 ಸೀಟು ಗೆದ್ದು ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ. ದಿಲ್ಲಿಯಿಂದ ಬೂತ್ ಮಟ್ಟದವರೆಗೆ ಕಾಂಗ್ರೆಸ್ ಶಕ್ತಿ ಸಬಲಗೊಳ್ಳುತ್ತಿದೆ
> **ಡಿ.ಕೆ.ಶಿವಕುಮಾರ್**
> ಕೆಪಿಸಿಸಿ ಅಧ್ಯಕ್ಷ

ಪಾರಂಪರಿಕ ಮತಬುಟ್ಟಿಗೆ ಕೈಹಾಕಿದ್ದ ಬಿಜೆಪಿಗೆ ಪ್ರತಿ ದಾಳ ಉರುಳಿಸಿತು. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ನೀಡಿದ ಕೊಡುಗೆಗಳ ಗುಣಗಾನ ಮಾಡುತ್ತಲೇ, ರಾಜ್ಯ ಸರ್ಕಾರದ ನೀತಿಗಳನ್ನು ಕಟುವಾಗಿ ಟೀಕಿಸಿತು. ಅನುದಾನ ಹಂಚಿಕೆಯಲ್ಲಿ ಉಂಟಾಗಿರುವ ತಾರತಮ್ಯ, ವಿದ್ಯಾರ್ಥಿ ವೇತನ ಸ್ಥಗಿತದ ಅಸ್ತ್ರಗಳನ್ನು ಪ್ರಯೋಗಿಸಿತು. ಸಂವಿಧಾನ ರಕ್ಷಣೆಗೆ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಜರೂರು ಇದೆ ಎಂಬುದಾಗಿ ಪ್ರತಿಪಾದಿಸಿತು.

4B ಪುಟ ನೋಡಿ

ಬಿಬಿಎಂಪಿ ವ್ಯಾಪ್ತಿಯ 150 ರಸ್ತೆಗಳಲ್ಲಿರುವ ತ್ಯಾಜ್ಯ ವಿಲೇವಾರಿ ಕಾರ್ಯ ತಿಂಗಳಾಂತ್ಯಕ್ಕೆ ಆರಂಭ

ಕಟ್ಟಡ ತ್ಯಾಜ್ಯ ವಿಲೇವಾರಿಗೆ ₹18 ಕೋಟಿ ವೆಚ್ಚ

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆಗಳಲ್ಲಿರುವ ಕಟ್ಟಡ ನಿರ್ಮಾಣ ಮತ್ತು ಅವಶೇಷಗಳ (ಸಿಆ್ಯಂಡ್‌ಡಿ) ತ್ಯಾಜ್ಯ ತೆರವಿಗೆ ಘನತ್ಯಾಜ್ಯ ನಿರ್ವಹಣೆ ವಿಭಾಗ ₹18.49 ಕೋಟಿ ವೆಚ್ಚ ಮಾಡಲಿದೆ.

ಮುಖ್ಯ ರಸ್ತೆಗಳು, ಮೇಲ್ಸೇತುವೆಗಳ ಕೆಳಗೆ ಹಾಗೂ ಹೊರ ವರ್ತುಲ ರಸ್ತೆಗಳ ಬದಿ ಇರುವ ಕಟ್ಟಡ ನಿರ್ಮಾಣ ಮತ್ತು ಅವಶೇಷಗಳ (ಸಿಆ್ಯಂಡ್‌ಡಿ) ತ್ಯಾಜ್ಯವನ್ನು ತೆರವು ಮಾಡಲಾಗುತ್ತದೆ. ಎರಡು ಪ್ಯಾಕೇಜ್‌ಗಳ ಟೆಂಡರ್ ಕರೆಯಲಾಗಿದ್ದು, ಅದನ್ನು ಅಂತಿಮಗೊಳಿಸಲಾಗಿದೆ. ಈ ಕಾರ್ಯದ ಯೋಜನಾ ಸಮಾಲೋಚಕರ (ಪಿಎಂಸಿ) ಆಯ್ಕೆಗೆ ಇತ್ತೀಚೆಗೆ ಟೆಂಡರ್ ಕರೆಯಲಾಗಿದೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಕಂಪನಿ (ಬಿಎಸ್‌ಡಬ್ಲ್ಯೂಎಂಎಲ್) ವತಿಯಿಂದ ಕಟ್ಟಡ ಅವಶೇಷ ತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದೆ. ₹8.27 ಕೋಟಿ ಹಾಗೂ ₹10.22 ಕೋಟಿ ವೆಚ್ಚದ ಎರಡು ಪ್ಯಾಕೇಜ್ ಟೆಂಡರ್ ಅಂತಿಮವಾಗಿದ್ದು, ಪಿಎಂಸಿಗಾಗಿ ಟೆಂಡರ್ ಕರೆಯಲಾಗಿದೆ. ಇದು ಅಂತಿಮವಾದ ಕೂಡಲೇ ವಿಲೇವಾರಿ ಕಾರ್ಯ ಆರಂಭವಾಗುತ್ತದೆ. 2021ರಲ್ಲಿ ನಡೆಸಿದ ಸರ್ವೆ ಪ್ರಕಾರ ನಗರದ ಮುಖ್ಯ ರಸ್ತೆಗಳು, ಮೇಲ್ಸೇತುವೆಗಳ ಕೆಳಗೆ ಹಾಗೂ ಹೊರ ವರ್ತುಲ ರಸ್ತೆಗಳ ಬದಿಯಲ್ಲಿ ಸುಮಾರು 2.47 ಲಕ್ಷ ಕ್ಯೂಬಿಕ್ ಮೀಟರ್ ಕಟ್ಟಡ ನಿರ್ಮಾಣ ಮತ್ತು ಅವಶೇಷಗಳ (ಸಿಆ್ಯಂಡ್‌ಡಿ) ತ್ಯಾಜ್ಯ ಇದೆ. ಇದನ್ನು 'ಲೆಗೆಸಿ ವೇಸ್ಟ್' ಎಂದು ಪರಿಗಣಿಸಲಾಗಿದ್ದು, ಒಂದು ಬಾರಿ ಇದನ್ನು ವಿಲೇವಾರಿ ಮಾಡುವ ಯೋಜನೆ ಇದಾಗಿದೆ.

'ನಗರದ 150 ರಸ್ತೆಗಳ ಬದಿಯಲ್ಲಿರುವ ಸಿ ಆ್ಯಂಡ್ ಡಿ ತ್ಯಾಜ್ಯದ ಅಂದಾಜು ಮಾಡಲಾಗಿದೆ. ಈ ತ್ಯಾಜ್ಯವನ್ನು ಒಂದು ಬಾರಿ ಅಲ್ಲಿಂದ ತೆಗೆದು ವಿಲೇವಾರಿ ಮಾಡಲು ಗುತ್ತಿಗೆ ನೀಡಲಾಗಿದೆ. ಜಿಪಿಎಸ್ ಅಳವಡಿಸಲಾಗಿರುವ ವಾಹನಗಳ ಮೂಲಕ ಈ ಸಿ ಆ್ಯಂಡ್ ಡಿ ತ್ಯಾಜ್ಯವನ್ನು ಸುರಕ್ಷತಾ ಕ್ರಮಗಳೊಂದಿಗೆ ವಿಲೇವಾರಿಮಾಡಬೇಕು. ಗುತ್ತಿಗೆದಾರರು ಈ ತ್ಯಾಜ್ಯ ವಿಲೇವಾರಿ ಮಾಡುವ ಕ್ವಾರಿಗಳನ್ನು ಗುರುತಿಸಿಕೊಳ್ಳಬೇಕು. ಅವರೇ ಎಲ್ಲ ರೀತಿಯ ನಿರ್ವಹಣೆ ಮಾಡಬೇಕು ಎಂಬುದು ಟೆಂಡರ್ ನಿಯಮವಾಗಿದೆ' ಎಂದು ಬಿಎಸ್‌ಡಬ್ಲ್ಯೂಎಂಎಲ್‌ನ ಕಾರ್ಯಪಾಲಕ ಎಂಜಿನಿಯರ್ ಮಧು ತಿಳಿಸಿದರು.

ಹಲಸೂರು ಕೆರೆ ಸಮೀಪದ ರಸ್ತೆಯಲ್ಲಿರುವ ಕಟ್ಟಡ ನಿರ್ಮಾಣ ಸಾಮಗ್ರಿ ತ್ಯಾಜ್ಯ

ಮಾಲೀಕರಿಂದಲೇ ಕಟ್ಟಡ ತ್ಯಾಜ್ಯ ಸಂಗ್ರಹ

ಬಿಬಿಎಂಪಿ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಿಸುವವರಿಗೆ ತ್ಯಾಜ್ಯ ಹೊರಹಾಕುವುದು ದೊಡ್ಡ ಸಮಸ್ಯೆಯಾಗಿದ್ದು, ಅದಕ್ಕೆ ಪರಿಹಾರವಾಗಿ ಬಿಎಸ್‌ಡಬ್ಲ್ಯೂಎಂಎಲ್ 'ಮಾಲೀಕರಿಂದಲೇ ಕಟ್ಟಡ ತ್ಯಾಜ್ಯ ಸಂಗ್ರಹ' ಮಾಡುವ ಯೋಜನೆಯನ್ನು ಆರಂಭಿಸಲು ಯೋಜಿಸಿದೆ.

ಹೊಸದಾಗಿ ಕಟ್ಟಡ ನಿರ್ಮಾಣ ಅಥವಾ ನವೀಕರಣ ಸಂದರ್ಭದಲ್ಲಿ ನಿರ್ಮಾಣ ಸಾಮಗ್ರಿಗಳ ತ್ಯಾಜ್ಯ ಬೀಳುತ್ತದೆ. ಇದನ್ನು ಟ್ರ್ಯಾಕ್ಟರ್ ಅಥವಾ ಯಾರಿಗೋ ಹೇಳಿ ಹೊರ ಹಾಕಲಾಗುತ್ತಿದೆ. ಆದರೆ ಬಿಎಸ್ ಡಬ್ಲ್ಯೂಎಂಎಲ್ ಹೊಸ ಯೋಜನೆ ಅನುಷ್ಠಾನವಾದರೆ, ನಿವೇಶನ ಅಥವಾ ಕಟ್ಟಡದ ಸ್ಥಳದಿಂದಲೇ ಬಿಬಿಎಂಪಿ ನಿಗದಿಪಡಿಸಿದ ಗುತ್ತಿಗೆದಾರರು ತ್ಯಾಜ್ಯವನ್ನು ಕೊಂಡೊಯ್ಯುತ್ತಾರೆ. ನಿಗದಿಪಡಿಸಿದ ಸ್ಥಳದಲ್ಲಿ ವಿಲೇವಾರಿ ಮಾಡುತ್ತಾರೆ.

'ಗುತ್ತಿಗೆದಾರರನ್ನು ಅಂತಿಮಗೊಳಿಸಿ, ಒಂದು ಲಾರಿ ಅಥವಾ ಟ್ರ್ಯಾಕ್ಟರ್ ಲೋಡಿನ ಸಿ ಆ್ಯಂಡ್ ಡಿ ತ್ಯಾಜ್ಯ ಕೊಂಡೊಯ್ಯಲು ಶುಲ್ಕ ನಿಗದಿ ಮಾಡುತ್ತದೆ. ಮಾಲೀಕರು ಬಿಬಿಎಂಪಿಯನ್ನು ಸಂಪರ್ಕಿಸಿ, ಶುಲ್ಕ ಪಾವತಿಸಿದರೆ ತ್ಯಾಜ್ಯ ಕೊಂಡೊಯ್ಯುತ್ತಾರೆ. ಈ ಯೋಜನೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಹಂತದಲ್ಲಿದೆ' ಎಂದು ಬಿಎಸ್‌ಡಬ್ಲ್ಯೂಎಂಎಲ್ ಅಧಿಕಾರಿಗಳು ತಿಳಿಸಿದರು.

ಸುದ್ದಿ 2 ನಿಮಿಷ

ಬಿಲ್ ಪಾವತಿ: ಬಿಬಿಎಂಪಿ ಗುತ್ತಿಗೆದಾರರ ಪ್ರತಿಭಟನೆ ಇಂದಿನಿಂದ

ಬೆಂಗಳೂರು: ಬಿಲ್ ಪಾವತಿ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ವಿಫಲವಾಗಿದ್ದಾರೆ ಎಂದು ಗುತ್ತಿಗೆದಾರರು ಆರೋಪಿಸಿದ್ದು, ಎಲ್ಲ ಕಾಮಗಾರಿಗಳನ್ನು ಸ್ಥಗಿತಗೊಳಿಸಿ ಸೋಮವಾರದಿಂದ ಪ್ರತಿಭಟನೆ ನಡೆಸಲಿದ್ದಾರೆ.

ಬಿಬಿಎಂಪಿ ಗುತ್ತಿಗೆದಾರರ ಸಂಘ ಹಾಗೂ ಕಾರ್ಯನಿರತ ಗುತ್ತಿಗೆದಾರರ ಸಂಘ ಸೇರಿದಂತೆ ಎಲ್ಲ ಗುತ್ತಿಗೆದಾರರು ಪ್ರತಿಭಟನೆ ನಡೆಸುವರು ಎಂದು ಅಂಬಿಕಾಪತಿ, ನಂದಕುಮಾರ್, ಕೆ.ಟಿ. ಮಂಜುನಾಥ್ ತಿಳಿಸಿದರು.

ಪೂರ್ಣಗೊಂಡಿರುವ ಕಾಮಗಾರಿಗಳಿಗೆ 25 ತಿಂಗಳಿಂದ ಬಿಲ್ ಪಾವತಿ ಮಾಡಿಲ್ಲ. ಹೊಸ ಆದೇಶಗಳಿಂದ ಸಾಕಷ್ಟು ತೊಂದರೆಯಾಗಿದೆ. ಈ ಬಗ್ಗೆ ಮುಖ್ಯ ಆಯುಕ್ತರಿಗೆ ಮನವಿ ಸಲ್ಲಿಸಿದ್ದರು ಸ್ಪಂದಿಸಿಲ್ಲ. ಹೀಗಾಗಿ ಸೋಮವಾರ ಬೆಳಿಗ್ಗೆ 11ಕ್ಕೆ ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ಪ್ರತಿಭಟಿಸಲಾಗುವುದು ಎಂದು ಹೇಳಿದರು.

ಮರಗಳ ಬೇರಿಗೆ ರಾಸಾಯನಿಕ: ನೈಜ ಹೋರಾಟಗಾರ ವೇದಿಕೆ ದೂರು

ಬೆಂಗಳೂರು: ಗಾಂಧಿಬಜಾರ್ ಮುಖ್ಯರಸ್ತೆ ಅಭಿವೃದ್ಧಿಗಾಗಿ 80 ವರ್ಷಗಳಷ್ಟು ಹಳೆಯ ಮರಗಳ ಬೇರು ಕತ್ತರಿಸಿ, ಕೆಳಗೆ ರಾಸಾಯನಿಕ ಹಾಕಿ ಬಂಡೆ ಸ್ಫೋಟಿಸಲಾಗಿದೆ ಎಂದು ನೈಜ ಹೋರಾಟಗಾರ ವೇದಿಕೆಯ ಎಚ್.ಎಂ. ವೆಂಕಟೇಶ್ ಅವರು ದೂರಿದ್ದಾರೆ.

ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅವರಿಗೆ ವೆಂಕಟೇಶ್ ಪತ್ರ ಬರೆದಿದ್ದು, ಈ ಮರಗಳನ್ನು ರಕ್ಷಿಸಬೇಕು ಎಂದು ಕೋರಿದ್ದಾರೆ. ಮುಖ್ಯರಸ್ತೆ ಅಭಿವೃದ್ಧಿಯಲ್ಲಿ ಮರದ ಕೆಳಗೆ ಪೈಪ್‌ಗಳನ್ನು ಅಳವಡಿಸಲು ಬೇರುಗಳನ್ನು ಕತ್ತರಿಸಲಾಗಿದೆ. ಬಂಡೆ ಇದೆ ಎಂದು ರಾಸಾಯನಿಕ ಬಳಸಿ ಸ್ಫೋಟಿಸಲಾಗಿದೆ. ಇದರಿಂದ ಮರಗಳು ಉರುಳುವ ಸಂಭವವಿದೆ ಎಂದಿದ್ದಾರೆ.

ಈ ಮರಗಳು ಈ ಭಾಗದ ಸೌಂದರ್ಯವನ್ನು ಹೆಚ್ಚಿಸಿವೆ. ಇವುಗಳ ಅವನತಿಗೆ ಕಾರಣವಾಗಿರುವ ಎಂಜಿನಿಯರ್‌ಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಪಡಿಸಿದ್ದಾರೆ.

ಛಾಯಾಚಿತ್ರಗಳ ಪ್ರದರ್ಶನ ನಾಳೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದ ಇತಿಹಾಸ ವಸ್ತು ಸಂಗ್ರಹಾಲಯದ ಕಟ್ಟಡದಲ್ಲಿ ಚಾರಿತ್ರಿಕ ದಾಖಲೆಗಳು ಮತ್ತು ಛಾಯಾಚಿತ್ರಗಳ ಪ್ರದರ್ಶನವನ್ನು ಜ.10 ಮತ್ತು 11ರಂದು ಆಯೋಜಿಸಲಾಗಿದೆ. ಬೆಂಗಳೂರು ವಿವಿಯ ಇತಿಹಾಸ ವಸ್ತು ಸಂಗ್ರಹಾಲಯ ಮತ್ತು ರಾಜ್ಯ ಪತ್ರಾಗಾರ ಇಲಾಖೆಯ ಸಹಯೋಗದಲ್ಲಿ ಆಯೋಜಿಸಲಾಗಿದೆ ಎಂದು ಕುಲಸಚಿವರು ತಿಳಿಸಿದ್ದಾರೆ.

PUBLIC NOTICE

We, M/s. GV Techparks Private Limited, hereby bring into the notice of general public that State Environment Impact Assessment Authority, Karnataka (Constituted by Ministry of Environment, Forest and Climate Change Government of India) has granted Environmental Clearance for construction of proposed Low Rise Apartment, at Sy. No. 25/1, 41/1 & 41/7 of Pattanagere Village, Kengeri Hobli, Bengaluru South Taluk, BBMP Ward No. 198, Hemmigepura, Bengaluru file no SEIAA 134 CON 2022 dated 28.12.2022 and copy of clearance letter can also be seen on the website of Parivesh portal- SEIAA Karnataka, at http://environmentclearance.nic.in.

'ಯಾವ ಸರಸ್ವತಿಯೂ ಮಹಿಳೆಯರಿಗೆ ಶಿಕ್ಷಣ ಕೊಡಲಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವ ಸರಸ್ವತಿಯೂ ಮಹಿಳೆಯರಿಗೆ ಶಿಕ್ಷಣ ಕೊಡಲಿಲ್ಲ. ಆದರೆ, ಶಿಕ್ಷಣ ಕೊಡಿಸಿದ್ದು ಸಾವಿತ್ರಿಬಾಯಿ ಫುಲೆ' ಎಂದು ಬಿ.ಕೃಷ್ಣಪ್ಪ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಇಂದಿರಾ ಕೃಷ್ಣಪ್ಪ ಅಭಿಪ್ರಾಯಪಟ್ಟರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ, ಕರ್ನಾಟಕ ದಲಿತ ಮಹಿಳಾ ಒಕ್ಕೂಟ, ಬಿ.ಕೃಷ್ಣಪ್ಪ ಟ್ರಸ್ಟ್ ಏರ್ಪಡಿಸಿದ್ದ 'ಅಕ್ಷರದವ್ವ ಸಾವಿತ್ರಿಬಾಯಿ ಫುಲೆ ಅವರ 192ನೇ ಜನ್ಮ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

'ಯಾವ ಸಂಪರ್ಕ ಸಾಧನವೂ ಇಲ್ಲದ ಕಾಲದಲ್ಲಿ ಸಾವಿತ್ರಿ ಬಾಯಿ ಫುಲೆ ಅವರು ಪ್ರತಿರೋಧಕ್ಕೂ ಜಗ್ಗದೆ ಮಹಿಳೆಯರಿಗೆ ಶಿಕ್ಷಣ ನೀಡಿದರು. ಅವರನ್ನು ನೆನಪಿಸಿಕೊಂಡು ಮುನ್ನಡೆಯುವ ಅಗತ್ಯವಿದೆ' ಎಂದರು.

ಸಾಹಿತಿ ವಸುಂದರಾ ಭೂಪತಿ ಅವರು, 'ಸಾವಿತ್ರಿ ಬಾಯಿ ಫುಲೆ ಅವರು ಪಾಠ ಮಾಡಲು ಹೊರಟರೆ ರಸ್ತೆಯಲ್ಲಿ ಅವರ ಮೇಲೆ ಸಗಣಿ ಎಸೆಯುತ್ತಿದ್ದರು. ಅದಕ್ಕೂ ಅವರು ಜಗ್ಗಲಿಲ್ಲ, ಪತಿ ಜ್ಯೋತಿಬಾ ಫುಲೆ ಅವರಿಂದ ಪಡೆದ ಶಿಕ್ಷಣವನ್ನು ಧೈರ್ಯದಿಂದ ಮಹಿಳೆಯರಿಗೆ ಹಂಚಿದರು' ಎಂದು ಬಣ್ಣಿಸಿದರು.

'ಸಗಣಿ ಎಸೆಯುವ ಪುರುಷರ ಪರವಾಗಿ ನಾನೇ ಕ್ಷಮೆ ಕೇಳುತ್ತೇನೆ. ನಿತ್ಯ ಆ ಸೀರೆಯನ್ನು ತೊಳೆದುಕೊಡುತ್ತೇನೆ ಎಂದಿದ್ದರು. ಆ ಮನಸ್ಥಿತಿಯೇ ಸಾವಿತ್ರಿಬಾಯಿ ಅವರಲ್ಲಿ ಧೈರ್ಯ, ಸಹನೆಯನ್ನು ತುಂಬಿತ್ತು' ಎಂದರು.

ದಸಂಸ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಬಿ.ಕೃಷ್ಣಪ್ಪ ಟ್ರಸ್ಟ್‌ನ ರುದ್ರಪ್ಪ ಹನಗವಾಡಿ, ಬಿಬಿಎಂಪಿ ಉಪ ಆಯುಕ್ತೆ ಲಕ್ಷ್ಮೀದೇವಿ, ರೈತ ಹೋರಾಟಗಾರ್ತಿ ಅನುಸೂಯಮ್ಮ, ದಲಿತ ಹೋರಾಟಗಾರ್ತಿ ಗಂಗಮ್ಮ, ಎಸ್.ಎಂ.ಶ್ಯಾಮಲಾ ಮಾತನಾಡಿದರು.

ಸಾವಿತ್ರಿಬಾಯಿ ಫುಲೆ ಕುರಿತ ಪುಸ್ತಕವನ್ನು ವಸುಂಧರಾ ಭೂಪತಿ ಬಿಡುಗಡೆ ಮಾಡಿದರು. ರುದ್ರಪ್ಪ ಹನಗವಾಡಿ, ಎಸ್.ಎಂ.ಶ್ಯಾಮಲಾ, ಇಂದಿರಾ ಕೃಷ್ಣಪ್ಪ, ಬಿಬಿಎಂಪಿ ಉಪ ಆಯುಕ್ತೆ ಲಕ್ಷ್ಮೀದೇವಿ ಇದ್ದರು –ಪ್ರಜಾವಾಣಿ ಚಿತ್ರ

ಕೇರಳದಲ್ಲಿ ಹಕ್ಕಿಜ್ವರ: ಕ್ರಮಕ್ಕೆ ಸೂಚನೆ

ತಿರುವನಂತಪುರ (ಪಿಟಿಐ): ರಾಜ್ಯದಲ್ಲಿ ಹಕ್ಕಿ ಜ್ವರ ಪ್ರಕರಣಗಳು ವರದಿಯಾಗುತ್ತಿರುವ ಹಿನ್ನೆಲೆಯಲ್ಲಿ ಮನುಷ್ಯರಿಗೆ ಸೋಂಕು ಹರಡುವುದನ್ನು ತಡೆಗಟ್ಟಲು ಮುನ್ನೆಚ್ಚರಿಕೆ ತೆಗೆದುಕೊಳ್ಳುವ ಅಗತ್ಯವಿದೆ ಎಂದು ಕೇರಳ ಆರೋಗ್ಯ ಸಚಿವೆ ವೀಣಾ ಜಾರ್ಜ್ ಭಾನುವಾರ ಹೇಳಿದ್ದಾರೆ.

ಅಗತ್ಯ ಕ್ರಮ ಕೈಗೊಳ್ಳುವಂತೆ ಎಲ್ಲಾ ಜಿಲ್ಲೆಗಳ ಅಧಿಕಾರಿಗಳಿಗೂ ಸೂಚನೆ ನೀಡಲಾಗಿದ್ದು, ಪ್ರತಿಯೊಬ್ಬರೂ ಆರೋಗ್ಯ ಇಲಾಖೆ ಹೊರಡಿಸಿದ ನಿರ್ದೇಶನಗಳನ್ನು ಅನುಸರಿಸಬೇಕು. ಬಾಧಿತ ಪ್ರದೇಶಗಳಲ್ಲಿನ ಜನರಲ್ಲಿ ಜ್ವರ ಮತ್ತು ಇತರ ರೋಗಲಕ್ಷಣಗಳನ್ನು ಆರೋಗ್ಯ ಇಲಾಖೆ ಮೇಲ್ವಿಚಾರಣೆ ಮಾಡುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ಅಧಿಕ ಬೆನ್ನು ನೋವು, ಜ್ವರ, ಕೆಮ್ಮು, ಉಸಿರಾಟದ ತೊಂದರೆ, ಶೀತ ಮತ್ತು ಕಫದಲ್ಲಿ ರಕ್ತ ಸೋಂಕಿನ ಲಕ್ಷಣಗಳಾಗಿವೆ.

ಈ ರೋಗ ಲಕ್ಷಣ ಹೊಂದಿರುವವರು ಹಾಗೂ ಉಸಿರಾಟದ ಸಮಸ್ಯೆ ಇದ್ದರೆ ತಕ್ಷಣ ಸಮೀಪದ ಆರೋಗ್ಯ ಕೇಂದ್ರದ ವೈದ್ಯರನ್ನು ಭೇಟಿ ಮಾಡಬೇಕು ಎಂದು ತಿಳಿಸಿದೆ.

ಸ್ವಚ್ಛಭಾರತ್ ಮಿಷನ್‌ಗೆ ಹೊಸ ತಾಂತ್ರಿಕ ಸಮಿತಿ

ಬೆಂಗಳೂರು: ಸ್ವಚ್ಛಭಾರತ್ ಮಿಷನ್ (ನಗರ) ಅಡಿ ವಿಸ್ತೃತ ಯೋಜನಾ ವರದಿ ಪರಿಶೀಲಿಸಲು ರಾಜ್ಯಮಟ್ಟದ ತಾಂತ್ರಿಕ ಸಮಿತಿ ಪುನರ್‌ರಚಿಸಲಾಗಿದೆ.

ಪೌರಾಡಳಿತ ನಿರ್ದೇಶನಾಲಯದ ಮುಖ್ಯ ಎಂಜಿನಿಯರ್ ಅಧ್ಯಕ್ಷ, ಬಿಬಿಎಂಪಿ ಮುಖ್ಯ ಎಂಜಿನಿಯರ್ ಸಹ ಅಧ್ಯಕ್ಷರಾಗಿರುತ್ತಾರೆ. ಕೆಸಿಡಿಸಿ, ನಗರಾಭಿವೃದ್ಧಿ ಇಲಾಖೆ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು, ಕೆಸಿಡಿಸಿ ಮಾಜಿ ವ್ಯವಸ್ಥಾಪಕ ನಿರ್ದೇಶಕ ಬಸವಯ್ಯ, ಐಐಎಸ್ಸಿ ವಿಜ್ಞಾನಿ ಚಾಣಕ್ಯ, ತಂತ್ರಜ್ಞರಾದ ರವಿ ಶಂಕರ್, ಅಲಾ ಚಿನ ವೆಂಕಟರೆಡ್ಡಿ ಸದಸ್ಯರಾಗಿದ್ದಾರೆ.

ಸ್ಥಳೀಯ ಸಂಸ್ಥೆಗಳು ಸಿದ್ಧಪಡಿಸಿದ ಘನತ್ಯಾಜ್ಯ ನಿರ್ವಹಣೆ ಡಿಪಿಆರ್ ಅನ್ನು ಸಮಿತಿಗೆ ಸಲ್ಲಿಸುವ ಮೊದಲು ತಾಂತ್ರಿಕ ಸಮಿತಿ ಅನುಮೋದನೆ ಪಡೆಯುವುದು ಕಡ್ಡಾಯ ಎಂದು ಆದೇಶ ವಿವರಿಸಿದೆ.

ನಗರದ ಹರಳೂರು ಮುಖ್ಯ ರಸ್ತೆಯ 'ಪೂರ್ವಸ್ಕೈವುಡ್' ಅಪಾರ್ಟ್‌ಮೆಂಟ್‌ನಲ್ಲಿ ಭಾನುವಾರ 'ಸ್ಕೈಪೋರಿಯಾ 2022 2023'ರ ಕಾರ್ಯಕ್ರಮದಲ್ಲಿ ನಿವಾಸಿಗಳ ಸಂಭ್ರಮ

ಪೂರ್ವಸ್ಕೈವುಡ್: ಪ್ರತಿಭೆಗಳ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹರಳೂರು ಮುಖ್ಯರಸ್ತೆಯ 'ಪೂರ್ವ ಸ್ಕೈವುಡ್' ಅಪಾರ್ಟ್‌ಮೆಂಟ್‌ನಲ್ಲಿ ಭಾನುವಾರ ನಡೆದ 'ಸ್ಕೈಪೋರಿಯಾ 2022-2023'ರ ಕಾರ್ಯಕ್ರಮ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆಯಾಯಿತು.

ಅಪಾರ್ಟ್‌ಮೆಂಟ್‌ನ ನಿವಾಸಿಗಳು ತಮ್ಮಲ್ಲಿನ ಕಲೆ ಪ್ರದರ್ಶಿಸುವ ಮೂಲಕ ರಂಜಿಸಿದರು. ಎಲ್ಲ ವಯೋಮಾನದವರು ಭಾಗವಹಿಸಿದ್ದರು. ಹಾಡು, ನೃತ್ಯ, ಸಂಗೀತ ವಾದ್ಯಗಳನ್ನು ನುಡಿಸುವ ಮೂಲಕ ಗಮನಸೆಳೆದರು. ಮಕ್ಕಳು ಕುಣಿದು ಕುಪ್ಪಳಿಸಿ ಎಲ್ಲರ ಮನತಣಿಸಿದರು. ಫ್ಯಾಷನ್ ಶೋ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿತ್ತು.

ಪೂರ್ವಸ್ಕೈವುಡ್‌ನ ಸಿಂಗಿಂಗ್ ಕ್ಲಬ್ 'ಎಹಸಾಸ್ ಕಾ ಸಫರ್' ಸಂಗೀತ ಕಾರ್ಯಕ್ರಮ ಪ್ರಸ್ತುತ ಪಡಿಸಿದರು. ಪೂರ್ವಸ್ಕೈವುಡ್ ಸ್ಕೈಪೋರಿಯಾ ಸಾಂಸ್ಕೃತಿಕ ಸಮಿತಿ ಸದಸ್ಯರಾದ ನಜೀಂ ಫಾತೀಮಾ, ಮೌಮಿತಾ ಮಜುಂದರ್, ಪ್ರಿಯಾ ಉಪ್ರೇತಿ ಮತ್ತು ಸಮಿನಾ ಸಾಹೋ ಇದ್ದರು. 'ಪೂರ್ವಾಂಕರ' ಕಂಪನಿ ಕಾರ್ಯಕ್ರಮ ಪ್ರಾಯೋಜಿಸಿತ್ತು.

ONGC MRPL
Mangalore Refinery and Petrochemicals Limited
(A Govt. of India Enterprise and A subsidiary of ONGC Limited)
CIN No. : L23209KA1988GOI008959
Kuthethoor Post, Mangalore – 575 030
Azadi Ka Amrit Mahotsav

Mangalore Refinery & Petrochemicals Limited a Public Sector Company, is looking for a furnished Guest House Accommodation in Central / Western Bangalore on monthly rental basis, initially for a period of 3 years with option to extend for 2 years on mutual consent with the same terms and conditions. Offers are invited from interested parties meeting the requirements of the company for which details are listed in **www.mrpl.co.in**. Sealed offers should be sent latest by **5 PM** to the "Guest House Technical Committee, MRPL, Plot A1, Opp. KSSIDC AO Building, Rajajinagar Industrial Estate, Bangalore 560010" on or before **30.01.2023.**

ಮಕ್ಕಳ ವಚನ ಮೇಳ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಚನಜ್ಯೋತಿ ಬಳಗದ 25ನೇ ವಾರ್ಷಿಕೋತ್ಸವ ನಿಮಿತ್ತ ಜ.10ರಿಂದ ಮೂರು ದಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮಕ್ಕಳ ವಚನ ಮೇಳ ಆಯೋಜಿಸಲಾಗಿದೆ.

10ರಂದು ವಚನ ಗಾಯನ, ವಚನ ಪ್ರಬಂಧ, ವಚನ ನೃತ್ಯ, ವಚನ ವಿವೇಚನೆ, ವಚನ ಚಿತ್ರ. ಸ್ಪರ್ಧೆಗಳು ನಡೆಯಲಿವೆ. 11ರಂದು ವಚನ ರೂಪಕ, ವಚನ ಅಂತ್ಯಾಕ್ಷರಿ, ವಚನ ಕಂಠಪಾಠ, ವಚನ ಕಥೆ, ವಚನ ರಸಪ್ರಶ್ನೆ, ಸಮೂಹ ವಚನ ಗಾಯನಗಳು, ಜ.12ರಂದು ವಚನ ವೇಷಭೂಷಣ ಸ್ಪರ್ಧೆ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ಸಮಾರೋಪ ಹಾಗೂ ಬಹುಮಾನ ವಿತರಣೆ ನಡೆಯಲಿದೆ.

ಈ ಸ್ಪರ್ಧೆಗಳಿಗೆ ಶಿಶುವಿಹಾರದಿಂದ ಹತ್ತನೇ ತರಗತಿಯವರೆಗಿನ 2400ಕ್ಕೂ ಹೆಚ್ಚು ಮಕ್ಕಳು ನೋಂದಣಿ ಮಾಡಿಕೊಂಡಿದ್ದಾರೆ. ವಚನಗಳ ಮೂಲಕ ಕನ್ನಡ ಭಾಷೆ ಮತ್ತು ಸಂಸ್ಕೃತಿ ಬೆಳೆಸುವ ಪ್ರಯತ್ನ ಇದಾಗಿದೆ ಎಂದು ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Security & Detectives

WANTED
SECURITY GUARDS
to work in all over Karnataka
Accommodation available
Salary: 20,100.
Please contact:
93413 66744, 93410 66744
96863 10181, 78293 22228
81230 60553, 94285 63870

Drivers

CAR DRIVER-NEEDED for a family living near Yelahanka. Candidate must have driving experience of 20+years and driving experience in Benz or BMW. Please attach the last 3 employers' experience letters. Send your detailed resume describing complete details of your experience and last salary drawn to benzcar23@gmail.com

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

COMPUTERS

Hardware

USED COMPUTERS FOR SALE
Dual Core/ 2GB Ram/ 250GB HDD/ 17"LCD Rs.6,000/-
For Qty of 10 No's. Rs.5,000/- per system
For Quantity of 10 No's without Monitor Rs.3,000/- per system
Courier Charges: Rs.1,000/- per system
COMPUTER HOUSE
L-81, SECTOR 11, 8th CROSS, 9th B MAIN, LIC COLONY, JEEVANBHIMA NAGAR, BANGALORE - 560075.
09886038331 / 080- 42076287

EDUCATION CORNER

ST. BENEDICT'S ACCDAMY RESEDENTIAL
CBSE School, PU, Degree and Nursing Colleges for Boys & Girls.
ADMISSION OPEN FOR 2023 - 24
Fee, Food, Hostel facilities for One (1) Year- One Lakh only in Installments
Free Academy for NCC, Karate, Kung Fu-Wu, Counseling, Yoga.
St. Benedict's Group of Institutions, Anchpalaya, Kengeri, Mysore Road, Bangalore.
Contact: 6360498834/ 9886812398
Mail: jeromeosb@gmail.com / www.sbab.in

AUTOMOTIVE

Four Wheelers Selling

Others

FORD WILLYS jeep 1942 Left Hand Drive Peugeot diesel engine immaculate condition contact 9886330773

BUSINESS

Business Offers

Finance

NRI'S INVESTMENT
And Finance Available
On Low Interest
Against Properties,
Land&
Building,Sites,Flats,
Converted&
Agriculture Lands
Call:7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
For more information Contact:
9845114560 : 9731810277
9901641752 : 9886213331
080 - 45557163 / 164
*conditions apply

ಸಹಕಾರ ಒಕ್ಕೂಟದ ಅಧ್ಯಕ್ಷರ ಆಯ್ಕೆ

ಪ್ರಜಾವಾಣಿ ವಾರ್ತೆ

ಎಚ್‌.ಟಿ. ನಾಗೇಶ್

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾಗಿ ಎಚ್.ಟಿ. ನಾಗೇಶ್ ಮತ್ತು ಖಜಾಂಚಿಯಾಗಿ ಎಂ.ವೆಂಕಟೇಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಭಾನುವಾರ ಚುನಾವಣೆ ನಡೆಯಿತು. ಕೆ.ಎಸ್. ಚಾಮರಾಜಪ್ಪ ಉಪಾಧ್ಯಕ್ಷರಾಗಿ ಆಯ್ಕೆಯಾದರು ಎಂದು ಚುನಾವಣಾ ಅಧಿಕಾರಿ ಎಸ್.ಪವನ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಸದರ ನಿಧಿ ಬಳಕೆ ಅಕ್ರಮ: ದೂರು

ಬಂಗಾರಪೇಟೆ: ಸಂಸದರ ನಿಧಿ ಬಳಕೆಯಲ್ಲಿ ಅಕ್ರಮ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪುರಸಭೆ ಸದಸ್ಯ ವೈ.ಸುನಿಲ್ ಕುಮಾರ್ ಅವರು ಲೋಕಾಯುಕ್ತಕ್ಕೆ ದೂರು ನೀಡಿದ್ದಾರೆ.

ಸಂಸದರ ಅನುದಾನದಲ್ಲಿ ಪುರಸಭೆ ನೀರಿನ ಟ್ಯಾಂಕರ್ ಬಿಲ್ ಹೆಸರಿನಲ್ಲಿ ₹4 ಕೋಟಿ ಅವ್ಯವಹಾರ ನಡೆದಿದೆ ಎಂದೂ ಅವರು ಆರೋಪಿಸಿದ್ದಾರೆ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ರಸ್ತೆಗೆ ಬಾಗಿರುವ ಮರ

'ರಸ್ತೆಗೆ ಬಾಗಿರುವ ಮರ ತೆರವುಗೊಳಿಸಿ'

ಬಿಬಿಎಂಪಿಯ ವಾರ್ಡ್ ನಂ.105ರ ವ್ಯಾಪ್ತಿಯ ಎಂ.ಸಿ.ಬಡಾವಣೆ 1ನೇ ಮುಖ್ಯರಸ್ತೆಯ ಗೀತಾಂಜಲಿ ಸಮುಚ್ಛಯದ ಎದುರು ಮರವೊಂದು ರಸ್ತೆಗೆ ಬಾಗಿದೆ. ಇದರಿಂದ ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗಿದೆ. ವಾಹನಗಳು ಮರಕ್ಕೆ ಬಡಿದಿರುವ ಘಟನೆಗಳು ನಡೆದಿವೆ. ಮರ ಶಿಥಿಲವಾಗಿದ್ದು, ಅನಾಹುತ ಸಂಭವಿಸುವ ಮೊದಲು ತೆರವುಗೊಳಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ಕೆ.ಎಸ್.ಕುಮಾರಸ್ವಾಮಿ, ಎಂ.ಸಿ.ಬಡಾವಣೆ ನಿವಾಸಿ

ವಿಕ್ಟೋರಿಯಾ ಆಸ್ಪತ್ರೆಯ ಗೋಡೆ

'ವಿಕ್ಟೋರಿಯಾ ಆಸ್ಪತ್ರೆ ತಡೆಗೋಡೆ ಕುಸಿತ'

ವಿಕ್ಟೋರಿಯಾ ಆಸ್ಪತ್ರೆಯ ತಡೆಗೋಡೆಯು ಮೈಸೂರು ರಸ್ತೆಯ ಭಾಗದಲ್ಲಿ ಕುಸಿದಿದೆ. ಗೋಡೆ ಕುಸಿತದಿಂದ ಕಲ್ಲು ಮತ್ತು ಮಣ್ಣು ಪಾದಚಾರಿ ಮಾರ್ಗದಲ್ಲಿ ಬಿದ್ದಿವೆ. ಪಾದಚಾರಿಗಳ ಸಂಚಾರಕ್ಕೆ ಅಡ್ಡಿಯಾಗಿದ್ದು, ಮುಖ್ಯ ರಸ್ತೆಯಲ್ಲೇ ಸಂಚರಿಸುವ ಪರಿಸ್ಥಿತಿ ಸೃಷ್ಟಿಯಾಗಿದೆ. ಕೂಡಲೇ ಗೋಡೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಲಿ.

ಶಂಕರ್ ಕುಂದಾಪುರ, ಪಾದಚಾರಿ

'ಬೀದಿ ದೀಪಗಳೇ ಇಲ್ಲ'

ಪಶ್ಚಿಮ ಕಾರ್ಡ್ ರಸ್ತೆ ಮತ್ತು ಮಹಾಲಕ್ಷ್ಮಿ ಪೊಲೀಸ್ ಠಾಣೆಯ ಭಾಗದಲ್ಲಿ ಅಳವಡಿಸಿದ್ದ ಎಲ್ಲ ವಿದ್ಯುತ್ ದೀಪಗಳು ಒಂದೂವರೆ ತಿಂಗಳಿನಿಂದ ಕೆಟ್ಟಿವೆ. ಈ ಭಾಗದಲ್ಲಿ ಇದರಿಂದಾಗಿ ಕಾನೂನುಬಾಹಿರ ಚಟುವಟಿಕೆಗಳು ಹೆಚ್ಚಿವೆ. ಮಹಿಳೆಯರು ಸೇರಿ ನಿವಾಸಿಗಳು ಭಯದಲ್ಲಿ ಸಾಗಬೇಕಾದ ಸ್ಥಿತಿ ಇದೆ. ರಾತ್ರಿ ವೇಳೆ ವಾಹನಗಳು ವೇಗವಾಗಿ ಸಂಚರಿಸುತ್ತಿದ್ದು, ಅಪಘಾತಗಳಾಗುತ್ತಿವೆ. ಬಿಬಿಎಂಪಿ ತ್ವರಿತಗತಿಯಲ್ಲಿ ಬೀದಿ ದೀಪ ಸಮಸ್ಯೆ ನಿವಾರಿಸಬೇಕು.

ಪೂರ್ಣಿಮಾ ಮೂರ್ತಿ, ಸ್ಥಳೀಯ ನಿವಾಸಿ

'ಕಾಮಗಾರಿ ಪೂರ್ಣಗೊಳಿಸಿ'

ಇಂದಿರಾನಗರದ 100 ಅಡಿ ರಸ್ತೆಯಲ್ಲಿ ಪಾದಚಾರಿ ಮಾರ್ಗದ ನಿರ್ಮಾಣ ಕಾಮಗಾರಿ ಆಮೆಗತಿಯಲ್ಲಿ ಸಾಗಿದೆ. ಇದರಿಂದ ನಿತ್ಯ ದೂಳಿನ ಮಜ್ಜನವಾಗುತ್ತಿದೆ. ಮುಖ್ಯರಸ್ತೆಯಲ್ಲಿ ವಾಹನಗಳು ಅತಿ ವೇಗವಾಗಿ ಸಂಚರಿಸುತ್ತಿವೆ. ಕಾಮಗಾರಿಯಿಂದಾಗಿ ಪಾದಚಾರಿಗಳು ಮುಖ್ಯರಸ್ತೆಯ ಅಂಚಿನಲ್ಲಿ ಭಯದಲ್ಲೇ ಓಡಾಡಬೇಕಾದ ಸ್ಥಿತಿ ಇದೆ. ಈ ಪಾದಚಾರಿ ಮಾರ್ಗದ ದುರಸ್ತಿ ಕಾಮಗಾರಿಯನ್ನು ಬಿಬಿಎಂಪಿ ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಕೋರಿಕೆ.

ದೇವೇಂದ್ರ ಕುಮಾರ್, ಸ್ಥಳೀಯ ನಿವಾಸಿ

ಇಂದಿರಾನಗರದ 100 ಅಡಿ ರಸ್ತೆಯಲ್ಲಿ ಪಾದಚಾರಿ ಮಾರ್ಗದ ನಿರ್ಮಾಣ

ಜನ ಸಾಹಿತ್ಯ ಸಮ್ಮೇಳನ: ಸಮಾಜದ ಧರ್ಮಾಧಾರಿತ ಛಿದ್ರೀಕರಣದ ಹಿಂದೆ ಮಾಂಸಾಹಾರದ ರಾಜಕಾರಣ– ಕಳವಳ

‘ಆಹಾರ ಪದ್ಧತಿ ಸೌಹಾರ್ದ ಹೆಚ್ಚಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಸ್ಲಿಮರ ವಿರುದ್ಧ ಎತ್ತಿಕಟ್ಟುವ ‘ನಾವು ಮತ್ತು ಅವರು’ ಎನ್ನುವ ವಿಭಜನೆ ವಿದ್ಯಾರ್ಥಿಗಳು, ಪೋಷಕರ ಮನದಲ್ಲಿ ಬಿತ್ತಲಾಗಿದೆ. ಇಡೀ ಸಮಾಜ ಧರ್ಮಾಧಾರಿತವಾಗಿ ಛಿದ್ರೀಕರಣಗೊಂಡಿದೆ. ಇದರ ಹಿಂದೆ ಮಾಂಸಾಹಾರದ ರಾಜಕಾರಣ ಅಡಗಿದೆ’ ಎಂದು ಚಿಂತಕ ರಂಗನಾಥ ಕಂಟನಕುಂಟೆ ಅವರು ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಭಾನುವಾರ ನಡೆದ ಜನಸಾಹಿತ್ಯ ಸಮ್ಮೇಳನದಲ್ಲಿ ‘ಆಹಾರದ ಮೇಲಿನ ರಾಜಕಾರಣ ಮತ್ತು ದೌರ್ಜನ್ಯ’ ಕುರಿತ ಗೋಷ್ಠಿಯಲ್ಲಿ ಮಾತನಾಡಿದ ಅವರು, ಕರಾವಳಿ ಭಾಗದಲ್ಲಿ ಗೋವು ಸಾಗಣೆಯ ಮಾಹಿತಿ ನೀಡುವುದೇ ಶೂದ್ರ ಸಮುದಾಯದವರು ಎಂದರು.

‘ದನದ ಮಾಂಸ ಸಾಗಣೆ ಮತ್ತು ಸೇವಿಸುವ ವಿಚಾರದಲ್ಲಿ ಹತ್ಯೆಗಳು ನಿರಂತರವಾಗಿ ನಡೆಯುತ್ತಿವೆ. ಆಹಾರ ಪದ್ಧತಿ ಅನುಸರಿಸಿ ಅವಮಾನಿಸುವ ಕೆಲಸವು ನಡೆಯುತ್ತಿದೆ. ಈಗ ಕ್ಲೈಮ್ಯಾಕ್ಸ್ ಹಂತಕ್ಕೆ ಬಂದಿದೆ’ ಎಂದು ವಿಶ್ಲೇಷಿಸಿದರು.

‘ಶೂದ್ರ ಸಮುದಾಯಗಳ ಆಚರಣೆಯಲ್ಲಿ ಮಾಂಸಾಹಾರವೇ ಪ್ರಧಾನ. ಗೋಹತ್ಯೆ ನಿಷೇಧ ಕಾನೂನು ಜಾರಿ ಮೂಲಕ ಈ ವೃತ್ತಿಯಲ್ಲಿ ತೊಡಗಿದರೆ ಅಪರಾಧಿಗಳಾಗಿ-ಸುವ ಜನವಿರೋಧಿ ನಡೆ ಆಹಾರ ರಾಜಕಾರಣದ ಸುತ್ತ ನಡೆದಿದೆ’ ಎಂದರು.

‘ಸನಾತನ ಸಂಸ್ಕೃತಿ ಹೆಸರಿನಲ್ಲಿ ಸಸ್ಯಾಹಾರ ಪದ್ಧತಿ ಮುನ್ನೆಲೆಗೆ ತರುವ, ಇದೇ ಶ್ರೇಷ್ಠತೆ ಎಂದು ಸಾರುವ ವ್ಯಸನ ಬೆಳೆಯುತ್ತಿದೆ. ದನದ ಮಾಂಸ ತಿನ್ನುವವರ ವಿರುದ್ಧ ಕುರಿ ಮಾಂಸ ತಿನ್ನುವವರನ್ನು ಎತ್ತಿಕಟ್ಟುವ ಹುನ್ನಾರ ಇದರಲ್ಲಿದೆ. ಆಹಾರದ ಹೆಸರಿನ ಸಾಂಸ್ಕೃತಿಕ ಹಿಂಸೆ ಮನುಷ್ಯನನ್ನು ನಿರಂತರ ಗಾಯಗೊಳಿಸಲಿದೆ’ ಎಂದು ಹೇಳಿದರು.

ಲೇಖಕಿ ಪಲ್ಲವಿ ಇಡೂರ್ ಅವರು ಮಾತನಾಡಿ, ‘ಮನುಷ್ಯ ಮೂಲತಃ ಮಾಂಸಾಹಾರಿ. ಆಹಾರ ಪದ್ಧತಿ ಹೆಸರಿನಲ್ಲಿ ಮೇಲು-ಕೀಳು, ಶ್ರೇಷ್ಠ-ಕನಿಷ್ಠ ಮನೋಧರ್ಮ ಬೆಳಸಲಾಗಿದೆ. ಆಹಾರ ಪದ್ಧತಿ ಮೂಲಕ ಭ್ರಾತೃತ್ವ, ಸೌಹಾರ್ದ ಹೆಚ್ಚಿಸಬೇಕು. ಒಡಕು ಮೂಡಿಸಬಾರದು’ ಎಂದರು. ಆಹಾರ ಸೇವಿಸುತ್ತಲೇ ಪ್ರೇಕ್ಷಕರು ಗೋಷ್ಠಿಗೆ ಕಿವಿಯಾದರು.



ಜನಸಾಹಿತ್ಯ ಸಮ್ಮೇಳನದಲ್ಲಿ ಊಟದ ಸಂಭ್ರಮ –ಪ್ರಜಾವಾಣಿ ಚಿತ್ರ

‘ಕವಿಯು ಕಾಲಕ್ಕೆ ಕೊರಳಾಗಬೇಕು’

‘ಕವಿಯಾದವನು ಕಾಲಕ್ಕೆ ಕೊರಳಾಗಬೇಕು, ಇಲ್ಲದಿದ್ದರೆ ಅದಷ್ಟೇ ಸುಂದರವಾದ ಕವಿತೆಯಾಗಿದ್ದರೂ ಕಾಲಾನಂತರದಲ್ಲಿ ಮರೆಯಾಗುತ್ತದೆ’ ಎಂದು ಸಾಹಿತಿ ಬಂಜಗೆರೆ ಜಯಪ್ರಕಾಶ್ ಅವರು ಹೇಳಿದರು.

ಜನಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು,

‘ರಾಜರ ಆಸ್ಥಾನದಲ್ಲಿ ಹೊಗಳಿ ಬರೆದ ಅದೆಷ್ಟೋ ಕವಿತೆಗಳು ಕಾಲದಲ್ಲಿ ಅಳಿಸಿ ಹೋಗಿವೆ. ಭಿಕ್ಷಾಟನೆ ಮಾಡಿಕೊಂಡು, ಕಾಡಿನಲ್ಲಿ ಅಲೆದಾಡಿ, ಜನರೊಂದಿಗೆ ಜಗಲಿಯ ಮೇಲೆ ಕುಳಿತ ಬರೆದ ಕವಿತೆಗಳು ಜನಮಾನಸದಲ್ಲಿ ಉಳಿದಿವೆ. ಕನಕದಾಸರು, ಷರೀಫರು, ಬಸವಣ್ಣನವರು ಯಾವುದೇ ರಾಜನನ್ನು ಮೆಚ್ಚಿಸಲು ಬರೆಯಲಿಲ್ಲ. ನೊಂದವರಿಗೆ ಧ್ವನಿಯಾಗಿ ಬರೆದರು. ಅದಕ್ಕಾಗಿಯೇ ಶಾಶ್ವತವಾಗಿ ಉಳಿದರು’ ಎಂದು ಅವರು ಹೇಳಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸಮಕಾಲೀನ ತಲ್ಲಣಗಳ ಚರ್ಚೆ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪ್ರತಿರೋಧವಾಗಿ ರಾಜಧಾನಿಯಲ್ಲಿ ನಡೆದ ಜನ ಸಾಹಿತ್ಯ ಸಮ್ಮೇಳನದಲ್ಲಿ ಸಮಕಾಲೀನ ತಲ್ಲಣಗಳ ಬಗ್ಗೆ ಗಂಭೀರ ಚರ್ಚೆಗಳು ನಡೆದವು.

ದಲಿತರು ಮತ್ತು ಮುಸ್ಲಿಮರನ್ನು ಹಾವೇರಿಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಿಂದ ದೂರವಿಡಲಾಗಿದೆ ಎಂದು ಆರೋಪಿಸಿ ಆಯೋಜಿಸಿದ್ದ ಸಮ್ಮೇಳನದಲ್ಲಿ ಪ್ರಗತಿಪರ ಸಾಹಿತಿಗಳು, ಚಿಂತಕರು ಧ್ವನಿಯಾದರು.

ಸಮ್ಮೇಳನಕ್ಕೆ ಕಾಮರೂಪಿ ದ್ವಾರ ಎಂಬ ಹೆಸರಿ-ಡಲಾಗಿತ್ತು. ಸಂತ ಶಿಶುನಾಳ ಷರೀಫ ಮತ್ತು ಗುರು ಗೋವಿಂದಭಟ್ಟರ ಸಭಾಂಗಣದಲ್ಲಿ ಮೊದಲಿಗೆ ಶಿವರಾಮೇಗೌಡ, ಬಿ.ಎನ್.ಜಗದೀಶ್, ರಾ.ಚಿಂತನ್ ಕನ್ನಡ ಧ್ವಜಾರೋಹಣ ಮಾಡಿದರು. ವ್ಯಂಗ್ಯಚಿತ್ರ, ಭಿತ್ತಿಚಿತ್ರಗಳ ಪ್ರದರ್ಶನವನ್ನು ರಘುನಂದನ್ ಉದ್ಘಾಟಿಸಿದರು.

ಸಸ್ಯಾಹಾರಿ ಮತ್ತು ಮಾಂಸಾಹಾರಿ ಊಟದ ವ್ಯವಸ್ಥೆ ಇತ್ತು. ಚಿಕನ್ ಕಬಾಬ್, ಮೀನು ಸಾರು, ಗೀ ರೈಸ್, ಅನ್ನ, ಪಲ್ಯವನ್ನು ನೆರೆದಿದ್ದ ಸಾಹಿತ್ಯಾಸಕ್ತರು ಸವಿದರು.

‘ಒಂದು ಸಾವಿರ ಜನ ಸೇರುವ ನಿರೀಕ್ಷೆ ಮಾಡಿದ್ದೆವು. ನಿರೀಕ್ಷೆಗೂ ಮೀರಿ ಸಾಹಿತ್ಯಾಸಕ್ತರು ಬಂದರು’ ಎಂದು ಆಯೋಜಕರು ಹೇಳಿದರು.

ಗೋಡೆ ಕುಸಿದು ಕಾರ್ಮಿಕ ಸಾವು

ಬೆಂಗಳೂರು: ಬನ್ನೇರುಘಟ್ಟ ಮುಖ್ಯರಸ್ತೆಯ ಚಿನ್ನಯ್ಯನಪಾಳ್ಯದಲ್ಲಿ ಮನೋಕಾಮನ್ ಸೆರಾಮಿಕ್ಸ್ ಇಂಕ್ ಗೋದಾಮು ಕಾಂಪೌಂಡ್ ಗೋಡೆ ಕುಸಿದು ಕಾರ್ಮಿಕ ಅಯ್ಯಪ್ಪ ಎಂಬುವರು ಮೃತಪಟ್ಟಿದ್ದಾರೆ. ಬಿಬಿಎಂಪಿ ಗುತ್ತಿಗೆದಾರರ ವಿರುದ್ಧ ಆಡುಗೋಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಕಲಬುರಗಿ ಜಿಲ್ಲೆಯ ಭೀಮನಹಳ್ಳಿಯ ಅಯ್ಯಪ್ಪ, ಕೆಲಸ ಹುಡುಕಿಕೊಂಡು ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದರು. ನಾಗರಬಾವಿಯಲ್ಲಿ ಪತ್ನಿ ಜೊತೆ ವಾಸವಿದ್ದರು. ಜ. 6ರಂದು ಕೆಲಸ ಮಾಡುತ್ತಿದ್ದ ವೇಳೆ ಕಾಂಪೌಂಡ್ ಗೋಡೆ ಕುಸಿದು ಅಯ್ಯಪ್ಪ ಮೃತಪಟ್ಟಿದ್ದಾರೆ. ಅವರ ಜೊತೆಗೆ ಕೆಲಸ ಮಾಡುತ್ತಿದ್ದ ಕಾರ್ಮಿಕರಾದ ಮಲ್ಲಿಕಾರ್ಜುನ್ ಹಾಗೂ ಶರಣಪ್ಪ ಎಂಬುವರೂ ತೀವ್ರ ಗಾಯಗೊಂಡಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

‘ಅಯ್ಯಪ್ಪ ಅವರ ಪತ್ನಿ ದೂರು ನೀಡಿದ್ದಾರೆ. ಕೆಲಸದ ಸ್ಥಳದಲ್ಲಿ ನಿರ್ಲಕ್ಷ್ಯ ಆರೋಪದಡಿ ಬಿಬಿಎಂಪಿ ಗುತ್ತಿಗೆದಾರ ಚಂದ್ರು, ಸಹಾಯಕ ಗುರುಪ್ರಸಾದ್, ಜಾಗದ ಮಾಲೀಕ ಹಾಗೂ ಜಾಗ ಬಾಡಿಗೆ ಪಡೆದಿದ್ದವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಹೇಳಿದರು.

‘ಚರಂಡಿಯಲ್ಲಿ ಕಲ್ಲು ತೆಗೆದು ಸ್ವಚ್ಛಗೊಳಿಸಿದರೆ, ಗೋಡೆ ಕುಸಿದು ಬೀಳುವ ಸಂಭವವಿರುವುದಾಗಿ ಕಾರ್ಮಿಕರು ಗುತ್ತಿಗೆದಾರನಿಗೆ ಹೇಳಿದ್ದರು. ಅಷ್ಟಾದರೂ ಆತ, ಚರಂಡಿ ಸ್ವಚ್ಛ ಮಾಡಲು ಕಾರ್ಮಿಕರ ಮೇಲೆ ಒತ್ತಡ ಹೇರಿದ್ದ. ಹೀಗಾಗಿ, ಅಯ್ಯಪ್ಪ ಹಾಗೂ ಇತರರು ಚರಂಡಿ ಸ್ವಚ್ಛತೆಯಲ್ಲಿ ತೊಡಗಿದ್ದರು. ಇದೇ ಸಂದರ್ಭದಲ್ಲೇ ಗೋಡೆ ಕುಸಿದು ಕಾರ್ಮಿಕರ ಮೇಲೆ ಬಿದ್ದಿತ್ತು. ತೀವ್ರ ಗಾಯಗೊಂಡು ಅಯ್ಯಪ್ಪ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

ದೇವಸ್ಥಾನದಲ್ಲಿ ಮಹಿಳೆ ಮೇಲೆ ಹಲ್ಲೆ ಪ್ರಕರಣ: ಆರೋಪಿ ಬಂಧನ

ಬೆಂಗಳೂರು: ಅಮೃತಹಳ್ಳಿಯ ಲಕ್ಷ್ಮಿನರಸಿಂಹ ದೇವಸ್ಥಾನದಲ್ಲಿ ಮಹಿಳೆಯನ್ನು ಎಳೆದಾಡಿ ಹಲ್ಲೆ ಮಾಡಿದ್ದ ಆರೋಪದಡಿ ದೇವಸ್ಥಾನದ ಆಡಳಿತ ಮಂಡಳಿ ಮುಖ್ಯಸ್ಥ ಮುನಿಕೃಷ್ಣಪ್ಪ (68) ಅವರನ್ನು ಪೊಲೀಸರು ಬಂಧಿಸಿದ್ದಾರೆ. 2022ರ ಡಿ.21ರಂದು ಘಟನೆ ನಡೆದಿದ್ದು, ಮಹಿಳೆ ದೂರು ನೀಡಿದ್ದರು.

’ಆರೋಪಿಯನ್ನು ಕೋರ್ಟ್‌ಗೆ ಹಾಜರುಪಡಿಸಿದ್ದು, ಷರತ್ತುಬದ್ಧ ಜಾಮೀನು ಸಿಕ್ಕಿದೆ. ಸದ್ಯ ಆರೋಪಿಯನ್ನು ಬಿಡುಗಡೆ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ. ‘ದೇವಸ್ಥಾನಕ್ಕೆ ಹೋಗಿದ್ದ ಮಹಿಳೆ, ದೇವರ ಪತ್ನಿಯೆಂದು ರಂಪಾಟ ಮಾಡಿ ಗರ್ಭಗುಡಿಯಲ್ಲಿ ಮೂರ್ತಿ ಪಕ್ಕ ಕುಳಿತುಕೊಳ್ಳಲು ಯತ್ನಿಸಿದ್ದರು. ಅದನ್ನು ತಡೆದಿದ್ದಕ್ಕೆ ಅರ್ಚಕರ ಮೇಲೆ ಉಗುಳಿದ್ದರು. ಸಿಟ್ಟಾದ ಆರೋಪಿ ಮುನಿಕೃಷ್ಣಪ್ಪ, ಮಹಿಳೆಗೆ ಹಲ್ಲೆ ಮಾಡಿದ್ದ. ಇದು, ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು’ ಎಂದು ತಿಳಿಸಿವೆ.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಭಾನುವಾರ ಆಯೋಜಿಸಿದ್ದ ‘ಸಂವಿಧಾನವೇ ಉಸಿರು, ಬಹುತ್ವವೇ ಬದುಕು’ ಒಗ್ಗೂಡುವ ಹಬ್ಬದ ಉದ್ಘಾಟನೆ ಕಾರ್ಯಕ್ರಮದಲ್ಲಿ ವಿಜಯಪುರದ ಮಲ್ಲಮ್ಮ ಯಾಳವಾರ, ಜೆಎನ್‌ಯು ವಿಶ್ರಾಂತ ಪ್ರಾಧ್ಯಾಪಕಿ ಪ್ರೊ. ಜಾನಕಿ ನಾಯರ್, ಎನ್‌ಎಫ್‌ಡಿಡಬ್ಲ್ಯು ಸ್ಥಾಪಕ ಅಧ್ಯಕ್ಷೆ ರುತ್ ಮನೋರಮಾ, ಪ್ರೊ. ಸಬಿಹಾ ಭೂಮಿಗೌಡ ಭಾಗವಹಿಸಿದ್ದರು. –ಪ್ರಜಾವಾಣಿ ಚಿತ್ರ

ಎಲೆಕ್ಟ್ರಾನಿಕ್ ಸಿಟಿ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ • ನೈಸ್ ರಸ್ತೆಯಲ್ಲಿ ಶವ ಬಿಸಾಡಿದ್ದರು

ಪ್ರಿಯಕರನ ಹತ್ಯೆ: ಮಹಿಳೆ ಜತೆ ಪತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಲುಗೆ ಇಟ್ಟುಕೊಂಡಿದ್ದ ಪ್ರಿಯಕರ ಹತ್ಯೆ ಪ್ರಕರಣದಲ್ಲಿ, ಮಹಿಳೆ ಹಾಗೂ ಆಕೆಯ ಪತಿ ಸೇರಿ ಮೂವರನ್ನು ಎಲೆಕ್ಟ್ರಾನಿಕ್ ಸಿಟಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಉತ್ತರಪ್ರದೇಶ ಮೂಲದ ರೀನಾ (29), ಅವರ ಪತಿ ಗಂಗೇಶ್ (32) ಹಾಗೂ ಸ್ನೇಹಿತ ಬಿಜೋಯ್ ಕುಮಾರ್ (28) ಬಂಧಿತರು. ಇವರು ಅಸ್ಸಾಂ ಮೂಲದ ನಿಬಾಶೀಸ್ ಪಾಲ್ (32) ಅವರನ್ನು ಕೊಲೆ ಮಾಡಿ, ಶವವನ್ನು ನೈಸ್ ರಸ್ತೆಯಲ್ಲಿ ಎಸೆದು ಪರಾರಿಯಾಗಿ-ದ್ದರು’ ಎಂದು ಪೊಲೀಸರು ಹೇಳಿದರು.

‘ಮೃತನ ಗುರುತು ಆರಂಭದಲ್ಲಿ ಗೊತ್ತಾಗಿರಲಿಲ್ಲ. ಇತ್ತೀಚೆಗೆ ಆತನ ಹೆಸರು ಹಾಗೂ ವಿಳಾಸ ಪತ್ತೆಯಾಗಿತ್ತು. ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು’ ಎಂದು ತಿಳಿಸಿದರು.

ಉತ್ತರ ಪ್ರದೇಶದ ದಂಪತಿ: ‘ರೀನಾ – ಗಂಗೇಶ್ ದಂಪತಿ ಕೆಲಸ ಅರಸಿ ನಗರಕ್ಕೆ ಬಂದಿದ್ದರು. ಗಂಗೇಶ್ ಪೇಟಿಂಗ್ ಕೆಲಸ, ರೀನಾ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದು, ದಂಪತಿಗೆ ನಾಲ್ವರು ಮಕ್ಕಳಿದ್ದರು’ ಎಂದು ತಿಳಿಸಿದರು.

‘ಕೋರಿಯರ್ ಡೆಲಿವರಿ ಬಾಯ್ ಆಗಿದ್ದ ನಿಬಾಶೀಸ್ ಹುಟ್ಟುಹಬ್ಬದ ಪಾರ್ಟಿಯೊಂದರಲ್ಲಿ ರೀನಾಗೆ ಪರಿಚಿ-ತರಾಗಿದ್ದು, ನಂತರ ಸಲುಗೆ ಬೆಳೆದಿತ್ತು. ಇಬ್ಬರೂ ಹಲವೆಡೆ ಸುತ್ತಾಡಿದ್ದರು’ ಎಂದು ತಿಳಿಸಿದರು.

‘ಮದ್ಯವ್ಯಸನಿಯಾಗಿದ್ದ ಗಂಗೇಶ್ ಈಚೆಗೆ ಊರಿಗೆ ಹೋಗಿದ್ದ. ಆ ಅವಧಿಯಲ್ಲಿ ಅಕ್ರಮ ಸಂಬಂಧ ಮುಂದುವರಿಸಿದ್ದ ರೀನಾ–ನಿಬಾಶೀಶ್ ಒಂದೇ ಮನೆಯಲ್ಲಿ ವಾಸವಿದ್ದರು’ ಎಂದು ಪೊಲೀಸರು ಹೇಳಿದರು. ‘ಇತ್ತೀಚಿಗೆ ನಿಬಾಶೀಸ್, ರೀನಾಗೆ ವೇಶ್ಯಾವಾಟಿಕೆ ನಡೆಸುವಂತೆ ಕಿರುಕುಳ ನೀಡುತ್ತಿದ್ದ. ನೊಂದ ರೀನಾ, ಪತಿಗೆ ವಿಷಯ ತಿಳಿಸಿದ್ದರು. ಸಿಟ್ಟಾದ ಗಂಗೇಶ್, ಸ್ನೇಹಿತ ಬಿಜೋಯ್ ಜೊತೆ ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದ’.

‘ಜ. 2ರಂದು ತಡರಾತ್ರಿ ಮನೆಗೆ ಬಂದಿದ್ದ ನಿಬಾಶೀಸ್ ಅವರಿಗೆ ರೀನಾ ಅವರೇ ಕಂಠಪೂರ್ತಿ ಮದ್ಯ ಕುಡಿಸಿ ಮಲಗಿಸಿದ್ದರು. ಮರುದಿನ ಜ. 3ರಂದು ನಸುಕಿನಲ್ಲಿ ಆರೋ-ಪಿಗಳೆಲ್ಲರೂ ನಿಬಾಶೀಸ್ ಅವರನ್ನು ಸೀರೆಯಿಂದ ಕುತ್ತಿಗೆ ಬಿಗಿದು ಕೊಲೆ ಮಾಡಿದ್ದರು. ದ್ವಿಚಕ್ರ ವಾಹನದಲ್ಲಿ ಶವ ತೆಗೆದುಕೊಂಡು ಹೋಗಿ ನೈಸ್ ರಸ್ತೆಯಲ್ಲಿ ಎಸೆದಿದ್ದರು. ಇದಾದ ನಂತರ, ಮನೆ ಖಾಲಿ ಮಾಡಿ ಉತ್ತರ ಪ್ರದೇಶಕ್ಕೆ ಹೋಗಿದ್ದರು. ಶವ ಸಾಗಿಸಿದ್ದ ಕೃತ್ಯ ಸಿಸಿಟಿವಿ ಕ್ಯಾಮೆರಾದಲ್ಲೂ ಸೆರೆಯಾಗಿತ್ತು’ ಎಂದು ತಿಳಿಸಿದರು.

‘ಎಚ್ಚರಿಕೆ ನೀಡಿದ್ದ ಪೊಲೀಸರು’

‘ಮೃತ ನಿಬಾಶೀಸ್, ಕೋರಿಯರ್ ಡೆಲಿವರ್ ನೆಪದಲ್ಲಿ ಹಲವರ ಮನೆ ಬಾಗಿಲುಗಳನ್ನು ವಿನಾಕಾರಣ ಬಡಿಯುತ್ತಿದ್ದ. ಬೇಸತ್ತಿದ್ದ ಕೆಲವರು, ಪರಪ್ಪನ ಅಗ್ರಹಾರ ಠಾಣೆಗೆ ಮಾಹಿತಿ ನೀಡಿದ್ದರು. ನಿಬಾಶೀಸ್‌ನನ್ನು ಠಾಣೆಗೆ ಕರೆಸಿದ್ದ ಸಿಬ್ಬಂದಿ, ಎಚ್ಚರಿಕೆ ನೀಡಿದ್ದರು. ಮೃತನ ಫೋಟೊ ನೋಡಿ ಗುರುತಿಸಿದ್ದ ಕೆಲವರು ಠಾಣೆಗೆ ಈ ಮಾಹಿತಿ ನೀಡಿದ್ದರು. ಇದು ಸಹ ಪ್ರಕರಣ ಭೇದಿಸಲು ನೆರವಾಯಿತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಕಾರಿಗೆ ಬೆಂಕಿ ಹಚ್ಚಿದ ದುಷ್ಕರ್ಮಿ

ಮಹಾಲಕ್ಷ್ಮಿ ಲೇಔಟ್ ಜೆ.ಸಿ. ನಗರದಲ್ಲಿ ದುಷ್ಕರ್ಮಿಯೊಬ್ಬ ಬೆಂಕಿ ಹಚ್ಚಿದ್ದರಿಂದ ಹೊತ್ತಿ ಉರಿದ ಕಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಸಿ.ನಗರದಲ್ಲಿ ಮನೆ ಮುಂದೆ ನಿಲ್ಲಿಸಿದ್ದ ಮಹೇಂದ್ರಾ ಟಿಯುವಿ 300 ಕಾರಿಗೆ ದುಷ್ಕರ್ಮಿ-ಯೊಬ್ಬ ಭಾನುವಾರ ನಸುಕಿನಲ್ಲಿ ಬೆಂಕಿ ಹಚ್ಚಿ ಪರಾರಿಯಾಗಿದ್ದು, ಕಾರು ಭಾಗಶಃ ಸುಟ್ಟಿದೆ.

‘ಸ್ಥಳೀಯ ನಿವಾಸಿ ಸುಬ್ರಹ್ಮಣ್ಯ ದೂರು ನೀಡಿದ್ದಾರೆ. ‘ಮೂರು ತಿಂಗಳ ಹಿಂದೆ ಸುಬ್ರಹ್ಮಣ್ಯ ಅವರ ಬೈಕ್‌ಗೂ ಬೆಂಕಿ ಹಚ್ಚಿದ್ದರು. ಹಳೇ ವೈಷಮ್ಯ ಕಾರಣ ಇರಬಹುದು ಎಂದು ಶಂಕಿಸಲಾಗಿದೆ. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿ-ಸಲಾಗುತ್ತಿದೆ’ ಎಂದು ಮಹಾಲಕ್ಷ್ಮಿ ಲೇಔಟ್ ಠಾಣೆ ಪೊಲೀಸರು ತಿಳಿಸಿದರು.

ಧಾರವಾಡದಲ್ಲಿ 12ರಿಂದ ರಾಷ್ಟ್ರೀಯ ಯುವಜನೋತ್ಸವ

ಹಸಿರು ಯುವಜನೋತ್ಸವವಾಗಿ ಆಚರಣೆ

ಪ್ರಜಾವಾಣಿ ವಾರ್ತೆ

ಧಾರವಾಡ: ಹುಬ್ಬಳ್ಳಿ-ಧಾರವಾಡದ-ಲ್ಲಿ ಇದೇ 12ರಂದು ಆರಂಭವಾಗುವ 26ನೇ ರಾಷ್ಟ್ರೀಯ ಯುವ ಜನೋ-ತ್ಸವವನ್ನು ‘ಹಸಿರು ಯುವ ಜನೋ-ತ್ಸವ’ವನ್ನಾಗಿ ರೂಪಿಸಲು ಸಿದ್ಧತೆ ನಡೆದಿದೆ.

ಸ್ವಚ್ಛ ಭಾರತ ಅಭಿಯಾನದ ಸ್ಫೂರ್ತಿಯೊಂದಿಗೆ ಹವಾಮಾನ ಬದಲಾವಣೆ ಮತ್ತು ಪರಿಸರ ವಿಪತ್ತುಗಳ ಅಪಾಯ ತಗ್ಗಿಸುವ ಕೆಲಸದಲ್ಲಿ ಯುವಜನರು ತೊಡಗಿಸಿಕೊಂಡು ಸ್ಪಷ್ಟ ಸಂದೇಶ ರವಾನಿಸುವ ಧ್ಯೇಯ ಹೊಂದಲಾಗಿದೆ.

ಈ ನಿಟ್ಟಿನಲ್ಲಿ ಯುವ ಜನೋತ್ಸವದ-ಲ್ಲಿ ಆರು ಮಂತ್ರಗಳನ್ನು ಪಾಲಿಸಲಾಗುತ್ತ-ದೆ. ತ್ಯಾಜ್ಯ ಉಂಟು ಮಾಡುವ ವಸ್ತುಗಳ ಬಳಕೆ ನಿರಾಕರಣೆ, ಅವಶ್ಯವಿದ್ದಲ್ಲಿ ಅತ್ಯಂತ ಕಡಿಮೆ ಬಳಕೆ, ಮರುಬಳಕೆ, ಮರು ಆಲೋಚನೆಯ, ದುರಸ್ತಿಗೊಳಿಸಿ ಮರುಬಳಕೆ ಅಂಶಗಳನ್ನು ಅಳವಡಿ-ಸಿಕೊಳ್ಳಲಾಗಿದೆ. ಮುಂದಿನ ಪೀಳಿಗೆಗೆ ಉತ್ತಮ ಪರಿಸರ ವ್ಯವಸ್ಥೆ ಕಲ್ಪಿಸುವ ಕುರಿತು ಪ್ರತಿಜ್ಞೆ ಕೈಗೊಳ್ಳಲಾಗುತ್ತದೆ.

ಪ್ರಚಾರ ಸಾಮಗ್ರಿಗಳು, ಕರವಸ್ತ್ರ ಸೇರಿದಂತೆ ಎಲ್ಲವೂ ಪುನರ್ ಬಳಕೆ ವಸ್ತುಗಳಾಗಿ ಉಪಯೋಗಿಸಲಾಗುತ್ತದೆ. ಸಮೂಹ ಸಾರಿಗೆಗೆ ಒತ್ತು ನೀಡಲಾಗಿದೆ. ತ್ಯಾಜ್ಯ ವಿಂಗಡಣೆ ಕಡ್ಡಾಯ. ತ್ಯಾಜ್ಯ ಸಂಗ್ರಹ ಮತ್ತು ನಿರ್ವಹಣೆಗೆ ಸೂಕ್ತ ವ್ಯವಸ್ಥೆ ರೂಪಿಸಲಾಗಿದೆ. ಪುನರ್ ಬಳಕೆ ವಸ್ತುಗಳಿಂದ ಸಿದ್ಧಪಡಿಸಿದ ಸ್ಮರಣಿಕೆಗಳು, ಪದಕಗಳು, ಲೇಖನ ಸಾಮಗ್ರಿಗಳನ್ನು ಉಪಯೋಗಿಸಲಾ-ಗುತ್ತಿದೆ. ಗಣ್ಯರು ಮತ್ತು ಪಾಲ್ಗೊ-ಳ್ಳುವವರಿಗೆ ನೀಡುವ ಜರ್ಸಿಗಳನ್ನು ಸಹ ಮರುಬಳಕೆ ವಸ್ತುಗಳಿಂದ ಸಿದ್ಧಪಡಿಸಿದ್ದು, ಅವುಗಳನ್ನು ಮರು ಬಳಕೆ ಮಾಡುವಂತೆ ವ್ಯವಸ್ಥೆ ಮಾಡಲಾಗಿದೆ.

ಕುಡಿಯುವ ನೀರಿನ ಪ್ಲಾಸ್ಟಿಕ್ ಬಾಟಲಿಗಳಿಂದಾಗುವ ಮಾಲಿನ್ಯ ನಿಯಂತ್ರಣಕ್ಕೂ ಜಿಲ್ಲಾಡಳಿತ ಮಾರ್ಗ ಕಂಡುಕೊಂಡಿದೆ. ನೋಂದಾಯಿತ ಪ್ರತಿ-ಯೊಬ್ಬರಿಗೂ ಕಿಟ್‌ನಲ್ಲಿ ಸ್ಟೀಲ್ ಬಾಟಲಿ ನೀಡಲಾಗುತ್ತಿದೆ. ಇದನ್ನೇ ಉತ್ಸವದ ಕೊನೆಯವರೆಗೂ ಬಳಸಲು ಜಾಗೃತಿ ಮೂಡಿಸಲಾಗುತ್ತಿದೆ.

ಆಹಾರ ಮೇಳಗಳಲ್ಲಿ ಚಮಚ ಸೇರಿ ಎಲ್ಲಾ ವಸ್ತುಗಳು ಮರುಬಳಕೆ ವಸ್ತುಗಳಿಂದಲೇ ತಯಾರಿಸಲಾಗಿವೆ. ಪ್ರತಿಯೊಂದು ವೇದಿಕೆಗಳಲ್ಲಿ ಹಸಿರು ಯುವಜನೋತ್ಸವ ಕುರಿತು ನಿರಂತರ ಮಾಹಿತಿ ರವಾನಿಸಿ ಸಂದೇಶಗಳನ್ನು ಬಿತ್ತರಿಸಬೇಕು ಎಂದು ನಿರ್ದೇಶನ ನೀಡಲಾಗಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಯುವತಿಗೆ ಕಿರುಕುಳ: ಆರೋಪಿ ಬಂಧನ

ಬೆಂಗಳೂರು: ಬ್ಯೂಟಿ ಪಾರ್ಲರ್ ಯುವತಿಗೆ ದೈಹಿಕ ಸಂಪರ್ಕಕ್ಕೆ ಒತ್ತಾಯಿಸಿ ಕಿರುಕುಳ ನೀಡುತ್ತಿದ್ದ ಆರೋಪಿ ಸಮರ್ ಪರಮಾನಿಕ್ (47) ಎಂಬುವರನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪಶ್ಚಿಮ ಬಂಗಾಳದ ಸಮರ್ ಹಲಸೂರು ಗೇಟ್ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದು, ಚಿನ್ನಾಭರಣ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದ. ಈತನ ಕೃತ್ಯದ ಬಗ್ಗೆ ಯುವತಿ ದೂರು ನೀಡಿದ್ದರು’ ಎಂದು ಪೊಲೀಸರು ಹೇಳಿದರು.

‘ಯುವತಿಯು ಪಶ್ಚಿಮ ಬಂಗಾಳದವ-ರಾಗಿದ್ದು, ಬ್ಯೂಟಿಷಿಯನ್ ಕೋರ್ಸ್‌ಗಾಗಿ 2019ರಲ್ಲಿ ನಗರಕ್ಕೆ ಬಂದಿದ್ದರು. ಕೋರ್ಸ್ ಬಳಿಕ ಯಲಹಂಕದಲ್ಲಿರುವ ಬ್ಯೂಟಿ ಪಾರ್ಲರ್‌ನಲ್ಲಿ ಕೆಲಸಕ್ಕೆ ಸೇರಿದ್ದರು. ಒಂದೇ ಊರಿನವರಾಗಿದ್ದರಿಂದ, ಇಬ್ಬರ ನಡುವೆ ಸ್ನೇಹ, ಸಲುಗೆ ಏರ್ಪಟ್ಟಿತ್ತು’ ಎಂದು ತಿಳಿಸಿದರು.

‘ಜೊತೆಗೆ ಕಳೆದಿದ್ದ ಖಾಸಗಿ ಕ್ಷಣಗಳ ಫೋಟೊ ಹಾಗೂ ವಿಡಿಯೊವನ್ನು ಆರೋಪಿ ಇಟ್ಟುಕೊಂಡಿದ್ದ. ಯುವತಿಗೆ ಡ್ಯಾನ್ಸ್ ಬಾರ್‌ನಲ್ಲಿ ಕೆಲಸಕ್ಕೆ ಸೇರಿಸಿ, ವೇತನದಲ್ಲಿ ಕಮಿಷನ್ ಪಡೆಯುತ್ತಿದ್ದ. ಇತ್ತೀಚೆಗೆ ಕಿರುಕುಳದಿಂದ ಬೇಸತ್ತಿದ್ದ ಯುವತಿ ತಮ್ಮೂರಿಗೆ ಮರಳಿದ್ದರು’ ಎಂದು ಪೊಲೀಸರು ಹೇಳಿದರು.

‘ವಿವಾಹದ ಬಳಿಕ ಪತಿಯೊಂದಿಗೆ ನಗರಕ್ಕೆ ಮರಳಿದ್ದು, ಕೋಡಿಗೇಹಳ್ಳಿಯಲ್ಲಿ ವಾಸವಿದ್ದರು. ಇದು ತಿಳಿದು ಪುನಃ ಆಕೆಯನ್ನು ಆರೋಪಿ ಸಂಪರ್ಕಿಸಿದ್ದ ದೈಹಿಕ ಸಂಪರ್ಕ ಹೊಂದಲು ಪೀಡಿಸಿ ಬೆದರಿಕೆ ಒಡ್ಡುತ್ತಿದ್ದ. ಪತಿಗೆ ಮಾಹಿತಿ ನೀಡಿದ್ದ ಮಹಿಳೆ ಠಾಣೆಗೂ ದೂರು ನೀಡಿದ್ದರು’ ಎಂದರು.

ಕೆಲಸಕ್ಕಿದ್ದ ಮನೆಯಲ್ಲಿ ಕಳ್ಳತನ: 40 ಗ್ರಾಂ ಚಿನ್ನಾಭರಣ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸಕ್ಕಿದ್ದ ಮನೆಯಲ್ಲಿ ಚಿನ್ನಾಭರಣ ಕಳವು ಮಾಡಿದ್ದ ಆರೋಪಿ ಮೋನಿಕಾ ಎಂಬಾಕೆಯನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸಂಗೀತಾ ಈ ಬಗ್ಗೆ ದೂರು ನೀಡಿದ್ದರು. ಬಂಧಿತಳಿಂದ ₹ 2.30 ಲಕ್ಷ ಮೌಲ್ಯದ 40 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇಂದು

ತಂತ್ರಜ್ಞಾನದ ಪರಿಣಾಮಕಾರಿ ವರ್ಗಾವಣೆಗಾಗಿ ಕೃಷಿ ಪತ್ರಿಕೋದ್ಯಮ: ಉದ್ಘಾಟನೆ: ಎ.ಶೈಲಜಾ, ಅತಿಥಿಗಳು: ಆರ್. ವಸಂತಾ, ಬಿ.ಕಲ್ಪನಾ, ಅಧ್ಯಕ್ಷತೆ: ಕೆ.ಶಿವರಾಮು, ಆಯೋಜನೆ: ಬೆಂಗಳೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್, ಅಂತರರಾಷ್ಟ್ರೀಯ ಸಭಾಂಗಣ, ಜಿಕೆವಿಕೆ, ಬೆಳಿಗ್ಗೆ 10

ನವೀಕರಣಗೊಂಡ ‘ಇಂಡಿಯಾ ಕಾಫಿ ಹೌಸ್’ ಉದ್ಘಾಟನೆ: ರಾಜೇಶ್ ಅಗರವಾಲ್, ಕೆ.ಜಿ.ಜಗದೀಶ, ಆಯೋಜನೆ: ಭಾರತೀಯ ಕಾಫಿ ಮಂಡಳಿ, ಸ್ಥಳ: ಇಂಡಿಯಾ ಕಾಫಿ ಹೌಸ್, ಚರ್ಚ್ ಸ್ಟ್ರೀಟ್, ಬೆಳಿಗ್ಗೆ 10

2022ನೇ ಸಾಲಿನ ಗೌರವ ಪ್ರಶಸ್ತಿ ಹಾಗೂ ವಾರ್ಷಿಕ ಪ್ರಶಸ್ತಿ ಪ್ರದಾನ: ಉದ್ಘಾಟನೆ: ವಿ.ಸುನಿಲ್ ಕುಮಾರ್, ಅಧ್ಯಕ್ಷತೆ: ಉದಯ್.ಬಿ. ಗುರುಡಾಚಾರ್, ಪ್ರಶಸ್ತಿ ಪ್ರದಾನ: ಪ್ರಭು ಚವ್ಹಾಣ್, ಕಿರು ಹೊತ್ತಿಗೆ ಬಿಡುಗಡೆ: ಪಿ. ರಾಜೀವ, ಅತಿಥಿಗಳು: ಗೊ.ರು. ಚನ್ನಬಸಪ್ಪ, ಎನ್. ಮಂಜುಳಾ, ಪ್ರಕಾಶ್ ಜಿ.ಟಿ. ನಿಟ್ಟಾಲಿ, ಪ್ರಶಸ್ತಿ ಪುರಸ್ಕೃತರು: ಎಂ. ಶಕುಂತಲ ಹನುಮಂತಪ್ಪ, ಪಿ.ಕೆ. ಖಂಡೋಬಾ, ಬಿ. ಹೀರಾ ನಾಯಕ, ಡಿ.ಬಿ. ನಾಯಕ, ಗಂಗಪ್ಪ ಖೇಮಪ್ಪ ಲಮಾಣಿ, ಆಯೋಜನೆ: ಲಂಬಾಣಿ ಸಂಸ್ಕೃತಿ ಭಾಷಾ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಪದವಿ ಪ್ರದಾನ ದಿನ: ಅತಿಥಿಗಳು: ಮಲ್ಲೇಪುರಂ.ಜಿ. ವೆಂಕಟೇಶ್, ಅಧ್ಯಕ್ಷತೆ: ಕೆ.ಎಂ. ನಾಗರಾಜ್, ಚಿಕ್ಕಯ್ಯ, ಧರ್ಮೇಂದ್ರ ಕುಮಾರ್ ಟಿ.ಪಿ., ಆಯೋಜನೆ ಮತ್ತು ಸ್ಥಳ: ಕಮ್ಯೂನಿಟಿ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಜಯನಗರ, 2ನೇ ಬ್ಲಾಕ್, ಬೆಳಿಗ್ಗೆ 10

ಪ್ರವಾಸಿ ಭಾರತೀಯ ದಿವಸ: ಅತಿಥಿಗಳು: ಆನಂದ್ ಸಿಂಗ್, ಕೆ. ಶ್ಯಾಮ ರಾಜು, ಗುರುಕಿರಣ್, ಎಂ. ಶಶಿಧರ್, ಅಧ್ಯಕ್ಷತೆ: ಬಿ.ವಿ. ಗೋಪಾಲ್ ರೆಡ್ಡಿ, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸ್ಥಳ: ಸರ್.ಎಂ.ವಿಶ್ವೇಶ್ವರಯ್ಯ ಸಭಾಂಗಣ, ಎಫ್‌ಕೆಸಿಸಿಐ, ಬೆಳಿಗ್ಗೆ 11

ರಾಚಪ್ಪ ಎಸ್. ಹೋಳೂರು ಅವರ ’ಹೋಳೂರಿನಿಂದ ದುಬೈ ಎಂಬ ಮಾಯಾನಗರಿಗೆ’ ಪುಸ್ತಕ ಬಿಡುಗಡೆ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅತಿಥಿಗಳು: ಚಂದ್ರಶೇಖರ್ ಕಂಬಾರ, ಸಿ. ಸೋಮಶೇಖರ್, ಆಯೋಜನೆ: ಐರಾವತ ಪ್ರಕಾಶನ, ಸ್ಥಳ: ಸೆಂಚುರಿ ಕ್ಲಬ್, ಬೆಳಿಗ್ಗೆ 11.30

ಎಚ್‌ಎಎಲ್ ಕಾರ್ಖಾನೆಯ ಭೂದಾನಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಂಚಿನ ಪುತ್ಥಳಿ ಅನಾವರಣ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ: ಡಿ. ದೀಪಕ್, ಅತಿಥಿಗಳು: ಎಸ್. ಧರ್ಮೇಂದ್ರ ಕುಮಾರ್ ಅರೇನಹಳ್ಳಿ, ರಾ.ನಂ. ಚಂದ್ರಶೇಖರ, ಎ.ಬಿ. ಪ್ರಧಾನ್, ಮಹೇಶ್ ಅಂಗಡಿ, ಎಂ.ಜಿ. ಬಾಲಸುಬ್ರಹ್ಮಣ್ಯ, ಎಚ್. ಲಿಂಗಾರಾಜ, ಬಿ.ಎಸ್. ವರಪ್ರಸಾದ್, ಕುಸುಮಾ ರಾಜಶೇಖರ್, ಆಯೋಜನೆ ಮತ್ತು ಸ್ಥಳ: ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘದ ಆವರಣದ ಹಳೇ ಎಚ್‌ಎಂಎ ಸಭಾಂಗಣ, ಸುರಂಜನ್ ದಾಸ್ ರಸ್ತೆ, ಎಚ್‌ಎಎಲ್, ಸಂಜೆ 4.30

ವಿಲಿಯಂ ಷೇಕ್ಸ್‌ಪಿಯರ್‌ನ ‘ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್’ ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಆಯೋಜನೆ: ದೃಶ್ಯ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಕರ್ನಾಟಕ ಚಿತ್ರಕಲಾ ಪರಿಷತ್ತು ಕುಮಾರ ಕೃಪಾ ರಸ್ತೆಯಲ್ಲಿ ಭಾನುವಾರ ಆಯೋಜಿಸಿದ್ದ '20ನೇ ಚಿತ್ರಸಂತೆ'ಗೆ ಹರಿದು ಬಂದ ಕಲಾರಸಿಕರು

– ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್.ಜಿ.

ಕಲಾವಿದರ ಕಲ್ಪನೆಯಲ್ಲಿ ಅರಳಿದ ಕಲೆ • '20ನೇ ಚಿತ್ರಸಂತೆ' ವೈಭವ ಕಣ್ತುಂಬಿಕೊಂಡ ಜನಸಾಗರ

ಕಲಾಸಕ್ತರ ಕಣ್ಮನ ಸೆಳೆದ ಕಲಾಕೃತಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಬದಿಯಲ್ಲಿ ಬಣ್ಣಗಳ ಚಿತ್ತಾರ, ಕಲಾವಿದನ ಕಲ್ಪನೆಗೆ ಬಣ್ಣದ ರಂಗು, ಕುಂಚದಲ್ಲಿ ಅರಳಿದ ಇತಿಹಾಸ, ಸಂಸ್ಕೃತಿ, ಗ್ರಾಮೀಣ ಸೊಗಡು, ಪ್ರಕೃತಿ ಸೊಗಡಿನ ವೈಭವ ಕಣ್ತುಂಬಿಕೊಳ್ಳಲು ಸೇರಿದ್ದ ಜನಸಾಗರ.

ಉನ್ನತ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್ತು ಭಾನುವಾರ ನಗರದಲ್ಲಿ ಆಯೋಜಿಸಿದ್ದ 20ನೇ ವರ್ಷದ 'ಚಿತ್ರಸಂತೆ'ಯ ದೃಶ್ಯಾವಳಿಗಳಿವು.

ಕುಮಾರಕೃಪಾ ರಸ್ತೆ, ಕ್ರೆಸೆಂಟ್ ರಸ್ತೆ, ಗಾಂಧಿಭವನದ ಸುತ್ತಮುತ್ತ, ಚಿತ್ರಕಲಾ ಪರಿಷತ್ ಆವರಣದಲ್ಲಿ ರಾಜ್ಯ ಹಾಗೂ ಹೊರರಾಜ್ಯಗಳ ಕಲಾವಿದರ ಕುಂಚದಲ್ಲಿ ಅರಳಿದ ಚಿತ್ರಕಲೆಗಳು ಕಲಾಸಕ್ತರ ಮನತಣಿಸಿದವು. ದೇಶದ ವಿವಿಧ ಸಂಸ್ಕೃತಿ ಬಿಂಬಿಸುವ ಕಲಾಕೃತಿಗಳು ಚಿತ್ರಸಂತೆಯಲ್ಲಿ ಮಿಳಿತಗೊಂಡಿದ್ದವು

ಪರಿಸರ, ವನ್ಯಜೀವಿಗಳು, ದೇವಸ್ಥಾನ, ಹೂವು ಕಟ್ಟುವ ಮಹಿಳೆ, ಗ್ರಾಮೀಣ ಸೊಗಡು, ದಿವಂಗತ ಪುನೀತ್ ರಾಜ್‌ಕುಮಾರ್ ಹಾಗೂ ರಾಷ್ಟ್ರಪಿತ ಮಹಾತ್ಮಗಾಂಧಿ, ಬುದ್ಧ – ಬಸವ, ವಿಶ್ವ ಪ್ರಸಿದ್ಧ ನಾಯಕರು, ರೂಪದರ್ಶಿಯರು, ಕೃಷಿಕರ ಬದುಕು, ದೇವರು, ಕಾಲುದಾರಿ, ಸೂರ್ಯಾಸ್ತ ಹಾಗೂ ಸೂರ್ಯೋದಯ, ನದಿಗಳ ಹರಿವು, ನೀರು ಕುಡಿಯುತ್ತಿರುವ ಜಿಂಕೆ, ದೈವ ಕೋಲ, ಕಾಡು ಹಣ್ಣುಗಳು, ಎಳನೀರಿನ ವ್ಯಾಪಾರಿ, ಪಾನೀಪೂರಿ ವ್ಯಾಪಾರಿ, ಹಳೇ ನಗರದ ಸೊಬಗು, ಬೆಟ್ಟಗಳ ಸಾಲು, ಗ್ರಾಮೀಣ ಮನೆ... ಹೀಗೆ ಹಲವು ವಿಷಯಗಳು ಕಲಾವಿದನ ಕುಂಚದಲ್ಲಿ ಚಿತ್ರದ ರೂಪ ಪಡೆದಿದ್ದವು.

ಮಹಿಳೆಯರ ಭಾವ, ಜಾನಪದ ಸಂಸ್ಕೃತಿ ಹಾಗೂ ಶಿಲ್ಪಕಲೆಗಳೂ ಗಮನ ಸೆಳೆದವು. ಹತ್ತಾರು ವಿಷಯಗಳು ಕಲಾವಿದನ ಕುಂಚದಲ್ಲಿ ಅರಳಿದ್ದವು.

ಚಿತ್ರಸಂತೆಯಲ್ಲಿ ಈ ಬಾರಿ 1,300 ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿತ್ತು. ರಾಜ್ಯದ ಬಹುತೇಕ ಜಿಲ್ಲೆ ಹಾಗೂ 18 ರಾಜ್ಯಗಳ ಕಲಾವಿದರು ಚಿತ್ರಸಂತೆಯಲ್ಲಿ ತಮ್ಮ ಚಿತ್ರ ಪ್ರದರ್ಶನ ಹಾಗೂ ಮಾರಾಟ ನಡೆಸಿದರು.

ಜಲವರ್ಣ, ತೈಲವರ್ಣ, ಮರಳಿನ ಚಿತ್ರಕಲೆ, ಆ್ಯಕ್ರಿಲಿಕ್, ಮಧುಬನಿ, ಡಿಜಿಟಲ್ ಕಲೆ, ರಾಜಸ್ಥಾನಿ ಶೈಲಿಯ ಕಲಾಕೃತಿಗಳು ಗಮನ ಸೆಳೆದವು. ಒಂದಕ್ಕಿಂತ ಮತ್ತೊಂದು ಕಲಾಕೃತಿಗಳು ಆಲೋಚನೆಗೆ ಹಚ್ಚಿದವು. ಕರಕುಶಲ ವಸ್ತುಗಳೂ ಮನಸೆಳೆದವು. ಅನುಪಯುಕ್ತ ವಸ್ತುಗಳು ಕಲಾಕೃತಿಯ ರೂಪ ಪಡೆದಿದ್ದವು. ಒಡೆದ ಬಳೆಯಿಂದ ಶರತ್ ಅವರು ರಚಿಸಿದ್ದ ಕೋಳಿ ಕಲಾಕೃತಿ ಗಮನಿಸಿದ ಜನರು ಅಬ್ಬಾ ಎಂದರು.

ರಸ್ತೆಯುದ್ದಕ್ಕೂ ವ್ಯಕ್ತಿಯ ಭಾವಚಿತ್ರವನ್ನು ಬಿಡಿಸುವವರು ಠಿಕಾಣಿ ಹೂಡಿದ್ದರು. ಮಕ್ಕಳು ಭಾವಚಿತ್ರ ಬಿಡಿಸಿ ಕೊಂಡು ಸಂಭ್ರಮಿಸಿದರೆ, ಯುವಜನರು ಟ್ಯಾಟೋ ಹಾಕಿಸಿಕೊಂಡರು. ಜೇಡಿ ಮಣ್ಣಿನಲ್ಲಿ ಕಲಾಕೃತಿ ಮಾಡುವ ಕಲೆ ಕಲಿಸುವವರಿದ್ದರು. ಚಿತ್ರಸಂತೆ ಕಲಾವಿದರು–ಕಲಾಸಕ್ತರ ನಡುವೆ ಬಾಂಧವ್ಯದ ಬೆಸೆಯಲು ಸಾಕ್ಷಿಯಾಯಿತು.

ಚಿತ್ರಸಂತೆಯಲ್ಲಿ ಕಲಾಕೃತಿಗಳನ್ನು ವೀಕ್ಷಿಸುತ್ತಿರುವ ಜನರು (ಎಡಚಿತ್ರ) ಕಲಾವಿದರೊಬ್ಬರ ಕುಂಚದಲ್ಲಿ ಅರಳಿದ ಚಿತ್ರವನ್ನು ಯುವತಿ ವೀಕ್ಷಿಸಿದರು

'ಚಿತ್ರಸಂತೆ' ಎರಡು ದಿನ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ

'ಮುಂದಿನ ವರ್ಷ ಚಿತ್ರಸಂತೆಯನ್ನು ಎರಡು ದಿನ ನಡೆಸಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಲಹೆ ನೀಡಿದರು.

ಚಿತ್ರಸಂತೆ ಉದ್ಘಾಟಿಸಿದ ಅವರು, 'ಚಿತ್ರಕಲಾ ಪರಿಷತ್ತು ವಿಶಿಷ್ಟ ಸಂಸ್ಥೆಯಾಗಿದ್ದು, ರಾಷ್ಟ್ರ ಮಟ್ಟಕ್ಕೆ ಬೆಳೆಯಬೇಕು. ಬ್ರ್ಯಾಂಡ್ ಬೆಂಗಳೂರನ್ನು ರಾಷ್ಟ್ರಮಟ್ಟಕ್ಕೆ ಕೊಂಡೊಯ್ಯಬಲ್ಲ ಸಂಸ್ಥೆಗಳಲ್ಲಿ ಚಿತ್ರಕಲಾ ಪರಿಷತ್ತೂ ಒಂದು' ಎಂದರು.

'ಇದು, ಬೆಂಗಳೂರಿಗೆ ಸೀಮಿತವಾಗಬಾರದು. ಕಲ್ಯಾಣ ಕರ್ನಾಟಕ, ದಕ್ಷಿಣ ಕರ್ನಾಟಕದಲ್ಲಿ ಉತ್ತಮ ಕಲಾವಿದರಿದ್ದಾರೆ. ಅವರಿಗೆ ವೇದಿಕೆ ಇಲ್ಲ. ಈ ವರ್ಷ ನಾಲ್ಕೈದು ಚಿತ್ರಸಂತೆಗಳನ್ನು ಪ್ರಾದೇಶಿಕ ಕೇಂದ್ರಗಳಾದ ಮಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡಗಳಲ್ಲಿಯೂ ಆಯೋಜಿಸಬೇಕು. ಇದಕ್ಕೆ ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ' ಎಂದರು.

'₹4 ಕೋಟಿ ವಹಿವಾಟು'

ಚಿತ್ರಸಂತೆಯಲ್ಲಿ ಕನಿಷ್ಠ ₹ 1 ಸಾವಿರದಿಂದ ₹ 8 ಲಕ್ಷ ಬೆಲೆಯ ಚಿತ್ರಗಳಿದ್ದವು. ಕಲಾವಿದೆ ಕವಿತಾ ಅವರು ಆ್ಯಕ್ರಿಲಿಕ್ ಪೇಯಿಂಟಿಂಗ್‌ನಲ್ಲಿ ರಚಿಸಿದ್ದ ಚಿತ್ರಕ್ಕೆ ₹ 3 ಲಕ್ಷ ಬೆಲೆಯಿತ್ತು. ತಮಿಳುನಾಡಿನ ಗೋಕುಲಂ ವಿಜಯ್ ಅವರ ಹೂವು ಮಾರಾಟದ ಚಿತ್ರವಿದ್ದ ಕಲಾಕೃತಿಗೆ ₹ 5 ಲಕ್ಷ ಬೆಲೆಯಿತ್ತು.

'ಅಂದಾಜು ₹4ಕೋಟಿ ಮೀರಿ ವಹಿವಾಟು ನಡೆಯಿತು. ಸುಮಾರು 4 ಲಕ್ಷ ಕಲಾಸಕ್ತರು ಭಾಗವಹಿಸಿದ್ದರು' ಎಂದು ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್ ತಿಳಿಸಿದರು.

ವಿಶ್ವಕಪ್ ಟ್ರೋಫಿ ವೀಕ್ಷಣೆ

ಬಾಂಗ್ಲಾದೇಶದಲ್ಲಿ ಕಳೆದ ತಿಂಗಳು ನಡೆದಿದ್ದ ಅಂಧರ ಕ್ರಿಕೆಟ್ ವಿಶ್ವಕಪ್‌ನಲ್ಲಿ ಭಾರತ ತಂಡವು ಟ್ರೋಫಿ ಜಯಿಸಿತ್ತು. ಆ ಟ್ರೋಫಿಯನ್ನೂ ವೀಕ್ಷಣೆಗೆ ಇಡಲಾಗಿತ್ತು. ಕ್ರೀಡಾ ಪ್ರೇಮಿಗಳು ಟ್ರೋಫಿ ವೀಕ್ಷಿಸಿ, ತಂಡದ ಆಟಗಾರ ಲೋಕೇಶ್ ಅವರನ್ನು ಅಭಿನಂದಿಸಿದರು.

ಚಿತ್ರಸಂತೆಯಿಂದ ಪರಸ್ಪರ ಕಲೆ ಹಾಗೂ ಸಂಸ್ಕೃತಿ ಪರಿಚಯವಾಗಲಿದೆ. ಒಂದು ದಿನದ ಬದಲಿಗೆ ಎರಡು ದಿನ ನಡೆಸಬೇಕು.
ಸಂಜೀವ್, ಕಲಾಸಕ್ತ, ಬೆಂಗಳೂರು

10 ವರ್ಷಗಳಿಂದ ಚಿತ್ರ ಸಂತೆಗೆ ಬರುತ್ತಿದ್ದೇನೆ. ಈ ವರ್ಷ ಹೆಚ್ಚಿನ ಜನರು ಬಂದಿದ್ದಾರೆ. ಉತ್ತಮ ಸ್ಪಂದನೆ ಇದೆ.
ಎಂ.ಎನ್.ಪಾಟೀಲ್
ಕಲಾವಿದ, ಹುಬ್ಬಳ್ಳಿ

ಹಲವು ಬಾರಿ ಇಲ್ಲಿ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಇಟ್ಟಿರುವೆ. ಈ ಬಾರಿ ಶೇ 80ರಷ್ಟನ್ನು ಕಲಾಸಕ್ತರು ಖರೀದಿಸಿದ್ದು ಖುಷಿ ನೀಡಿತು.
ಶ್ರೀಶೈಲ ಪಾಟೀಲ
ಕಲಾವಿದ, ಕಲಬುರಗಿ

ವಿವಿಧೆಡೆಯ ಪ್ರಾತಿನಿಧಿಕ ಕಲೆಗಳ ಪರಿಚಯಕ್ಕೆ ಚಿತ್ರಸಂತೆ ಒಂದು ಕನ್ನಡಿ. ಹಲವು ಕೃತಿ ನಕಲು ಎನ್ನಿಸಿದವು. ಇದು ಮೂಲ ಕೃತಿಕಾರರಿಗೆ ದ್ರೋಹ ಅನ್ನಿಸುತ್ತದೆ.
ಪ್ರತೀಕ್ಷಾ ಮರಕಿಣಿ, ಕಲಾವಿದೆ

ಸುದ್ದಿ 2 ನಿಮಿಷ

ಕೃತಜ್ಞತೆ ಹೀನರಾದ ಮಾನಸಪುತ್ರ ದತ್ತ: ಜೆಡಿಎಸ್ ವಾಗ್ದಾಳಿ

ಬೆಂಗಳೂರು: 'ವೈ.ಎಸ್.ವಿ. ದತ್ತ ಅವರನ್ನು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ 'ಮಾನಸ ಪುತ್ರ' ಎಂದೇ ಕರೆಯಲಾಗುತ್ತಿದೆ. ಗೌಡರು ದತ್ತ ಅವರನ್ನು ಸ್ವಂತ ಮಗನಿಗಿಂತಲೂ ಹೆಚ್ಚಾಗಿ ಪೊರೆದಿದ್ದಾರೆ. ಆದರೆ, ಅವರು ಕೃತಜ್ಞತೆ ಹೀನರಾಗಿ ಕಾಂಗ್ರೆಸ್ ಸೇರುತ್ತಿದ್ದಾರೆ' ಎಂದು ದತ್ತ ವಿರುದ್ಧ ಜೆಡಿಎಸ್ ವಾಗ್ದಾಳಿ ನಡೆಸಿದೆ.

ದತ್ತ ಪಕ್ಷ ತೊರೆಯಲು ಸಜ್ಜಾಗಿರುವ ಕುರಿತು ಪ್ರತಿಕ್ರಿಯಿಸಿದ ಪಕ್ಷದ ಅಧಿಕೃತ ಟ್ವಿಟರ್ ಖಾತೆಯಿಂದ ಭಾನುವಾರ ಸರಣಿ ಟ್ವೀಟ್ ಮಾಡಿದ್ದು, 'ಮಾನಸಪುತ್ರನನ್ನು ದೇವೇಗೌಡರು ಇನ್ನೊಬ್ಬ ಪುತ್ರನೆಂದೇ ನಂಬಿದ್ದರು. ಕೇಳಿದ್ದೆಲ್ಲವನ್ನೂ ಕೊಟ್ಟರು, ಕೇಳದಿದ್ದರೂ ಕೊಟ್ಟರು. ಮಾನಸಪುತ್ರನೆಂಬ ಖ್ಯಾತಿಯ ಜತೆಗೆ ಸಕಲವನ್ನೂ ಸಂಪಾದನೆ ಮಾಡಿಕೊಂಡ ದತ್ತ, ದೇವೇಗೌಡರ ಬೆನ್ನಿಗೆ ಚೂರಿ ಹಾಕಿ ಕಾಂಗ್ರೆಸ್ ಸೇರಲು ಹೊರಟಿದ್ದಾರೆ' ಎಂದು ಟೀಕಿಸಲಾಗಿದೆ.

ಕಷ್ಟ ಬಂದಾಗ ಕಾಪಾಡಿದ, ಕಠಿಣ ಸಂದರ್ಭಗಳಲ್ಲಿ ಕಣ್ಣಿನ ರೆಪ್ಪೆಯಂತೆ ಪೊರೆದ, ಅನೇಕ ಸಂದರ್ಭಗಳಲ್ಲಿ ಜನ್ಮ ನೀಡಿದ ತಂದೆಗಿಂತ ಗಟ್ಟಿಯಾಗಿ ದತ್ತ ಜತೆಗೆ ನಿಂತಿದ್ದ ದೇವೇಗೌಡರು, ಮುಳುಗಿ ಹೋಗುತ್ತಿದ್ದ ಬದುಕನ್ನು ಉಳಿಸಿದ್ದರು. ಮಾನಸಪುತ್ರನಿಗೆ ನಂಬಿಕೆ ಎಂದರೆ ವ್ಯಾಪಾರ, ಪ್ರೀತಿ ಎಂದರೆ ಲಾಭದ ದಾರಿ, ವಿಶ್ವಾಸ ಎಂದರೆ ರಾಜಕೀಯ ಹಕೀಕತ್ತಿನ ಮಾರ್ಗ. ಅಂಥ ಮಾನಸಪುತ್ರನ ಬಗ್ಗೆ ಗೌಡರು ಕೊರಗುವುದಿಲ್ಲ. ಪಕ್ಷದ ಎಲ್ಲ ನಾಯಕರು, ಕಾರ್ಯಕರ್ತರು ಮಾನಸಪುತ್ರರೆ. ಢೋಂಗಿ ಮಾನಸಪುತ್ರರನ್ನು ಮರೆಯುವುದೇ ಲೇಸು ಎಂದು ಜೆಡಿಎಸ್ ಹೇಳಿದೆ.

'ಬಾಲಕ ಕಲಿತರೆ ಬಾಲಕಿ ಸುರಕ್ಷಿತ'

ಕೋಲಾರ: 'ಹೆಣ್ಣನ್ನು ಗೌರವಿಸುವುದನ್ನು, ಸಮಾನತೆಯಿಂದ ಕಾಣುವುದನ್ನು ಮೊದಲು ಗಂಡು ಮಕ್ಕಳಿಗೆ ಕಲಿಸಬೇಕಿದೆ. ಸ್ತ್ರೀಯರು ಸಮಾಜ, ದೇಶ ಹಾಗೂ ಅಭಿವೃದ್ಧಿಯಲ್ಲಿ ಸಮಾನ ಭಾಗಿದಾರರು ಎಂಬುದನ್ನು ಗಂಡು ಮಕ್ಕಳು ಅರಿಯಬೇಕು' ಎಂದು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ.ವರಾಳೆ ಪ್ರತಿಪಾದಿಸಿದರು.

ಭಾನವಾರ ಇಲ್ಲಿ ನಡೆದ ಕಾನೂನು ಸೇವೆಗಳ ಮಹಾಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಬೇಟಿ ಬಚಾವೋ ಬೇಟಿ ಪಡಾವೋ' ಅಭಿಯಾನ ನಡೆಯುತ್ತಿದೆ. ಆದರೆ, ಪ್ರಸ್ತುತ ಸನ್ನಿವೇಶದಲ್ಲಿ ಬೇಟ ಪಡಾವೋ ಬೇಟಿ ಬಚಾವೋ ಎನ್ನುವುದೇ ಸರಿ. ಬಾಲಕ ಕಲಿತರೆ ಬಾಲಕಿ ಸುರಕ್ಷಿತಳಾಗುತ್ತಾಳೆ. ಹೀಗಾಗಿ, ಪೋಷಕರು ಈ ನಿಟ್ಟನಲ್ಲಿ ಗಮನ ಹರಿಸಬೇಕು' ಎಂದು ಸಲಹೆ ನೀಡಿದರು.

ನ್ಯಾಯಮೂರ್ತಿ ಬಿ.ವೀರಪ್ಪ ಮಾತನಾಡಿ, 'ಅತ್ಯಾಚಾರ, ಆ್ಯಸಿಡ್ ದಾಳಿ ಸಮಾಜದ ದೊಡ್ಡ ಪಿಡುಗುಗಳಾಗಿವೆ. ವೃದ್ಧರ ಕಡೆಗಣನೆ ಹೆಚ್ಚುತ್ತಿದ್ದು, ಅನಾಥಾಶ್ರಮಕ್ಕೆ ಸೇರಿಸುತ್ತಿದ್ದಾರೆ. ವೃದ್ಧರ ರಕ್ಷಣೆಗಾಗಿ ಕಾನೂನುಗಳಿವೆ. ಈ ಬಗ್ಗೆ ಕಾನೂನು ಅರಿವು ಮೂಡಿಸಬೇಕು. ಮಕ್ಕಳಲ್ಲಿ ಸಂಸ್ಕಾರ ಮೂಡಿಸಬೇಕು' ಎಂದು ಸಲಹೆ ನೀಡಿದರು.

ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರು, 'ಶಾಲಾ ಕಾಲೇಜು ಹಂತದಲ್ಲಿ ವಿದ್ಯಾರ್ಥಿಗಳಿಗೆ ಕಾನೂನು ಅರಿವು ಮೂಡಿಸಬೇಕು. ಈವರೆಗೆ ಅಂಥ ಕೆಲಸ ನಡೆದಿಲ್ಲ' ಎಂದರು.

ಒಳ ಮೀಸಲಾತಿ ಜಾತಿಗೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಜ್ಞಾನಪ್ರಕಾಶ ಸ್ವಾಮೀಜಿ ಭಾಗವಹಿಸಿದ್ದರು. ಹೋರಾಟಗಾರರಾದ ಹೆಣ್ಣೂರು ಶ್ರೀನಿವಾಸ್, ಬಸವರಾಜ ಕೌತಾಳ್, ಬಿ.ಗೋಪಾಲ್ ಇದ್ದರು

'ಒಳ ಮೀಸಲಾತಿ ತ್ವರಿತವಾಗಿ ಜಾರಿ ಆಗಲಿ'

ಬೆಂಗಳೂರು: ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯ ಅನುಸಾರ ಜನಸಂಖ್ಯೆ ಆಧರಿಸಿ ಮೀಸಲಾತಿ ಹಂಚಿಕೆ ಮಾಡಿ 9ನೇ ಅನುಸೂಚಿಗೆ ಸೇರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಒತ್ತಾಯಿಸಿದರು.

ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ 26ನೇ ದಿನದ ಅನಿರ್ದಿಷ್ಟಾವಧಿ ಧರಣಿಯಲ್ಲಿ ಭಾಗವಹಿಸಿ ಅವರು ಶುಕ್ರವಾರ ಮಾತನಾಡಿದರು.

'ಛಲವಾದಿ ಮತ್ತು ಮಾದಿಗ ಸಮುದಾಯಗಳಿಗೆ ರಾಜಕೀಯ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಅನ್ಯಾಯವಾಗುತ್ತಲೇ ಇದೆ. ದುರ್ಬಲರನ್ನು ಮತ್ತಷ್ಟು ದುರ್ಬಲಗೊಳಿಸಿ, ಸಬಲರನ್ನು ಮತ್ತಷ್ಟು ಸಬಲಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೊರಟಿವೆ. ಇದರ ವಿರುದ್ಧ ದಲಿತರ ಧ್ವನಿ ಇನ್ನಷ್ಟು ಗಟ್ಟಿಯಾಗಬೇಕಿದೆ. ಇದೇ 10ರಂದು ಹೋರಾಟಕ್ಕೆ ಛಲವಾದಿ, ಮಾದಿಗ ಸಮುದಾಯಗಳು ಒಟ್ಟಾಗಬೇಕು. ಒಳ ಮೀಸಲಾತಿ ವಿಷಯದಲ್ಲಿ ಜನವರಿ ಅಂತ್ಯದೊಳಗೆ ನಿರ್ಧಾರ ಕೈಗೊಳ್ಳುವುದಾಗಿ ಮುಖ್ಯ ಮಂತ್ರಿ ತಿಳಿಸಿದ್ದಾರೆ. ಅವರು ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕು' ಎಂದು ಒತ್ತಾಯಿಸಿದರು.

ಯುವಕನ ಮೇಲೆ ಹಲ್ಲೆ: ಇಬ್ಬರ ಬಂಧನ

ಸುಬ್ರಹ್ಮಣ್ಯ: ಇಲ್ಲಿ ಸುಳ್ಯ ತಾಲ್ಲೂಕು ಸಂಪಾಜೆ ಗ್ರಾಮದ ಕಲ್ಲುಗುಂಡಿಯ ಆಫೀದ್ (20) ಮೇಲೆ ಗುರುವಾರ ನಡೆದ ಹಲ್ಲೆ ಸಂಬಂಧ ಸುಬ್ರಹ್ಮಣ್ಯ ಠಾಣೆಯ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಬಂಧಿತರನ್ನು ರಾಧಾಕೃಷ್ಣ (45) ಮತ್ತು ವಿಶ್ವಾಸ್ (19) ಎಂದು ಗುರುತಿಸಲಾಗಿದೆ. ಆರೋಪಿಗಳಿಬ್ಬರನ್ನೂ ಪೊಲೀಸರು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದಾರೆ.

'ಬಂಧಿತರು ಕಡಬ ಸುಬ್ರಹ್ಮಣ್ಯದವರು. ಇತರ ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ, ಶೋಧ ನಡೆದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೃಷಿಕೇಶ್ ಸೋನಾವಣೆ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು. ಹಲ್ಲೆಗೊಳಗಾದ ಯುವಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆತನ ವಿರುದ್ಧ ಬಾಲಕಿಯ ತಾಯಿ ಪ್ರತಿ ದೂರು ನೀಡಿದ್ದು, ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು.

ಚಿತ್ರಾವಳಿ

ತೆಲುಗು ವಿಜ್ಞಾನ ಸಮಿತಿಯು ಸಂಕ್ರಾಂತಿ ಸಂಭ್ರಮದ ಪ್ರಯುಕ್ತ ಹಮ್ಮಿಕೊಂಡಿದ್ದ ಗೋವು ಪೂಜೆಯಲ್ಲಿ ಸಮಿತಿ ಅಧ್ಯಕ್ಷ ಎ. ರಾಧಾಕೃಷ್ಣರಾಜು ಮತ್ತು ಪದಾಧಿಕಾರಿಗಳು ಭಾಗವಹಿಸಿದ್ದರು

ನಗರದಲ್ಲಿ ಈಚೆಗೆ ವೀರಲೋಕ ಬುಕ್ಸ್ ಮತ್ತು ವಚನಜ್ಯೋತಿ ಬಳಗದ ವತಿಯಿಂದ 'ಜ್ಞಾನಯೋಗಿ ಸಿದ್ಧೇಶ್ವರ ಸ್ವಾಮೀಜಿ ಅವರಿಗೆ ವಚನ ನುಡಿ ನಮನ' ಸಲ್ಲಿಸಲಾಯಿತು. ಮಲ್ಲೇಪುರಂ ಜಿ. ವೆಂಕಟೇಶ್, ಬೇಲಿಮಠದ ಶಿವರುದ್ರ ಸ್ವಾಮೀಜಿ, ಎಸ್. ಷಡಕ್ಷರಿ, ಶಿವಕುಮಾರ್, ವೀರಲೋಕದ ವೀರಕಪುತ್ರ ಶ್ರೀನಿವಾಸ್, ವಚನಜ್ಯೋತಿಯ ಪಿನಾಕಪಾಣಿ, ಪ್ರಾಧ್ಯಾಪಕ ಮುನಿರಾಜಪ್ಪ, ಗಾಯಕ ದೇವೇಂದ್ರ ಕುಮಾರ ಪತ್ತಾರ್, ವಚನಜ್ಯೋತಿ ಬಳಗದ ರುದ್ರೇಶ್ ಇಸುವನಹಳ್ಳಿ, ರು.ಫ. ದೇಸಾಯಿ, ಅನೀಲ್ ಹಾರ್ಕುಡೆ, ಸಂಗಮೇಶ್, ಉಮೇಶ್ ಆರಾಧ್ಯ ಇದ್ದರು

ಹಾವೇರಿ ಸಮ್ಮೇಳನ: ಕೆಐಎಬಿಗೆ ಗೌರವ

ಕನ್ನಡ ಭಾಷೆ, ಸ್ಥಳೀಯ ಕಲೆ, ಸಂಸ್ಕೃತಿ ಪ್ರಚಾರದ ಕೊಡುಗೆಗಾಗಿ ಮನ್ನಣೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕನ್ನಡ ಭಾಷೆ, ಸ್ಥಳೀಯ ಕಲೆ, ಸಂಸ್ಕೃತಿ ಪ್ರಚಾರದ ಕೊಡುಗೆಗಾಗಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ (ಕೆಐಎಬಿ) ಹಾವೇರಿಯಲ್ಲಿ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಗೌರವದ ಗರಿ ಸಂದಿತು.

ವಿಮಾನ ನಿಲ್ದಾಣದ ನಿರ್ವಾಹಕ ಸಂಸ್ಥೆಯಾದ ಬೆಂಗಳೂರು ಇಂಟರ್ ನ್ಯಾಶನಲ್ ಏರ್‌ಪೋರ್ಟ್ ಲಿಮಿಟೆಡ್ (ಬಿಐಎಎಲ್) ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಹರಿ ಕೆ.ಮರಾರ್ ಸಮಾರಂಭದಲ್ಲಿ ಗೌರವ ಸ್ವೀಕರಿಸಿದರು.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಕನ್ನಡ ಭಾಷೆ, ಸ್ಥಳೀಯ ಕಲೆ, ಸಂಸ್ಕೃತಿಗಳ ಸಕ್ರಿಯ ಪ್ರಚಾರ ಮತ್ತು ಕರ್ನಾಟಕದ ಸಾರವನ್ನು ಪ್ರದರ್ಶಿಸುವ ಪ್ರಮುಖ ಹಬ್ಬಗಳ ಆಚರಣೆ ಮತ್ತು ವೈವಿಧ್ಯಮಯ ಕಾರ್ಯಕ್ರಮಗಳಿಂದಾಗಿ ಈ ಮನ್ನಣೆಗೆ ಪಾತ್ರವಾಗಿದೆ.

ವಿಮಾನ ನಿಲ್ದಾಣದೆಲ್ಲೆಡೆ ಕನ್ನಡ ಫಲಕಗಳ ಅಳವಡಿಕೆ, ಕನ್ನಡದಲ್ಲೇ ಘೋಷಣೆಗಳು, ದೇಶಿ, ವಿದೇಶಿ ಪ್ರಯಾಣಿಕರಲ್ಲಿ ಕನ್ನಡ ಹಾಗೂ ಸಂಸ್ಕೃತಿಯನ್ನು ಪೋಷಿಸುವ ಮತ್ತು ಉತ್ತೇಜಿಸುವ ಬಗ್ಗೆ ಬಿಐಎಎಲ್ ಹಲವು ಕ್ರಮಗಳನ್ನು ಕೈಗೊಂಡಿದೆ. ಅಷ್ಟೇ ಅಲ್ಲದೆ, ಕಳೆದ ವರ್ಷ ರಾಜ್ಯೋತ್ಸವ ಹಾಗೂ ದಸರಾ ಉತ್ಸವವನ್ನು ಆಚರಿಸುವ ಮೂಲಕ ಸಾಂಸ್ಕೃತಿಕ ಪರಂಪರೆಯನ್ನು ಪ್ರಯಾಣಿಕರಿಗೆ ಪರಿಚಯಿಸಲಾಗಿತ್ತು.

'ಈ ಗೌರವ ಪಡೆಯುವ ಮೂಲಕ ನಮ್ಮ ನಾಡು, ನುಡಿ, ಪರಂಪರೆಯನ್ನು ಇನ್ನಷ್ಟು ಉತ್ತೇಜಿಸುವ ಕೆಲಸ ಮಾಡಲು ಸ್ಫೂರ್ತಿ ಸಿಕ್ಕಂತಾಗಿದೆ' ಎಂದು ಹರಿ ಮರಾರ್ ಹೇಳಿದರು.

ಕನ್ನಡ ಭಾಷೆಯ ಕೊಡುಗೆಗಾಗಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಅಧಿಕಾರಿಯನ್ನು ಹಾವೇರಿಯ ಸಾಹಿತ್ಯ ಸಮ್ಮೇಳನದಲ್ಲಿ ಗೌರವಿಸಲಾಯಿತು

'ಸರ್ವೋದಯ ಕರ್ನಾಟಕ'ಕ್ಕೆ ಮರುಚಾಲನೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಸರ್ವೋದಯ ಕರ್ನಾಟಕ ಪಕ್ಷಕ್ಕೆ ಮರುಚಾಲನೆ ನೀಡುವ ಕಾರ್ಯಕ್ರಮ ಜ.23ರ ಬೆಳಿಗ್ಗೆ 10.30ಕ್ಕೆ ಬೆಂಗಳೂರಿನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ನಡೆಯಲಿದೆ' ಎಂದು ಪಕ್ಷದ ಅಧ್ಯಕ್ಷ ಚಾಮರಸ ಮಾಲಿ ಪಾಟೀಲ ಭಾನುವಾರ ತಿಳಿಸಿದರು.

'ಎಲ್ಲ ಜಿಲ್ಲೆಗಳ ಆಯ್ದ ಪ್ರತಿನಿಧಿಗಳು ಭಾಗವಹಿಸುವರು. ಜನಪರ ಸಂಘಟನೆಗಳ ಪ್ರಮುಖರು, ಸಮಾಜಮುಖಿ ವ್ಯಕ್ತಿಗಳನ್ನೂ ಆಹ್ವಾನಿಸಲಾಗುವುದು' ಎಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಮುಂಬರುವ ಚುನಾವಣೆಯಲ್ಲಿ ಆಯ್ದ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು. ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಮರುಚಾಲನೆ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಗುವುದು. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲೂ ಸ್ಪರ್ಧಿಸಲಿದ್ದೇವೆ' ಎಂದರು. 'ಪಕ್ಷವನ್ನು ಸ್ವರಾಜ್ ಇಂಡಿಯಾ ಜೊತೆ ವಿಲೀನಗೊಳಿಸಲಾಗಿತ್ತು. ಈಗ ಪ್ರಾದೇಶಿಕವಾಗೇ ಉಳಿಯಲು ತೀರ್ಮಾನಿಸಿ ಮರು ಚಾಲನೆ ಕೊಡಲಾಗುತ್ತಿದೆ. ಸಾಮಾಜಿಕ ನ್ಯಾಯ ಕೊಡಿಸಲು ದೊಡ್ಡ ಮಟ್ಟದಲ್ಲಿ ಹೋರಾಡಲಿದ್ದೇವೆ' ಎಂದರು.

'ಪಕ್ಷದ ಕೋರ್ ಕಮಿಟಿಯಲ್ಲಿ ಸಾಹಿತಿ ದೇವನೂರ ಮಹಾದೇವ, ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ದಲಿತ ಮುಖಂಡರಾದ ಇಂದೂಧರ ಹೊನ್ನಾಪುರ, ಗುರುಪ್ರಸಾದ್ ಕೆರಗೋಡು ಇದ್ದಾರೆ' ಎಂದರು. ಬಡಗಲಪುರ ನಾಗೇಂದ್ರ ಮಾತನಾಡಿ, 'ಸ್ವರಾಜ್ ಇಂಡಿಯಾದ ಜೊತೆಗಿನ ವೈಮನಸ್ಸಿನ ಕಾರಣದಿಂದ ನಾವು ಪ್ರತ್ಯೇಕವಾಗುತ್ತಿಲ್ಲ. ಅದರೊಂದಿಗೆ ಸೌಹಾರ್ದ ಸಂಬಂಧ ಮುಂದುವರಿಯುತ್ತದೆ' ಎಂದರು.

ಪದಾಧಿಕಾರಿಗಳ ಆಯ್ಕೆ

ಪಕ್ಷದ ನೂತನ ಪದಾಧಿಕಾರಿಗಳಾಗಿ ಚಾಮರಸ ಮಾಲಿಪಾಟೀಲ (ಅಧ್ಯಕ್ಷ), ಪ್ರಸನ್ನ ಎನ್.ಗೌಡ (ಪ್ರಧಾನ ಕಾರ್ಯದರ್ಶಿ), ಅಮ್ಜದ್ ಪಾಷ (ಕಾರ್ಯಾಧ್ಯಕ್ಷ), ಶಿವರಾಜ್ ರೇವಣ ಸಿದ್ದಯ್ಯ (ಕಾರ್ಯಾಧ್ಯಕ್ಷ), ಯಾದವರೆಡ್ಡಿ (ಉಪಾಧ್ಯಕ್ಷ) ಹಾಗೂ ಜೆ.ಎಂ.ವೀರಸಂಗಯ್ಯ ಮತ್ತು ಪುನೀತ್ ಎನ್. (ವಕ್ತಾರರು) ಆಯ್ಕೆಯಾಗಿದ್ದಾರೆ.



ನಾಡಿನ–ದೇಶದ ಅಭಿವೃದ್ಧಿಗೆ ಬೇಕಾದ ದಕ್ಷತೆ ಮತ್ತು ಪ್ರಾಮಾಣಿಕತೆ ಕಾಣಿಸುತ್ತಿಲ್ಲ. ದುಡಿಯುವ ವರ್ಗಕ್ಕೆ ಅನ್ಯಾಯವಾಗುತ್ತಿದೆ. ಹೀಗಾಗಿ, ದೂರದೃಷ್ಟಿಯಿಂದ ಪಕ್ಷ ಕಟ್ಟಲಾಗುತ್ತಿದೆ
ಚಾಮರಸ ಮಾಲಿಪಾಟೀಲ
ಅಧ್ಯಕ್ಷ, ಸರ್ವೋದಯ ಕರ್ನಾಟಕ ಪಕ್ಷ

ಫೆ. 25ರಿಂದ ಬ್ಯಾಂಕ್ ನಿವೃತ್ತರ ಒಕ್ಕೂಟದ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಬ್ಯಾಂಕ್ ನಿವೃತ್ತರ ಒಕ್ಕೂಟದಿಂದ ಫೆ. 25 ರಿಂದ 27ರವರೆಗೆ 'ಅಖಿಲ ಭಾರತ ಬ್ಯಾಂಕ್ ನಿವೃತ್ತರ ಒಕ್ಕೂಟದ 6ನೇ ಸಮ್ಮೇಳನವು' ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿದೆ.

ಈ ಸಮ್ಮೇಳನವನ್ನು ನಿರ್ವಹಿಸಲು ಇತ್ತೀಚೆಗೆ ಸಿಂಡಿಕೇಟ್ ಬ್ಯಾಂಕ್ ನಿವೃತ್ತರ ಒಕ್ಕೂಟದ ರಾಷ್ಟ್ರೀಯ ಅಧ್ಯಕ್ಷರಾದ ಎನ್.ಟಿ. ಹೆಗ್ಡೆ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 'ಸ್ವಾಗತ ಸಮಿತಿ'ಯನ್ನು ರಚಿಸಲಾಯಿತು. ಕರ್ನಾಟಕ ರಾಜ್ಯ ಬ್ಯಾಂಕ್ ನಿವೃತ್ತರ ಒಕ್ಕೂಟದ ಅಧ್ಯಕ್ಷರಾದ ಬಿ. ದೇವದಾಸ ರಾವ್ ಅವರನ್ನು ಸಮ್ಮೇಳನದ ಮುಖ್ಯ ಸಲಹೆಗಾರರನ್ನಾಗಿ ಆಯ್ಕೆ ಮಾಡಲಾಗಿದೆ. ಸಂಚಾಲಕರಾಗಿ ಕೆ. ವಿಶ್ವನಾಥ್ ನಾಯ್ಕ್ ಅವರನ್ನು ನೇಮಿಸಲಾಗಿದ್ದು, 40 ಸದಸ್ಯರನ್ನೊಳಗೊಂಡ ಅನೇಕ ಸಮಿತಿಗಳನ್ನು ರಚಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ವಿವಿಧ ಶಾಲಾ ವಿದ್ಯಾರ್ಥಿಗಳಿಂದ ವೀಕ್ಷಣೆ

ಗಮನ ಸೆಳೆದ 'ವಿಜ್ಞಾನ ಉತ್ಸವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಸ್ರೊ ಉಡಾವಣೆ ಮಾಡಿದ್ದ ವಿವಿಧ ಉಪಗ್ರಹಗಳ ಮಾದರಿ, ಮಾತನಾಡುವ ರೋಬೊ, 3'ಡಿ' ಪ್ರಿಂಟರ್, ಸ್ಮಾರ್ಟ್ ಫಿಶ್, ತಾರಾಲಯ...

ದಿ ನ್ಯಾಷನಲ್ ಕಾಲೇಜಿನ ಮಲ್ಟಿ ಮೀಡಿಯಾ ಹಾಲ್‌ನಲ್ಲಿ ಆಯೋಜಿಸಿದ್ದ ವಿಜ್ಞಾನ ಉತ್ಸವದಲ್ಲಿ ವಿದ್ಯಾರ್ಥಿಗಳ ಗಮನ ಸೆಳೆದ ವಿಜ್ಞಾನದ ಮಾದರಿಗಳು.

ಬಿ.ವಿ.ಜಗದೀಶ್ ವಿಜ್ಞಾನ ಕೇಂದ್ರ ಹಾಗೂ ಜವಾಹರ್‌ಲಾಲ್ ನೆಹರೂ ತಾರಾಲಯದಿಂದ ಕಾಲೇಜು ಆವರಣದಲ್ಲಿ ಮೂರು ದಿನಗಳ ವಿಜ್ಞಾನ ಉತ್ಸವಕ್ಕೆ ಶುಕ್ರವಾರ ಆರಂಭಗೊಂಡಿದ್ದು, ಭಾನುವಾರ ತೆರೆಬಿದ್ದಿತು.

ಕೊನೆಯ ದಿನವೂ ಹಲವು ಶಾಲೆಗಳು ನೂರಾರು ವಿದ್ಯಾರ್ಥಿಗಳು ವಿಜ್ಞಾನದ ಮಾದರಿಗಳನ್ನು ಕಣ್ತುಂಬಿಕೊಂಡರು ಎಂದು ಆಯೋಜಕರು ಹೇಳಿದರು.

ತಾರಾಲಯದಲ್ಲಿ ಭೂಮಿ, ಸೂರ್ಯ, ಚಂದ್ರನ ಬಗ್ಗೆ ಮಾಹಿತಿ, ಸೂರ್ಯನ ನಿಗೂಢ ರಹಸ್ಯ, ನಕ್ಷತ್ರಗಳ ಜೀವನ ಶೈಲಿ, ಸೌರಮಂಡಲ ಬಗ್ಗೆ ವಿಡಿಯೊಗಳ ಮೂಲಕ ಮಾಹಿತಿ ನೀಡಲಾಯಿತು. ಈ ಕೌತುಕವನ್ನು ವಿದ್ಯಾರ್ಥಿಗಳು ಕಣ್ತುಂಬಿಕೊಂಡರು. ವಿದ್ಯಾರ್ಥಿಗಳು ಸರದಿಯಲ್ಲಿ ನಿಂತು ವೀಕ್ಷಿಸಿದರು.

ರೋಬೊ ಮುಟ್ಟಿ ಮಾತನಾಡಿಸಿದ ವಿದ್ಯಾರ್ಥಿಗಳು, ತಮಗಿಷ್ಟದ ಪ್ರಶ್ನೆ ಕೇಳಿದರು. ರೋಬೊ ಉತ್ತರಿಸಿತು. ಪ್ರಿಂಟರ್ ಕುರಿತು ಇದ್ದ ಸಂದೇಹಗಳನ್ನೂ ನಿವಾರಿಸಿಕೊಂಡರು.

ನೆಹರೂ ತಾರಾಲಯದ ಶಾಖ ಜನ್ಯ ವರ್ಣತ್ವ, ವಿದ್ಯುತ್ಕಾಂತೀಯ ಪ್ರೇರಣೆ, ಪ್ರತಿಫಲನದಿಂದ ಬೆಳಕಿನ ಧೃವೀಕರಣ, ಬರಹ ಅಳಿಸುವ ಆ್ಯಸಿಡ್, ಶಬ್ದ ಹೊಮ್ಮಿಸುವ ತಟ್ಟೆ, ಹ್ಯಾಕ್ ಸಾ ಬ್ಲೇಡ್‌ನಿಂದ ಸಂಗೀತ, ಸುರಳಿ ಬಳೆಗಳ ಮಾದರಿ ಉತ್ಸವದಲ್ಲಿ ಕುತೂಹಲ ಮೂಡಿಸಿದವು. ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಕುರಿತು ಮಾಹಿತಿ ನೀಡಲಾಯಿತು.

'ಕೋವಿಡ್ ಕಾರಣಕ್ಕೆ ಎರಡು ವರ್ಷ ನಡೆದಿರಲಿಲ್ಲ. ಈ ಬಾರಿ ಉತ್ತಮ ಪ್ರತಿಕ್ರಿಯೆ ಬಂದಿದೆ' ಎಂದು ಪ್ರತಿನಿಧಿ ಚರಣ್ ಹೇಳಿದರು.

ಬೆಂಗಳೂರಿನ ಜಯನಗರದ ದಿ ನ್ಯಾಷನಲ್ ಕಾಲೇಜಿನಲ್ಲಿ ಬಿವಿ ಜಗದೀಶ್ ಸೈನ್ಸ್ ಸೆಂಟರ್, ಜವಾಹರಲಾಲ್ ನೆಹರೂ ತಾರಾಲಯ ಆಯೋಜಿಸಿದ 'ವಿಜ್ಞಾನ ಉತ್ಸವ'ದಲ್ಲಿ ವಿದ್ಯಾರ್ಥಿಗಳು ವಿವಿಧ ಮಾದರಿಗಳನ್ನು ಕುತೂಹಲದಿಂದ ವೀಕ್ಷಿಸಿದರು

ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರದಲ್ಲಿ ದೊಡ್ಡರಂಗೇಗೌಡ ನೇತೃತ್ವದಲ್ಲಿಯೇ ಸಾಹಿತಿಗಳ ಸಮಿತಿ ರಚನೆ: ಸಿ.ಎಂ

ಶಾಸ್ತ್ರೀಯ ಭಾಷೆ: ಸಂಪೂರ್ಣ ಅನುದಾನ

• ರಶ್ಮಿ ಎಸ್.

ಕನಕ-ಶರೀಫ-ಸರ್ವಜ್ಞ ವೇದಿಕೆ (ಹಾವೇರಿ): 'ಸಮ್ಮೇಳನಾಧ್ಯಕ್ಷರ ಅಸಮಾಧಾನ ಅರ್ಥ ಆಗಿದೆ. ಅವರ ಅಪೇಕ್ಷೆಯಂತೆ ಕನ್ನಡ ಶಾಸ್ತ್ರೀಯ ಭಾಷೆ ಅಧ್ಯಯನ ಕೇಂದ್ರಕ್ಕೆ ಮತ್ತು ಸಂಶೋಧನೆಗೆ ಅಗತ್ಯ ಇರುವ ಸಂಪೂರ್ಣ ಅನುದಾನವನ್ನು ನೀಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಹಾವೇರಿಯಲ್ಲಿ ಮೂರು ದಿನಗಳಿಂದ ಜರುಗಿದ 86ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕೊನೆ ದಿನ ಭಾನುವಾರ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

'ಸಮ್ಮೇಳನಾಧ್ಯಕ್ಷರಾದ ದೊಡ್ಡರಂಗೇಗೌಡ ಅವರಿಗೆ ನಮ್ಮ ಮೇಲೆ ಅತಿಯಾದ ಪ್ರೀತಿ ಇರುವುದರಿಂದಲೇ ಕಟುವಾದ ನುಡಿಯಲ್ಲಿ ಬೇಸರ ವ್ಯಕ್ತಪಡಿಸಿದ್ದರು. ಈಗ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರದಲ್ಲಿ ಅವರ ನೇತೃತ್ವದಲ್ಲಿಯೇ ಸಾಹಿತಿಗಳ ಸಮಿತಿ ರಚಿಸಲಾಗುವುದು. ಸಮಿತಿಯ ಮಾರ್ಗದರ್ಶನದಲ್ಲಿಯೇ ಸಂಶೋಧನೆಗಳಾಗಲಿ. ವಿಶ್ವವಿದ್ಯಾಲಯಗಳಲ್ಲಿ ಆಗುವಂಥ ಕಾಟಾಚಾರದ ಸಂಶೋಧನೆಗಳು ಇಲ್ಲಿ ಆಗಬಾರದು' ಎಂದೂ ಸೂಚಿಸಿದರು.

ಹಾವೇರಿಯ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರನ್ನು ಭಾನುವಾರ ಸನ್ಮಾನಿಸಿದರು. ಸಮ್ಮೇಳನಾಧ್ಯಕ್ಷ ಡಾ.ದೊಡ್ಡರಂಗೇಗೌಡ, ಸ್ವಾಗತ ಸಮಿತಿ ಅಧ್ಯಕ್ಷ ಶಿವರಾಮ ಹೆಬ್ಬಾರ್, ಹಾವೇರಿ ಜಿಲ್ಲಾ ಕಸಾಪ ಘಟಕದ ಅಧ್ಯಕ್ಷ ಲಿಂಗಯ್ಯ ಹಿರೇಮಠ ಹಾಗೂ ಸಂಸದ ಶಿವಕುಮಾರ ಉದಾಸಿ ಇದ್ದಾರೆ – ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

'ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರ ನಿರ್ಮಿಸಲು ಮೈಸೂರು ವಿಶ್ವವಿದ್ಯಾಲಯದಲ್ಲಿ ಜಾಗ ನೀಡಲಾಗಿದೆ. ಅದರ ನವೀಕರಣಕ್ಕೆ ಅನುದಾನವನ್ನೂ ನೀಡಲಾಗಿದೆ' ಎಂದರು.

'ರಾಜ್ಯದಲ್ಲಿರುವ ಅನ್ಯಭಾಷೆಯ ವಲಸಿಗರಿಗೆ ಕನ್ನಡ ಕಲಿಸುವ ಅಭಿಯಾನ ಆರಂಭಿಸಲಾಗುವುದು. ₹100 ಕೋಟಿ ಅನುದಾನದಲ್ಲಿ ಗಡಿನಾಡ ಕನ್ನಡ ಹೋರಾಟಗಾರರಿಗೆ ಪಿಂಚಣಿ, ಗಡಿನಾಡ ಶಾಲೆ, ಶಿಕ್ಷಣ, ಆರೋಗ್ಯ ಹಾಗೂ ಸಾಂಸ್ಕೃತಿಕ ಸಬಲೀಕರಣಕ್ಕೆ ಒತ್ತು ನೀಡಲಾಗುವುದು' ಎಂದು ವಿವರಿಸಿದರು.

ಉ.ಕ ಭಾಷಾ ಅಧ್ಯಯನ ಸಂಸ್ಥೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ ನಿರ್ಮಿಸಲು ₹3ಕೋಟಿ ಅನುದಾನ ನೀಡಲಾಗುವುದು. ಅಲ್ಲಿ ಜನಪದ ವಿಶ್ವವಿದ್ಯಾಲಯದ ಜೊತೆಗೂಡಿ, ಒಂದು ಸಂಶೋಧನಾ ಕೇಂದ್ರವನ್ನು ಆರಂಭಿಸಿ, ಉತ್ತರ ಕರ್ನಾಟಕದ ವೈವಿಧ್ಯಮಯ ಭಾಷಾ ಪರಂಪರೆಯ ಕುರಿತು ಸಂಶೋಧನೆಗಳಾಗಬೇಕು. ಈ ಸಮ್ಮೇಳನದ ಸ್ಮರಣೆಗಾಗಿ ಈ ಕೊಡುಗೆ ನೀಡಲಾಗಿದೆ' ಎಂದು ನುಡಿದರು.

'ರಾಜ್ಯದಲ್ಲಿ ರಾಷ್ಟ್ರೀಯ ನೀರಾವರಿ ಯೋಜನೆಯನ್ನು ಜಾರಿಗೆ ತರಲಾಗುವುದು. ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು 524 ಮೀಟರ್ ಹೆಚ್ಚಿಸಲು ಅನುಮತಿ ದೊರೆಯಲಿದೆ. ಮಹದಾಯಿಯನ್ನು ಮಲಪ್ರಭೆಗೆ ಜೋಡಿಸುವ ಯೋಜನೆಯೂ ಕಾರ್ಯಗತಗೊಳ್ಳಲಿದೆ' ಎಂದರು.

'ಬಹಿರಂಗ ಸಮಾವೇಶದಲ್ಲಿ ಮಂಡಿಸಲಾದ ನಿರ್ಣಯಗಳ ಅನುಷ್ಠಾನಕ್ಕೆ ಸರ್ಕಾರ ಬದ್ಧವಾಗಿದೆ' ಎಂದೂ ಭರವಸೆಯನ್ನು ನೀಡಿದರು.

> **ಕಸಾಪ ಸಮಿತಿ ರಚಿಸಿ, ಸಮ್ಮೇಳನದಲ್ಲಿ ಚರ್ಚಿಸಲಾದ ವಿಷಯಗಳಿಗೆ ಸಂಬಂಧಿಸಿದಂತೆ ಒಂದು ವರ್ಷದ ಅವಧಿಯಲ್ಲಿ ಕೈಗೊಂಡ ಕ್ರಮಗಳ ಕುರಿತು ಮುಂದಿನ ಸಮ್ಮೇಳನದಲ್ಲಿ ಸಾರ್ವಜನಿಕರ ಮುಂದಿಡಬೇಕು**
> **ಡಾ.ಬಿ.ಎ. ವಿವೇಕ ರೈ,** ವಿಶ್ರಾಂತ ಕುಲಪತಿ

'ಜಾತಿ-ಧರ್ಮಗಳ ಸಮ್ಮೇಳನವಲ್ಲ'

ಕನಕ-ಶರೀಫ-ಸರ್ವಜ್ಞ ವೇದಿಕೆ (ಹಾವೇರಿ): 'ಇದು ಕನ್ನಡ ಸಾಹಿತ್ಯ ಸಮ್ಮೇಳನ, ಕನ್ನಡಿಗರ ಸಮ್ಮೇಳನ, ಜಾತಿ ಧರ್ಮಗಳನ್ನು ಹಿಡಿದೆಣಿಸುತ್ತ ಅಪಸ್ವರ ತೆಗೆಯುವುದು ಸಲ್ಲ' ಎಂದು ಕನ್ನಡ ಸಾಹಿತ್ಯ ಪರಿಷತ್‌ನ ರಾಜ್ಯ ಘಟಕದ ಅಧ್ಯಕ್ಷ ಮಹೇಶ ಜೋಶಿ ಪ್ರಧಾನ ವೇದಿಕೆಯಲ್ಲಿ ಸ್ಪಷ್ಟಪಡಿಸಿದರು.

ಸಮಾರೋಪ ಸಮಾರಂಭದಲ್ಲಿ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ ಹರಿಪ್ರಸಾದ್ ಅವರು ಸಮ್ಮೇಳನದಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯ ಕಡಿಮೆ ಇದೆ ಎಂಬ ಆರೋಪದಲ್ಲಿ ಹುರುಳಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಕ್ಕೆ ಜೋಶಿ ಅವರು ಪ್ರತಿಕ್ರಿಯಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದರೂ ಭಾಷಣಗಳ ನಡುವೆಯೇ ಬಂದು ಜೋಶಿ ಅವರು ಸ್ಪಷ್ಟನೆ ನೀಡಲು ಆರಂಭಿಸಿದರು. ಕೆಲವರು ಎತ್ತಿರುವ ಅಪಸ್ವರಕ್ಕೆ ಪದೇಪದೇ ಸ್ಪಷ್ಟನೆ ನೀಡಬೇಕಾಗಿದೆ. ಸಮ್ಮೇಳನದಲ್ಲಿ ಹನ್ನೊಂದು ಜನ ಮುಸ್ಲಿಮರಿಗೆ ಅವಕಾಶ ನೀಡಲಾಗಿದೆ, ಇಬ್ಬರನ್ನು ಸನ್ಮಾನಿಸಲಾಗಿದೆ ಎಂದು ವಿವರಿಸುತ್ತಲೇ, ತಪ್ಪು ಮಾಡುವುದು ಸಹಜ, ತಿದ್ದಿ ನಡೆಯೋಣೆ ಮನುಜ, ತಪ್ಪುಗಳನ್ನು ಸರಿಪಡಿಸಿಕೊಂಡು ಮುಂದೆ ಸಾಗೋಣ ಎಂದರು

'ಅಭಿಪ್ರಾಯ ಭೇದ ಚರ್ಚೆಯಾಗಲಿ'

ಕನಕ-ಶರೀಫ-ಸರ್ವಜ್ಞ ಪ್ರಧಾನ ವೇದಿಕೆ(ಹಾವೇರಿ): 'ಸಾಹಿತ್ಯ ಸಮ್ಮೇಳನವನ್ನು ವಿರೋಧಿಸಿದ ಸಾಹಿತಿಗಳು ಕಸಾಪಗೆ ಬಂದು ಅಭಿಪ್ರಾಯ ಭೇದಗಳನ್ನು ಮುಕ್ತವಾಗಿ ಚರ್ಚಿಸಲಿ. ಟೀಕೆಯಿಂದ ಯಾವ ಪ್ರಯೋಜನವೂ ಇಲ್ಲ' ಎಂದು ಸಮ್ಮೇಳನದ ಅಧ್ಯಕ್ಷ ಡಾ. ದೊಡ್ಡರಂಗೇಗೌಡ ಸಲಹೆ ನೀಡಿದರು.

ಸಮ್ಮೇಳನದ ಸಮಾರೋಪದಲ್ಲಿ ಅಧ್ಯಕ್ಷರ ನುಡಿಯಾಡಿದ ಅವರು, 'ವಿಶ್ವ ಸಾಹಿತ್ಯದಲ್ಲಿ ಕನ್ನಡ ಸಾಹಿತ್ಯಕ್ಕೆ ದೊಡ್ಡ ಸ್ಥಾನವಿದೆ. ಕನ್ನಡಿಗರೆಲ್ಲ ಒಂದಾಗಿ ಮತ್ತಷ್ಟು ಉನ್ನತಿಗೆ ಕೊಂಡೊಯ್ಯಬೇಕಿದೆ. ಟೀಕೆಗಳು ಪುನರ್ ಜೀವನಕ್ಕೆ ಕಾರಣವಾಗಬೇಕು. ವಿರೋಧಿಗಳು ನಮ್ಮ ಜೊತೆ ಕೈಜೋಡಿಸಿದರೆ, ಕನ್ನಡ ಕುಟುಂಬ ಮತ್ತಷ್ಟು ದೊಡ್ಡದಾಗಿ, ಹೃದಯವಂತಿಕೆ ಪಲ್ಲವಿಸುವಂತಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಹದಾಯಿ ಹೋರಾಟಗಾರರ ಮೇಲೆ ದಾಖಲಾಗಿರುವ ಪ್ರಕರಣಗಳನ್ನು ಹಿಂಪಡೆದಿದ್ದೇವೆ, ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡುವ ನಿಟ್ಟಿನಲ್ಲಿ ಉನ್ನತ ಮಟ್ಟದ ಸಮಿತಿ ರಚಿಸುವುದಾಗಿ ಹೇಳಿರುವುದು ಹೊಸ ಭರವಸೆ ಮೂಡಿಸಿದೆ. ಮುಂದಿನ ವರ್ಷ ಮಂಡ್ಯದಲ್ಲಿ ನಡೆಯಲಿರುವ ಸಮ್ಮೇಳನದ ಹೊತ್ತಿಗೆ, ಎಲ್ಲ ಸಮಸ್ಯೆಗಳಿಗೂ ಪರಿಹಾರ ದೊರಕಿರಲಿ. ಎಲ್ಲರೂ ಒಂದಾಗಿ ಕನ್ನಡ ಬಾವುಟ ಹಾರಿಸೋಣ' ಎಂದು ಆಶಿಸಿದರು.

'ಸಾಹಿತ್ಯ ರೋಗಗ್ರಸ್ತ ಮನಸ್ಸಿಗೆ ಕಾಯಕಲ್ಪದ ತೇಜಸ್ಸು ತುಂಬುತ್ತದೆ. ಮೃಗೀಯ ಮನಸ್ಸು ಪಳಗಿಸುವಂಥ ಮಂತ್ರ ಶಕ್ತಿ ಅದಕ್ಕಿದೆ. ಹೃದಯಗಳ ಸಮ್ಮಿಲನದಲ್ಲಿ ಎಲ್ಲ ಮಾಲಿನ್ಯ ಕಳೆದು ಹೋಗಲಿ' ಎಂದು ಹೇಳಿದರು.

'ಕರುಣಾನಿಧಿಯಂಥ ಸಿ.ಎಂ ಬೇಕು'

ಹಾವೇರಿ: 'ಗಡಿನಾಡು ಮತ್ತು ಹೊರನಾಡು ಕನ್ನಡಿಗರ ತಳಮಳಗಳು' ಗೋಷ್ಠಿಯಲ್ಲಿ 'ಗಡಿಯಲ್ಲಿ ಭಾಷಾ ಸೌಹಾರ್ದ ಸಾಧ್ಯತೆ' ವಿಷಯ ಮಂಡಿಸಿದ ಸಾಹಿತಿ ಸ. ರಘುನಾಥ್ ಅವರು, 'ತಮಿಳುನಾಡಿನ ಕರುಣಾನಿಧಿಯಂಥ ಮುಖ್ಯಮಂತ್ರಿ ಕರ್ನಾಟಕಕ್ಕೆ ಸಿಗುವವರೆಗೂ ಗಡಿ, ಭಾಷೆ ಸಮಸ್ಯೆ ಬಗೆಹರಿಯುವುದಿಲ್ಲ' ಎಂದರು.

'ಯಾವುದಕ್ಕೂ ಅಂಜುವುದಿಲ್ಲ, ಬೆದರುವುದಿಲ್ಲ ಎನ್ನುವ ಮುಖ್ಯಮಂತ್ರಿ ಬೇಕಾಗಿದೆ. ಕೋಲಾರ ಜಿಲ್ಲೆಯ ಗಡಿಗಡಿ ಭಾಗದ ಅಲ್ಲಿಯ ಕನ್ನಡಿಗರು ಮತ್ತು ತೆಲುಗರು ಸೌಹಾರ್ದದಿಂದ ಬದುಕಿ, ಮದುವೆಗಳಿಂದ ಬಾಂಧವ್ಯ ಗಟ್ಟಿಮಾಡಿಕೊಳ್ಳುತ್ತಿದ್ದಾರೆ. ಸರ್ಕಾರ ಅವರಿಗೆ ಭಾಷಾ ಬಾಗಿನ ನೀಡಿ ಪ್ರೋತ್ಸಾಹಿಸಬೇಕು' ಎಂದು ಮನವಿ ಮಾಡಿದರು.

'ದಲಿತಪರ ಕಾನೂನು; ಜಾರಿಯಲ್ಲೇ ತೊಡಕು'

• ಓದೇಶ ಸಕಲೇಶಪುರ

ಹಾವೇರಿ (ಕನಕ-ಶರೀಫ -ಸರ್ವಜ್ಞ ಪ್ರಧಾನ ವೇದಿಕೆ): 'ದಮನಿತರ ಪರವಾಗಿ ಕಾನೂನುಗಳು ಮತ್ತು ಆದೇಶಗಳಿಗೆ ಬರವಿಲ್ಲ. ಜಾರಿಗೊಳಿಸುವಲ್ಲಿ ತೊಡಕಿದೆ. ಇದಕ್ಕಾಗಿ, ಮೀಸಲಾತಿ ರಕ್ಷಣಾ ಪಡೆ ಅಥವಾ ದಳವನ್ನು ಆರಂಭಿಸಿ ನಿಗಾ ವಹಿಸಬೇಕು' ಎಂದು ಸಾಹಿತಿ, ರಾಜಕಾರಣಿ ಡಿ.ಎಸ್. ವೀರಯ್ಯ ಸರ್ಕಾರವನ್ನು ಒತ್ತಾಯಿಸಿದರು.

ಸಮ್ಮೇಳನದಲ್ಲಿ ಭಾನುವಾರ 'ದಮನಿತ ಲೋಕದ ಸಬಲೀಕರಣ' ಗೋಷ್ಠಿಯ ಅಧ್ಯಕ್ಷೀಯ ನುಡಿಗಳ ಆರಂಭಕ್ಕೂ ಮುಂಚೆ, 'ರಾಜಕಾರಣಿಯಾಗಿ ನಾನು ಈ ಗೋಷ್ಠಿಯ ಅಧ್ಯಕ್ಷ ಸ್ಥಾನ ಅಲಂಕರಿಸಿಲ್ಲ. ಬದಲಿಗೆ, ಆ ಸಮುದಾಯದ ಸಾಹಿತಿ ಮತ್ತು ಹೋರಾಟಗಾರನಾಗಿ ಇಲ್ಲಿದ್ದೇನೆ' ಎಂದರು.

'ದಮನಿತ ಸಮುದಾಯದ ಮೀಸಲಾತಿ ಸರಿಯಾಗಿ ಹಂಚಿಕೆಯಾಗಿದೆಯೇ? ಆದೇಶ, ಸೌಲಭ್ಯಗಳು ಹಾಗೂ ಕಾರ್ಯಕ್ರಮಗಳು ಸರಿಯಾಗಿ ತಲುಪಿವೆಯೇ? ಎಂಬುದರ ಬಗ್ಗೆ ಈ ಪಡೆ ನಿಗಾ ಇಡಲಿ. ಪಡೆಗೆ ಶಾಸನಬದ್ಧ ಅಧಿಕಾರ ಕೊಡಿ. ದಲಿತರಿಗಾಗಿ ಇಲ್ಲಿಯವರೆಗೆ ಎಷ್ಟು ಖರ್ಚಾಗಿದೆ? ಯಾವ ಮಟ್ಟದ ಅಭಿವೃದ್ಧಿಯಾಗಿದೆ ಎಂಬುದರ ಸಾಮಾಜಿಕ ಆಡಿಟ್ ಆಗಬೇಕು. ಸಮ್ಮೇಳನದಲ್ಲಿ ಈ ಬಗ್ಗೆ ನಿರ್ಣಯವಾಗಲಿ' ಎಂದು ಅವರು ಹೇಳಿದರು.

'ದಲಿತರಿಗೆ ಕುರಿ, ಕೋಳಿ, ಮೀನು ಸೇರಿದಂತೆ ಕೈಯಲ್ಲಿ ನಿಲ್ಲದ ಸವಲತ್ತುಗಳ ಬದಲು ಆರ್ಥಿಕ ಚೈತನ್ಯ ತುಂಬುವಂತಹ ಕೈಗಾರಿಕೆ, ಭೂಮಿ, ಉತ್ಪಾದನಾ ಘಟಕ, ಮದ್ಯದಂಗಡಿ ಪರವಾನಗಿ, ಕಾಮಗಾರಿಗಳ ಗುತ್ತಿಗೆ ಸೇರಿದಂತೆ ಆರ್ಥಿಕವಾಗಿ ಮೇಲೆತ್ತುವ ಸೌಲಭ್ಯಗಳನ್ನು ಕೊಡಬೇಕು. ಇದರಿಂದ ಒಬ್ಬ ವ್ಯಕ್ತಿಯಷ್ಟೇ ಅಲ್ಲದೆ, ಆತನ ಸಮುದಾಯ ಆರ್ಥಿಕವಾಗಿ ಸಬಲೀಕರಣವಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

ಕಲಬುರಗಿ ಕೇಂದ್ರೀಯ ವಿವಿ ಸಹಾಯಕ ಪ್ರಾಧ್ಯಾಪಕ ಡಾ. ರೋಹಿಣಾಕ್ಷ ಶಿರ್ಲಾಲು ಆಶಯ ನುಡಿಗಳನ್ನಾಡಿದರು. 'ದಮನಿತರ ಸಾಂಸ್ಕೃತಿಕ ಜೀವನ ದೃಷ್ಟಿ'- ಡಾ.ಬಿ. ಗಂಗಾಧರ, 'ಕನ್ನಡದಲ್ಲಿ ದಮನಿತರ ಸಾಹಿತ್ಯ'–ಡಾ. ಹನುಮಂತಪ್ಪ ಸಂಜೀವಣ್ಣನವರ,'ಬದಲಾದ ಹೋರಾಟಗಳ ಸ್ವರೂಪ ಮತ್ತು ಯೋಜನೆಗಳ ಬಳಕೆ'– ಡಾ. ನಟರಾಜ್ ಮಾತನಾಡಿದರು.

'ಸಾಹಿತ್ಯವನ್ನು ಮೌಲ್ಯೀಕರಿಸಿದ ದಲಿತ ಸಾಹಿತ್ಯ'

'ಅಂಬೇಡ್ಕರ್ ಮತ್ತು ಕನ್ನಡ ಸಾಹಿತ್ಯ' ಕುರಿತು ಮಾತನಾಡಿದ ಶಿವಾನಂದ ಕೆಳಗಿನಮನಿ, 'ನಿರ್ಲಕ್ಷ್ಯದ ವ್ಯವಸ್ಥೆಯನ್ನು ಗುರಿಯಾಗಿಟ್ಟುಕೊಂಡು ದಲಿತ ಸಾಹಿತ್ಯ ಹುಟ್ಟಿತು. ದಲಿತ ಕಾವ್ಯ, ಕಥೆ, ಕಾದಂಬರಿ ಹಾಗೂ ಬರವಣಿಗೆಯಲ್ಲಿ ಬುದ್ಧ ಮತ್ತು ಅಂಬೇಡ್ಕರ್ ಚಿಂತನೆಗಳು ಅಂತರ್ಗತವಾಗಿವೆ. ಸಾಹಿತ್ಯವನ್ನು ಪುನರ್ ಮೌಲ್ಯೀಕರಣ ಮಾಡುತ್ತಾ ಬಂದಿವೆ' ಎಂದು ವಿಶ್ಲೇಷಿಸಿದರು.

ಹಿಂದಿ ಹೇರಿಕೆ ವಿರುದ್ಧ ಖಂಡನೆ

ಒಂದನೇ ಪುಟದಿಂದ...

3. ಕರ್ನಾಟಕ- ಮಹಾರಾಷ್ಟ್ರ ಗಡಿ ವಿವಾದದ ಸಂಬಂಧ ಇರುವ ಮಹಾಜನ ವರದಿಯು, ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿ ಇರುವುದರಿಂದ, ನ್ಯಾಯಾಲಯದ ಅಂತಿಮ ತೀರ್ಪಿನ ಮಾರ್ಗದರ್ಶನದಂತೆ ಸೂಕ್ತ ಕ್ರಮವನ್ನು ವಿಳಂಬವಿಲ್ಲದೇ ಕೈಗೊಳ್ಳಬೇಕು.
4. ಕನ್ನಡಕ್ಕಾಗಿ ಹೋರಾಡಿದ ಕನ್ನಡ ಚಳಿವಳಿಗಾರರ ಮೇಲಿನ ಈ ಸಂಬಂಧಿತ ಮೊಕದ್ದಮೆಗಳನ್ನು ರಾಜ್ಯ ಸರ್ಕಾರ ಕೂಡಲೇ ಹಿಂಪಡೆಯಬೇಕು.
5. 'ವಿಶ್ವ ಕನ್ನಡ ಸಮ್ಮೇಳನ'ವನ್ನು ದಾವಣಗೆರೆಯಲ್ಲಿ ನಡೆಸಬೇಕೆನ್ನುವ ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿದ್ದು ಅದನ್ನು 'ಕನ್ನಡ ಸಾಹಿತ್ಯ ಪರಿಷತ್' ಸಹಯೋಗದೊಂದಿಗೆ ಜರುಗಿಸಬೇಕು ಮತ್ತು ನಿಯೋಜಿತ ಸಮ್ಮೇಳನದ ಸಂಬಂಧ ಸರ್ಕಾರ ನಡೆಸುವ ಸಭೆಗಳಲ್ಲಿ ಕಸಾಪವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು.
6. 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನಡೆಸಿಕೊಟ್ಟ ಸ್ವಾಗತ ಸಮಿತಿ ಹಾಗೂ ವಿವಿಧ ಸಮಿತಿಗಳ ಅಧ್ಯಕ್ಷರು, ಪದಾಧಿಕಾರಿಗಳು, ಜಿಲ್ಲಾಡಳಿತ,ಎಲ್ಲ ಕಾರ್ಯಕರ್ತರಿಗೂ ಮತ್ತು ಆತಿಥ್ಯ ನೀಡಿದ ಹಾವೇರಿಯ ಸಮಸ್ತರಿಗೂ ಮಹಾಸಭೆ ಕೃತಜ್ಞತೆ ಸಲ್ಲಿಕೆ.

ಪಟೇಲರೇ ಗಡಿ ಸಮಸ್ಯೆಗೆ ಮೂಲ ಕಾರಣ

ಒಂದನೇ ಪುಟದಿಂದ...

'ಕಾಸರಗೋಡು ಮತ್ತು ಬೆಳಗಾವಿಯ ಗಡಿ ಸಮಸ್ಯೆ ಸದಾ ಕಾಡುತ್ತಿವೆ. ಸೊಲ್ಲಾಪುರ, ಅಕ್ಕಲಕೋಟೆ, ಜತ್ ಪ್ರದೇಶಗಳಲ್ಲಿ ಕನ್ನಡ ವಿಜೃಂಭಿಸಿದೆ. ಶೇಕಡ 90ರಷ್ಟು ಕನ್ನಡ ಭಾಷಿಗರು ಅಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಆ ಭಾಗವು ಕರ್ನಾಟಕಕ್ಕೆ ಸೇರಬೇಕು' ಎಂದು ಪ್ರತಿಪಾದಿಸಿದರು.

'ಚೆನ್ನೈ, ಮುಂಬೈ ನಗರಗಳಲ್ಲಿ ಕನ್ನಡ ಸಂಘಟನೆಗಳು, ಕೆಲವು ಪತ್ರಿಕೆಗಳು ಸರಾಗವಾಗಿ ಕಾರ್ಯ ನಿರ್ವಹಿಸುತ್ತಿವೆ. ಆ ಭಾಗಗಳಲ್ಲಿ ಅವರು ಕನ್ನಡದ ಕಾರ್ಯಕ್ರಮ ವೇನಾದರೂ ನಡೆಸಿದರೆ, ಸಾವಿರಾರು ಮಂದಿ ಸೇರುತ್ತಾರೆ. ಹೊರ ರಾಜ್ಯದಲ್ಲಿ ಕನ್ನಡ ಕಟ್ಟುವ ಕೆಲಸ ಸಾಧ್ಯವಾಗುತ್ತದೆ ಎಂದಾದರೆ, ನಮ್ಮ ನಾಡಲ್ಲಿ ಯಾಕಾಗುತ್ತಿಲ್ಲ? ಸರ್ಕಾರದಿಂದ ಅನುದಾನ ದೊರೆಯುತ್ತವೆಯಾದರೂ, ಹಣಕಾಸಿನ ಇಲಾಖೆ ಕೊಕ್ಕೆ ಹಾಕುತ್ತದೆ. ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಿಗಬೇಕಾದ ಅನುದಾನ ಸಿಗುತ್ತಿಲ್ಲ. ಕೆಲ ಸಮಸ್ಯೆಗಳು ಹಾಗೆಯೇ ಉಳಿದಿವೆ' ಎಂದು ಸರ್ಕಾರದ ನಡೆಯನ್ನು ಟೀಕಿಸಿದರು.

ಸಾಂವಿಧಾನಿಕವಾಗಿ ಬದುಕೋಣ..: 'ಕೇರಳದಲ್ಲಿ ಸಾಕಷ್ಟು ಮಂದಿ ಪ್ರತಿಭಾವಂತ ಕನ್ನಡಿಗರಿದ್ದಾರೆ. ಕನ್ನಡ ಶಾಲೆ ಇಲ್ಲದ ಕಾರಣ ಕನ್ನಡ ಕಲಿಕೆಯಿಂದ ವಂಚಿತರಾಗುತ್ತಿದ್ದಾರೆ. ಕನ್ನಡ ಶಾಲೆಗಳನ್ನು ತೆರೆಯಲು ಅಲ್ಲಿಯ ಸರ್ಕಾರ ಕಠೋರವಾಗಿ ವರ್ತಿಸುತ್ತಿದೆ. ಜಾಣಕುರುಡುತನ ಬಿಟ್ಟು, ಕನ್ನಡ ಶಾಲೆ ಕಟ್ಟಿ, ಶಿಕ್ಷಕರನ್ನು ನೇಮಕ ಮಾಡಬೇಕು' ಎಂದು ಆಗ್ರಹಿಸಿದ ಡಾ. ದೊಡ್ಡರಂಗೇಗೌಡ, ಪು.ತಿ.ನ ಅವರ 'ಗುಡಿಯಾಚೆ, ಗಡಿಯಾಚೆ ಕನ್ನಡ ಕಟ್ಟೋಣ' ಕವನದ ಸಾಲನ್ನು ವಾಚಿಸಿ, 'ಅಂತಹ ಮಧುರ ಮೈತ್ರಿಗೆ ನಾಂದಿಯಾಗಿ, ಸಾಂವಿಧಾನಿಕವಾಗಿ ಬದುಕೋಣ' ಎಂದು ಆಶಿಸಿದರು.

ಸಮ್ಮೇಳನವನ್ನು ಉದ್ಘಾಟಿಸಿದ ಲೇಖಕ ಮೂಡ್ನಾಕೂಡು ಚಿನ್ನಸ್ವಾಮಿ ಅವರು ವೇದಿಕೆಯಲ್ಲಿದ್ದ ಅತಿಥಿಗಳಿಗೆ ಕನ್ನಡ ಬಾವುಟವನ್ನು ಹಸ್ತಾಂತರಿಸಿದರು. ಪ್ರೊ.ಎಸ್ ಜಾಫೆಟ್, ಅಗ್ನಿ ಶ್ರೀಧರ್, ಅಕ್ಕೈ ಪದ್ಮಶಾಲಿ, ಪ್ರೊ.ಪುರುಷೋತ್ತಮ ಬಿಳಿಮಲೆ, ಬಾನು ಮುಷ್ತಾಕ್, ಪ್ರಕಾಶ್ ರಾಜ್, ಜನಾರ್ದನ್, ವಡ್ಡಗೆರೆ ನಾಗರಾಜಯ್ಯ, ಜಾಣಗೆರೆ ವೆಂಕಟರಾಮಯ್ಯ ಇದ್ದರು – ಪ್ರಜಾವಾಣಿ ಚಿತ್ರ

'ಮುಸ್ಲಿಮರನ್ನು ಪ್ರತ್ಯೇಕಿಸುವ ಕಾರ್ಯಸೂಚಿ ಅಪಾಯಕಾರಿ'

ಒಂದನೇ ಪುಟದಿಂದ...

'ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆಯಲ್ಲಿ ಪರ ಧರ್ಮ ಮತ್ತು ಪರ ವಿಚಾರಗಳಿಗೆ ಗೌರವವಿದೆ. ಆದರೆ, ಸಾಹಿತ್ಯ ಸಮ್ಮೇಳನದಿಂದ ಮುಸ್ಲಿಂ ಬರಹಗಾರರನ್ನು ಹೊರಗಿಟ್ಟಿರುವ ಸಾಹಿತ್ಯ ಪರಿಷತ್ತು ಕನ್ನಡ ಧರ್ಮಕ್ಕೆ ಅಪಚಾರ ಎಸಗಿದೆ. ತುಳು, ಕೊಡವ, ಅರೆ ಭಾಷೆ, ಕೊಂಕಣಿ ಭಾಷೆಗಳಿಗೆ ಸಮ್ಮೇಳನದಲ್ಲಿ ಪ್ರಾತಿನಿಧ್ಯ ನೀಡಿ, ಬ್ಯಾರಿ ಭಾಷೆಗೆ ಅವಕಾಶ ನಿರಾಕರಿಸಿರುವುದು ವಿಷಾದನೀಯ' ಎಂದು ಹೇಳಿದರು.

'ಹಿಂದಿ, ಹಿಂದೂ, ಹಿಂದುಸ್ತಾನ್ ಎನ್ನುವ ಮೂಲಕ ಒಂದು ರಾಷ್ಟ್ರ, ಒಂದು ಭಾಷೆ, ಒಂದು ಧರ್ಮದ ಪರಿಕಲ್ಪನೆಯನ್ನು ತೇಲಿಬಿಡಲಾಗಿದೆ. ದಕ್ಷಿಣ ಭಾರತದ ಮೇಲೆ ಹಿಂದಿ ಹೇರಿಕೆಯನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ. ಈ ಉದ್ದೇಶಕ್ಕಾಗಿಯೇ 2011ರ ಜನಗಣತಿಯಲ್ಲಿ ಹಿಂದಿ ಭಾಷಿಕರ ಕುರಿತು ಉತ್ಪ್ರೇಕ್ಷಿತ ಅಂಕಿ-ಅಂಶಗಳನ್ನು ದಾಖಲಿಸಲಾಗಿದೆ. ಎಲ್ಲ ರಂಗಗಳಲ್ಲೂ ಗಣನೀಯ ಅಭಿವೃದ್ಧಿ ಸಾಧಿಸಿರುವ ದ್ರಾವಿಡ ಜನಾಂಗ, ದ್ರಾವಿಡ ಸಂಸ್ಕೃತಿ ಮತ್ತು ದ್ರಾವಿಡ ಭಾಷೆಗಳ ಮೇಲೆ ಹಿಂದಿ ಹೇರಿಕೆ ಮಾಡುತ್ತಿರುವುದು ನಮ್ಮ (ದ್ರಾವಿಡರ) ಪಾಲಿಗೆ ಮಾರಣಾಂತಿಕ ಹೊಡೆತ' ಎಂದರು.

ತಥಾಕಥಿತ ಜಾತಿ ವ್ಯವಸ್ಥೆಯನ್ನು ಪೊರೆಯುವ ಹಿಂದೂ ಧರ್ಮವೇ ಸಂಘ ಪರಿವಾರದ ಪಾಲಿಗೆ ಪ್ರಿಯವಾದುದು. ಅದಕ್ಕಾಗಿ ಹಿಂದುತ್ವವು ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ಅಪ್ರಸ್ತುತಗೊಳಿಸುವ ಕೆಲಸ ಮಾಡುತ್ತಿದೆ. ತಮಿಳುನಾಡಿನ ವೆಂಗವಯಲ್ ಗ್ರಾಮದಲ್ಲಿ ದಲಿತರು ದೇವಸ್ಥಾನ ಪ್ರವೇಶಿಸಿದರು ಎಂಬ ಕಾರಣಕ್ಕಾಗಿ ಅವರು ಕುಡಿಯುವ ನೀರಿನ ಟ್ಯಾಂಕ್‌ಗೆ ಮಲ ಸುರಿದಾಗ ರಾಷ್ಟ್ರೀಯತೆಯ ವಕ್ತಾರರು ಬಾಯಿ ಬಿಡಲಿಲ್ಲ. ಇದಕ್ಕಿಂತ ಹೇಯವಾದುದು ಇನ್ನೊಂದು ಇಲ್ಲ ಎಂದು ಅವರು ಹೇಳಿದರು.

ಇತಿಹಾಸ ತಿರುಚುತ್ತಿದ್ದಾರೆ: 'ಮಕ್ಕಳಿಂದ ನೈಜ ಇತಿಹಾಸವನ್ನು ಮುಚ್ಚಿಟ್ಟು, ಸುಳ್ಳುಗಳನ್ನು ಬೋಧಿಸುವ ಪ್ರಯತ್ನ ವ್ಯವಸ್ಥಿತವಾಗಿ ನಡೆಯುತ್ತಿದೆ. ಶತಮಾನಗಳ ಕಾಲದ ಮೊಘಲರ ಆಳ್ವಿಕೆ ಮತ್ತು ಜೈನರು, ಬೌದ್ಧ ರಾಜರ ಆಡಳಿತದ ಅವಧಿಯನ್ನು ಪಠ್ಯಕ್ರಮದಿಂದಲೇ ಕಿತ್ತುಹಾಕಲು ಪ್ರಯತ್ನಿಸುತ್ತಿದ್ದಾರೆ. ವೇದಗಳಲ್ಲಿ ಎಲ್ಲವೂ ಇದೆ, ಭಾರತದಲ್ಲಿ ಎಲ್ಲವೂ ಇತ್ತು ಎಂದು ಹೇಳುವುದು ಕೆಲವರಿಗೆ ಕಾಯಿಲೆಯಾಗಿಬಿಟ್ಟಿದೆ' ಎಂದು ಚಿನ್ನಸ್ವಾಮಿ ಟೀಕಿಸಿದರು.

ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸ್ಥಗಿತಗೊಳಿಸಲಾಗಿದೆ. ಇವೆಲ್ಲವೂ ಪರಿಶಿಷ್ಟರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರ ಮಕ್ಕಳನ್ನು ಶಿಕ್ಷಣ ವಂಚಿತರನ್ನಾಗಿ ಮಾಡುವ ಕಾರ್ಯಸೂಚಿಯ ಭಾಗ. ಧರ್ಮದ ಹೆಸರಿನಲ್ಲಿ ಬಡವರು ಮತ್ತು ಮಧ್ಯಮ ವರ್ಗದ ಮುಸ್ಲಿಮರ ಉದ್ಯೋಗವನ್ನೂ ಕಿತ್ತುಕೊಳ್ಳಲಾಗುತ್ತಿದೆ. 'ಎಲ್ಲರ ಜತೆ-ಎಲ್ಲರ ವಿಕಾಸ' ಎಂಬ ಮಾತು ಆತ್ಮವಂಚನೆಯಂತೆ ಕಾಣುತ್ತಿದೆ ಎಂದರು.

ರಾಷ್ಟ್ರ ನಿರ್ಮಿಸುವವರು ವ್ಯಾಪಾರಿಗಳು ಅಥವಾ ರಾಜಕಾರಣಿಗಳಲ್ಲ, ಅದನ್ನು ಮಾಡುವವರು ಕವಿಗಳು ಮತ್ತು ಕಲಾವಿದರು. ಸುಳ್ಳು ಮತ್ತು ದ್ವೇಷಗಳಿಂದ ಹಿಂಸೆಯನ್ನು ಪ್ರಚೋದಿಸುತ್ತಾ ಸಾಂಸ್ಕೃತಿಕ ರಾಷ್ಟ್ರೀಯತೆ ಎಂಬ ಹೊಸ ಸಂಕಥನ ಕಟ್ಟಲು ಹೊರಟಿರುವ ಹುಚ್ಚು ಯಜ್ಞ-ಕುದುರೆಯನ್ನು ಪ್ರಜ್ಞಾವಂತರು ಹಿಡಿದು ಕಟ್ಟಿಹಾಕಬೇಕಾಗಿದೆ ಎಂದು ಕರೆ ನೀಡಿದರು.

ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಪುರುಷೋತ್ತಮ ಬಿಳಿಮಲೆ ದಿಕ್ಸೂಚಿ ಭಾಷಣ ಮಾಡಿದರು. ವಿಶ್ರಾಂತ ಕುಲಪತಿ ಪ್ರೊ.ಎಸ್. ಜಾಫೆಟ್, ಲೇಖಕ ವಡ್ಡಗೆರೆ ನಾಗರಾಜಯ್ಯ, ಗಾಯಕ ಜನಾರ್ದನ್, ಬರಹಗಾರ ಅಗ್ನಿ ಶ್ರೀಧರ್ ಮಾತನಾಡಿದರು.

> **ಪಾಪದ ಹಣದಿಂದ ಎಲ್ಲರನ್ನೂ ಕೊಳ್ಳಬಹುದೆಂಬ ಅಹಂಕಾರಿಗಳ ನಡುವೆ, ನಮ್ಮವರೇ ಅವರಿಗೆ ಮಾರಿಕೊಂಡ ದೌರ್ಭಾಗ್ಯದ ನಡುವೆ ನಾವು ಮಾರಾಟಕ್ಕಿಲ್ಲ ಎಂದು ಸಾರಿ ಹೇಳುವ ಪ್ರತಿರೋಧ ಇದು**
> **ಪ್ರಕಾಶ್ ರಾಜ್,** ಚಿತ್ರನಟ

> **ನಮ್ಮನ್ನು ವೇಶ್ಯೆಯರು ಎನ್ನುತ್ತೀರಿ. ತಮ್ಮನ್ನು ಮಾರಿಕೊಂಡು ರಾಜ್ಯದಲ್ಲಿ ಕೋಮುವಾದಿ ಸರ್ಕಾರವನ್ನು ತಂದ ಆ ಶಾಸಕರನ್ನು ಯಾವ ಪದಗಳಿಂದ ನಿಂದಿಸಲಿ?**
> **ಅಕ್ಕೈ ಪದ್ಮಶಾಲಿ,** ಲಿಂಗತ್ವ ಅಲ್ಪಸಂಖ್ಯಾತರ ಪರ ಹೋರಾಟಗಾರ್ತಿ

> **ಕನ್ನಡ ಸಾಹಿತ್ಯ ಪರಿಷತ್ ಎರಡು ಜಾತಿಗಳ ಕಪಿಮುಷ್ಟಿಯಲ್ಲಿ ಸಿಲುಕಿದೆ. ತೆರೆಮರೆಯಲ್ಲಿ ಕುಳಿತ ಸೂತ್ರಧಾರರ ತಾಳಕ್ಕೆ ತಕ್ಕಂತೆ ಎಲ್ಲವೂ ನಡೆಯುತ್ತಿದೆ**
> **ಜಾಣಗೆರೆ ವೆಂಕಟರಾಮಯ್ಯ**
> ಕನ್ನಡಪರ ಹೋರಾಟಗಾರ

'ಕನ್ನಡನಾಡು ಜಗತ್ತಿಗೆ ಕೊಟ್ಟ ಕೊಡುಗೆ ಟಿಪ್ಪು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಡೀ ಜಗತ್ತಿಗೆ ಕನ್ನಡ ನಾಡು ಕೊಟ್ಟು ಬಹುದೊಡ್ಡ ಕೊಡುಗೆ ಎಂದರೆ ಟಿಪ್ಪು ಸುಲ್ತಾನ್ ಎಂದು ಎದೆಯುಬ್ಬಿಸಿ ಹೇಳುವ ಕಾಲ ನಮ್ಮ ಮುಂದಿದೆ' ಎಂದು ಲೇಖಕ ಟಿ. ಗುರುರಾಜ್ ಅಭಿಪ್ರಾಯಪಟ್ಟರು.

ನಗರದ ಕೆ.ಆರ್. ವೃತ್ತದಲ್ಲಿರುವ ಅಲುಮ್ನಿ ಅಸೋಸಿಯೇಷನ್ ಆವರಣದಲ್ಲಿ ಆಯೋಜಿಸಲಾಗಿದ್ದ, 'ಜನ ಸಾಹಿತ್ಯ ಸಮ್ಮೇಳನ'ದ 'ಕನ್ನಡ ನಾಡು ನುಡಿ- ಟಿಪ್ಪು ಕೊಡುಗೆಗಳು' ಗೋಷ್ಠಿಯಲ್ಲಿ ಅವರು ಮಾತನಾಡಿದರು. ಟಿ.ಗುರುರಾಜ್ ಅವರು ಬರೆದ 'ನಮ್ಮ ಟಿಪ್ಪು- ವದಂತಿ ಮತ್ತು ಸತ್ಯ ಸಂಗತಿ' ಹಾಗೂ ಲಿಂಗದೇವರು ಹಳೆಮನೆ ಅವರು ಸಂಗ್ರಹಿಸಿದ 'ಧೀರ ಟಿಪ್ಪು ಲಾವಣಿಗಳು' ಪುಸ್ತಕಗಳನ್ನು ಲೇಖಕ ಪುರುಷೋತ್ತಮ ಬಿಳಿಮಲೆ ಅವರು ಬಿಡುಗಡೆ ಮಾಡಿದರು.

'14ನೇ ದೊರೆ ಚಿಕ್ಕದೇವರಾಜ ಒಡೆಯರ್ ಅವರು ಔರಂಗಜೇಬ್‌ನ ಸಾಮಂತಿಕೆಯನ್ನು ಒಪ್ಪಿಕೊಂಡು, ಆತ ದಯಪಾಲಿಸಿದ ಪರ್ಷಿಯನ್ ಮೊಹರನ್ನು ಮೈಸೂರು ಸಂಸ್ಥಾನದ ರಾಜಮುದ್ರೆಯನ್ನಾಗಿ ಮಾಡಿಕೊಂಡರು. 25ನೇ ದೊರೆಯಾಗಿದ್ದ ಜಯ ಚಾಮರಾಜ ಒಡೆಯರ್ ಕಾಲದವರೆಗೂ ರಾಜ ಮೊಹರು ಪರ್ಷಿಯನ್ ಲಿಪಿಯಲ್ಲಿತ್ತು. ಈ ಬಗ್ಗೆ ಯಾಕೆ ಪ್ರಶ್ನೆ ಮಾಡುವುದಿಲ್ಲ? ಏಕೆಂದರೆ, ಮೈಸೂರು ರಾಜರು ಸಾಬರಾಗಿರಲಿಲ್ಲ' ಎಂದರು.

'ಟಿಪ್ಪುವಿನ ಕಾಲದಲ್ಲಿ ತ್ರಿಶೂಲ ಹಾಗೂ ಲಕ್ಷ್ಮೀದೇವಿ ಇರುವ ನಾಣ್ಯವನ್ನು ಟಂಕಿಸಲಾಗುತ್ತಿತ್ತು. ಜೊತೆಗೆ ಆತನ ಉಂಗುರದಲ್ಲಿ ದೇವನಾಗರಿ ಲಿಪಿಯನ್ನು ರಾಮ ಎಂಬ ಮುದ್ರೆ ಇತ್ತು. ಟಿಪ್ಪು ಮತಾಂಧ ಆಗಿದ್ದರೆ, ಇವೆಲ್ಲಾ ಆಗುತ್ತಿತ್ತೇ' ಎಂದು ಲೇಖಕ ಖಲೀಲ್ ಪಾಶಾ ಪ್ರಶ್ನಿಸಿದರು.

ಜನಸಾಹಿತ್ಯ ಸಮ್ಮೇಳನ

> **ಟಿಪ್ಪು ತನ್ನನ್ನು ತಾನು 'ಪೌರ ಟಿಪ್ಪು' ಎಂದು ಕರೆದುಕೊಂಡಿದ್ದ. ವಿಶ್ವದ ರಾಜಪ್ರಭುತ್ವದ ಚರಿತ್ರೆಯಲ್ಲಿ ಮತ್ತೊಬ್ಬ ರಾಜ, ತನ್ನನ್ನು ತಾನು ಪೌರ ಎಂದು ಕರೆದುಕೊಂಡಿಲ್ಲ**
> **ಟಿ.ಗುರುರಾಜ್,** ಲೇಖಕ

'ಇತಿಹಾಸ ತಿರುಚುವವರು ಅವಿವೇಕಿಗಳು'

'ಕರ್ನಾಟಕದ ಒಬ್ಬ ವಯೋವೃದ್ಧ ರಾಜಕಾರಣಿ ಡಿ.ಎಚ್. ಶಂಕರಮೂರ್ತಿ ಟಿಪ್ಪುವಿಗೆ ಕನ್ನಡ ದ್ರೋಹಿ ಎನ್ನುವ ಪಟ್ಟವನ್ನು ಕಟ್ಟಿದರು. ಜ್ಞಾನಪೀಠ ಪ್ರಶಸ್ತಿಗಾಗಿ ಹಪಹಪಿಸುತ್ತಿರುವ ವಯೋವೃದ್ಧ ಡಾ. ಎಸ್.ಎಲ್. ಭೈರಪ್ಪ ಇದನ್ನು ಅನುಮೋದಿಸಿದರು. ಕ್ಷಮೆ ಇರಲಿ, ಇತಿಹಾಸ ತಿರುಚುವವರು ಎಷ್ಟೇ ದೊಡ್ಡವರಾದರು ಅವರು ಅವಿವೇಕಿಗಳು' ಎಂದು ಟಿ. ಗುರುರಾಜ್ ಅವರು ಟೀಕಿಸಿದರು.

'ಈ ಇಬ್ಬರು ಅವಿವೇಕಿಗಳ, ಹೊಣೆಗೇಡಿಗಳ ಮಾತನ್ನು ಮಿದುಳಿಲ್ಲದ ಹುಲಿ, ಕರಡಿ, ಸಿಂಹಗಳು, ಇವರನ್ನು ಸಣ್ಣ ಸಣ್ಣ ಪರದೆಗಳ ಮೇಲೆ ಸಮರ್ಥಿಸುವ ವೃಶಾಂಕ, ಶಶಾಂಕಗಳು, ಸುಳ್ಳುಗಳನ್ನು ಹೇಳಿಯೇ ಹಣ ಮಾಡಿಕೊಳ್ಳುತ್ತಿರುವ ಸೂಲಿಬೆಲೆಗಳು ಮತ್ತು ಆಳುವವರ ಕೃಪಾಶೀರ್ವಾದಕ್ಕೆ ನಾಲಿಗೆ ಚಾಚಿಕೊಂಡಿರುವ ಪ್ರಸಾದಾಕಾಂಕ್ಷಿ ತೀರ್ಥಗಳು ಟಿಪ್ಪುವಿಗೆ ಕನ್ನಡದ ದ್ರೋಹಿ ಎನ್ನುವ ಪಟ್ಟವನ್ನು ಮತ್ತೆ ಮತ್ತೆ ಕಟ್ಟುವ ಮೂಲಕ ತಮ್ಮ ಪಟ್ಟಾಭಿಷೇಕದ ದಾರಿಗಳನ್ನು ಸುಗಮ ಮಾಡಿಕೊಳ್ಳುತ್ತಾ ಬಂದರು' ಎಂದು ಹೇಳಿದರು.

'ಇತಿಹಾಸಕ್ಕೆ ಮಾಡಿದ ಅತ್ಯಾಚಾರ'

'ಹೈದರ್ ಮತ್ತು ಟಿಪ್ಪುವನ್ನು ಎಲ್ಲರೂ ವಿಮರ್ಶೆ ಮಾಡಬಹುದು. ಆದರೆ, ಕಳೆದ ಕೆಲ ವರ್ಷಗಳಿಂದ ಟಿಪ್ಪುವಿನ ಮೇಲೆ ಮಾಡುತ್ತಿರುವ ಆರೋಪಗಳು, ಅದು ಇತಿಹಾಸಕ್ಕೆ ಮಾಡುವ ಅಪಚಾರ ಮಾತ್ರವಲ್ಲ; ಅತ್ಯಾಚಾರ' ಎಂದು ಲೇಖಕ ಪುರುಷೋತ್ತಮ ಬಿಳಿಮಲೆ ಆಕ್ರೋಶ ವ್ಯಕ್ತಪಡಿಸಿದರು.

'ನಮ್ಮ ಟಿಪ್ಪು- ವದಂತಿ ಮತ್ತು ಸತ್ಯ ಸಂಗತಿ' ಪುಸ್ತಕದ ಕುರಿತು ಮಾತನಾಡಿದ ಅವರು, 'ಟಿಪ್ಪುವಿನ ಮೇಲೆ ಯಾವೆಲ್ಲಾ ಸುಳ್ಳು ಸುದ್ದಿ ಹಬ್ಬಿವೆ. ಅದನ್ನೆಲ್ಲಾ ವಾಟ್ಸ್ಆ್ಯಪ್ ಮೂಲಕವೋ ಸ್ನೇಹಿತರ ಮೂಲಕವೋ ಸಂಗ್ರಹಿಸಿದ ಗುರುರಾಜ್ ಅವರು, ಎಲ್ಲಾ ವದಂತಿಗಳಿಗೆ ಈ ಪುಸ್ತಕದಲ್ಲಿ ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ' ಎಂದರು.

ಸೌಹಾರ್ದತೆ ಮತ್ತು ಕನ್ನಡತನ ಕುರಿತು ಚೆನ್ನಿ ವಿಶ್ಲೇಷಣೆ

'ಈಗಿನ ಹುಸಿ ರಾಷ್ಟ್ರೀಯತೆ ಹೊರಗಿನದ್ದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈಗ ಎಲ್ಲೆಡೆ ವ್ಯಕ್ತವಾಗುತ್ತಿರುವ ಹುಸಿ ರಾಷ್ಟ್ರೀಯತೆ ಕೂಡ ಹೊರಗಿನಿಂದಲೇ ಬಂದದ್ದು. ನಮ್ಮ ಪ್ರೀತಿಗೆ ಪಾತ್ರವಾದದ್ದು ದೇಶವೇ ಹೊರತು ರಾಷ್ಟ್ರವಲ್ಲ' ಎಂದು ವಿಮರ್ಶಕ ರಾಜೇಂದ್ರ ಚೆನ್ನಿ ಅಭಿಪ್ರಾಯಪಟ್ಟರು.

ಜನಸಾಹಿತ್ಯ ಸಮ್ಮೇಳನದಲ್ಲಿ ಸೌಹಾರ್ದತೆ ಮತ್ತು ಕನ್ನಡತನ ಕುರಿತು ಮಾತನಾಡಿದ ಅವರು, 'ನಮ್ಮ ಚರಿತ್ರೆ ಕೇವಲ ಆಕ್ರಮಣ ಮತ್ತು ದ್ವೇಷದ ಚರಿತ್ರೆಯಲ್ಲ. ಕೊಡು- ಕೊಳ್ಳುವಿಕೆ ಮತ್ತು ಚಲನಶೀಲ ಚರಿತ್ರೆಯಾಗಿದೆ. ಆದರೆ, ಅದು ಕೇವಲ ದುರಾಕ್ರಮಣಗಳ ಚರಿತ್ರೆ ಎಂದು ಬಿಂಬಿಸಲಾಗುತ್ತಿದೆ. ಆ ಮೂಲಕ ಹೊರಗಿನವರ ಮೇಲೆ ಹುಸಿ ಆರೋಪ ಹೊರಿಸಲಾಗುತ್ತಿದೆ' ಎಂದರು.

'ಕನ್ನಡತನ ಒಳಗಿರುವ ಸೌಹಾರ್ದತೆ ಸುಲಿದ ಬಾಳೆಹಣ್ಣಿನಂತೆ ಬಂದಿದ್ದಲ್ಲ. ಅನೇಕ ಘರ್ಷಣೆಗಳ ಮೂಲಕ, ಧರ್ಮವನ್ನು ಪ್ರಶ್ನೆ ಮಾಡುವ ಮೂಲಕ ಬಂದಿದೆ. ಸೌಹಾರ್ದತೆಯ ನೆಲೆಯಲ್ಲಿ ಕನ್ನಡತನವನ್ನು ಮರು ವಿಶ್ಲೇಷಣೆ ಮಾಡುವ ಅಗತ್ಯವಿದೆ' ಎಂದರು.

ಹೋರಾಟಗಾರ ಮುನೀರ್ ಕಾಟಿಪಳ್ಳ ಮಾತನಾಡಿ, 'ಮುಸ್ಲಿಮರು ಈಗ ನವ ಬಹಿಷ್ಕೃತರಾಗಿದ್ದೇವೆ. ಅಮಾಯಕ ಮುಸ್ಲಿಂ ಕೊಲೆಯಾದರೂ ಅನ್ಯ ಧರ್ಮೀಯರು ಬಂದು ಸಾಂತ್ವನ ಹೇಳುವುದಿರಲಿ, ಮುಖವನ್ನೇ ನೋಡುತ್ತಿಲ್ಲ. ಕೋಮುದ್ವೇಷಕ್ಕೆ ಇತ್ತೀಚೆಗೆ ಮೂವರು ಅಮಾಯಕ ಮುಸ್ಲಿಂ ಯುವಕರು ಹತ್ಯೆಯಾದರು. ಅವರಿಗೆ ಸರ್ಕಾರದಿಂದ ಪರಿಹಾರವನ್ನು ಕೊಡಲೇ ಇಲ್ಲ. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಪರಿಹಾರ ಕೊಟ್ಟು ಅದೇ ದಿನ ವಾಪಸ್ ಪಡೆದುಕೊಂಡರು. ಇವೆಲ್ಲವೂ ಮುಸ್ಲಿಮರನ್ನು ಸಮಾಜದಿಂದ ಹೊರಗಿಡುವ ಪ್ರಯತ್ನವೇ ಆಗಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ದಲಿತರ ನೋವಿನ ಕಥೆಗಳನ್ನು ಹೇಳುವ ಸಾಹಿತ್ಯ ಸಾಕಷ್ಟಿದೆ. ಮುಸ್ಲಿಮರ ನೋವನ್ನು ಹೇಳುವ ಸಾಹಿತ್ಯವೇ ರಚನೆಯಾಗುತ್ತಿಲ್ಲ. ಅಲ್ಲಿಯೂ ಮುಸ್ಲಿಮರು ಅಸ್ಪೃಶ್ಯರಾಗಿದ್ದಾರೆ. ಸಾಹಿತ್ಯ ಸಮ್ಮೇಳನದಲ್ಲೂ ಮುಸ್ಲಿಮರನ್ನು ದೂರ ಇಡಲಾಯಿತು. ಅದಕ್ಕೆ ಪ್ರತಿರೋಧವಾಗಿ ಈ ಸಮ್ಮೇಳನ ಆಯೋಜಿಸಿರುವುದು ಸಾಂತ್ವನ ದೊರೆತಂತಾಗಿದೆ' ಎಂದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ (ಅಂಬೇಡ್ಕರ್ ವಾದ) ಮಾವಳ್ಳಿ ಶಂಕರ್, 'ನಾಯಿಮರಿಗಳ ಹೆಸರಿನಲ್ಲಿ ಮುಖ್ಯಮಂತ್ರಿ ಮತ್ತು ವಿರೋಧ ಪಕ್ಷದ ನಾಯಕರು ಕಚ್ಚಾಡುತ್ತಿದ್ದಾರೆ. ಮುಖ್ಯವಾಗಿ ಜಾತಿವಾದ ಎಂಬ ರೇಬಿಸ್ ತೊಡೆದು ಹಾಕುವ ಬಗ್ಗೆ ಎಲ್ಲರೂ ಯೋಚಿಸಬೇಕು' ಎಂದರು.

ನಿರ್ಣಯ: ಎಲ್ಲ ಸಮುದಾಯಗಳ ಒಳಗೊಳ್ಳುವಿಕೆ ಇರಲಿ

- ಕನ್ನಡ ಸಾಹಿತ್ಯ ಸಮ್ಮೇಳನಗಳೂ ಸೇರಿದಂತೆ ಕನ್ನಡ ಸಾಹಿತ್ಯ ಪರಿಷತ್ ನಡೆಸುವ ಎಲ್ಲ ಕಾರ್ಯಕ್ರಮಗಳಲ್ಲಿ ಎಲ್ಲ ಸಮುದಾಯಗಳ ಒಳಗೊಳ್ಳಬೇಕು. ಅದರಲ್ಲೂ ದಲಿತರು, ದಮನಿತರು, ಆದಿವಾಸಿಗಳು, ಮಹಿಳೆಯರು, ಲೈಂಗಿಕ ಅಲ್ಪಸಂಖ್ಯಾತರು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಒಳಗೊಳ್ಳುವಿಕೆ ಇರಲೇಬೇಕು.
- ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದಂತೆ ಸಂಸ್ಥೆಗಳ ಸ್ವಾಯತ್ತತೆಯನ್ನು ಸರ್ಕಾರ ಕಾಪಾಡಿಕೊಳ್ಳಬೇಕು.
- ಸಾಹಿತ್ಯ ಸಂಸ್ಥೆಗಳಿಗೆ ಪದಾಧಿಕಾರಿಗಳನ್ನು ನೇಮಿಸುವಾಗ ಸರ್ಕಾರ ಎಚ್ಚರ ವಹಿಸಿ ಅರ್ಹರನ್ನು ನೇಮಿಸಬೇಕು.
- ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ, ರಂಗಾಯಣದ ನಿರ್ದೇಶಕರ ನೇಮಕಾತಿ ಸರ್ಕಾರದ ನಿಲುವಿಗೆ ಖಂಡನೆ.
- ಸರ್ಕಾರದ ಕೋಮುವಾದಿ ನಡೆಗೆ ಖಂಡನೆ.
- ರಾಜ್ಯವು ಸರ್ವ ಜನಾಂಗದ ಶಾಂತಿಯ ತೋಟವಾಗಿಯೇ ಇರಬೇಕು.
- ರಾಜ್ಯದ ಎಲ್ಲ ಭಾಷೆಗಳನ್ನೂ ರಕ್ಷಿಸಲು ಸಮಗ್ರ ಭಾಷಾ ನೀತಿ ರೂಪಿಸಬೇಕು.
- ಕನ್ನಡ ನೆಲದ ಮೇಲೆ ಹಿಂದಿ ಹೇರಿಕೆಗೆ ತೀವ್ರ ವಿರೋಧ.
- ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡ ಕಡ್ಡಾಯಗೊಳಿಸಬೇಕು.
- ಕರ್ನಾಟಕ ಹಾಗೂ ಮಹಾರಾಷ್ಟ್ರದ ಗಡಿಯಲ್ಲಿ ಯಥಾಸ್ಥಿತಿ ಕಾಪಾಡಿಕೊಳ್ಳಬೇಕು. ಗಡಿನಾಡ ಕನ್ನಡಿಗರ ರಕ್ಷಣೆ ಮಾಡಬೇಕು.
- ನಂದಿನಿಯೂ ಸೇರಿದಂತೆ ರಾಜ್ಯದ ಸಂಸ್ಥೆಗಳನ್ನು ಉತ್ತರ ಭಾರತದ ಸಂಸ್ಥೆಗಳ ಜತೆಗೆ ವಿಲೀನ ಮಾಡಬಾರದು.
- ಕೃಷ್ಣಾ, ಕಾವೇರಿ, ಮಹದಾಯಿ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದ ಅಂತರ ರಾಜ್ಯ ವ್ಯಾಜ್ಯಗಳಲ್ಲಿ ರಾಜ್ಯಕ್ಕೆ ಅನ್ಯಾಯವಾಗದಂತೆ ನ್ಯಾಯಾಂಗ ಹೋರಾಟ ನಡೆಸಬೇಕು. ಈ ನದಿಗಳ ನೀರಿನ ಬಳಕೆಗೆ ಯೋಜನೆಗಳನ್ನು ರೂಪಿಸಿ ಅವುಗಳ ಅನುಷ್ಠಾನಕ್ಕೆ ಹಣ ಒದಗಿಸಬೇಕು.

'ಪ್ರತಿಕ್ರಿಯಿಸಲು ನಿರಾಕರಿಸಿದರೆ ದುರಾಡಳಿತ ಹೆಚ್ಚಲಿದೆ'

ಬೆಂಗಳೂರು: 'ಈಗಿನ ಪರಿಸ್ಥಿತಿಯಲ್ಲಿ ಪ್ರತಿಕ್ರಿಯಿಸಲು ಸೋತರೆ ದುರಾಡಳಿತ ಹೆಚ್ಚಾಗಿ ದುರ್ಗತಿ ಬರಲಿದೆ' ಎಂದು ಸಾಹಿತಿ ಡಾ.ಜಿ. ರಾಮಕೃಷ್ಣ ಎಚ್ಚರಿಸಿದರು.

ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, 'ಈಗ ಸಂಸ್ಥೆಗಳನ್ನೇ ಮುಗಿಸುವುದು ನೀತಿಯಾಗಿದೆ. ಉದಯಭಾನು ಕಲಾ ಸಂಘಕ್ಕೂ ಅದೇ ಗತಿ ಬರಬಹುದು. ಕಸಾಪಕ್ಕೆ ಹಳೇ ಕಾಯಿಲೆ ಇದೆ. ಅದಕ್ಕೆ ಚಿಕಿತ್ಸೆ ಕೊಡಿಸಿ ಎಂದರೆ ಅದನ್ನೇ ಪೂರ್ಣ ಮುಳುಗಿಸುವ ಕೆಲಸ ನಡೆಯುತ್ತಿದೆ' ಎಂದರು.

ಸಾಹಿತಿ ರಹಮತ್ ತರೀಕರೆ ಮಾತನಾಡಿ, 'ಬಹುತ್ವ ಎಂಬುದು ರಾಜ್ಯದ ಜೀವಾಳ. ರಾಜ್ಯದಲ್ಲಿ ಒಳಗೊಳ್ಳುವಿಕೆ ಪರಂಪರೆ ಇದೆ. ಆದರೆ, ಕೆಲವರನ್ನು ಹೊರಗಿಡುವ ಕೆಲಸ ನಡೆಯುತ್ತಿವೆ' ಎಂದು ಆತಂಕ ವ್ಯಕ್ತಪಡಿಸಿದರು.

'ಪ್ರತಿರೋಧ ಒಡ್ಡಲು ಈ ಸಮ್ಮೇಳನ ಆಯೋಜಿಸಲಾಗಿತ್ತು. ಜನರ ತೆರಿಗೆ ಹಣದಲ್ಲಿ ನಡೆದ ಹಾವೇರಿ ಸಮ್ಮೇಳನದಲ್ಲಿ ಆರ್‌ಎಸ್‌ಎಸ್, ಬಿಜೆಪಿ ಸಿದ್ಧಾಂತ ಹೇರಲಾಗಿದೆ. ಸಾಹಿತ್ಯ ಪರಿಷತ್ ಸಹ ಬಿಜೆಪಿ ಸಿದ್ಧಾಂತವನ್ನೇ ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಿದೆ. ಇದರ ವಿರುದ್ಧ ಸಾಂಸ್ಕೃತಿಕ ಹೋರಾಟ ನಡೆಯಬೇಕು' ಎಂದು ಪತ್ರಕರ್ತ ದಿನೇಶ್ ಅಮಿನ್‌ಮಟ್ಟು ಹೇಳಿದರು.

ಅಕ್ರಮ ಬಡ್ತಿ ಸಕ್ರಮಕ್ಕೆ ಪ್ರಯತ್ನ

ಸಾಂಖ್ಯಿಕ ನಿರ್ದೇಶನಾಲಯ: ನಕಲಿ ಪದವಿ ಪ್ರಮಾಣಪತ್ರ ಸಲ್ಲಿಸಿದ್ದವರ ಒತ್ತಡ

• ಆದಿತ್ಯ ಕೆ.ಎ.

ಪ್ರಜಾವಾಣಿ ವಿಶೇಷ

ಬೆಂಗಳೂರು:ವೃಂದ ಮತ್ತು ನೇಮಕಾತಿ ನಿಯಮದ ಪ್ರಕಾರ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿ ಸಹಾಯಕ ಸಾಂಖ್ಯಿಕ ಅಧಿಕಾರಿ ಹುದ್ದೆಯಿಂದ ಸಹಾಯಕ ನಿರ್ದೇಶಕ ಹುದ್ದೆಗೆ ಬಡ್ತಿ ಪಡೆಯಲು ಪದವಿ ಕಡ್ಡಾಯ. ಆದರೆ, ಆ ನಿಯಮವನ್ನು ಸಡಿಲಗೊಳಿಸುವ ಪ್ರಕ್ರಿಯೆ ಆರಂಭಗೊಂಡಿದ್ದು, ಇದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

'ನಕಲಿ ಪದವಿ ಪ್ರಮಾಣಪತ್ರ ನೀಡಿ ಈಗಾಗಲೇ ಸಹಾಯಕ ನಿರ್ದೇಶಕ ಹುದ್ದೆಗೆ ಬಡ್ತಿ ಪಡೆದವರಿಗೆ ನೆರವಾಗಲು ಈ ಮಾರ್ಗೋಪಾಯ ಅನುಸರಿಸಲಾಗುತ್ತಿದೆ' ಎಂದು ಕೆಪಿಎಸ್‌ಸಿ ಮೂಲಕ ನೇಮಕವಾಗಿರುವ ಇಲಾಖೆ ಸಿಬ್ಬಂದಿ ದೂರಿದ್ದಾರೆ.

'ಸಹಾಯಕ ಸಾಂಖ್ಯಿಕ ಅಧಿಕಾರಿಗೆ ನಿಗದಿಪಡಿಸಿರುವ ಪದವಿ ಅರ್ಹತೆಯನ್ನು ತೆಗೆದು, ಪದವಿ ಇಲ್ಲದ ಅಧಿಕಾರಿಗಳಿಗೆ ಸಹಾಯಕ ನಿರ್ದೇಶಕ ಹುದ್ದೆಗೆ ಮುಂಬಡ್ತಿ ನೀಡಲು ವಿನಾಯಿತಿ ನೀಡುವಂತೆ ವೃಂದ ಹಾಗೂ ನೇಮಕಾತಿ ನಿಯಮಾವಳಿಗೆ ಬದಲಾವಣೆ ತರಲು ಪ್ರಯತ್ನಗಳು ನಡೆಯುತ್ತಿವೆ. ಸಚಿವ ಸಂಪುಟ ಸಭೆಗೆ ಟಿಪ್ಪಣಿ ಸಿದ್ಧಪಡಿಸಲಾಗಿದೆ' ಎಂದು 'ಪ್ರಜಾವಾಣಿ'ಗೆ ಮೂಲಗಳು ತಿಳಿಸಿವೆ.

'ಕಾರಣವಿಲ್ಲದೆ ಕೇವಲ ಬಡ್ತಿ ಉದ್ದೇಶಕ್ಕೆ ನಿಯಮ ಸಡಿಲಿಕೆ ಮಾಡುವುದು ಆಡಳಿತದ ಹಿತದೃಷ್ಟಿಯಿಂದ ಸರಿಯಲ್ಲ. ಅರ್ಹ ಹಾಗೂ ವಿದ್ಯಾರ್ಹತೆಯುಳ್ಳ ಸಿಬ್ಬಂದಿಗೆ ಬಡ್ತಿಯ ಅವಕಾಶಕ್ಕೆ ಧಕ್ಕೆಯಾಗಲಿದೆ. ಈ ರೀತಿಯ ತಿದ್ದುಪಡಿಯಿಂದ ನೌಕರರ ಹಕ್ಕುಗಳಿಗೆ ಚ್ಯುತಿಯಾಗಲಿದೆ. ಇಂತಹ ತಿದ್ದುಪಡಿ ಕೂಡಾ ಪ್ರಶ್ನಾರ್ಹ' ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಈ ಹಿಂದೆಯೇ ಈ ಪ್ರಸ್ತಾವವನ್ನು ತಿರಸ್ಕರಿಸಿತ್ತು. ಆದರೆ, ಅದೇ ಪ್ರಸ್ತಾವವನ್ನೇ ಸಚಿವ ಸಂಪುಟದಲ್ಲಿ ಮತ್ತೆ ಮಂಡಿಸಿ ಒಪ್ಪಿಗೆ ಪಡೆಯುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ ಎಂದು ಮೂಲಗಳು ಹೇಳಿವೆ.

'ಸಹಾಯಕ ನಿರ್ದೇಶಕ ಹುದ್ದೆಗೆ ಬಡ್ತಿ ಪಡೆಯಲು ಪದವಿಯಲ್ಲಿ ಅರ್ಥಶಾಸ್ತ್ರ, ಸಂಖ್ಯಾಶಾಸ್ತ್ರ, ಗಣಿತ, ಕಂಪ್ಯೂಟರ್ ಸೈನ್ಸ್ ಇವುಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕಡ್ಡಾಯವಾಗಿ ಕಲಿತಿರಬೇಕು ಎಂಬ ನಿಯಮವಿದೆ. ಈ ವಿಷಯಗಳಲ್ಲಿ ಪದವಿ ಕೈಬಿಡುವ ವಿಷಯವನ್ನು ಸಂಪುಟದ ಟಿಪ್ಪಣಿಯಲ್ಲಿ ಸೇರಿಸಲಾಗಿದೆ. ಇಲಾಖೆಯ ಸಚಿವರ ಲಾಗಿನ್‌ಗೂ ಇದು ಅಪ್‌ಲೋಡ್ ಆಗಿದೆ. ಅವರು ಅಲ್ಲೇ ಒಪ್ಪಿಗೆ ಸೂಚಿಸಬಹುದು. ಇಲ್ಲವೇ ನೇರವಾಗಿ ಕಡತವನ್ನು ಸಭೆಗೆ ಕೊಂಡೊಯ್ದು ಅನುಮತಿ ಪಡೆಯುವ ಸಾಧ್ಯತೆಯಿದೆ' ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಸಿಬ್ಬಂದಿ ಕಾರ್ಯಕ್ಷಮತೆ ಹೆಚ್ಚಿಸಲು ಸಣ್ಣ ಬದಲಾವಣೆ ತರಲಾಗುತ್ತಿದೆ. ವಿದ್ಯಾರ್ಹತೆ ಕಡಿತ ಮಾಡುತ್ತಿದ್ದೇವೆ ಎಂಬುದು ಸುಳ್ಳು

ಶಾಲಿನಿ ರಜನೀಶ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ

150 ಅಧಿಕಾರಿಗಳಿಗೆ ಅನ್ಯಾಯ?

ಕಡಿಮೆ ವಿದ್ಯಾರ್ಹತೆ ಹೊಂದಿದ್ದ ಇಲಾಖೆಯ 140 ಮಂದಿ ರಾಜ್ಯ, ಹೊರರಾಜ್ಯಗಳಲ್ಲಿರುವ ವಿಶ್ವವಿದ್ಯಾಲಯಗಳ ನಕಲಿ ಪದವಿ ಪ್ರಮಾಣಪತ್ರ ಸಲ್ಲಿಸಿ ಉಪ ನಿರ್ದೇಶಕರು, ಜಂಟಿ ನಿರ್ದೇಶಕರು, ಹೆಚ್ಚುವರಿ ನಿರ್ದೇಶಕರ ಹುದ್ದೆಗೆ ಬಡ್ತಿ ಪಡೆದಿದ್ದರು. ಈ ವಿಷಯ ಗೊತ್ತಾದ ನಂತರ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಅವರಿಗೆ ಪತ್ರ ಬರೆದಿದ್ದು, ಪ್ರಮಾಣಪತ್ರದ ನೈಜತೆ ಪರಿಶೀಲನೆ ನಡೆಯುತ್ತಿದೆ. ಅದರಲ್ಲಿ ಕೆಲವರ ಪ್ರಮಾಣಪತ್ರಗಳು ನಕಲಿ ಎಂಬುದು ಸಾಬೀತಾಗಿದ್ದು, ಅಂಥವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ.

'ನಕಲಿ ಪದವಿ ಪಡೆದ 40 ಸಿಬ್ಬಂದಿ ಕಾನೂನು ಕುಣಿಕೆಯಲ್ಲಿ ಸಿಲುಕಿ ಹಾಕಿಕೊಳ್ಳುವ ಭಯದಿಂದ ಮುಂಬಡ್ತಿ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿರಲಿಲ್ಲ. ಅವರೆಲ್ಲರೂ ಈಗ ಸಚಿವರ ಮೇಲೆ ಒತ್ತಡ ತಂದು ಪದವಿ ಅರ್ಹತೆ ತೆಗೆಸುವ ಪ್ರಯತ್ನಕ್ಕೆ ಮುಂದಾಗಿದ್ದಾರೆ. ಇದರಿಂದ ಅರ್ಹ ವಿಶ್ವವಿದ್ಯಾಲಯಗಳಲ್ಲಿ ಪದವಿ ಪಡೆದಿರುವ 150 ಸಾಂಖ್ಯಿಕ ಸಹಾಯಕ ಅಧಿಕಾರಿಗಳಿಗೆ ಮೋಸವಾಗಲಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಸಿಬ್ಬಂದಿಯೊಬ್ಬರು ಹೇಳಿದರು.

ನೇಮೋತ್ಸವ ಮಂಗಳೂರಿನ ಕಂಕನಾಡಿ ಶ್ರೀ ಬ್ರಹ್ಮ ಬೈದರ್ಕಳ ಗರಡಿ ಕ್ಷೇತ್ರದ ಜಾತ್ರಾ ಮಹೋತ್ಸವ ಪ್ರಯುಕ್ತ ನೇಮೋತ್ಸವ ಭಾನುವಾರ ನಡೆಯಿತು ಪ್ರಜಾವಾಣಿ ಚಿತ್ರ /ಫಕ್ರುದ್ದೀನ್ ಎಚ್

ಕೆಪಿಎಸ್‌ಸಿ: ಕಡಿಮೆ ಅಭ್ಯರ್ಥಿಗಳಿದ್ದರೆ ಇನ್ನು 'ಸಿಬಿಆರ್‌ಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವುದೇ ವೃಂದದ ಹುದ್ದೆಗಳಿಗೆ 20 ಸಾವಿರಕ್ಕಿಂತಲೂ ಕಡಿಮೆ ಅರ್ಜಿಗಳು ಸಲ್ಲಿಕೆಯಾದರೆ ಅಭ್ಯರ್ಥಿಗಳ ಆಯ್ಕೆಗೆ ಇನ್ನು ಮುಂದೆ 'ಕಂಪ್ಯೂಟರ್ ಆಧಾರಿತ ಲಿಖಿತ ಪರೀಕ್ಷೆ' (ಸಿಬಿಆರ್‌ಟಿ) ನಡೆಸಲು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಿರ್ಧರಿಸಿದೆ.

'ಸಿಬಿಆರ್‌ಟಿ ಮಾದರಿಯಲ್ಲಿ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಸಬೇಕೆಂಬ ಉದ್ದೇಶದಿಂದ ಜ.7 ರಂದು ಸಿಬಿಆರ್‌ಟಿ ಅಣಕು ಪರೀಕ್ಷೆ ನಡೆಸಲಾಗಿತ್ತು. ಪ್ರಾಯೋಗಿಕವಾಗಿ ನಡೆಸಿದ ಈ ಪರೀಕ್ಷೆ ಯಶಸ್ವಿಯಾಗಿದೆ. ಹೀಗಾಗಿ, ಈ ಮಾದರಿಯನ್ನು ಅಳವಡಿಸಿಕೊಳ್ಳಲು ತೀರ್ಮಾನಿಸಲಾಗಿದೆ' ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ವಿಕಾಸ್ ಕಿಶೋರ್ ಸುರಳ್ಕರ್ ತಿಳಿಸಿದರು.

ವೃಂದದ ನಿಯಮ ಪ್ರವರ್ಗಕ್ಕೆ ಅನ್ವಯಿಸಿದ್ದು ತಪ್ಪು: ಆಕ್ಷೇಪ

ಬೆಂಗಳೂರು: 'ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ವೃಂದದಲ್ಲಿ ಒಂದೇ ಹುದ್ದೆ ಇರುವಾಗ ಪಾಲಿಸಬೇಕಾದ ನಿಯಮವನ್ನು, ಪ್ರವರ್ಗಗಳಲ್ಲಿ ಒಂದೇ ಹುದ್ದೆ ಇರುವ ಕಡೆ ಅನ್ವಯಿಸಲಾಗಿದೆ. ಅಲ್ಲದೆ, ಒಂದು ಹುದ್ದೆ ಹಂಚಿಕೆ ಕುರಿತ ಶೇ 50 ಮಹಿಳಾ ಮೀಸಲಾತಿ ಪ್ರಕರಣ ಹೈಕೋರ್ಟ್‌ನಲ್ಲಿ ಇತ್ಯರ್ಥಕ್ಕೆ ಬಾಕಿ ಇರುವಾಗಲೇ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಶಿಕ್ಷಣ ಇಲಾಖೆ ಪ್ರಕಟಿಸಿದೆ' ಎಂದು ಕೆಲವು ಮಹಿಳಾ ಅಭ್ಯರ್ಥಿಗಳು ಆರೋಪಿಸಿದ್ದಾರೆ.

1995ರ ನ. 16 ರ ನೇಮಕಾತಿ ನಿಯಮಗಳ ಪ್ರಕಾರ, ಒಂದು ವೃಂದದಲ್ಲಿ ಒಂದು ಹುದ್ದೆ ಮಾತ್ರ ಇದ್ದರೆ ಆಗ ಮೀಸಲಾತಿ ಅನ್ವಯಿಸುವಂತಿಲ್ಲ. ಪ್ರವರ್ಗಗಳಲ್ಲಿ ಒಂದು ಹುದ್ದೆ ಇದ್ದಾಗ ವೃಂದದಲ್ಲಿ ಇರುವ ನಿಯಮ ಅನ್ವಯಿಸುವುದಿಲ್ಲ. 2002ರ ನ. 22 ರ ಆದೇಶದ ಪ್ರಕಾರ ಮಹಿಳೆಯರಿಗೆ ಮೀಸಲಿರಿಸಿದ ಹುದ್ದೆಗೆ ಮಹಿಳಾ ಅಭ್ಯರ್ಥಿಗಳು ಲಭ್ಯ ಇಲ್ಲದಿದ್ದರೆ ಆಯಾ ವರ್ಗಕ್ಕೆ ಸೇರಿದ ಪುರುಷ ಅಭ್ಯರ್ಥಿಗಳಿಂದ ಆ ಹುದ್ದೆಯನ್ನು ಭರ್ತಿ ಮಾಡಬಹುದು.

'2015ರಲ್ಲಿ ಪದವೀಧರ ಶಿಕ್ಷಕರ ಹುದ್ದೆಗೆ ಶಿಕ್ಷಣ ಇಲಾಖೆ ಅರ್ಜಿ ಆಹ್ವಾನಿಸಿತ್ತು. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಶೇ 50 ಮಹಿಳಾ ಮೀಸಲಾತಿಯಂತೆ ಸಮಾಜ ವಿಜ್ಞಾನ ವಿಷಯದಲ್ಲಿ ಹುದ್ದೆ ಹಂಚಿಕೆ ಮಾಡಲಾಗಿತ್ತು. ಅದರಂತೆ, ಮೆರಿಟ್ ಇದ್ದ ಪುರುಷ ಅಭ್ಯರ್ಥಿ ತಾರಾನಾಥ ಬದಲಿಗೆ ಕೃಪಾ ಎಂಬ ಮಹಿಳೆಗೆ ಹುದ್ದೆ ನೀಡಲಾಗಿತ್ತು. ಅದನ್ನು ಪ್ರಶ್ನಿಸಿ ತಾರಾನಾಥ ಅವರು ಕೆಎಟಿ ಮೆಟ್ಟಲೇರಿದ್ದರು. ಸಂವಿಧಾನದ ಸೆಕ್ಷನ್ 14, 15 ರ ಅನ್ವಯ ಪುರುಷ ಅಭ್ಯರ್ಥಿ ಪರ ಮೆರಿಟ್ ಆಧಾರದಲ್ಲಿ ಹುದ್ದೆ ನೀಡಬೇಕು ಎಂದು 2020ರ ಮಾರ್ಚ್ 12ರಂದು ಕೆಎಟಿ ಆದೇಶ ನೀಡಿತ್ತು. ಹೀಗಾಗಿ, ಹುದ್ದೆ ಸೃಜಿಸಿ ತಾರಾನಾಥ ಅವರಿಗೂ ನೇಮಕಾತಿ ಆದೇಶ ನೀಡಲಾಗಿತ್ತು. ಇದನ್ನು ಪ್ರಶ್ನಿಸಿ ಶಿಕ್ಷಣ ಇಲಾಖೆ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ. ಈ ಪ್ರಕರಣ ಇನ್ನೂ ಇತ್ಯರ್ಥ ಆಗಿಲ್ಲ.

ಈ ಮಧ್ಯೆ, ಮಹಿಳಾ ಮೀಸಲಾತಿ ಪಾಲಿಸದೆ, ಕೆಎಟಿ ನೀಡಿದ್ದ ಆದೇಶದಂತೆ ಪದವೀಧರ ಶಿಕ್ಷಕರ ನೇಮಕಾತಿಯಲ್ಲಿ ಒಂದು ಹುದ್ದೆ ಇರುವ ಕಡೆ ಮೆರಿಟ್ ಇರುವವರಿಗೆ ನೇಮಕಾತಿ ನೀಡಲಾಗಿದೆ' ಎಂದು ರಾಮನಗರ ಜಿಲ್ಲೆಯ ಜೀವವಿಜ್ಞಾನ ಶಿಕ್ಷಕ ಹುದ್ದೆ ಆಕಾಂಕ್ಷಿಗಳಾದ ಪವಿತ್ರಾ, ಉಷಾ, ಸಮಾಜ ವಿಜ್ಞಾನ ಶಿಕ್ಷಕ ಹುದ್ದೆ ಆಕಾಂಕ್ಷಿ ಸ್ವಪ್ನಾ ದೂರಿದ್ದಾರೆ. ಇಲಾಖೆ ಮಾಡಿದ ತಪ್ಪಿನಿಂದಾಗಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹಲವು ಮಹಿಳಾ ಅಭ್ಯರ್ಥಿಗಳು ಹುದ್ದೆ ವಂಚಿತರಾಗಿದ್ದಾರೆ ಎಂದೂ ಅವರು ಆರೋಪಿಸಿದ್ದಾರೆ.ಈ ಬಗ್ಗೆ ಪ್ರತಿಕ್ರಿಯೆಗೆ ಶಿಕ್ಷಣ ಇಲಾಖೆಯ ಆಯುಕ್ತ ಆರ್. ವಿಶಾಲ್ ಅವರಿಗೆ ಕರೆ ಮಾಡಿದರೂ ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

ಸಂಕ್ಷಿಪ್ತ ಸುದ್ದಿ

ಬ್ರಿಟನ್‌ನಲ್ಲಿ ಹಣದುಬ್ಬರ ಹೆಚ್ಚಳ: ಭಾರತೀಯರ ವಿದೇಶಿ ವ್ಯಾಸಂಗ ಕಠಿಣ

ನವದೆಹಲಿ (ಪಿಟಿಐ): ಬ್ರಿಟನ್‌ನ ವಿದ್ಯಾರ್ಥಿ ವೀಸಾ ಪಡೆದುಕೊಂಡಿರುವ ಭಾರತೀಯರಿಗೆ ಈಗ ಸಂಕಟ ಎದುರಾಗಿದೆ. ಆ ದೇಶದಲ್ಲಿ ಹಣದುಬ್ಬರ ಏರಿಕೆಯಾಗಿರುವುದರಿಂದ ವ್ಯಾಸಂಗಕ್ಕೆಂದು ಅಲ್ಲಿಗೆ ತೆರಳಿರುವವರು ತಮ್ಮ ಕಾಲೇಜು ಅಥವಾ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ನೆಲೆ ಕಂಡುಕೊಳ್ಳಲು ಪರದಾಡುವಂತಾಗಿದೆ.

ಕೈಗೆಟಕುವ ದರದ ವಸತಿ ಸೌಕರ್ಯ ಹುಡುಕುವುದು ಸವಾಲೆನಿಸಿದೆ. ಆಹಾರ ವಸ್ತುಗಳ ಹಣದುಬ್ಬರವು ನಿರಂತರವಾಗಿ ಏರುತ್ತಿರುವುದರಿಂದ ಅವರ ದೈನಂದಿನ ಖರ್ಚುಗಳೂ ಹೆಚ್ಚುತ್ತಿದೆ. ಇದು ಅವರಿಗೆ ತಲೆನೋವಾಗಿ ಪರಿಣಮಿಸಿದೆ.

'ಹೋದ ವರ್ಷದ ಅಕ್ಟೋಬರ್ 1 ರಿಂದ 21ರ ಅವಧಿಯಲ್ಲಿ ಸುಮಾರು ₹1 ಲಕ್ಷದಷ್ಟು ಹಣ ಖರ್ಚಾಗಿದೆ. ಹೀಗಾಗಿ ರಿಯಾಯಿತಿ ದರದ ವಸತಿಗಾಗಿ ಪ್ರತಿದಿನವೂ ಹುಡುಕಾಟ ನಡೆಸುತ್ತಿದ್ದೇನೆ. ವಾರಾಂತ್ಯದ ದಿನಗಳನ್ನೂ ಈ ಕೆಲಸಕ್ಕಾಗಿ ಮೀಸಲಿಟ್ಟಿದ್ದೇನೆ' ಎಂದು ಲಂಡನ್‌ನ ಗೋಲ್ಡ್‌ಸ್ಮಿತ್ಸ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಚಾಯಾನಿಕಾ ದುಬೆ ಎಂಬುವರು ಹೇಳಿದ್ದಾರೆ.

2022ರ ಸೆಪ್ಟೆಂಬರ್ ಅಂತ್ಯಕ್ಕೆ ಭಾರತದ ಒಟ್ಟು 1.27 ಲಕ್ಷ ಮಂದಿಗೆ ಬ್ರಿಟನ್‌ನ ವಿದ್ಯಾರ್ಥಿ ವೀಸಾ ಲಭಿಸಿದೆ.

'ವಿದೇಶದಲ್ಲಿ ವ್ಯಾಸಂಗ: ಪದವಿ ಪಡೆಯುವುದಕ್ಕಷ್ಟೇ ಸೀಮಿತವಲ್ಲ'

ನವದೆಹಲಿ (ಪಿಟಿಐ): 'ವಿದೇಶದ ಹಲವು ಕಾಲೇಜು ಹಾಗೂ ವಿಶ್ವವಿದ್ಯಾಲಯಗಳು ಭಾರತದಲ್ಲೇ ಕ್ಯಾಂಪಸ್ ತೆರೆಯಲು ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಅನುವು ಮಾಡಿಕೊಟ್ಟಿದೆ. ಹೀಗಿದ್ದರೂ ಭಾರತದ ಅನೇಕರು ವಿವಿಧ ದೇಶಗಳಿಗೆ ತೆರಳಿ ವ್ಯಾಸಂಗ ಮಾಡುವುದಕ್ಕೆ ಹಂಬಲಿಸುತ್ತಾರೆ. ಅವರ ಈ ನಿರ್ಧಾರದ ಹಿಂದಿನ ಉದ್ದೇಶವು ಪದವಿ ಪಡೆಯುದಷ್ಟೇ ಆಗಿರುವುದಿಲ್ಲ' ವಿಷಯ ತಜ್ಞರು ಹಾಗೂ ವಿದ್ಯಾರ್ಥಿಗಳು ಹೇಳಿದ್ದಾರೆ.

'ವಿದೇಶಗಳಲ್ಲಿ ವ್ಯಾಸಂಗ ಮಾಡಿದರೆ ಅಲ್ಲೇ ಉದ್ಯೋಗ ಗಿಟ್ಟಿಸಿಕೊಳ್ಳಬಹುದು. ಆ ಮೂಲಕ ಬದುಕನ್ನೂ ಕಟ್ಟಿಕೊಳ್ಳಬಹುದು. ಈ ಕಾರಣಕ್ಕಾಗಿಯೇ ಹಲವರು ವಿದೇಶ ವ್ಯಾಸಂಗಕ್ಕೆ ಒತ್ತು ನೀಡುತ್ತಾರೆ' ಎಂದು ಪದವಿ ವ್ಯಾಸಂಗಕ್ಕಾಗಿ ಅಮೆರಿಕಕ್ಕೆ ತೆರಳಿರುವ ರಿಪುಣ್ ದಾಸ್ ಎಂಬುವರು ಹೇಳಿದ್ದಾರೆ.

ಅಹಮದಾಬಾದ್‌ನಲ್ಲಿ ಭಾನುವಾರ ಅಂತರರಾಷ್ಟ್ರೀಯ ಗಾಳಿಪಟ ಉತ್ಸವ ನಡೆಯಿತು. – ಪಿಟಿಐ ಚಿತ್ರ

ಅಂತರರಾಷ್ಟ್ರೀಯ ಗಾಳಿಪಟ ಉತ್ಸವಕ್ಕೆ ಚಾಲನೆ

ಅಹಮದಾಬಾದ್ (ಪಿಟಿಐ): 2023ನೇ ಸಾಲಿನ 'ಅಂತರರಾಷ್ಟ್ರೀಯ ಗಾಳಿಪಟ ಉತ್ಸವ'ಕ್ಕೆ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಭಾನುವಾರ ಚಾಲನೆ ನೀಡಿದರು.

ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರದಿಂದ ಗಾಳಿಪಟ ಉದ್ಯಮಕ್ಕೆ ರಾಜ್ಯದಲ್ಲಿ ಉತ್ತೇಜನ ದೊರಕಿದೆ. ಸುಮಾರು ಎರಡು ದಶಕಗಳ ಹಿಂದೆ ಇದ್ದ ₹ 8-10 ಕೋಟಿ ಉದ್ಯಮ ಇಂದು ₹ 625 ಕೋಟಿಗೆ ಬೆಳೆದು 1.30 ಲಕ್ಷ ಜನರಿಗೆ ಉದ್ಯೋಗ ನೀಡಿದೆ ಎಂದು ಅವರು ಹೇಳಿದರು.

ಜಿ–20ಯ 'ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ' ಎನ್ನುವ ಧ್ಯೇಯವಾಕ್ಯದಡಿ ಆಸ್ಟ್ರೇಲಿಯಾ, ಕೆನಡಾ, ಫ್ರಾನ್ಸ್ ಸೇರಿದಂತೆ 68 ದೇಶದ 125 ಜನ ಭಾಗವಹಿಸಿದ್ದಾರೆ. ವಿಶೇಷವೆಂದರೆ ದೇಶದ14 ವಿವಿಧ ರಾಜ್ಯಗಳ 65 ಜನ ಮತ್ತು ಗುಜರಾತ್‌ನ ವಿವಿಧ ಜಿಲ್ಲೆಗಳ 660 ಮಂದಿ ಗಾಳಿಪಟ ಹಾರಿಸಲು ಪಾಲ್ಗೊಂಡಿದ್ದಾರೆ. ಈ ಉತ್ಸವ ಜ.14ರಂದು ಮುಕ್ತಾಯಗೊಳ್ಳಲಿದೆ.

ಸರಣಿ ಬಾಂಬ್ ಸ್ಫೋಟ ಬೆದರಿಕೆ; ವ್ಯಕ್ತಿ ಬಂಧನ

ಮುಂಬೈ (ಪಿಟಿಐ): ಪೊಲೀಸರಿಗೆ ಕರೆ ಮಾಡಿ 2 ತಿಂಗಳ ನಂತರ ನಗರದಲ್ಲಿ 1993ರ ರೀತಿಯಲ್ಲಿ ಸರಣಿ ಬಾಂಬ್ ಸ್ಫೋಟಗೊಳ್ಳಲಿದೆ ಎಂದು ಬೆದರಿಕೆ ಹಾಕಿದ್ದ ವ್ಯಕ್ತಿಯನ್ನು ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ದಳ ಭಾನುವಾರ ಬಂಧಿಸಿದೆ.

ಶನಿವಾರ ಸಂಜೆ ವೇಳೆ ಮುಂಬೈ ಪೊಲೀಸ್ ಕಂಟ್ರೋಲ್ ರೂಮ್‌ಗೆ ಕರೆ ಮಾಡಿ ಮಹಿಮ್, ಬೆಂಡಿ ಬಜಾರ್, ಮದನ್‌ಪುರ ಸೇರಿದಂತೆ ಹಲವು ಪ್ರದೇಶಗಳಲ್ಲಿ ಬಾಂಬ್ ಸ್ಫೋಟ ಸಂಭವಿಸಲಿದೆ, ಕೋಮು ಗಲಭೆ ನಡೆಸಲು ವಿವಿಧ ರಾಜ್ಯಗಳಿಂದ ಜನರನ್ನು ಕರೆಸಲಾಗಿದೆ ಎಂದು ಬೆದರಿಸಿದ್ದ. ಸದ್ಯ ಆತನನ್ನು ಮಲಾಡ್ ಪ್ರದೇಶದಲ್ಲಿ ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತ ಆರೋಪಿಯ ವಿರುದ್ಧ ಈಗಾಗಲೇ ಭೂ ಕಬಳಿಕೆ, ದರೋಡೆ ಸೇರಿ 12 ಪ್ರಕರಣಗಳಿವೆ. ಬಾಂಬ್ ಬೆದರಿಕೆ ಕುರಿತು ಎಫ್‌ಐಆರ್ ದಾಖಲಿಸಲಾಗಿದ್ದು, ತನಿಖೆ ನಡೆಸಲಾಗುತ್ತಿದೆ ಎಂದರು.

1993ರ ಮಾರ್ಚ್12ರಂದು ಮುಂಬೈನಲ್ಲಿ ನಡೆದ ಸರಣಿ ಬಾಂಬ್ ಸ್ಫೋಟದಲ್ಲಿ 250 ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಸಾವಿರಕ್ಕೂ ಹೆಚ್ಚು ಜನ ಗಾಯಗೊಂಡಿದ್ದರು.

ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ

‘ದಲಿತ ಸಿ.ಎಂ ಕೇಳುವ ದಿನ ದೂರವಿಲ್ಲ’

ಪ್ರಜಾವಾಣಿ ವಾರ್ತೆ

ಮೈಸೂರು: ‘ದಲಿತ ಸಮುದಾಯ ಪಕ್ಷದ ಕಡೆ ಬರುತ್ತಿದೆ. ಹೀಗಾಗಿ ಮುಖ್ಯಮಂತ್ರಿ ಸ್ಥಾನ ಕೇಳುವ ದಿನಗಳು ದೂರವಿಲ್ಲ’ ಎಂದು ಬಿಜೆಪಿ ಪರಿಶಿಷ್ಟ ಜಾತಿ ಮೋರ್ಚಾ ರಾಜ್ಯ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಅವರು ಹೇಳಿದರು.

ಇಲ್ಲಿ ಭಾನುವಾರ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸಮಾರೋಪದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿ 2ನೇ ಬಾರಿ ಅಧಿಕಾರಕ್ಕೆ ಬಂದಾಗ ಗೋವಿಂದ ಕಾರಜೋಳ ಅವರನ್ನು ಉಪ ಮುಖ್ಯಮಂತ್ರಿ ಮಾಡಿತ್ತು. ಮುಂದೆ ಸಮಾಜಕ್ಕೆ ಮುಖ್ಯಮಂತ್ರಿ ಅವಕಾಶ ಕೇಳುತ್ತೇವೆ. ಸಿಗುವ ಭರವಸೆಯೂ ಇದೆ’ ಎಂದರು.

ಮುಖ್ಯಾಂಶಗಳು

- ಸರ್ಕಾರದಿಂದ ಮೀಸಲಾತಿ ಪ್ರಮಾಣ ಹೆಚ್ಚಳ
- ದಲಿತರ ಕೇರಿಗಳಿಗೆ ಹೋಗಿ ಸಮಸ್ಯೆ ಆಲಿಸಿ

‘ಈಗಿನ ರಾಜ್ಯ ಸರ್ಕಾರವು ಪರಿಶಿಷ್ಟರಿಗೆ ಮೀಸಲಾತಿ ಪ್ರಮಾಣ ಹೆಚ್ಚಿಸಿದೆ. 100 ಪರಿಶಿಷ್ಟ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುತ್ತಿದೆ. ರಾಜ್ಯದ 7 ಜಿಲ್ಲೆಗಳ 10 ಸ್ಥಳಗಳಲ್ಲಿ ಅಂಬೇಡ್ಕರ್ ಪಾದಸ್ಪರ್ಶಿ ಸ್ಮಾರಕವನ್ನು ಸ್ಥಾಪಿಸಲಾಗುತ್ತಿದೆ’ ಎಂದರು.

ಪರಿಶಿಷ್ಟರ ಪರ: ಸಮಾರೋಪದಲ್ಲಿ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ‘ಬಿಜೆಪಿಯಲ್ಲಿ ಪರಿವಾರವಾದದಿಂದ ರಾಜಕಾರಣಕ್ಕೆ ಯಾರೂ ಬಂದಿಲ್ಲ, ಪರಿಶ್ರಮದಿಂದ ಬಂದಿದ್ದಾರೆ. ಕಾಂಗ್ರೆಸ್‌ಗೆ ಡಾ.ಬಿ.ಆರ್.ಅಂಬೇಡ್ಕರ್ ಶಾಪವಿದೆ. ನರೇಂದ್ರ ಮೋದಿ ಸರ್ಕಾರ ಪಂಚತೀರ್ಥ ಯೋಜನೆ ಮೂಲಕ ಅಂಬೇಡ್ಕರ್‌ಗೆ ಗೌರವ ನೀಡಿದೆ’ ಎಂದು ಹೇಳಿದರು.

ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಲಾಲ್ ಸಿಂಗ್ ಆರ್ಯ ಮಾತನಾಡಿ, ‘ಭಾರತ್ ಜೋಡೊ ಯಾತ್ರೆ ಪಾಕಿಸ್ತಾನ ಪರ ಘೋಷಣೆ ಕೂಗಿದ ಕನ್ಹಯ್ಯ ಕುಮಾರ್ ಅಂಥ ತುಕುಡೆ ತುಕುಡೆ ಗ್ಯಾಂಗ್ ಜೊತೆ ಸಾಗಿದೆ. ಮಲ್ಲಿಕಾರ್ಜುನ ಖರ್ಗೆ ಕಾಂಗ್ರೆಸ್‌ನ ಪವರ್‌ಲೆಸ್ ಅಧ್ಯಕ್ಷ’ ಎಂದು ಟೀಕಿಸಿದರು.

‘ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ಉತ್ತರಪ್ರದೇಶ ಮಾದರಿಯಲ್ಲಿ ದಲಿತರ ಮತಗಳನ್ನು ಸೆಳೆಯಬೇಕು. ದಲಿತರ ಕೇರಿಗಳಿಗೆ ಹೋಗಿ ಸಮಸ್ಯೆ ಆಲಿಸಿ, ಭೋಜನ ಸ್ವೀಕರಿಸಬೇಕು’ ಎಂದು ಮೋರ್ಚಾ ಪದಾಧಿಕಾರಿಗಳಿಗೆ ಸಲಹೆ ನೀಡಿದರು.

ಬಿಜೆಪಿ ಶಾಸಕರಿಂದ ಅರಣ್ಯ ಒತ್ತುವರಿ ಪ್ರಕರಣ: ಸರ್ಕಾರಕ್ಕೆ ‘ಸುಪ್ರೀಂ’ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನಲ್ಲಿ ಬಿಜೆಪಿ ಶಾಸಕ ಕೆ.ಜಿ. ಬೋಪಯ್ಯ ಮತ್ತಿತರರ ವಿರುದ್ಧದ ಅನಧಿಕೃತ ಸಾಗುವಳಿ ಮತ್ತು ಅರಣ್ಯ ಭೂಮಿ ಒತ್ತುವರಿ ಪ್ರಕರಣ ಸಂಬಂಧ ಸುಪ್ರೀಂ ಕೋರ್ಟ್, ಕರ್ನಾಟಕ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ಶಾಸಕರು ಸೇರಿ ಒತ್ತುವರಿದಾರರ-ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿದ್ದ ಮನವಿಯನ್ನು ವಜಾಗೊಳಿಸಿದ್ದ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಎನ್‌ಜಿಒ ‘ಕಾವೇರಿ ಸೇನೆ’ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಅರ್ಜಿದಾರರ ಪರ ವಕೀಲ ಸಂಜಯ್ ಎಂ.ನುಲಿ ಅವರ ವಾದ ಆಲಿಸಿದ ನ್ಯಾಯಮೂರ್ತಿ ಕೆ.ಎಂ. ಜೋಸೆಫ್ ಮತ್ತು ಬಿ.ವಿ. ನಾಗರತ್ನ ಅವರಿದ್ದ ಪೀಠವು, ಪ್ರತಿಕ್ರಿಯೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

‘ಮಡಿಕೇರಿ ತಾಲ್ಲೂಕಿನ ಕರ್ಣಂಗೇರಿ ಗ್ರಾಮದ ಮೀಸಲು ಅರಣ್ಯ ರಕ್ಷಿಸುವುದು ಅಧಿಕಾರಿಗಳ ಕರ್ತವ್ಯ. ಆದರೆ, ಕಂದಾಯ ಇಲಾಖೆಯು ಅರಣ್ಯ ಪ್ರದೇಶವನ್ನು ಅತಿಕ್ರಮಣ ಮತ್ತು ಅಕ್ರಮ ಸಾಗುವಳಿ ಮಾಡಿರುವವರಿಗೆ ಸಾಗುವಳಿ ಚೀಟಿ, ಆರ್‌ಟಿಸಿ ನೀಡಿ ಅರಣ್ಯ ಛಿದ್ರಗೊಳಿಸಿದೆ. ಗ್ರಾಮದ ಸರ್ವೆ ನಂಬರ್ 289ರ ಮೀಸಲು ಅರಣ್ಯ ಅಪಾಯದಲ್ಲಿದೆ. ಹೈಕೋರ್ಟ್ ತೀರ್ಪು ಕಾರ್ಯಗತಕ್ಕೆ ಅನುಮತಿಸಿದರೆ ಮೀಸಲು ಅರಣ್ಯದ ಅಸ್ತಿತ್ವಕ್ಕೆ ಧಕ್ಕೆಯಾಗಲಿದೆ. ಜೀವ ವೈವಿಧ್ಯಕ್ಕೂ ದೊಡ್ಡ ಹಾನಿ ಉಂಟಾಗಲಿದೆ’ ಎಂದು ಅರ್ಜಿಯಲ್ಲಿ ವಾದಿಸಲಾಗಿದೆ.

ಬಹು ಮಾಧ್ಯಮ ಪ್ರಜಾವಾಣಿ 75
www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ರಾಜಕಾರಣದಲ್ಲಿ ನಾಯಿ-ನರಿ ಪದ ಬಳಕೆ ಸರಿಯೇ?
ಭಾಗವಹಿಸುವವರು
ಸಂವಾದ

ಅಶ್ವತ್ಥನಾರಾಯಣ ಗೌಡ
ರಾಜ್ಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ, ಬೆಂಗಳೂರು

ಎಲ್. ಗಂಗಾಧರ ಮೂರ್ತಿ
ರಾಜ್ಯ ಪ್ರಧಾನ ಕಾರ್ಯದರ್ಶಿ ಜೆಡಿಎಸ್, ಬೆಂಗಳೂರು

ಪ್ರೀತಿ ನಾಗರಾಜ್
ಪತ್ರಕರ್ತೆ, ಲೇಖಕಿ, ಮೈಸೂರು

ಲಾವಣ್ಯ ಬಲ್ಲಾಳ್
ವಕ್ತಾರೆ, ಕಾಂಗ್ರೆಸ್, ಮಂಗಳೂರು
ಮಧ್ಯಾಹ್ನ 12 ರಿಂದ 1 ರವರೆಗೆ
ಶ್ರೀ ತ್ಯಾಗರಾಜರ ಆರಾಧನೆ, ಸಂಗೀತೋತ್ಸವ
ಪ್ರಸಿದ್ಧ ಕಲಾವಿದರಿಂದ ಸಂಗೀತ ಕಛೇರಿ.
ಸಂಜೆ 4ರಿಂದ ಪ್ರಜಾವಾಣಿ ಫೇಸ್‌ಬುಕ್ ಪುಟದಲ್ಲಿ ನೇರ ಪ್ರಸಾರ
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ಒಳನೋಟ
ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ
https://bit.ly/3vKWdvJ

ಐಕ್ಯತಾ ಸಮಾವೇಶ ವೋಟ್ ಬ್ಯಾಂಕ್ ರಾಜಕಾರಣ: ಬೊಮ್ಮಾಯಿ

ಹಾವೇರಿ: ‘ಮೀಸಲಾತಿ ಹೆಚ್ಚಳ ಮಾಡುವ ಮೂಲಕ ಪರಿಶಿಷ್ಟ ಸಮುದಾಯದವರ ಬೇಡಿಕೆ ಈಡೇರಿಸಿದ್ದೇವೆ. ಅವರನ್ನು ಒಲಿಸಿಕೊಳ್ಳಲು ಕಾಂಗ್ರೆಸ್ ಐಕ್ಯತಾ ಸಮಾವೇಶ ಮಾಡುತ್ತಿದ್ದು, ವೋಟ್ ಬ್ಯಾಂಕ್ ರಾಜಕಾರಣ ಚುನಾವಣೆಯಲ್ಲಿ ನಡೆಯಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಪರಿಶಿಷ್ಟ ಸಮುದಾಯದವರು ಬುದ್ಧಿವಂತರಾಗಿದ್ದಾರೆ. ಯಾರ ಆಡಳಿತದ ಅವಧಿಯಲ್ಲಿ ಎಷ್ಟು ಕೆಲಸವಾಗಿದೆ ಎಂದು ಅವರು ತಿಳಿದಿದ್ದು, ಯಾರಿಗೆ ಮತ ನೀಡಬೇಕೆನ್ನುವುದನ್ನು ತೀರ್ಮಾನಿಸಿದ್ದಾರೆ’ ಎಂದರು.

ಮೀಸಲು ಹೆಚ್ಚಳ: ಸಂವಿಧಾನಬದ್ಧಕ್ಕೆ ಜ.31 ಗಡುವು

ಒಂದನೇ ಪುಟದಿಂದ...

‘ಸಾಮಾಜಿಕ ನ್ಯಾಯ, ಮೀಸಲಾತಿಯ ವಿಚಾರದಲ್ಲಿ ಬಿಜೆಪಿ ಎಂದಿಗೂ ನಂಬಿಕೆ ಹಾಗೂ ಬದ್ಧತೆ ಉಳಿಸಿಕೊಂಡಿಲ್ಲ. ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ಇದು ದಿಟವಾಗುತ್ತದೆ. ಸಂವಿಧಾನವನ್ನು ಮಾನಸಿಕವಾಗಿ ಇಂದಿಗೂ ಒಪ್ಪದಿರುವ ಸಂಘ ಪರಿವಾರ, ಸಂವಿಧಾನ ಬದಲಾವಣೆಗೆ ಹುನ್ನಾರ ನಡೆಸಿದೆ. ಸಂವಿಧಾನ ಬದಲಾಯಿಸುವುದಾಗಿ ಹೇಳಿದ ಸಂಸದ ಅನಂತಕುಮಾರ್ ಹೆಗಡೆ ಅವರಿಗೆ ಒಂದು ನೋಟಿಸ್ ಸಹ ನೀಡಲಿಲ್ಲ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

‘ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮಾತ್ರ ಮೀಸಲಾತಿ ನೀಡಲು ಸಂವಿಧಾನದಲ್ಲಿ ಅವಕಾಶವಿದೆ. ಸಾಮಾನ್ಯ ವರ್ಗದಲ್ಲಿರುವ ಮೇಲ್ಜಾತಿಯ ಬಡವರಿಗೆ ಶೇ 10ರಷ್ಟು ಮೀಸಲಾತಿ ನೀಡಲು ಸಂವಿಧಾನದಲ್ಲಿ ಅವಕಾಶವಿಲ್ಲ. ಇಡಬ್ಲ್ಯುಎಸ್ ಮೀಸಲಾತಿ ಕಾಯ್ದೆಯನ್ನು ಕೇಂದ್ರ ಸರ್ಕಾರ ತರಾತುರಿಯಲ್ಲಿ ಅನುಮೋದಿಸಿ ಬಹುಪಾಲು ಜನರನ್ನು ವಂಚಿಸಿದೆ’ ಎಂದು ಆರೋಪಿಸಿದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಮಯೂರ ಜಯಕುಮಾರ್, ಕೆಪಿಸಿಸಿ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಡಾ.ಜಿ. ಪರಮೇಶ್ವರ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಮುಖಂಡರಾದ ಕೆ.ಎಚ್. ಮುನಿಯಪ್ಪ, ಎಚ್.ಕೆ. ಪಾಟೀಲ, ಆರ್.ವಿ. ದೇಶಪಾಂಡೆ, ಸತೀಶ್ ಜಾರಕಿಹೊಳಿ, ಎಚ್. ಆಂಜನೇಯ, ಡಾ.ಎಚ್.ಸಿ. ಮಹಾದೇವಪ್ಪ, ಸಲೀಂ ಅಹಮದ್, ಈಶ್ವರ ಖಂಡ್ರೆ ಇದ್ದರು.

ಚಿತ್ರದುರ್ಗದಲ್ಲಿ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪರಿಶಿಷ್ಟ ಜಾತಿ ಮತ್ತು ಪಂಗಡದ ಐಕ್ಯತಾ ಸಮಾವೇಶವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಡೋಲು ಬಾರಿಸುವ ಮೂಲಕ ಉದ್ಘಾಟಿಸಿದರು. ಮುಖಂಡರಾದ ವಿ.ಎಸ್.ಉಗ್ರಪ್ಪ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಡಾ.ಜಿ.ಪರಮೇಶ್ವರ್, ರಣದೀಪ್ ಸಿಂಗ್ ಸುರ್ಜೇವಾಲಾ, ಕೆ.ಎಚ್.ಮುನಿಯಪ್ಪ, ಎಚ್.ಆಂಜನೇಯ, ಎಚ್.ಕೆ.ಪಾಟೀಲ್ ಇದ್ದಾರೆ

ಮೋದಿ ದೇವರಾದರೆ ಪ್ರಜಾಪ್ರಭುತ್ವಕ್ಕೆ ಅಪಾಯ: ಖರ್ಗೆ

ಚಿತ್ರದುರ್ಗ: ಪ್ರಧಾನಿ ನರೇಂದ್ರ ಮೋದಿ ಅವರನ್ನು ದೇವರು ಎಂಬಂತೆ ಬಿಂಬಿಸಲಾಗುತ್ತಿದೆ. ವ್ಯಕ್ತಿಯೊಬ್ಬ ದೇವರಂತೆ ಬಿಂಬಿತಗೊಂಡರೆ ಪ್ರಜಾಪ್ರಭುತ್ವ ಅಪಾಯಕ್ಕೆ ಸಿಲುಕುತ್ತದೆ. ಪ್ರಭುತ್ವ ನಿರಂಕುಶವಾಗುವ ಸಾಧ್ಯತೆ ಇರುತ್ತದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಳವಳ ವ್ಯಕ್ತಪಡಿಸಿದರು.

ಐಕ್ಯತಾ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ‘ವ್ಯಕ್ತಿಯೊಬ್ಬರನ್ನು ದೇವರು ಎಂಬಂತೆ ರೂಪಿಸಿದರೆ ಸರ್ವಾಧಿಕಾರ ಸ್ಥಾಪಿತವಾಗುತ್ತದೆ. ಇಂತಹ ಅಪಾಯದ ವಿರುದ್ಧ ಜನರು ಜಾಗೃತಗೊಳ್ಳಬೇಕು’ ಎಂದರು.

‘ಗುಜರಾತ್ ಪುತ್ರ ಎಂಬುದಾಗಿ ಬಿಂಬಿಸಿಕೊಂಡ ಮೋದಿ ಅವರನ್ನು ಅಲ್ಲಿಯ ಜನರು ಚುನಾವಣೆಯಲ್ಲಿ ಕೈಹಿಡಿದರು. ನಾನು ಕನ್ನಡಿಗನಾಗಿದ್ದು ಕಾಂಗ್ರೆಸ್ ಚುಕ್ಕಾಣಿ ಹಿಡಿದಿದ್ದೇನೆ. ಕರ್ನಾಟಕದ ಜನರು ರಾಜ್ಯದ ಪುತ್ರನೆಂಬಂತೆ ಪರಿಗಣಿಸಿ ಕಾಂಗ್ರೆಸ್ ಅಧಿಕಾರಕ್ಕೆ ತರಬೇಕು. ಬೆಲೆ ಏರಿಕೆ ಅಂತ್ಯಗೊಳಿಸಲು, ಪ್ರಜಾಪ್ರಭುತ್ವ ಮತ್ತು ಸಂವಿಧಾನ ಉಳಿಯಲು ಕಾಂಗ್ರೆಸ್ ಅಧಿಕಾರಕ್ಕೆ ಬರುವ ಅಗತ್ಯವಿದೆ’ ಎಂದರು.

‘ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಹಿಮಾಚಲಪ್ರದೇಶದಲ್ಲಿ ಬಿಜೆಪಿ ಸೋತಿದೆ. ಅಲ್ಲಿ ಸಲ್ಲದ ನಡ್ಡಾ ನಮ್ಮಲ್ಲಿ ತಿರುಗಾಡುತ್ತಿದ್ದಾರೆ. ಇಲ್ಲಿ ಏನು ಸಾಧಿಸುತ್ತಾರೆ ಎಂಬುದನ್ನು ನೋಡಬೇಕಿದೆ’ ಎಂದು ಕುಟುಕಿದರು.

‘ದೇಶದಲ್ಲಿ 30 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಇವೆ. ನರೇಂದ್ರ ಮೋದಿ ಅವರು ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುತ್ತಿಲ್ಲ. ಈ ಹುದ್ದೆಗೆ ನೇಮಕಾತಿ ನಡೆದರೆ ಕನಿಷ್ಠ 15 ಲಕ್ಷ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ ಯುವಕರಿಗೆ ಉದ್ಯೋಗ ಸಿಗುತ್ತದೆ’ ಎಂದರು.

ಪ್ರತ್ಯೇಕ ಮಹಿಳಾ ಪ್ರಣಾಳಿಕೆ

ಮುಂಬರುವ ವಿಧಾನಸಭಾ ಚುನಾವಣೆ ವೇಳೆ ಮಹಿಳೆಯರಿಗಾಗಿ ಪ್ರತ್ಯೇಕ ಪ್ರಣಾಳಿಕೆ ಸಿದ್ಧಪಡಿಸಲು ಪಕ್ಷ ತೀರ್ಮಾನಿಸಿದೆ. ಜಾತಿ, ಧರ್ಮ ಭೇದ ಮರೆತು ಎಲ್ಲ ಮಹಿಳೆಯರು ಜ. 15ರ ಒಳಗೆ ಅಭಿಪ್ರಾಯ ತಿಳಿಸಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕೋರಿದರು.

‘ಪ್ರಣಾಳಿಕೆಯ ಅಂಗವಾಗಿ ಜ. 16ಕ್ಕೆ ಮಹಿಳಾ ಸಮಾವೇಶ ಹಮ್ಮಿಕೊಂಡಿದ್ದೇವೆ. ಪ್ರತಿ ಪಂಚಾಯಿತಿಯಿಂದ ಕನಿಷ್ಠ ಇಬ್ಬರು ಮಹಿಳೆಯರು ಬರಬೇಕು. ಮಹಿಳೆಯರ ನೋವು, ಏಳ್ಗೆ ಕುರಿತು ಚರ್ಚೆ ನಡೆಯಲಿದೆ’ ಎಂದು ಮಾಹಿತಿ ನೀಡಿದರು.

ಸಮಾವೇಶದ ನಿರ್ಣಯಗಳು

- ಎಸ್‌ಸಿಪಿ–ಟಿಎಸ್‌ಪಿ ಯೋಜನೆಯ ಪ್ರಕಾರ ಎಲ್ಲ ಅನುದಾನವನ್ನು ಆ ವರ್ಷವೇ ವ್ಯಯಿಸಲು ಕಟ್ಟುನಿಟ್ಟಿನ ಕಾಯ್ದೆ ಜಾರಿ.
- ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತಂದು ದರಕಾಸ್ತು ಭೂಮಿಯನ್ನು ದಲಿತರಿಗೆ ನೀಡಲು ಬದ್ಧ.
- ವಸತಿ ರಹಿತ ಪರಿಶಿಷ್ಟ ಜಾತಿ ಮತ್ತು ಪಂಗಡದ ಕುಟುಂಬಗಳನ್ನು ಮುಖ್ಯವಾಹಿನಿಗೆ ತರಲು ಮನೆ ನಿರ್ಮಾಣ.
- ಭೂರಹಿತ ಪ್ರತಿ ಕುಟುಂಬಕ್ಕೆ ಎರಡು ಎಕರೆ ಒಣಭೂಮಿ ಹಾಗೂ ಕೊಳವೆಬಾವಿ ಸೌಲಭ್ಯ ಕಲ್ಪಿಸುವುದು.
- ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಟ್ಯಾಕ್ಸಿ, ಗೂಡ್ಸ್ ವಾಹನ ಖರೀದಿಸಲು ಧನಸಹಾಯ ಹಾಗೂ ಸಾಲ ಸೌಲಭ್ಯ.
- ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಸೇರಿ ಎಲ್ಲ ಹುದ್ದೆಗಳ ಭರ್ತಿಗೆ ಕ್ರಮ.
- ಪರಿಶಿಷ್ಟ ಜಾತಿ ಮತ್ತು ಪಂಗಡದ ಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸಲು ಪ್ರೋತ್ಸಾಹಧನ ವಿತರಣೆ. 1ರಿಂದ 5ನೇ ತರಗತಿಯ ಪ್ರತಿ ವಿದ್ಯಾರ್ಥಿಗೆ ₹ 150, 6ನೇ ತರಗತಿಯಿಂದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ₹ 300 ಮಾಸಿಕ ಪ್ರೋತ್ಸಾಹ ಧನ.
- ರಾಜ್ಯದ ಎಲ್ಲ ಎಸ್‌ಸಿ, ಎಸ್‌ಟಿ ಸಮುದಾಯದ ಮಕ್ಕಳಿಗೆ ವಿದ್ಯಾರ್ಥಿ ನಿಲಯ ಸ್ಥಾಪನೆ. ಸ್ಥಗಿತಗೊಂಡ ವಿದ್ಯಾರ್ಥಿ ವೇತನಕ್ಕೆ ಚಾಲನೆ.

ಬಣ ಮುನಿಸಿನ ನಡುವೆ ಕೋಲಾರಕ್ಕೆ ಇಂದು ಸಿದ್ದರಾಮಯ್ಯ

ಕೋಲಾರ: ಕೇಂದ್ರದ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ ಬಣದ ಮುನಿಸಿನ ನಡುವೆಯೇ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಸೋಮವಾರ ನಗರಕ್ಕೆ ಭೇಟಿ ನೀಡುತ್ತಿದ್ದು, ಕೋಲಾರ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರ ಸಭೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಮಧ್ಯಾಹ್ನ 12.15ಕ್ಕೆ ನಗರದ ಮಿನಿ ಕ್ರೀಡಾಂಗಣದಲ್ಲಿ ಸಭೆ ನಡೆಯಲಿದ್ದು, ಈ ಸಂಬಂಧ ಸಿದ್ದರಾಮಯ್ಯ ಅವರ ಪ್ರವಾಸದ ವೇಳಾಪಟ್ಟಿಯನ್ನು ಶಾಸಕ ಕೆ.ಆರ್.ರಮೇಶ್ ಕುಮಾರ್ ಬಣದವರು ಬಿಡುಗಡೆ ಮಾಡಿದ್ದಾರೆ.

> **ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ. ಇನ್ನೂ ನಾಲ್ಕು ತಿಂಗಳಲ್ಲಿ ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿಯಾಗಲಿದ್ದಾರೆ**
> **ಕೆ.ಆರ್.ರಮೇಶ್ ಕುಮಾರ್,** ಶಾಸಕ

> **ಮುನಿಯಪ್ಪ ಕಾಂಗ್ರೆಸ್‌ನ ಹಿರಿಯ ನಾಯಕ. ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ರಮೇಶ್ ಕುಮಾರ್ ಬಣ ಕರೆಸಿಕೊಳ್ಳಬೇಕಿತ್ತು**
> **ಕೆ.ಜಯದೇವ್,**
> ಜಿಲ್ಲಾ ಕಾಂಗ್ರೆಸ್ ಎಸ್‌ಸಿ ಘಟಕದ ಅಧ್ಯಕ್ಷ

‘ಕೋಲಾರ ಕ್ಷೇತ್ರದಲ್ಲೇ ಸ್ಪರ್ಧಿಸುವ ಬಗ್ಗೆ ಸಿದ್ದರಾಮಯ್ಯ ಘೋಷಣೆ ಮಾಡಲಿದ್ದಾರೆ’ ಎಂಬುದಾಗಿ ಈ ಬಣದ ಸದಸ್ಯ, ವಿಧಾನ ಪರಿಷತ್ ಸದಸ್ಯ ಎಂ.ಎಲ್.ಅನಿಲ್ ಕುಮಾರ್ ಸೇರಿದಂತೆ ಹಲವರು ಹೇಳುತ್ತಿದ್ದಾರೆ.

ಆದರೆ, ಈ ಸಭೆಯಲ್ಲಿ ಕೆ.ಎಚ್.ಮುನಿಯಪ್ಪ ಬಣದ ಒಬ್ಬರೂ ಕಾಣಿಸಿಕೊಳ್ಳುತ್ತಿಲ್ಲ. ಈ ವಿಚಾರವಾಗಿ ಮುನಿಯಪ್ಪ ಬಣದ ಮುನಿಸು ಹಾಗೂ ಆಕ್ಷೇಪ ಮುಂದುವರಿದಿದ್ದು, ಸಭೆಯಲ್ಲಿ ಪಾಲ್ಗೊಳ್ಳುವುದು ಅನುಮಾನ.

ಮುನಿಯಪ್ಪ ಹಾಗೂ ಅವರ ಬೆಂಬಲಿಗರು ಬುಧವಾರವಷ್ಟೇ ಬೆಂಗಳೂರಿನಲ್ಲಿ ಸಿದ್ದರಾಮಯ್ಯ ಅವರ ಭೇಟಿ ವೇಳೆ ಈ ವಿಚಾರ ಪ್ರಸ್ತಾಪಿಸಿದ್ದಾರೆ.

‘ಕ್ಷೇತ್ರದಲ್ಲಿ ಸ್ಪರ್ಧೆಗೆ ಆಕ್ಷೇಪಣೆ ಇಲ್ಲ. ಆದರೆ, ಜಿಲ್ಲೆಯಲ್ಲಿ ಪಕ್ಷದೊಳಗಿರುವ ಆಂತರಿಕ ಸಮಸ್ಯೆ ಬಗೆಹರಿಸಿಕೊಂಡು ಬರಬೇಕು. ಆಗ ಮಾತ್ರ ತಮಗೆ ಒಳ್ಳೆಯದಾಗುತ್ತದೆ ಎಂಬುದಾಗಿ ಭೇಟಿ ವೇಳೆ ಸಿದ್ದರಾಮಯ್ಯ ಅವರಿಗೆ ಮುನಿಯಪ್ಪ ಹೇಳಿದರು’ ಎಂದು ಜಿಲ್ಲಾ ಕಾಂಗ್ರೆಸ್ ಎಸ್‌ಟಿ ಘಟಕದ ಅಧ್ಯಕ್ಷ ನಾಗರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

ನವೋದಯ ಪ್ರವೇಶ ಪರೀಕ್ಷೆ
ಅರ್ಜಿ ಸಲ್ಲಿಕೆ ಹೇಗೆ?

ವೆಂಕಟಸುಬ್ಬರಾವ್ ವಿ.

ಕೆಲವು ವಾರಗಳ ಹಿಂದೆ, ಜವಾಹರ ನವೋದಯ ವಿದ್ಯಾಲಯಗಳ ಕಿರು ಪರಿಚಯದ ಜೊತೆಗೆ, ವಿದ್ಯಾಲಯಕ್ಕೆ ಪ್ರವೇಶ ಹೇಗೆ, ಯಾವ-ಯಾವ ಹಂತಗಳಲ್ಲಿ ಪ್ರವೇಶ ದೊರೆಯುತ್ತದೆ ಎಂಬಿತ್ಯಾದಿ ಮಾಹಿತಿಯನ್ನು ಪ್ರಕಟಿಸಲಾಗಿತ್ತು. ಜೊತೆಗೆ, ಮಾದರಿ ಪ್ರಶ್ನೋತ್ತರಗಳನ್ನೂ ನೀಡಲಾಗಿತ್ತು.

ಈಗ ಜವಾಹರ್ ನವೋದಯ ವಿದ್ಯಾಲಯವು 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ. ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಕೆಗೆ ಜನವರಿ 31 ಕೊನೆ ದಿನ. ಇದೇ ವರ್ಷದ ಏಪ್ರಿಲ್ 29ರಂದು ಪ್ರವೇಶ ಪರೀಕ್ಷೆ ನಡೆಯಲಿದೆ.

ಯಾರು ಅರ್ಜಿ ಸಲ್ಲಿಸಬಹುದು?

- ಆಯಾ ಜಿಲ್ಲೆಯಲ್ಲಿರುವ ನವೋದಯ ವಿದ್ಯಾಲಯಕ್ಕೆ ಅರ್ಜಿ ಸಲ್ಲಿಸುವವರು ಅದೇ ಜಿಲ್ಲೆಯ ನಿವಾಸಿಗಳಾಗಿರಬೇಕು.
- ಅರ್ಜಿದಾರರು 2022-23ರಲ್ಲಿ ಸರ್ಕಾರಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಯಲ್ಲಿ 5 ನೆಯ ತರಗತಿಯಲ್ಲಿ ಓದುತ್ತಿರಬೇಕು. ಇದೇ ಶಾಲೆಗಳಲ್ಲಿ 3 ಮತ್ತು 4 ನೆಯ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.
- ಮೇ 1, 2011 ರಿಂದ ಏಪ್ರಿಲ್ 30, 2013ರ ನಡುವೆ ಜನಿಸಿರಬೇಕು.

ಅರ್ಜಿಸಲ್ಲಿಕೆ ವಿಧಾನ

- https://navodaya.gov.in – ಈ ಜಾಲತಾಣಕ್ಕೆ ಭೇಟಿ ನೀಡಿ, ಅಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಅಥವಾ ಎಲ್ಲ ದಾಖಲೆಗಳೊಡನೆ ವಿದ್ಯಾರ್ಥಿಯ ಜೊತೆಯಲ್ಲಿ ಹಾಗೂ ತಮ್ಮ ಮೊಬೈಲ್ ಫೋನ್‌ನೊಂದಿಗೆ(ಒ.ಟಿ.ಪಿ ಪಡೆಯಲು) ಪೋಷಕರು ಹತ್ತಿರದ ನವೋದಯ ವಿದ್ಯಾಲಯ ಸಹಾಯ ಕೇಂದ್ರ ಸಂಪರ್ಕಿಸಿ ಸಹಾಯ ಪಡೆಯಬಹುದು.
- ಅರ್ಜಿ ಸಲ್ಲಿಸುವ ಮೊದಲು ಮೇಲಿನ ಲಿಂಕ್‌ನಲ್ಲಿ ಲಭ್ಯವಿರುವ ಪರಿಚಯ ಪತ್ರ(ಪ್ರಾಸ್‌ಪೆಕ್ಟಸ್)ವನ್ನು ಓದಿ ಅರ್ಥೈಸಿಕೊಳ್ಳಬೇಕು.
- ಅರ್ಜಿ ಸಲ್ಲಿಕೆಗೆ ಮುನ್ನಈ ಕೆಳಗೆ ಕೊಟ್ಟಿರುವ ದಾಖಲೆಗಳನ್ನು ಸಿದ್ಧವಾಗಿಟ್ಟುಕೊಂಡಿರಿ (ಎಲ್ಲ ದಾಖಲೆಗಳೂ ಸಾಫ್ಟ್ ಕಾಪಿಯಲ್ಲಿ 'ಜೆಪಿಜಿ' (ಉದಾ: pic.jpg) ರೂಪದಲ್ಲಿ (10 ರಿಂದ 100 ಕೆಬಿ ಗಾತ್ರ)ರಲಿ.

1. ಶಾಲೆಯ ಮುಖ್ಯ ಶಿಕ್ಷಕರಿಂದ ಪಡೆದ ಸ್ಟಡಿ ಸರ್ಟಿಫಿಕೇಟ್ (ಮಾದರಿಗಾಗಿ https://cbseitms.rcil.gov.in/nvs/assets/PDF/certificate_2023.pdf ಈ ಲಿಂಕ್ ತೆರೆದು ನೋಡಿ)
2. ವಿದ್ಯಾರ್ಥಿಯ ಭಾವಚಿತ್ರ. 3. ಪೋಷಕರ ಸಹಿ 4. ವಿದ್ಯಾರ್ಥಿಯ ಸಹಿ
5. ಆಧಾರ್ ಕಾರ್ಡ್/ವಸತಿ ಪ್ರಮಾಣ ಪತ್ರ)

- ಈ ಮೇಲಿನ ದಾಖಲೆಗಳನ್ನು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಅಪ್‌ಲೋಡ್ ಮಾಡಬೇಕು.
- ಆನ್‌ಲೈನ್‌ನಲ್ಲಿ ಎಚ್ಚರಿಕೆಯಿಂದ ಅರ್ಜಿ ಸಲ್ಲಿಸಿ. ಒಮ್ಮೆ ಅರ್ಜಿ ಸಲ್ಲಿಸಿದ ಮೇಲೆ, ಮಾಹಿತಿಗಳನ್ನು ತಿದ್ದುವ ಅವಕಾಶ ಇರುವುದಿಲ್ಲ (ಕೆಲವು ಭಾಗಗಳನ್ನು ನಿರ್ದಿಷ್ಟ ಅವಧಿಯಲ್ಲಿ ಮಾತ್ರ ತಿದ್ದಲು ಅವಕಾಶವಿರುತ್ತದೆ)
- ಎನ್.ಐ.ಓ.ಎಸ್. ವಿದ್ಯಾರ್ಥಿಗಳು 'ಬಿ' ಸರ್ಟಿಫಿಕೇಟ್ ಹೊಂದಿರಬೇಕು ಮತ್ತು ಯಾವ ಜಿಲ್ಲೆಯ ನವೋದಯ ವಿದ್ಯಾಲಯಕ್ಕೆ ಅರ್ಜಿ ಹಾಕಲು ಬಯಸುತ್ತಾರೋ ಅದೇ ಜಿಲ್ಲೆಯಲ್ಲಿ ವಾಸಿಸುವವರಾಗಿರಬೇಕು.

ಅರ್ಹ ವಿದ್ಯಾರ್ಥಿಗಳು ಪ್ರವೇಶ ಪತ್ರಗಳನ್ನು ನವೋದಯ ವಿದ್ಯಾಲಯದ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರವೇಶ ಪರೀಕ್ಷೆಯ ಫಲಿತಾಂಶವನ್ನು ಜೂನ್ 2023 ರಲ್ಲಿ ಪ್ರಕಟಿಸುವ ಸಾಧ್ಯತೆ ಇರುತ್ತದೆ.

ಗಮನಿಸಿ: ಒಬ್ಬ ವಿದ್ಯಾರ್ಥಿ ಈ ಪ್ರವೇಶ ಪರೀಕ್ಷೆಗೆ ಒಮ್ಮೆ ಮಾತ್ರ ಅರ್ಜಿ ಸಲ್ಲಿಸಬಹುದು. **ಹೆಚ್ಚಿನ ವಿವರಗಳಿಗೆ:** https://navodaya.gov.in/nvs/en/Home1 ಗೆ ಭೇಟಿ ನೀಡಬಹುದು.

(ಲೇಖಕರು: ನಿರ್ದೇಶಕರು, ಸ್ಮಾರ್ಟ್ ಸೆರೆಬ್ರಮ್ ಪ್ರೈ. ಲಿ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ
ಮಾದರಿ ಪ್ರಶ್ನೋತ್ತರ

ಗಣಿತ

13) 1.5 ಮೀಟರ್ ಎತ್ತರವುಳ್ಳ ಹುಡುಗನೊಬ್ಬ 30 ಮೀಟರ್ ಎತ್ತರದ ಕಟ್ಟಡದಿಂದ ಸ್ವಲ್ಪ ದೂರದಲ್ಲಿ ನಿಂತಿದ್ದಾನೆ. ಕಟ್ಟಡದ ಹತ್ತಿರಕ್ಕೆ ನಡೆದು ಹೋಗುವಾಗ ಕಟ್ಟಡದ ಮೇಲ್ತುದಿಗೆ ಅವನ ಕಣ್ಣಿನಿಂದ ಉಂಟಾದ ಉನ್ನತ ಕೋನವು 30^0 ಯಿಂದ 60^0 ಗೆ ಹೆಚ್ಚುತ್ತದೆ ಹಾಗಾದರೆ ಅವನು ಕಟ್ಟಡದ ಕಡೆಗೆ ಎಷ್ಟು ದೂರ ನಡೆದು ಬಂದಿದ್ದಾನೆ?

ಪರಿಹಾರ:– ಹುಡುಗ Y ಬಿಂದುವಿನಲ್ಲಿ ನಿಂತಿದ್ದಾನೆ ಎಂದು ಭಾವಿಸೋಣ. ಅಲ್ಲಿಂದ B/Z ಬಿಂದುವಿನಡೆಗೆ ನಡೆಯುತ್ತಾನೆ ಎಂದು ಭಾವಿಸೋಣ. Y ಬಿಂದುವಿನಲ್ಲಿದ್ದಾಗೆ ಅವನ ಕಣ್ಣಿನಿಂದ ಉಂಟಾದ ಉನ್ನತ ಕೋನವು 30^0 ಹಾಗೂ X ಬಿಂದುವಿನಲ್ಲಿದ್ದಾಗ ಕಣ್ಣಿನಿಂದ ಉಂಟಾದ ಉನ್ನತ ಕೋನವು 60^0 (ದತ್ತ)



ಸಾಧಿಸಿ:– ಹುಡುಗನು ಕಟ್ಟಡದ ಕಡೆಗೆ ನಡೆದು ಬಂದ ದೂರ (Y ನಿಂದ X ತನಕದ ದೂರ)

$XY = CD.$

ಕಟ್ಟಡದ ಎತ್ತರ $= AZ = 30$ m.

$AB = AZ - BZ = 30 - 1.5 = 28.5$

AB ಅಳತೆ $= 28.5$ m

ಲಂಬಕೋನ ತ್ರಿಭುಜ ΔABDದಲ್ಲಿ

$\tan 30° = AB/BD$

$1/\sqrt{3} = 28.5/BD$

$BD = 28.5\sqrt{3}$ m

ಮತ್ತೆ ಪುನಃ

ಲಂಬಕೋನ ತ್ರಿಭುಜ ΔABC,

$\tan 60° = AB/BC$

$\sqrt{3} = 28.5/BC$

$BC = 28.5/\sqrt{3} = 28.5\sqrt{3}/3$

ಆದ್ದರಿಂದ BC ಉದ್ದ$= 28.5\sqrt{3}/3$ m.

$XY = CD = BD - BC = (28.5\sqrt{3}-28.5\sqrt{3}/3)$

$= 28.5\sqrt{3}(1-1/3) = 28.5\sqrt{3} \times 2/3$

$= 57/\sqrt{3} = 19\sqrt{3}$ m.

ಹೀಗಾಗಿ ಹುಡುಗನು ಕಟ್ಟಡದ ಕಡೆಗೆ ನಡೆದು ಬಂದ ದೂರ=

$=19\sqrt{3}$ m.

ಪ್ರಜಾವಾಣಿ ನೋಡಿಯೊ
ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

14) ಒಂದು ಕ್ರಿಕೆಟ್ ತಂಡದ ತರಬೇತುಗಾರ್ತಿ 3 ಬ್ಯಾಟ್‌ಗಳು ಮತ್ತು 6 ಚೆಂಡುಗಳನ್ನು ರೂ 3900ಕ್ಕೆ ಕೊಳ್ಳುತ್ತಾರೆ. ಬಳಿಕ ಅದೇ ರೀತಿಯ ಇನ್ನೊಂದು ಬ್ಯಾಟ್ ಮತ್ತು ಇನ್ನೂ 3 ಚೆಂಡುಗಳನ್ನು ರೂ 1300ಕ್ಕೆ ಕೊಳ್ಳುತ್ತಾರೆ. ಈ ಸಂದರ್ಭವನ್ನು ಬೀಜ ಗಣಿತೀಯವಾಗಿ ಮತ್ತು ರೇಖಾ ಗಣಿತೀಯವಾಗಿ ಪ್ರತಿನಿಧಿಸಿ

ಪರಿಹಾರ:– ಬ್ಯಾಟ್ ನ ಬೆಲೆ x ಆಗಿರಲಿ

ಚೆಂಡಿನ ಬೆಲೆ 'Rs y' ಆಗಿರಲಿ

ಬೀಜ ಗಣಿತೀಯವಾಗಿ

$3x+6y = 3900$

ಮತ್ತು $x+3y = 1300$

For, $3x+6y = 3900$

ಅಥವಾ $x = (3900-6y)/3$

x	300	100	700
y	500	600	300

$x+3y = 1300$ ಗೆ

ಅಥವಾ $x = 1300-3y$

x	400	100	700
y	300	400	200

ರೇಖಾ ಗಣಿತೀಯವಾಗಿ



15) 3 ಸೆಂ.ಮೀ. ತ್ರಿಜ್ಯವುಳ್ಳ ವೃತ್ತಕ್ಕೆ, ವೃತ್ತ ಕೇಂದ್ರದಿಂದ 8 ಸೆಂ.ಮೀ. ದೂರದಲ್ಲಿನ ಬಾಹ್ಯ ಬಿಂದುವಿನಿಂದ ಒಂದು ಜೊತೆ ಸ್ಪರ್ಶಕಗಳನ್ನು ರಚಿಸಿರಿ.

ಉತ್ತರ: $r = 3$ ಸೆಂ.ಮೀ., $d = 8$ ಸೆಂ.ಮೀ.



AP ಮತ್ತು BP ಗಳು ಸ್ಪರ್ಶಕಗಳಾಗಿವೆ.

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪಿಯುಸಿ ಪರೀಕ್ಷೆ ದಿಕ್ಸೂಚಿ
ಮಾದರಿ ಪ್ರಶ್ನೋತ್ತರ

ರಸಾಯನ ವಿಜ್ಞಾನ

54) ಯಾವ ಸಂಯುಕ್ತಗಳಿಗೆ 'ದ್ಯುತಿ ಪಟುತ್ವ ಸಂಯುಕ್ತಗಳು' ಎನ್ನುವರು?

ಉತ್ತರ:- ಕೆಲವು ಸಂಯುಕ್ತಗಳು ಸಮತಲದ್ರುವೀಕೃತ ಬೆಳಕನ್ನು (ಸಾಮಾನ್ಯ ಬೆಳಕನ್ನು ನಿಕೋಲ್ ಅಶ್ರಗದ ಮೂಲಕ ಹಾಯಿಸಿ ಪಡೆದದ್ದು) ತಿರುಗಿಸುವ ಗುಣವನ್ನು ಪಡೆದಿರುತ್ತದೆ. ಅಂತಹ ಸಂಯುಕ್ತಗಳಿಗೆ 'ದ್ಯುತಿ ಪಟುತ್ವ ಸಂಯುಕ್ತಗಳು' ಎನ್ನುವರು. ಈ ಸಮತಲ ದ್ರುವೀಕೃತ ಬೆಳಕು ತಿರುಗಿದ ಕೋನವನ್ನು 'ಪೋಲಾರಿಮೀಟರ್' ಎಂಬ ಸಾಧನದಿಂದ ಅಳೆಯುತ್ತಾರೆ.

55) ಕೈರಲ್ ಮತ್ತು ಕೈರಾಲಿಟಿ ಬಗ್ಗೆ ಬರೆಯಿರಿ

ಉತ್ತರ:- ಹಲವಾರು ವಸ್ತುಗಳ ಬಿಂಬವಿನ್ಯಾಸಗಳನ್ನು ಆದ್ಯಾರೋಪಿಸಲು (supreimposable) ಸಾಧ್ಯವಿಲ್ಲ. ಉದಾ; ನಮ್ಮ ಎಡಗೈ ಮತ್ತು ಬಲಗೈ ಒಂದೇ ರೀತಿಯಾಗಿವೆ. ಆದರೆ ನಮ್ಮ ಎಡಗೈಯನ್ನು ಬಲಗೈ ಮೇಲಿಟ್ಟರೆ ಸಹಗಟಿಸುವುದಿಲ್ಲ. (Coinside) ಬಿಂಬ ವಿನ್ಯಾಸಗಳನ್ನು ಆದ್ಯಾರೋಪಿಸಲು ಸಾಧ್ಯವಿಲ್ಲದ ಗುಣಗಳನ್ನು (ನಮ್ಮ ಎರಡೂ ಕೈಗಳಂತೆ) "ಅಸಮ್ಮಿತಿ."/ಕೈರ್ ಎನ್ನುವರು ಮತ್ತು ಆ ಗುಣಕ್ಕೆ ಕೈರಾಲಿಟಿ ಎನ್ನುವರು.

56) ಯಾವುದಕ್ಕೆ ರೆಸಿಮಿಕ್ ಮಿಶ್ರಣ (racemic mixture) ಅಥವಾ ರೆಸಿಮಿಕ್ ಪರಿವರ್ತನೀಕರಣ (racemic modification) ಎನ್ನುವರು.?

ಉತ್ತರ:- ಕರಗುವ ಬಿಂದು, ಕುದಿಯುವ ಬಿಂದು, ವಿಲೀನತೆ ಮತ್ತು ವಕ್ರೀಭವನ ಸೂಚ್ಯಾಂಕ ಮುಂತಾದವುಗಳಲ್ಲಿ ಒಂದೇಯಾಗಿದ್ದು, ಕೇವಲ ಸಮತಲ ದ್ರುವೀಯ ಬೆಳಕನ್ನು ತಿರುಗಿಸುವುದಕ್ಕೆ ಸಂಬಂಧಿಸಿದಂತೆ ಬೇರೆಯಾಗಿರುತ್ತದೆ ಅಷ್ಟೆ. ಅವುಗಳಲ್ಲಿ ಒಂದು ಬಲಭ್ರಾಮಕ (dextro –rotatory) ಮತ್ತು ಇನ್ನೊಂದು ಎಡಭ್ರಾಮಕ (laevo-rotatory) ಎರಡು ಪ್ರತ್ಯಂಗಿಗಳ (Enatiomers) ಸಮ ಪ್ರಮಾಣದ ಮಿಶ್ರಣದಲ್ಲಿ ಒಂದು ಸಮಾಂಗಿಯ ಭ್ರಮಣೆಯನ್ನು ಇನ್ನೊಂದು ಸಮಾಂಗಿಯು ರದ್ದುಪಡಿಸುವುದರಿಂದ ಅವು ಶೂನ್ಯ ದ್ಯುತಿ ಭ್ರಮಣೆಯನ್ನು ಹೊಂದಿರುತ್ತದೆ. ಅಂತಹ ಮಿಶ್ರಣವನ್ನು ರೆಸಿಮಿಕ್ ಮಿಶ್ರಣ (racemic mixture) ಅಥವಾ ರೆಸಿಮಿಕ್ ಪರಿವರ್ತನೀಕರಣ (racemic modification) ಎನ್ನುವರು.

57) ಯಾವುದನ್ನು β-ವರ್ಜ್ಯನ ಕ್ರಿಯೆ ಎನ್ನುವರು?

ಉತ್ತರ:- β-ಹೈಡ್ರೋಜನ್ ಇರುವ ಹ್ಯಾಲೋ ಆಲ್ಕೇನ್‌ನ್ನು ಮದ್ಯಸಾರಯುಕ್ತ ಪೊಟಾಷಿಯಂ ಹೈಡ್ರಾಕ್ಸೈಡ್ ದ್ರಾವಣದೊಂದಿಗೆ ಕಾಯಿಸಿದಾಗ β-ಕಾರ್ಬನ್‌ನೊಂದಿಗೆ ಇರುವ ಹೈಡ್ರೋಜನ್ ಮತ್ತು α-ಕಾರ್ಬನ್‌ನೊಂದಿಗಿರುವ ಹ್ಯಾಲೋಜನ್ ಪರಮಾಣು ವರ್ಜ್ಯನೆಗೊಂಡು ಆಲ್ಕೀನ್ ಉತ್ಪನ್ನ ಉಂಟಾಗುತ್ತದೆ. ಈ ವರ್ಜ್ಯನ ಕ್ರಿಯೆಯಲ್ಲಿ β-ಹೈಡ್ರೋಜನ್ ಪರಮಾಣುವು ಪಾಲ್ಗೊಳ್ಳುವುದರಿಂದ ಇದನ್ನು β-ವರ್ಜ್ಯನ ಕ್ರಿಯೆ ಎನ್ನುವರು.

ಪ್ರಜಾವಾಣಿ ನೋಡಿಯೊ
ಪಿಯುಸಿ ಭೌತವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

58) ಯಾವುದನ್ನು "ಬಹುಹ್ಯಾಲೋಜನ್ ಸಂಯುಕ್ತಗಳು" ಎನ್ನುವರು?

ಉತ್ತರ:- ಒಂದಕ್ಕಿಂತ ಹೆಚ್ಚು ಹ್ಯಾಲೋಜನ್ ಪರಮಾಣುಗಳನ್ನು ಹೊಂದಿರುವ ಕಾರ್ಬನ್‌ಸಂಯುಕ್ತಗಳನ್ನು "ಬಹುಹ್ಯಾಲೋಜನ್ ಸಂಯುಕ್ತಗಳು" ಎನ್ನುವರು ಇವುಗಳಲ್ಲಿ ಹೆಚ್ಚುನವು ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಉಪಯುಕ್ತವಾಗಿವೆ.

59) ಯಾಕೆ ಕ್ಲೋರೋಫಾರ್ಮ್ ದಪ್ಪ ಬಣ್ಣದ ಬಾಟಲಿಗಳಲ್ಲಿ ಸಂಪೂರ್ಣವಾಗಿ ತುಂಬಿಸಿ ಶೇಖರಿಸುತ್ತಾರೆ?

ಉತ್ತರ:- ಕ್ಲೋರೋಫಾರ್ಮ್ ಬೆಳಕಿನ ಸಾನಿಧ್ಯದಲ್ಲಿ ಗಾಳಿಯೊಂದಿಗೆ ನಿಧಾನವಾಗಿ ಉತ್ಕರ್ಷಿಸಿ ಕಾರ್ಬೊನಿಲ್‌ಕ್ಲೋರೈಡ್ ಎಂಬ ಅತ್ಯಂತ ವಿಷಕಾರಿಯಾದ ಅನಿಲವನ್ನು ಬಿಡುಗಡೆ ಮಾಡುತ್ತದೆ. (ಇದನ್ನು 'ಫಾಸ್ಜಿನ್' ಎಂತಲೂ ಕರೆಯುತ್ತಾರೆ). ಆದ್ದರಿಂದ ಇದನ್ನು ದಪ್ಪ ಬಣ್ಣದ ಬಾಟಲಿಗಳಲ್ಲಿ ಸಂಪೂರ್ಣವಾಗಿ ತುಂಬಿಸಿ ಶೇಖರಿಸುತ್ತಾರೆ ಇದರಿಂದ ಗಾಳಿಯ ಸಂಪರ್ಕವಿಲ್ಲದಂತೆ ನೋಡಿಕೊಳ್ಳಲಾಗುತ್ತದೆ.

60) ಹೈಡ್ರೋಕಾರ್ಬನ್‌ನ ಒಂದು ಹೈಡ್ರೋಜನ್ ಪರಮಾಣುವನ್ನು ಅಲ್ಕಾಕ್ಸಿ ಅಥವಾ ಆರೈಲಾಕ್ಸಿ ಗುಂಪಿನಿಂದ ಪ್ರತಿಸ್ಥಾಪಿಸಿದಾಗ ಉತ್ಪತ್ತಿಯಾಗುವ ಮತ್ತೊಂದು ವರ್ಗದ ಸಂಯುಕ್ತಗಳನ್ನು ಏನೆಂದು ಕರೆಯುವರು

ಉತ್ತರ:- ಹೈಡ್ರೋಕಾರ್ಬನ್‌ನ ಒಂದು ಹೈಡ್ರೋಜನ್ ಪರಮಾಣುವನ್ನು ಅಲ್ಕಾಕ್ಸಿ ಅಥವಾ ಆರೈಲಾಕ್ಸಿ ಗುಂಪಿನಿಂದ ಪ್ರತಿಸ್ಥಾಪಿಸಿದಾಗ ಉತ್ಪತ್ತಿಯಾಗುವ ಮತ್ತೊಂದು ವರ್ಗದ ಸಂಯುಕ್ತಗಳನ್ನು ಈಥರ್ ಎನ್ನುವರು. ಉದಾಹರಣೆಗೆ, CH_3OCH_3

ಪ್ರಜಾವಾಣಿ ನೋಡಿಯೊ
ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ
ಪ್ರದೀಪ್ ಕುಮಾರ್ ವಿ.
ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಸುಭಾಷಿತ

ಬರಲಿರುವ ಸನ್ನಿವೇಶಗಳನ್ನು ಸದಾ ನಿಮ್ಮ ಪರವಾಗಿ ಇಟ್ಟುಕೊಳ್ಳುವುದು ಜಾಣತನ.

–ವಿ.ಕೃ.ಗೋಕಾಕ

‘ಪಠಾಣ್’: ಬದಲಾವಣೆಗೆ ಸೂಚನೆ ರಾಜಕೀಯ ಪೂರ್ವಗ್ರಹವೇ ಕಾರಣ

ಶಾರುಕ್ ಖಾನ್ ಮತ್ತು ದೀಪಿಕಾ ಪಡುಕೋಣೆ ಮುಖ್ಯಪಾತ್ರದಲ್ಲಿರುವ ‘ಪಠಾಣ್’ ಸಿನಿಮಾದಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕು ಎಂದು ಕೇಂದ್ರ ಸಿನಿಮಾ ಪ್ರಮಾಣೀಕರಣ ಮಂಡಳಿಯು (ಸಿಬಿಎಫ್‌ಸಿ) ನಿರ್ಮಾಪಕರಿಗೆ ಸೂಚಿಸಿರುವುದು ಸರಿಯಲ್ಲ. ಈ ಸೂಚನೆಯ ಮೂಲಕ ಕಲಾ ಸ್ವಾತಂತ್ರ್ಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರಲಾಗಿದೆ. ಮಂಡಳಿಯ ಮಾರ್ಗಸೂಚಿಗೆ ಅನುಸಾರವಾಗಿ ಸಿನಿಮಾ ಮತ್ತು ಅದರ ಹಾಡುಗಳಲ್ಲಿ ಬದಲಾವಣೆ ಮಾಡಬೇಕು ಎಂದು ಸಿಬಿಎಫ್‌ಸಿ ಅಧ್ಯಕ್ಷ ಪ್ರಸೂನ್ ಜೋಷಿ ಹೇಳಿದ್ದಾರೆ. ಯಾವೆಲ್ಲ ಬದಲಾವಣೆಗಳನ್ನು ಮಾಡಬೇಕು ಎಂಬುದನ್ನು ಅವರು ಬಹಿರಂಗವಾಗಿ ಹೇಳಿಲ್ಲ. ‘ಬೇಷರಮ್ ರಂಗ್’ ಹಾಡಿನ ಸನ್ನಿವೇಶದಲ್ಲಿ ನರ್ತಿಸುವಾಗ ದೀಪಿಕಾ ಅವರು ಧರಿಸಿದ್ದ ದಿರಿಸು ಮತ್ತು ಆ ಹಾಡಿನ ಸಾಲುಗಳನ್ನು ಗುರಿಯಾಗಿಸಿ ಇತ್ತೀಚೆಗೆ ಟೀಕೆಗಳು ಬಂದಿವೆ. ಸಿನಿಮಾದ ಹೆಸರಿನ ಬಗ್ಗೆಯೂ ತಕರಾರು ಎತ್ತಲಾಗಿದೆ. ಸಿಬಿಎಫ್‌ಸಿ ತನ್ನ ಆದೇಶವನ್ನು ನೀಡಿದೆ ಎಂದು ವರದಿಗಳು ಬಂದಿವೆಯಾದರೂ ಅದನ್ನು ಅಧಿಕೃತವಾಗಿ ಪ್ರಕಟಿಸಲಾಗಿಲ್ಲ. ಸಮಾಜದ ಧರ್ಮಾಂಧ ಮತ್ತು ಮಡಿವಂತಿಕೆಯ ವರ್ಗವು ಸಿನಿಮಾದ ಹಾಡಿನ ಕುರಿತು ಅಸಮಾಧಾನ ವ್ಯಕ್ತಪಡಿಸಿದೆ. ಇದರ ಹಿಂದೆ ಇರುವುದು ಕೋಮುವಾದಿ ಭಾವನೆ. ಅಷ್ಟೇ ಅಲ್ಲದೆ, ಸಿನಿಮಾದಲ್ಲಿ ಅಭಿನಯಿಸಿರುವ ನಟ–ನಟಿಯರ ಕುರಿತ ವೈಯಕ್ತಿಕ ಮತ್ತು ರಾಜಕೀಯ ಪೂರ್ವಗ್ರಹವೂ ಇದಕ್ಕೆ ಕಾರಣ. ಈ ವರ್ಗದ ವಿವೇಚನಾರಹಿತ ಆಗ್ರಹಕ್ಕೆ ಅನುಗುಣವಾಗಿ ಸಿಬಿಎಫ್‌ಸಿ ನಡೆದುಕೊಳ್ಳಬಾರದಿತ್ತು.

ಸಿಬಿಎಫ್‌ಸಿ, ತಾನು ರೂಪಿಸಿಕೊಂಡ ಮಾನದಂಡಗಳಿಗೆ ಅನುಗುಣವಾಗಿ ಸಿನಿಮಾವನ್ನು ಪರಿಶೀಲಿಸಬೇಕೇ ವಿನಾ ರಾಜಕಾರಣದ ಕಾರಣಗಳಿಗೆ ಅನುಸಾರವಾಗಿ ಅಲ್ಲ

ಈ ನಿರ್ಧಾರಕ್ಕೆ ‘ಸಂಸ್ಕೃತಿ ಮತ್ತು ಧರ್ಮ’ ಕಾರಣ ಎಂದು ಪ್ರಸೂನ್ ಅವರು ಹೇಳಿಕೊಂಡಿದ್ದಾರೆ. ‘ವಾಸ್ತವ ಮತ್ತು ಸತ್ಯದಿಂದ ಗಮನವನ್ನು ಬೇರೆಡೆಗೆ ಸೆಳೆಯುವ ಕ್ಷುದ್ರ ಶಕ್ತಿಗಳು ಸಂಸ್ಕೃತಿ ಮತ್ತು ಧರ್ಮವನ್ನು ವ್ಯಾಖ್ಯಾನಿಸಲು ಅವಕಾಶ ಕೊಡುವುದಿಲ್ಲ’ ಎಂದೂ ಅವರು ಹೇಳಿದ್ದಾರೆ. ಇದರ ಅರ್ಥ ಏನೇ ಆಗಿರಲಿ. ಇತರ ಎಲ್ಲೆಡೆಯಂತೆ, ಸಿನಿಮಾ ಕ್ಷೇತ್ರದಲ್ಲಿ ಕೂಡ ಸಂಸ್ಕೃತಿ ಮತ್ತು ಧರ್ಮವನ್ನು ಅಧಿಕಾರ ಸ್ಥಾನದಲ್ಲಿರುವವರೇ ವ್ಯಾಖ್ಯಾನಿಸುತ್ತಿದ್ದಾರೆ ಎಂಬ ಸಂದೇಶ ರವಾನೆಯಾಗಿದೆ. ಸಂಸ್ಕೃತಿ, ಪರಂಪರೆ ಮತ್ತು ಧರ್ಮ ಎಂಬುದು ಬೇರೆ ಬೇರೆ ಜನರಿಗೆ ಬೇರೆ ಬೇರೆಯಾಗಿದೆ. ಯಾವುದೋ ಒಂದು ವ್ಯಾಖ್ಯಾನವೇ ಸರಿ ಎಂದು ಪರಿಗಣಿಸಲಾಗದು ಮತ್ತು ಅದನ್ನೇ ಇತರರ ಮೇಲೆ ಹೇರುವುದಕ್ಕೂ ಅವಕಾಶ ಇಲ್ಲ. ಇವುಗಳನ್ನು ಯಾರಾದರೂ ಭಿನ್ನವಾಗಿ ಅರ್ಥ ಮಾಡಿಕೊಂಡರೆ, ಆ ನಿಲುವಿಗಾಗಿ ಅವರ ಮೇಲೆ ದಾಳಿ ನಡೆಸುವುದು ಸಲ್ಲದು. ದೇಶವು ಹೆಚ್ಚು ಹೆಚ್ಚು ಧರ್ಮಾಂಧವೂ ಅಸಹಿಷ್ಣುವೂ ಆಗುತ್ತಿದೆ. ಕೋಮು ನೆಲೆಯ ವಿಭಜನೆ ಹೆಚ್ಚುತ್ತಿದೆ. ಒಂದು ಸಿನಿಮಾ ಅಥವಾ ಪುಸ್ತಕ ಅಥವಾ ಕಲಾಕೃತಿಯ ಮೇಲೆ ದಾಳಿ ನಡೆಸಲು ಸಾಮಾನ್ಯವಾಗಿ ನೀಡಲಾಗುವ ಕಾರಣ ಅದು ಸಮುದಾಯದ ಭಾವನೆಗಳಿಗೆ ಧಕ್ಕೆ ತಂದಿದೆ ಎಂಬುದಾಗಿದೆ– ಬಹುಸಂಖ್ಯಾತರು, ಅಲ್ಪಸಂಖ್ಯಾತರು ಅಥವಾ ಇತರ ಯಾವುದೇ ವರ್ಗದ ಹೆಸರಿನಲ್ಲಿ ಇದನ್ನು ಮಾಡಲಾಗುತ್ತಿದೆ. ಕಲೆಯು ಪ್ರಚೋದಿಸಬೇಕು ಮತ್ತು ಅದು ವೇದನೆಯನ್ನೂ ಉಂಟು ಮಾಡಬೇಕು. ಹಾಗಿದ್ದಾಗ ಮಾತ್ರ ಸಮುದಾಯವು ಆತ್ಮಾವಲೋಕನ ಮಾಡಿಕೊಂಡು ಇನ್ನಷ್ಟು ಉತ್ತಮಗೊಳ್ಳಲು ಸಾಧ್ಯ. ಅದು ಕಲೆಯ ಸಾಮಾಜಿಕ ಹೊಣೆಗಾರಿಕೆಯೂ ಹೌದು.

ಸಿಬಿಎಫ್‌ಸಿ ಒಂದು ಸ್ವಾಯತ್ತ ಸಂಸ್ಥೆ. ಇದು ರಾಜಕೀಯ ಸಂಜ್ಞೆಗಳು ಅಥವಾ ಒತ್ತಡದ ಆಧಾರದಲ್ಲಿ ನಿರ್ಧಾರಗಳನ್ನು ಕೈಗೊಳ್ಳಬಾರದು. ಸಿಬಿಎಫ್‌ಸಿಯ ನಿರ್ಧಾರವನ್ನು ಸಿಬಿಎಫ್‌ಸಿಯ ಮಾಜಿ ಅಧ್ಯಕ್ಷ ಪಹಲಜ್ ನಿಹಲಾನಿ ಅವರು ಟೀಕಿಸಿದ್ದಾರೆ. ಒತ್ತಡದಿಂದಾಗಿಯೇ ಈ ನಿರ್ಧಾರ ಕೈಗೊಂಡಿರಬಹುದು ಎಂದೂ ಅವರು ಹೇಳಿದ್ದಾರೆ. ಮಧ್ಯಪ್ರದೇಶದ ಸಚಿವ ನರೋತ್ತಮ ಮಿಶ್ರಾ ಸೇರಿದಂತೆ ಆಡಳಿತಾರೂಢ ಪಕ್ಷದ ಹಲವರು ಈ ಸಿನಿಮಾವನ್ನು ಟೀಕಿಸಿದ್ದಾರೆ ಮತ್ತು ನಿಷೇಧಿಸಬೇಕು ಎಂದು ಆಗ್ರಹಿಸಿದ್ದಾರೆ. ಶಾರುಕ್ ಖಾನ್ ಮತ್ತು ದೀಪಿಕಾ ಅವರು ಹೊಂದಿರುವ ರಾಜಕೀಯ ನಿಲುವು ಕೂಡ ಈ ಎಲ್ಲದರ ಹಿಂದೆ ಕೆಲಸ ಮಾಡಿದೆ ಎನ್ನಲಾಗುತ್ತಿದೆ. ಹೀಗೆ ಸಿನಿಮಾಕ್ಕೆ ಸಂಬಂಧಿಸಿದ್ದಲ್ಲದ ಕಾರಣಗಳನ್ನು ಇರಿಸಿಕೊಂಡು ಈ ರೀತಿಯ ಅಭಿಯಾನ ನಡೆಸುವುದು ಮತ್ತು ಸಿನಿಮಾ ಮೇಲೆ ದಾಳಿ ಮಾಡುವುದು ಪೌರರು ಮತ್ತು ಕಲಾವಿದರ ಸ್ವಾತಂತ್ರ್ಯದ ಉಲ್ಲಂಘನೆಯಾಗುತ್ತದೆ. ಸಿಬಿಎಫ್‌ಸಿ, ತಾನು ರೂಪಿಸಿಕೊಂಡ ಮಾನದಂಡಗಳಿಗೆ ಅನುಗುಣವಾಗಿ ಸಿನಿಮಾವನ್ನು ಪರಿಶೀಲಿಸಬೇಕೇ ಹೊರತು ರಾಜಕಾರಣದ ಕಾರಣಗಳಿಗೆ ಅನುಸಾರವಾಗಿ ಅಲ್ಲ.

ದಿನದ ಟ್ವೀಟ್

ಖೊಟ್ಟಿ ಹೇಳಿಕೆಗೆ ನಿದರ್ಶನ!

ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯು ಸತತ 232ನೆಯ ದಿನವೂ ಪರಿಷ್ಕರಣೆ ಆಗಿಲ್ಲ. ಬೆಲೆಯನ್ನು ಮಾರುಕಟ್ಟೆಯೇ ತೀರ್ಮಾನಿಸುತ್ತದೆ ಎಂಬ ಹೇಳಿಕೆಯು ಅದೆಷ್ಟು ಖೊಟ್ಟಿ ಎಂಬುದನ್ನು ಇದು ತೋರಿಸುತ್ತದೆ. ಬಹುತೇಕ ಸಂದರ್ಭಗಳಲ್ಲಿ ಬಹುಪಾಲು ಜನರನ್ನು ಮೋಸಗೊಳಿಸಬಹುದು ಎಂಬುದಕ್ಕೆ ಇದು ಇನ್ನೊಂದು ನಿದರ್ಶನ.

ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

ಕಿಡಿನುಡಿ

ಹೀಗಿವೆ ಆದ್ಯತೆಗಳು. ಜಲಗಾಂವ್‌ನ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ತಿನ್ನಲು ಅನ್ನವಿಲ್ಲ. ಆದರೆ ಸಚಿವರು ಈ ಪ್ರದೇಶಕ್ಕೆ ಭೇಟಿ ನೀಡುವುದು ‘ಲವ್ ಜಿಹಾದ್’ ಸುತ್ತಲಿನ ಪಿತೂರಿಗಳನ್ನು ಪ್ರಚೋದಿಸುವುದಕ್ಕೆ ಮಾತ್ರ.

ಕುನಾಲ್ ಪುರೋಹಿತ್, ಪತ್ರಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 9-1-1998

• ಫಲಿಸದ ಹೆಗಡೆ ಗಡುವು: ದಳ ಸರ್ಕಾರ ಸುರಕ್ಷಿತ

ಬೆಂಗಳೂರು, ಜನವರಿ 8– ಮಾಜಿ ಮುಖ್ಯಮಂತ್ರಿ ಹಾಗೂ ಲೋಕಶಕ್ತಿ ಅಧ್ಯಕ್ಷ ರಾಮಕೃಷ್ಣ ಹೆಗಡೆ ಅವರು ತಮ್ಮ ಪಕ್ಷಕ್ಕೆ ಸೇರುವಂತೆ ನೀಡಿದ್ದ ಕರೆಯನ್ನು ಜನತಾದಳದಲ್ಲಿರುವ ಅವರ ಬೆಂಬಲಿಗರು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದು, ಜೆ.ಎಚ್. ಪಟೇಲ್ ನೇತೃತ್ವದ ರಾಜ್ಯ ಜನತಾದಳದ ಸರ್ಕಾರ ‘ಅಪಾಯ’ದಿಂದ ಪಾರಾಗಿದೆ.

ಲೋಕಶಕ್ತಿ ಸೇರಲು ಹೆಗಡೆ ಅವರು ಜನತಾದಳದವರಿಗೆ ನೀಡಿದ್ದ ಗಡುವು ಇಂದು ಮುಕ್ತಾಯಗೊಂಡಿದ್ದು, ಪಟೇಲ್ ಸಂಪುಟದ ಯಾವುದೇ ಸದಸ್ಯರಾಗಲಿ ಅಥವಾ ದಳದ ಶಾಸಕರಾಗಲಿ ಲೋಕಶಕ್ತಿ ಸೇರಲು ಮುಂದಾಗಿಲ್ಲ. ಪಕ್ಷ ತೊರೆದು ಬರಲು ಹೆಗಡೆ ಅವರು ಜ. 8 ಕಡೆಯ ದಿನ ಎಂದು ನಿಗದಿಪಡಿಸಿದ್ದರಿಂದ ಜನತಾದಳದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿ, ಸರ್ಕಾರ ಆತಂಕಕ್ಕೆ ಈಡಾಗಿತ್ತು.

• ಚಿತ್ರದುರ್ಗ ಬಳಿ ಉದ್ರಿಕ್ತ ಜನರಿಂದ ಠಾಣೆಗೆ ಮುತ್ತಿಗೆ

ಚಿತ್ರದುರ್ಗ, ಜನವರಿ 8– ಪೊಲೀಸ್ ವಾಹನ ಹರಿದು ಐವರು ಮೃತಪಟ್ಟ ಘಟನೆಯಿಂದ ಉದ್ರಿಕ್ತರಾದ ಗ್ರಾಮಸ್ಥರು ಪೊಲೀಸ್ ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿ, ಠಾಣೆಗೆ ಮುತ್ತಿಗೆ ಹಾಕಿ, ಪೊಲೀಸ್ ವಾಹನವೊಂದನ್ನು ಸುಟ್ಟುಹಾಕಿದ ಘಟನೆ ವರದಿಯಾಗಿದೆ.

ಬುಧವಾರ ದೊಡ್ಡಚೆಲ್ಲೂರು ಗ್ರಾಮದ ಜನರು ಪರಶುರಾಂಪುರದಲ್ಲಿ ಚಿತ್ರವೊಂದರ ಎರಡನೇ ಆಟ ನೋಡಿಕೊಂಡು ಊರಿಗೆ ವಾಪಸಾಗುತ್ತಿದ್ದಾಗ ಬೆಳಗಿನ ಜಾವ ಸುಮಾರು 1.30ರಲ್ಲಿ ಪೊಲೀಸ್ ಜೀಪೊಂದು ಅವರ ಮೇಲೆ ಚಿಕ್ಕಚೆಲ್ಲೂರು ಫಾರೆಸ್ಟ್ ಬಳಿ ಹರಿದು ಸ್ಥಳದಲ್ಲೇ ನಾಲ್ವರು ಸತ್ತು, ಮತ್ತೊಬ್ಬರು ಆಸ್ಪತ್ರೆಗೆ ಸಾಗಿಸುವಾಗ ಮೃತರಾದರು. ಮತ್ತಿಬ್ಬರ ಪರಿಸ್ಥಿತಿ ಚಿಂತಾಜನಕವಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 9-1-1973

• ಪ್ಯಾರಿಸ್‌ನಲ್ಲಿ ವಿಯೆಟ್ನಾಂ ಶಾಂತಿ ಮಾತುಕತೆ ಆರಂಭ

ಪ್ಯಾರಿಸ್, ಜನವರಿ 8– ಅಮೆರಿಕ ಅಧ್ಯಕ್ಷರ ಸಲಹೆಗಾರ ಹೆನ್ರಿ ಕಿಸಿಂಜರ್ ಮತ್ತು ಹಾನಾಯ್ ರಾಯಭಾರಿ ಲೀಡಕ್‌ಥೋ ಅವರು ವಿಯೆಟ್ನಾಂ ಸಮರ ಕೊನೆಗಾಣಿಸಲು ಇಂದು ಇಲ್ಲಿ ಹೊಸ ಸುತ್ತಿನ ಉನ್ನತ ಮಟ್ಟದ ಸಂಧಾನಗಳನ್ನು ಆರಂಭಿಸಿದರು.

ಪ್ಯಾರಿಸ್‌ನ ಉಪನಗರವಾದ ಗಿಫ್‌ಸಿರ್ ವೆಟ್ಟೆದಲ್ಲಿ ಅವರಿಬ್ಬರೂ ಮಾತುಕತೆಗಾಗಿ ಭೇಟಿಯಾಗಿದ್ದಾರೆ.

ಉತ್ತರ ವಿಯೆಟ್ನಾಂ ಮೇಲೆ ಅಮೆರಿಕ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಭಾರಿ ಬಾಂಬ್ ದಾಳಿ ಆರಂಭಿಸಿದ ಸುಮಾರು ನಾಲ್ಕು ವಾರಗಳಲ್ಲಿ ಇದು ಪ್ರಪ್ರಥಮ ಭೇಟಿ.

• ಗಂಗಾ–ಕಾವೇರಿ ನದಿ ಸಂಪರ್ಕ ಯೋಜನೆ: ರಾವ್ ಸಮರ್ಥನೆ

ನವದೆಹಲಿ, ಜನವರಿ 8– ರಾಷ್ಟ್ರೀಯ ಜಲಜಾಲ ನಿರ್ಮಾಣದ ಅಂಗವಾಗಿ ಗಂಗಾ–ಕಾವೇರಿ ನದಿಗಳಿಗೆ ಸಂಪರ್ಕ ಕಲ್ಪಿಸುವ ಉದ್ದೇಶಿತ ಯೋಜನೆಯನ್ನು ಕೇಂದ್ರ ನೀರಾವರಿ ಮತ್ತು ವಿದ್ಯುತ್ ಖಾತೆ ಸಚಿವ ಡಾ. ಕೆ.ಎಲ್. ರಾವ್ ಸಮರ್ಥಿಸಿಕೊಂಡಿದ್ದಾರೆ.

ದೇಶದ ಮೂರನೇ ಒಂದು ಭಾಗದ ಜನ ವಾಸಿಸುವ ಸ್ಥಳಗಳಲ್ಲಿ ಸತತವಾಗಿ ಅನಾವೃಷ್ಟಿ ಅಭಾವ ಉಂಟಾಗುತ್ತಿದ್ದರೆ ಅಂಥ ಕಡೆಗೆ ನೀರು ಪೂರೈಸುವುದು ಅತ್ಯಗತ್ಯ ಎಂದು ಅವರು ಅಭಿಪ್ರಾಯಪಟ್ಟರು.

ಸಮಸ್ಯೆಗಳನ್ನು ಸರಿಪಡಿಸಲು ಟಾಟಾ ಸಮೂಹವು ಬೇರೆಡೆ ನೋಡಬೇಕಾದ ಅಗತ್ಯವಿಲ್ಲ

ಏರ್ ಇಂಡಿಯಾ: ಎಚ್ಚರಿಕೆಯ ಕರೆಗಂಟೆ



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್.ಗೋಪಿನಾಥ್

ಏರ್ ಇಂಡಿಯಾ ಕಂಪನಿಯು ಸರಿಸುಮಾರು ಏಳು ದಶಕಗಳ ನಂತರ ಕಳೆದ ವರ್ಷ ಟಾಟಾ ಸಮೂಹಕ್ಕೆ ಮರಳಿತು. ಏರ್ ಇಂಡಿಯಾ ಕಂಪನಿಯು ರಾಜಕುಮಾರಿ ಇದ್ದಂತಿತ್ತು. ಆಕೆಯನ್ನು ಕೇಂದ್ರ ಸರ್ಕಾರವು 1953ರಲ್ಲಿ ರಾಷ್ಟ್ರೀಕರಣದ ಮೂಲಕ ಕಿತ್ತುಕೊಂಡಿತ್ತು. ಏರ್ ಇಂಡಿಯಾ ಎಂಬ ಹೆಸರು ವಿದೇಶಿ ನೆಲ, ದೂರದ ರಂಗುರಂಗಿನ ನಗರಗಳ ಚಿತ್ರಣವನ್ನು ಕಣ್ಣ ಮುಂದೆ ತರುತ್ತಿತ್ತು. ಏರ್ ಇಂಡಿಯಾದಲ್ಲಿ ಗಗನಸಖಿಯಾಗಿ ಕೆಲಸ ಮಾಡುವವಳು ದೇವಲೋಕದ ಊರ್ವಶಿಯಂತೆ ಕಾಣುತ್ತಿದ್ದಳು! ಏರ್ ಇಂಡಿಯಾ ಪೈಲಟ್‌ಗಳಿಗೆ ಹೆಣ್ಣು ಕೊಡಲು ಯಾರೂ ಇಲ್ಲವೆನ್ನುತ್ತಿರಲಿಲ್ಲ!

ಪರಿಸ್ಥಿತಿ ಹೀಗಿದ್ದಿದ್ದು ಜೆಆರ್‌ಡಿ ಟಾಟಾ ಅವರು ಅದರ ಮಾಲೀಕತ್ವ ಹೊಂದಿದ್ದಾಗ. ಗ್ರಾಹಕ ಸೇವೆಯ ವಿಚಾರದಲ್ಲಿ ಕೆಟ್ಟ ಹೆಸರು ಸಂಪಾದಿಸಿಕೊಂಡು, ವಿಮಾನಗಳು ಕೊಳಕಾಗಿ, ವಿಮಾನ ವಿಳಂಬವಾಗುವುದು ಹಾಗೂ ರದ್ದಾಗುವುದು ಮತ್ತೆ ಮತ್ತೆ ವರದಿಯಾಗಿ, ನಿಲ್ದಾಣದಲ್ಲೇ ಉಳಿದ ಪ್ರಯಾಣಿಕರಿಗೆ ದುಃಸ್ವಪ್ನದಂತಹ ಅನುಭವ ಆದ ನಂತರದಲ್ಲಿ ಏರ್ ಇಂಡಿಯಾ ಮತ್ತೆ ಟಾಟಾ ಸಮೂಹಕ್ಕೆ ಮರಳಿತು. ಟಾಟಾ ಸಮೂಹವು ಏರ್ ಇಂಡಿಯಾ ಸ್ವಾಧೀನಪಡಿಸಿಕೊಂಡಾಗ ದೇಶದಲ್ಲಿ ಬಹಳ ಸಂಭ್ರಮ ವ್ಯಕ್ತವಾಗಿತ್ತು. ‘ರಾಷ್ಟ್ರೀಯ ವಿಮಾನಯಾನ ಕಂಪನಿ’ ಮತ್ತೆ ಆಗಸವನ್ನು ಆಳಲಿದೆ, ಎಲ್ಲದರಲ್ಲಿಯೂ ಮುಂಚೂಣಿಯಲ್ಲಿ ನಿಲ್ಲಲಿದೆ ಎಂಬ ನಿರೀಕ್ಷೆ ಇತ್ತು.

ಆದರೆ, ನ್ಯೂಯಾರ್ಕ್‌ನಿಂದ ದೆಹಲಿಗೆ ಬರುತ್ತಿದ್ದ ಏರ್ ಇಂಡಿಯಾ ವಿಮಾನದಲ್ಲಿ ಪಾನಮತ್ತ ಪ್ರಯಾಣಿಕನೊಬ್ಬ ಮಹಿಳೆಯೊಬ್ಬರ ಮೇಲೆ ಮೂತ್ರ ವಿಸರ್ಜಿಸಿದ ಈಚಿನ ಪ್ರಸಂಗವು ಜಾಗತಿಕ ಮಟ್ಟದಲ್ಲಿ ಆಘಾತ ಮೂಡಿಸಿದೆ. ಏರ್ ಇಂಡಿಯಾದ ಪ್ರತಿಷ್ಠೆಯನ್ನು ಮತ್ತೆ ಹಿಡಿದೆತ್ತಲು ಟಾಟಾ ಯತ್ನಿಸುತ್ತಿತ್ತು. ಆದರೆ ಈ ಪ್ರಸಂಗವು ಪ್ರತಿಷ್ಠೆಗೆ ದೊಡ್ಡ ಪೆಟ್ಟು ಕೊಟ್ಟಿದೆ. ಈ ಘಟನೆ ನಡೆದ ಕೆಲವೇ ಸಮಯದ ನಂತರದಲ್ಲಿ, ಪ್ಯಾರಿಸ್–ಮುಂಬೈ ವಿಮಾನದಲ್ಲಿ ಪುರುಷನೊಬ್ಬ ಮಹಿಳಾ ಪ್ರಯಾಣಿಕರೊಬ್ಬರ ಮೇಲೆ ಮೂತ್ರ ಮಾಡಿದ ಮತ್ತೊಂದು ಪ್ರಸಂಗ ವರದಿಯಾಗಿದೆ.

ಭೂಮಿಯ ಮೇಲ್ಮೈನಿಂದ 40 ಸಾವಿರ ಅಡಿ ಎತ್ತರದಲ್ಲಿ ಪ್ರಯಾಣಿಕರು ಸಹಪ್ರಯಾಣಿಕರ ಜೊತೆ ಹಾಗೂ ವಿಮಾನ ಸಿಬ್ಬಂದಿಯ ಜೊತೆ ಅನುಚಿತವಾಗಿ ವರ್ತಿಸುವುದು ಇದ್ದೇ ಇದೆ. ಒಂದು ಕಡೆ ದೀರ್ಘ ಅವಧಿಗೆ ಕೂಡಿಹಾಕಿದಂತಹ ಅನುಭವ, ಮದ್ಯವನ್ನು ಅತಿಯಾಗಿ ಕುಡಿಯುವುದು ಹಿಂಸಾತ್ಮಕ ವರ್ತನೆಗಳಿಗೆ ಕಾರಣವಾಗುತ್ತವೆ. ಮಹಿಳಾ ಪ್ರಯಾಣಿಕರಿಗೆ ಲೈಂಗಿಕವಾಗಿ ಕಿರುಕುಳ ಕೊಡುವುದು, ಗಗನಸಖಿಯರ ಜೊತೆ ಅನುಚಿತವಾಗಿ ವರ್ತಿಸುವುದು ವಿಮಾನದಲ್ಲಿ ಆಗಾಗ ನಡೆಯುವುದಿದೆ. ಇಂತಹ ಘಟನೆಗಳಿಗೆ ಸಂಬಂಧಿಸಿದ ವರದಿಗಳನ್ನು ನಾವು ಮಾಧ್ಯಮಗಳಲ್ಲಿ ಆಗಾಗ ಓದುತ್ತೇವೆ. ‘... ನಂತರ ಪ್ರಯಾಣಿಕನನ್ನು ಸಮಾಧಾನಪಡಿಸಲಾಯಿತು, ಆತನನ್ನು ವಿಮಾನ ನಿಲ್ದಾಣ ಪೊಲೀಸರಿಗೆ ಒಪ್ಪಿಸಲಾಯಿತು’ ಎಂಬ ಅಂಶ ವರದಿಗಳಲ್ಲಿ ಇರುತ್ತದೆ.

ಆದರೆ, ಇಲ್ಲಿ ಪ್ರಯಾಣಿಕನೊಬ್ಬ ಮಹಿಳೆಯ ಮೇಲೆ ಮೂತ್ರ ಮಾಡಿದ್ದು ಎಷ್ಟು ವಿಕೃತವೋ, ಅಷ್ಟೇ ಕಳವಳಕಾರಿಯಾಗಿದ್ದು ಟಾಟಾ ಆಡಳಿತ ಮಂಡಳಿಯು ಪ್ರಕರಣವನ್ನು ನಿಭಾಯಿಸಿದ ಹಾಗೂ ನಿಭಾಯಿಸುತ್ತಿರುವ ರೀತಿ. ಜನ ಹೇಗೆ ವರ್ತಿಸುತ್ತಾರೆ ಅಥವಾ ದುರ್ವರ್ತನೆ ತೋರುತ್ತಾರೆ, ಅದರಲ್ಲೂ ಮತ್ತು ಬರಿಸುವ ಪದಾರ್ಥ ಸೇವಿಸಿದ ನಂತರ ಅವರು ಹೇಗೆ ನಡೆದುಕೊಳ್ಳುತ್ತಾರೆ ಎಂಬುದನ್ನು ಊಹಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸ್ವೀಕಾರಾರ್ಹವಲ್ಲದ, ಅಸಭ್ಯ ನಡವಳಿಕೆ ಗಮನಕ್ಕೆ ಬಂದಾಗ ಅದಕ್ಕೆ ತಕ್ಷಣದಲ್ಲಿ ಹಾಗೂ ವಿವೇಕದಿಂದ ಪ್ರತಿಕ್ರಿಯಿಸುವುದು ಬಹಳ ಮುಖ್ಯ.

ದುರ್ವರ್ತನೆ ತೋರುವ ಪ್ರಯಾಣಿಕರನ್ನು ನಿಭಾಯಿಸುವುದು ಹೇಗೆ ಎಂಬ ಬಗ್ಗೆ ಶಿಷ್ಟ ಪ್ರಕ್ರಿಯೆಗಳನ್ನು (ಎಸ್‌ಒಪಿ) ರೂಪಿಸಲಾಗಿದೆ. ಮೂತ್ರ ಮಾಡಿದ ಪ್ರಕರಣದಲ್ಲಿ ವಿಮಾನದ ಸಿಬ್ಬಂದಿ ಮತ್ತು ಕ್ಯಾಪ್ಟನ್, ಆ ಪುರುಷನನ್ನು ನಿಯಂತ್ರಿಸುವಲ್ಲಿ ವಿಫಲರಾಗಿದ್ದಾರೆ. ಇಂತಹ ಸಂದರ್ಭಗಳಲ್ಲಿ ಕ್ಯಾಪ್ಟನ್‌ಗೆ ಅಗತ್ಯ ಕಾನೂನು ಅಧಿಕಾರವೂ ಇದೆ. ಆದರೆ ಈ ಪ್ರಕರಣದಲ್ಲಿ, ಸಿಬ್ಬಂದಿಯು ಪ್ರಕರಣದ ಮೇಲೆ ತಿಪ್ಪೆ ಸಾರಿಸುವ ಕೆಲಸ ಮಾಡಿದರು, ಇಡೀ ಪ್ರಕರಣವನ್ನು ಅವರು ಲಘುವಾಗಿ ತೆಗೆದುಕೊಂಡರು ಎಂದು ವರದಿಗಳನ್ನು ಗಮನಿಸಿದಾಗ ಅನಿಸುತ್ತದೆ. ಇಲ್ಲಿ ಸಿಬ್ಬಂದಿಯು ಕಿರುಕುಳಕ್ಕೆ ಒಳಗಾದವರನ್ನೇ ಶಿಕ್ಷಿಸಿದರು, ಆಕೆಯನ್ನು ಬೇರೆ ಆಸನಗಳಿಗೆ ಸ್ಥಳಾಂತರಿಸಿದರು, ಆಕೆಗೆ ಹೊಸ ಬಟ್ಟೆ ಕೊಟ್ಟು ಆಕೆಯನ್ನು ಸಮಾಧಾನಪಡಿಸಲು ಯತ್ನಿಸಿದರು. ಆಕೆಗೆ ಪ್ರಥಮ ದರ್ಜೆಯ ಬೇರೊಂದು ಆಸನವನ್ನು ಕ್ಯಾಪ್ಟನ್ ನೀಡಲಿಲ್ಲ ಅನಿಸುತ್ತದೆ. ತಪ್ಪು ಮಾಡಿದವ ಕ್ಷಮೆ ಯಾಚಿಸಿದ ಹಾಗೂ ಮಹಿಳೆಯು ಆತನ ವಿರುದ್ಧ ದೂರು ನೀಡಲಿಲ್ಲ ಎಂಬ ಕಾರಣಕ್ಕೆ, ಸಿಬ್ಬಂದಿಯು ವಿಮಾನವು ನಿಲ್ದಾಣ ತಲುಪಿದ ನಂತರದಲ್ಲಿ ಆತನನ್ನು ಪೊಲೀಸರಿಗೆ ಒಪ್ಪಿಸುವ ಕೆಲಸ ಮಾಡಲಿಲ್ಲ, ಘಟನೆಯ ಬಗ್ಗೆ ದೂರು ನೀಡಬೇಕು ಎಂದೂ ಅವರಿಗೆ ಅನಿಸಲಿಲ್ಲ. ಈ ಪ್ರಕರಣದಲ್ಲಿ ಆ ಪುರುಷನು ಸಭ್ಯತೆಯ ಗಡಿಗಳನ್ನೆಲ್ಲ ಮೀರಿದ್ದ. ಆದರೂ, ಕ್ಯಾಪ್ಟನ್ ಮತ್ತು ವಿಮಾನದ ಮಹಿಳಾ ಸಿಬ್ಬಂದಿ ತಮ್ಮ ವಿವೇಚನೆ ಬಳಸಬೇಕಿತ್ತು, ಈ ಸಂಜ್ಞೇಯ ಅಪರಾಧವು ಕ್ಷಮೆಗೆ ಅರ್ಹವಾದುದಲ್ಲ ಎಂಬುದನ್ನು ಅರಿಯಬೇಕಿತ್ತು.

ಟಾಟಾ ಸಮೂಹದ ಅಧ್ಯಕ್ಷ ಎನ್. ಚಂದ್ರಶೇಖರನ್ ಅವರಿಗೆ ಮಹಿಳೆ ಬರೆದ ಪತ್ರವನ್ನು ಗಮನಿಸಿದರೆ, ಏರ್ ಇಂಡಿಯಾ ಸಿಬ್ಬಂದಿಯು ಆ ಪುರುಷನನ್ನು ಮಹಿಳೆಯ ಇಚ್ಛೆಗೆ ವಿರುದ್ಧವಾಗಿ ಆಕೆಯ ಎದುರು ತಂದು ನಿಲ್ಲಿಸಿದರು, ಆತನನ್ನು ಕ್ಷಮಿಸುವಂತೆ ಆಕೆಯ ಮೇಲೆ ಭಾವನಾತ್ಮಕವಾಗಿ ಒತ್ತಾಯ ಹೇರಿದರು ಎಂಬುದು ಗೊತ್ತಾಗುತ್ತದೆ.

ಏರ್ ಇಂಡಿಯಾದಲ್ಲಿ ಹೊಸತನ ತರುವುದು ಭಗೀರಥ ಕೆಲಸವೇ ಹೌದು. ಏರ್ ಇಂಡಿಯಾದಲ್ಲಿ ಸಿಬ್ಬಂದಿ ಸಂಖ್ಯೆ ಹೆಚ್ಚಾಗಿದೆ, ಕೆಲಸ ಮಾಡದವರು ಅಲ್ಲಿ ಹಲವರಿದ್ದಾರೆ. ಕಂಪನಿಯಲ್ಲಿ ಹೊಸ ರಕ್ತ ಹರಿಯುವಂತೆ ಮಾಡಬೇಕಿದೆ. ವಿಮಾನಗಳನ್ನು ಸರಿಪಡಿಸುವ ಕೆಲಸಗಳನ್ನು ಮಾಡಬಹುದು. ಅದಕ್ಕೆ ಬೇಕಿರುವ ಆಡಳಿತ ನಿರ್ವಹಣಾ ಅನುಭವ ಟಾಟಾ ಸಮೂಹಕ್ಕಿದೆ. ಆದರೆ ಪ್ರಯಾಣಿಕರ ಬಗ್ಗೆ ಕಾಳಜಿ ತೋರುವುದು ಹಾಗೂ ಸೇವೆಯಲ್ಲಿ ಅತ್ಯುತ್ತಮ ಮಟ್ಟ ತಲುಪುವುದು ಹೆಚ್ಚು ಕಷ್ಟದ ಕೆಲಸ. ಸರ್ಕಾರದ ಸ್ವಾಮ್ಯದಲ್ಲಿದ್ದಾಗ ಏರ್ ಇಂಡಿಯಾ ತನ್ನ ಗ್ರಾಹಕರ ವಿಚಾರದಲ್ಲಿ ಸಂವೇದನೆಯನ್ನೇ ಕಳೆದುಕೊಂಡಿತ್ತು.

ಏರ್ ಇಂಡಿಯಾ ತನ್ನ ಪ್ರತಿಷ್ಠೆಗೆ ಆಗಿರುವ ಧಕ್ಕೆಯನ್ನು ಸರಿಪಡಿಸಿಕೊಳ್ಳಬಲ್ಲದೇ? ವಿಳಂಬ ಮಾಡದೆ, ಗ್ರಾಹಕರಿಗೆ ಉತ್ತಮ ಸೇವೆ ಒದಗಿಸಲು ತಮ್ಮನ್ನು ಸಮರ್ಪಿಸಿಕೊಂಡರೆ ಆ ಕೆಲಸ ಆಗಬಹುದು. ಏರ್ ಇಂಡಿಯಾ ಅಧ್ಯಕ್ಷ ಹಾಗೂ ಸಿಇಒ ತಕ್ಷಣವೇ ಒಂದು ಪತ್ರಿಕಾಗೋಷ್ಠಿ ಕರೆದು, ಆ ಮಹಿಳೆಯ ಹಾಗೂ ಸಾರ್ವಜನಿಕರ ಕ್ಷಮೆ ಯಾಚಿಸಬೇಕು. ಏರ್ ಇಂಡಿಯಾದ ವೈಭವವನ್ನು ಮರುಸ್ಥಾಪಿಸುವ ಪಣ ತೊಡಬೇಕು. ಸಮಸ್ಯೆಗಳನ್ನು ಸರಿಪಡಿಸಲು ಟಾಟಾ ಸಮೂಹ ಬೇರೆಡೆ ನೋಡಬೇಕಿಲ್ಲ. ಜೆಆರ್‌ಡಿ ಟಾಟಾ ಅವರು ಏರ್ ಇಂಡಿಯಾವನ್ನು ಹೇಗೆ ಮುನ್ನಡೆಸುತ್ತಿದ್ದರು ಎಂಬುದನ್ನು ಪರಿಶೀಲಿಸಬೇಕು. ಸಿಂಗಪುರ ಏರ್‌ಲೈನ್ಸ್ ಕಂಪನಿಯು ತಮ್ಮ ಗಗನಸಖಿಯರನ್ನು ‘ಐಕಾನ್’ಗಳಂತೆ ಪ್ರಸಿದ್ಧಿಗೆ ತರುವ ಮೊದಲೇ, ಏರ್ ಇಂಡಿಯಾ ಕಂಪನಿಯ ಗಗನಸಖಿಯರು ರೇಷ್ಮೆ ಸೀರೆ ಉಟ್ಟುಕೊಂಡು ದೇಶದ ಬಹುಸಂಸ್ಕೃತಿಯನ್ನು ಪ್ರತಿನಿಧಿಸುತ್ತಿದ್ದರು.

ಜೆಆರ್‌ಡಿ ಅವರು ಸಣ್ಣ ವಿಚಾರಗಳನ್ನು ಅಲಕ್ಷಿಸುತ್ತಿರಲಿಲ್ಲ. ಅವರು ವಿಮಾನದಲ್ಲಿ ಪ್ರಯಾಣಿಕರ ಜೊತೆ ಮಾತನಾಡುತ್ತಿದ್ದರು, ಅದಕ್ಕೆ ಸಂಬಂಧಿಸಿದಂತೆ ವಿಭಾಗಗಳ ಮುಖ್ಯಸ್ಥರಿಗೆ ಪತ್ರ ಬರೆಯುತ್ತಿದ್ದರು. ವಿಮಾನದಲ್ಲಿನ ಕಾಫಿ ಕಪ್, ಮಗ್‌ಗಳ ಮೇಲಿನ ಚಿಕ್ಕ ಕಲೆಯನ್ನೂ ಒರೆಸುತ್ತಿದ್ದರು. ಅಡುಗೆಯ ಬಗ್ಗೆ, ವಿಮಾನ ಪ್ರವೇಶಿಸಿದ ತಕ್ಷಣ ಕಿವಿಗೆ ಬೀಳುವ ಸಂಗೀತದ ಬಗ್ಗೆ, ಗಗನಸಖಿಯರ ಉಡುಗೆ–ತೊಡುಗೆ ಹಾಗೂ ಅವರ ಕೇಶವಿನ್ಯಾಸದ ಬಗ್ಗೆ ಅವರು ಗಮನ ನೀಡುತ್ತಿದ್ದರು. ವಿಮಾನಗಳು ಸಮಯಕ್ಕೆ ಸರಿಯಾಗಿ ಪ್ರಯಾಣ ಆರಂಭಿಸುತ್ತಿದ್ದವು. ಕಾರ್ಯಾಚರಣೆಯಲ್ಲಿ ಲೋಪ ಇರುತ್ತಿರಲಿಲ್ಲ. ಏರ್ ಇಂಡಿಯಾ ಕಂಪನಿಯು ಆಗತಾನೇ ಸ್ವಾತಂತ್ರ್ಯ ಪಡೆದು, ಕರಾಳ ಇತಿಹಾಸದಿಂದ ಬಿಡುಗಡೆ ಹೊಂದಿದ್ದ ದೇಶದ ನಿಜವಾದ ಹೆಮ್ಮೆ, ನಿಜವಾದ ರಾಯಭಾರಿ ಆಗಿ ಬೆಳೆದಿತ್ತು.

ಈಗ ನಡೆದಿರುವ ಕೊಳಕು ಪ್ರಸಂಗವು ಟಾಟಾ ಸಮೂಹಕ್ಕೆ ಒಂದು ಎಚ್ಚರಿಕೆಯ ಕರೆಗಂಟೆ. ಏರ್ ಇಂಡಿಯಾ ಕಂಪನಿಯು ಸುಧಾರಣೆ ಕಾಣದೆ ಮತ್ತೆ ಮೊದಲಿನಂತಾಗಿಬಿಟ್ಟರೆ ಪ್ರಯಾಣಿಕರ ಪಾಲಿಗೆ ಒಂದು ದುರಂತ ಸಂಭವಿಸಿದಂತೆಯೇ ಸರಿ.

ಲೇಖಕ: ಏರ್ ಡೆಕ್ಕನ್ ಕಂಪನಿಯ ಸಂಸ್ಥಾಪಕ

ಚುರುಮುರಿ

ಬೆಲೆಯುಳ್ಳವರು

• ಸುಮಂಗಲಾ

ಬೆಕ್ಕಣ್ಣ ಬಲುಬೇಜಾರಿನಲ್ಲಿ ಮುಖ ಬಾಡಿಸಿಕೊಂಡು ಕೂತಿತ್ತು.

‘ನೋಡಿಲ್ಲಿ... 800 ಕೋಟಿ ರೂಪಾಯಿ ಆಸ್ತಿ ಇರೂ ಒಲಿವಿಯಾ ಬೆನ್ಸನ್ ಅನ್ನೋ ಬೆಕ್ಕು ಮೂರನೇ ಶ್ರೀಮಂತ ಸಾಕುಪ್ರಾಣಿ ಅಂತೆ. 822 ಕೋಟಿ ರೂಪಾಯಿ ಆಸ್ತಿ ಇರೋ ನಲ ಅನ್ನೋ ಬೆಕ್ಕು ಎರಡನೇ ಶ್ರೀಮಂತ ಸಾಕುಪ್ರಾಣಿ ಅಂತೆ. ನಿನ್ನ ಎಲ್ಲಾ ಚುರುಮುರಿವಳಗ ನಾನೇ ಮುಖ್ಯ ಪಾತ್ರಧಾರಿ... ನನಗ ನೋಡಿದ್ರ ಏನೂ ಆಸ್ತಿ ಇಲ್ಲ’ ಅಳುಮುಖದಲ್ಲಿ ಹೇಳಿತು.

‘ನಿನಗೆ ಯಾರರೇ ಬೆಲೆ ಕಟ್ಟತಾರೇನು... ನಿ ಅಗದಿ ಅಮೂಲ್ಯ’ ಎಂದು ಸಮಾಧಾನಿಸಲು ನೋಡಿದೆ.

‘ಏನು ಹಂಗಂದ್ರ... ನನಗ ಕಿಮ್ಮತ್ತು, ಬೆಲೆ ಇಲ್ಲೇನು’ ಮತ್ತೆ ಕ್ಯಾತೆ ತೆಗೆಯಿತು.

‘ಹಂಗಲ್ಲಲೇ... ನಿನ್ನ ಬೆಲೆಯನ್ನ ರೊಕ್ಕದಾಗೆ ಅಳೆಯಾಕೆ ಆಗಂಗಿಲ್ಲ ಅಂತ’.

‘ನಿನ್ನಂಥ ಯಃಕಶ್ಚಿತ್ ಬರಹಗಾತಿ ಮನ್ಯಾಗೆ ಇರೋ ಬದ್ಲಿಗೆ ಹಿಂಗೆ ವಿದೇಶದಾಗೆ ಖ್ಯಾತನಾಮರ ಮನಿವಳಗ ಇದ್ದಿದ್ದರೆ ನಾನೂ ಇಷ್ಟೊತ್ತಿಗೆ ಎಷ್ಟು ಪ್ರಸಿದ್ಧಿ ಆಗತಿದ್ದೆ. ಒಟ್ಟು ನಿನ್ನ ಮನ್ಯಾಗೆ ಇದ್ದು ನನಗೆ ಬೆಲೆ ಇಲ್ಲದಂಗೆ ಆಗ್ಯೆತೆ’.

‘ನೋಡಲೇ... ನಮ್ಮ ದೇಶದಾಗೆ ಬೆಲೆ ಇರೂದು ಶಾಸಕರು, ಮಂತ್ರಿಗಳು, ಅಧಿಕಾರಿಗಳ ಕುರ್ಚಿಗಳಿಗೆ ಮಾತ್ರ. ಅವುಗಳ ಬೆಲೆ ಮಾತ್ರ ಹೆಚ್ಚಾಗ್ತಲೇ ಹೊಂಟೈತಿ’ ಎಂದು ಮಾತು ಬದಲಿಸಿದೆ.

‘ಹೌದು ಮತ್ತ... ಎಲ್ಲಾರಿನ್ನೂ ಕೊಂಡುಕೊಳ್ಳೋ ದಮ್ಮು ಇರೂದು ಕೆಲವೇ ಕಾರ್ಪೊರೇಟ್ ಧಣಿಗಳಿಗೆ ಮಾತ್ರ’.

‘ನಿಮ್ಮ ಜನಾರ್ದನ ರೆಡ್ಡಿಯಂಕಲ್ಲು ಏನು ಕಡಿಮೆ... ನೋಡು, ಹೊಸ ಪಕ್ಷ ಕಟ್ಟಿ, ತನ್ನ ತಾಕತ್ತು ಎಷ್ಟ್ ಐತಿ ಅಂತ ತೋರಿಸಾಕೆ ಹತ್ಯಾರ’.

‘ನಮ್ಮ ರೆಡ್ಡಿಯಂಕಲ್ಲು ಮುಟ್ಟೋ ತಾಕತ್ತು ಮಾತ್ರ ಯಾರಿಗೂ ಇಲ್ಲ. ಕಮಲಕ್ಕನ ಮನಿಯವರು ಬ್ಯಾರೆಯವರ ಮ್ಯಾಗೆ ಇ.ಡಿ ದಾಳಿ ನಡೆಸಿದಂತೆ ರೆಡ್ಡಿಯಂಕಲ್ಲಿನ ಮ್ಯಾಗೆ ಇ.ಡಿ ದಾಳಿ ಹೆಸರು ಎತ್ತೂ ದಮ್ಮು ತೋರಿಸಂಗಿಲ್ಲ ಬಿಡು’ ಎಂದು ಕುಹಕವಾಡಿ ನಕ್ಕಿತು.

ಸಂಗತ

ಕಾಡಿನ ವೈವಿಧ್ಯವೇ ನಾಡಿನ ಜೀವಾಳ!

ಸಸ್ಯವೈವಿಧ್ಯದ ಸಮೃದ್ಧಿಯ ಅಡಿಪಾಯವಿರುವುದೇ ಪ್ರಾಣಿವೈವಿಧ್ಯದ ಸನ್ನಿಧಿಯಲ್ಲಿ

• ಅಖಿಲೇಶ್ ಚಿಪ್ಪಳಿ

ರಾಜಪ್ರಭುತ್ವದ ಆಳ್ವಿಕೆಯನ್ನು ಪ್ರತಿನಿಧಿಸುವ ಕೊಂಡಿಯಾದ ಮೈಸೂರು ಸಂಸ್ಥಾನದ ರಾಜಮನೆತನದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮೊನ್ನೆ ಶಿವಮೊಗ್ಗದ ಖಾಸಗಿ ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಾ, ‘ಆಳುವ ಸರ್ಕಾರಗಳು ಮಾನವ- ವನ್ಯಜೀವಿ ಸಂಘರ್ಷವನ್ನು ತಪ್ಪಿಸಬೇಕು. ಸರ್ಕಾರದ ಅಭಿವೃದ್ಧಿ ಮಾದರಿಗಳು ಸುಸ್ಥಿರವಾಗಿರಬೇಕು, ಅವು ದೂರದರ್ಶಿತ್ವ ಹೊಂದಿರಬೇಕು. ಜನಪರ ನೀತಿ– ನಿಯಮ ಜಾರಿಗೊಳಿಸುವಾಗ ಮೈಸೂರು ಸಂಸ್ಥಾನದ ಆಡಳಿತ ಮಾದರಿಯನ್ನು ಗಮನಿಸಬೇಕು...’ ಎಂದರು. ಹೆಚ್ಚುಕಡಿಮೆ ಇದೇ ಹೊತ್ತಿನಲ್ಲಿ, ‘ಕಾಂತಾರ’ ಚಲನಚಿತ್ರದ ನಿರ್ದೇಶಕ ರಿಷಬ್ ಶೆಟ್ಟಿ ಅವರು ಮತ್ತೊಂದು ಕಾರ್ಯಕ್ರಮವೊಂದರಲ್ಲಿ, ‘ಮಾನವ-ವನ್ಯಜೀವಿ ಸಂಘರ್ಷದಲ್ಲಿ ಮಾನವ ಸೋಲಬೇಕು, ಆಗ ಮಾತ್ರ ಮನುಕುಲ ಉಳಿಯಲು ಸಾಧ್ಯ’ ಎನ್ನುವ ಮಾತನ್ನು ಒತ್ತಿ ಹೇಳಿದರು.

ಇತ್ತೀಚೆಗೆ ನಡೆದ ರಾಜ್ಯ ವನ್ಯಜೀವಿ ಮಂಡಳಿಯ ಸಭೆಯಲ್ಲಿ ಮಾನವ- ವನ್ಯಜೀವಿ ಸಂಘರ್ಷದ ಕುರಿತಾಗಿ ಚರ್ಚೆಯಾಗಿತ್ತು, ಅರಣ್ಯ ಭವನದಲ್ಲಿ ಬೀಡು ಬಿಟ್ಟಿರುವ ಉನ್ನತಾಧಿಕಾರಿಗಳು ಕಾಡಿನ ಕಡೆ ನಡೆಯಬೇಕು ಎಂದು ಮುಖ್ಯಮಂತ್ರಿ ಆಶಯ ವ್ಯಕ್ತಪಡಿಸಿದ್ದರು. ಇದರ ಫಲವಾಗಿ, ಅನೇಕ ಉನ್ನತ ಹುದ್ದೆಗಳನ್ನು ಅರಣ್ಯ ಭವನದಿಂದ ಬೇರ್ಪಡಿಸಿ, ವಿವಿಧ ಜಿಲ್ಲೆಗಳಿಗೆ ವರ್ಗಾಯಿಸುವ ಕೆಲಸವನ್ನು ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಮಲೆನಾಡಿನ ಹೆಚ್ಚಿನ ರೈತರು ಸಣ್ಣ ಹಿಡುವಳಿದಾರರಾಗಿದ್ದಾರೆ. ಹೀಗಿದ್ದರೂ ಅವರು ತಮ್ಮ ಮನೆಗೆ ಬೇಕಾಗುವಷ್ಟು ಶುಂಠಿ, ಅರಿಸಿನದಂತಹ ಪದಾರ್ಥಗಳನ್ನು ಬೆಳೆದುಕೊಳ್ಳುವುದು ಸರ್ವೇಸಾಮಾನ್ಯವಾಗಿತ್ತು. ಶುಂಠಿ- ಅರಿಸಿನ ವಾಣಿಜ್ಯ ಬೆಳೆಯಾಗಿ ಪರಿವರ್ತನೆಯಾಗಿರಲಿಲ್ಲ. 1990ರ ದಶಕದಲ್ಲಿ ಕೇರಳದಿಂದ ಬಂದ ಅಲ್ಲಿನ ಕೃಷಿಕರು ಮಲೆನಾಡಿನ ರೈತರ ಜಮೀನುಗಳನ್ನು ಗುತ್ತಿಗೆ ಆಧಾರದ ಮೇಲೆ ಪಡೆದು ಶುಂಠಿ ಬೆಳೆಯಲು ಪ್ರಾರಂಭಿಸಿದರು. ಅತಿಹೆಚ್ಚು ಕೀಟನಾಶಕ, ರಾಸಾಯನಿಕ ಗೊಬ್ಬರ ಹಾಕಿ ಬೆಳೆಸಿದ ಶುಂಠಿಯನ್ನು ಉತ್ತರ ಭಾರತದ ಬೇಡಿಕೆ ಪೂರೈಸಲು ಬಳಸುತ್ತಿದ್ದರು.

ಅಲ್ಪಾವಧಿ ಬೆಳೆಯಾದ ಶುಂಠಿಯು ಲಾಭದಾಯಕ ಬೆಳೆ ಎಂದು ಮಲೆನಾಡಿನ ರೈತರಿಗೆ ಅನಿಸಿತು. ಕೇರಳದ ಮಾದರಿಯಲ್ಲೇ ಶುಂಠಿಯನ್ನು ಬೆಳೆಯಲು ಪ್ರಾರಂಭಿಸಿದರು. ಅದೆಷ್ಟೋ ಎಕರೆ ಸಮೃದ್ಧ ಕಾಡು ಬರೀ ಶುಂಠಿ ಬೆಳೆಯಲ್ಲೇ ನಾಶವಾಗಿದ್ದು ಕಣ್ಣೆದುರಿಗೇ ರಾಚುವಷ್ಟಿದೆ. ಅನಿಯಂತ್ರಿತ ಕೀಟನಾಶಕ ಬಳಸಿಯೂ ಮಲೆನಾಡಿನ ಮಣ್ಣಿನಲ್ಲಿ ಇನ್ನೂ ಬೆಳೆ ಬೆಳೆಯಲಾಗುತ್ತಿದೆಯೆಂದರೆ ಅದಕ್ಕೆ ಕಾರಣ ಅಲ್ಲಿರುವ ಕಾಡು ಹಾಗೂ ಕಾಡಿನ ಮಣ್ಣಿನಡಿಯಲ್ಲಿ ಅಗಣಿತ ಸಂಖ್ಯೆಯಲ್ಲಿ ಇರುವ ಸೂಕ್ಷ್ಮಜೀವಿಗಳು. ನೀರು, ಗಾಳಿ, ಮಣ್ಣು ಹೀಗೆ ಬೇರೆ ಬೇರೆ ಮಾಧ್ಯಮಗಳ ಮೂಲಕ ಮಲೆನಾಡಿನ ರೈತರ ಹೊಲಕ್ಕೆ ಬರುವ ಕಾಡಿನ ಸೂಕ್ಷ್ಮಜೀವಿಗಳು ಇಲ್ಲಿನ ರೈತರ ಮಣ್ಣನ್ನು ಜೀವಂತವಾಗಿಡಲು ಪ್ರಮುಖ ಕಾರಣವಾಗಿವೆ.

ಅನೇಕ ಅಭಿವೃದ್ಧಿ ಯೋಜನೆಗಳಿಗಾಗಿ ಮಲೆನಾಡಿನ ಕಾಡು ನಾಶವಾಗುತ್ತಿದೆ. ಅದರಲ್ಲೂ ಹೆದ್ದಾರಿಗಳು, ಜಲವಿದ್ಯುತ್ ಯೋಜನೆಗಳು, ಅಣುಸ್ಥಾವರ ವಿಸ್ತರಣೆ, ರೈಲುಮಾರ್ಗದಂತಹವುಗಳಿಗಾಗಿ ನೈಸರ್ಗಿಕ ಕಾಡು ನಾಶವಾಗುತ್ತಿದೆ. ಸುಪ್ರೀಂ ಕೋರ್ಟ್, ಹಸಿರು ಪೀಠದ ಅನೇಕ ನಿರ್ದೇಶನಗಳ ಕಾರಣಕ್ಕೆ, ಅಭಿವೃದ್ಧಿಗಾಗಿ ಬಳಸುವ ಕಾಡಿಗೆ ಪರ್ಯಾಯವಾಗಿ ಬೇರೆಡೆ ಕಾಡನ್ನು ಬೆಳೆಸುವುದು ಕಡ್ಡಾಯವಾಗಿರುತ್ತದೆ. ಆದರೆ, ಇದು ಆಯಾ ಪ್ರದೇಶದ ಅರಣ್ಯ ಅಥವಾ ಹಸಿರು ಕವಚಕ್ಕೆ ಮಾತ್ರ ಪರ್ಯಾಯವಾಗಬಲ್ಲದೇ ವಿನಾ ಮೂಲ ಪ್ರದೇಶದಲ್ಲಿನ ಪ್ರಾಣಿವೈವಿಧ್ಯದ ಪ್ರಾಮುಖ್ಯದ ದೃಷ್ಟಿಯಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಅಭಿವೃದ್ಧಿ ಪೀಡನೆಗೆ ಒಳಗಾಗುವ ಪ್ರದೇಶದಲ್ಲಿರುವ ಸಿಂಗಳೀಕಗಳನ್ನಾಗಲೀ ಕಾನುಕುರಿಯನ್ನಾಗಲೀ ಅಲ್ಲಿನ ಮಣ್ಣಿನಲ್ಲಿರುವ ವಿಶಿಷ್ಟ ಸೂಕ್ಷ್ಮ ಜೀವಿಗಳನ್ನಾಗಲೀ ಅದೇ ಪ್ರದೇಶದಲ್ಲಿ ಮಾತ್ರ ಬೆಳೆಯುವ ಅಪೂರ್ವ ಸಸ್ಯ ಪ್ರಭೇದವನ್ನಾಗಲೀ ಪರ್ಯಾಯ ಪ್ರದೇಶಕ್ಕೆ ಸ್ಥಳಾಂತರಿಸುವುದು ಸಾಧ್ಯವಿಲ್ಲ.

ಪಶ್ಚಿಮಘಟ್ಟಗಳು ಅನೇಕ ನದಿಗಳ ತವರು. ಇಡೀ ದಕ್ಷಿಣ ಭಾರತಕ್ಕೆ ನೀರುಣಿಸುವ ಬೃಹತ್ ನೀರಿನ ತೊಟ್ಟಿಯದು. ಗುಡ್ಡಗಾಡುಗಳಲ್ಲಿ ಬೆಳೆದ ಅಸಂಖ್ಯ ಮರಗಿಡಬಳ್ಳಿಗಳೇ ಗುಡ್ಡಕ್ಕೆ ನೀರಿಂಗಿಸುವ ನೈಸರ್ಗಿಕ ಸಾಧನಗಳು. ಉದಾಹರಣೆಗೆ, ಶರಾವತಿ ನದಿ ಉಗಮವಾಗುವ ಜಲಾನಯನ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಂಡು, ಆ ಪ್ರದೇಶದಲ್ಲಿ ನಾಶವಾಗುವ ಮರಗಳಿಗೆ ಬದಲಿಯಾಗಿ ದೂರದ ಬಳ್ಳಾರಿಯಲ್ಲಿ ಪರ್ಯಾಯ ಅರಣ್ಯ ಬೆಳೆಸಿದಿರಿ ಎಂದುಕೊಳ್ಳಿ. ಬಳ್ಳಾರಿಯಲ್ಲಿ ಬೆಳೆಸಿದ ಪರ್ಯಾಯ ಕಾಡಿನ ನಡುವೆ ಶರಾವತಿ ನದಿ ಹುಟ್ಟಲು ಸಾಧ್ಯವೇ? ಕಳೆದುಕೊಂಡ ನೈಸರ್ಗಿಕ ಕಾಡು ಅಥವಾ ಅರಣ್ಯಪ್ರದೇಶದ ಬದಲಿಗೆ ಪರ್ಯಾಯ ಅರಣ್ಯ ಬೆಳೆಸುವ ಕಾರ್ಯಯೋಜನೆಗೆ ಅದರದೇ ಆದ ಅನೇಕ ಮಿತಿಗಳಿವೆ. ಪರ್ಯಾಯ ಕಾಡು ಬೆಳೆಸುವ ಕೆಲಸ ಯಾವಾಗಲೂ ಅಥವಾ ಎಲ್ಲೂ ಪರಿಪೂರ್ಣವೆಂದು ಅನಿಸಿಕೊಳ್ಳಲು ಸಾಧ್ಯವಿಲ್ಲ.

ಮಾನವ– ವನ್ಯಜೀವಿ ಸಂಘರ್ಷ ಹಾಗೂ ಈ ಕುರಿತಾಗಿನ ಚರ್ಚೆ ಈ ಹೊತ್ತಿನಲ್ಲಿ ಉತ್ತುಂಗದಲ್ಲಿದೆ. ಆರ್ಥಿಕ ಕ್ಷೇತ್ರದ ಪ್ರಮುಖರೂ ವನ್ಯಜೀವಿ ಸಂರಕ್ಷಣೆಯ ಮಾತುಗಳನ್ನಾಡುತ್ತಿದ್ದಾರೆ. ಮನುಷ್ಯನ ಸುಸ್ಥಿರ ಬದುಕಿಗೆ ವನ್ಯಜೀವಿಗಳ ಉಳಿವು ಬಹಳ ಮಹತ್ವದ್ದು ಎಂದು ಕರ್ಣಾಟಕ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿ.ಇ.ಒ. ಎಂ.ಎಸ್. ಮಹಾಬಲೇಶ್ವರ ಅವರು ಹೇಳಿರುವುದು ಉಲ್ಲೇಖಾರ್ಹ. ಸಮಾಜದ ಹತ್ತು ಹಲವು ವಲಯಗಳಿಗೆ ಸೇರಿದವರು ಈ ಕುರಿತು ದನಿ ಎತ್ತುತ್ತಿರುವುದು ಆಶಾದಾಯಕ.

ವಾಚಕರ ವಾಣಿ

ವ್ಯಕ್ತಿಯೊಬ್ಬ, ಪ್ರಶ್ನೆ ಹಲವು!

ಬ್ಯಾಗಿನಲ್ಲಿ ಹತ್ತು ಲಕ್ಷ ರೂಪಾಯಿ ನಗದು ಇಟ್ಟುಕೊಂಡು ಬಂದಿದ್ದ ವ್ಯಕ್ತಿಯನ್ನು ವಿಧಾನಸೌಧ ಪಶ್ಚಿಮ ದ್ವಾರದ ಬಳಿ ಪೊಲೀಸರು ಪತ್ತೆಹಚ್ಚಿದ್ದಾರೆ ಎನ್ನುವುದು ಬಹುಮುಖ್ಯ ಸುದ್ದಿಯಾಗಿದೆ. ‘ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಲಾಗುವುದು’ ಎಂದು ಮುಖ್ಯಮಂತ್ರಿಯವರೇ ಪ್ರಕಟಿಸುವಷ್ಟು ವ್ಯಾಪ್ತಿಯು ಸುದ್ದಿಗೆ ಪ್ರಾಪ್ತವಾಗಿದೆ. ಇದರ ಬಗ್ಗೆ ಬೇಕಾದಷ್ಟು ಗೇಲಿ, ವ್ಯಂಗ್ಯ, ವಿಡಂಬನೆಗಳು ರಾಜಕೀಯ ವಲಯದಲ್ಲಿ ನಡೆದಿವೆ. ಅರ್ಥವಾಗದಿರುವ ಪ್ರಶ್ನೆಯೆಂದರೆ, ಬೆಂಗಳೂರಿನ ಆಯಕಟ್ಟಿನ ಸ್ಥಳಗಳಲ್ಲಿ, ಅಂದರೆ, ತಾಲ್ಲೂಕು ಕಚೇರಿ, ಮೆಟ್ರೊಪಾಲಿಟನ್ ನ್ಯಾಯಾಲಯ ಸಂಕೀರ್ಣ, ಮಹಾನಗರಪಾಲಿಕೆ ಕಾರ್ಯಾಲಯ, ಪೊಲೀಸ್ ಮಹಾನಿರ್ದೇಶಕರ ಕಾರ್ಯಾಲಯ, ವಿಧಾನಸೌಧ, ವಿಕಾಸಸೌಧ, ವಿಶ್ವೇಶ್ವರಯ್ಯ ಗೋಪುರ ಸಂಕೀರ್ಣದಂತಹ ಪರಿಸರದಲ್ಲಿ ಯಾರೂ ಹೆಚ್ಚಿನ ನಗದು ಇಟ್ಟುಕೊಂಡು ನಡೆದಾಡುವುದೇ ಇಲ್ಲವೇ? ಪ್ರತಿಯೊಬ್ಬರ ಬ್ಯಾಗ್, ಬ್ಯಾಕ್‌ಪ್ಯಾಕ್‌ಗಳನ್ನೂ ಪೊಲೀಸರು ತನಿಖೆ ಮಾಡುತ್ತಾರೆಯೇ? ಒಬ್ಬನನ್ನು ಹಿಡಿದುಹಾಕಿದ್ದೇ ಕಾವಲು ಸಿಬ್ಬಂದಿಯ ಮಹಾಸಾಧನೆ ಎನಿಸಬಹುದೇ? ಈ ಒಬ್ಬ ಮಾತ್ರ ಇಷ್ಟು ದುಡ್ಡನ್ನು ಅಕ್ರಮವಾಗಿ ಸಾಗಿಸುತ್ತಿದ್ದು ಮಿಕ್ಕವರೆಲ್ಲಾ ‘ಕ್ರಮವರಿತು’ ಪಾಲಿಸುತ್ತಿದ್ದರೇ?

ಆರ್.ಕೆ.ದಿವಾಕರ, ಬೆಂಗಳೂರು

ಕಾವ್ಯ ಸೃಷ್ಟಿಯೇ ಬೌದ್ಧಿಕ ಚಟುವಟಿಕೆಯಲ್ಲವೇ?

ಹಾವೇರಿಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ದೊಡ್ಡರಂಗೇಗೌಡ ಅವರು ಬುದ್ಧಿಜೀವಿಗಳನ್ನು ಕೂಪ ಮಂಡೂಕತನಕ್ಕೆ ಹೋಲಿಸಿದ್ದು ಸರಿಯಲ್ಲ. ಹಾಗೆ ನೋಡಿದರೆ ಕಾವ್ಯ ಸೃಷ್ಟಿಯೇ ಒಂದು ಬೌದ್ಧಿಕ ಚಟುವಟಿಕೆಯಲ್ಲವೇ? ಸ್ವತಃ ಕವಿಯಾದ ದೊಡ್ಡರಂಗೇಗೌಡರು ಹೀಗೇಕೆ ಹೇಳಿದರೋ ಅರ್ಥವಾಗಲಿಲ್ಲ. ಯಾವುದೇ ಭಿನ್ನಾಭಿಪ್ರಾಯವನ್ನು ಸಹಿಸದಿರುವುದು ಸಹ ಸರ್ವಾಧಿಕಾರವಾಗುತ್ತದೆ. ಹಾಗೆಯೇ ‘ಸಹಜೀವನ ಸಂಪ್ರದಾಯ ನಾಡಿನ ಸಂಸ್ಕೃತಿಗೆ ವಿರುದ್ಧ’ ಎಂದಿದ್ದಾರೆ ಸಮ್ಮೇಳನದ ಅಧ್ಯಕ್ಷರು. ಸಹಜೀವನ ಸಂಪ್ರದಾಯ ನಮ್ಮ ಜನಪದ ಸಂಪ್ರದಾಯದಲ್ಲಿ ಎಂದಿನಿಂದಲೋ ಇದೆ, ಯಶಸ್ವಿಯೂ ಆಗಿದೆ. ಸಹಜೀವನವನ್ನು ತಪ್ಪಾಗಿ ಅರ್ಥೈಸುವುದರಿಂದ ಜಾನಪದ ಸಂಸ್ಕೃತಿಯನ್ನು ಅವಮಾನಿಸಿದಂತೆ ಆಗುವುದಿಲ್ಲವೇ?!

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಸ್ತಬ್ಧಚಿತ್ರ ಆಯ್ಕೆ: ಎಲ್ಲರಿಗೂ ಸಿಗಲಿ ಅವಕಾಶ

ರಾಜ್ಯದಿಂದ ಸ್ತಬ್ಧಚಿತ್ರವು ಸತತವಾಗಿ 13 ವರ್ಷಗಳಿಂದ ದೆಹಲಿಯ ಗಣರಾಜ್ಯೋತ್ಸವದಲ್ಲಿ ಭಾಗವಹಿಸಿ, ಕನ್ನಡ ಮಣ್ಣಿನ ಕಂಪನ್ನು ದೇಶದೆಲ್ಲೆಡೆ ಪಸರಿಸುತ್ತಿತ್ತು. ಆದರೆ ಈ ವರ್ಷದ ಗಣರಾಜ್ಯೋತ್ಸವದಲ್ಲಿ ಸಿರಿಧಾನ್ಯಗಳ ಬಗ್ಗೆ ಮಾಡಲಾಗಿದ್ದ ಕರ್ನಾಟಕದ ಸ್ತಬ್ಧಚಿತ್ರವು ಆಯ್ಕೆಯ ಕೊನೆಯ ಸುತ್ತಿನಲ್ಲಿ ಸೋತಿರುವುದು ಬೇಸರದ ಸಂಗತಿ.

ಹೋದ ವರ್ಷ ಕರ್ನಾಟಕದ ಕರಕುಶಲ ವಸ್ತುಗಳ ಸೊಗಡಿನ ಸ್ತಬ್ಧಚಿತ್ರ ಎರಡನೇ ಬಹುಮಾನ ಪಡೆದಿತ್ತು ಎಂಬುದು ನಮ್ಮ ಹೆಮ್ಮೆಯ ಸಂಗತಿ. ರೋಸ್ಟರ್ ಪದ್ಧತಿ ಮೂಲಕ ಆಯ್ಕೆ ಮಾಡುತ್ತಿರುವುದರಿಂದ ಎಲ್ಲಾ ರಾಜ್ಯಗಳ ಸ್ತಬ್ಧಚಿತ್ರಗಳಿಗೆ ಅವಕಾಶ ಸಿಗುತ್ತಿಲ್ಲ. ಈ ಪದ್ಧತಿ ಬಿಟ್ಟು ಎಲ್ಲ ರಾಜ್ಯ, ಕೇಂದ್ರಾಡಳಿತ ಪ್ರದೇಶಗಳಿಗೂ ಅವಕಾಶ ನೀಡಬೇಕು. ಅಂದಾಗ ಸಮಗ್ರತೆ, ಒಕ್ಕೂಟ ವ್ಯವಸ್ಥೆಗೆ ಮತ್ತಷ್ಟು ಕಳೆ ಬರಲಿದೆ.

ಬಸನಗೌಡ ಪಾಟೀಲ, ಯರಗುಪ್ಪಿ, ಧಾರವಾಡ

ಸರ್ಕಾರಿ ಖಜಾನೆ ತುಂಬಿಸುವ ಇರಾದೆ?

ಯೋಜನಾ ಅಭಿವೃದ್ಧಿ ಪ್ರಾಧಿಕಾರದ ಅನುಮೋದನೆ ಪಡೆಯದೇ ನಿವೇಶನಗಳಿಗೆ ಇ-ಸ್ವತ್ತು ಮಾಡಿಕೊಟ್ಟಿರುವ ಆರೋಪದ ಮೇಲೆ ಪೌರಾಯುಕ್ತ, ಕಂದಾಯ ಅಧಿಕಾರಿಯನ್ನು ಅಮಾನತು ಮಾಡಿರುವ ಸುದ್ದಿ (ಪ್ರ.ವಾ., ಜ. 8) ಓದಿ ಸರ್ಕಾರದ ದ್ವಂದ್ವ ನೀತಿಯ ಬಗ್ಗೆ ನಗಬೇಕೋ ಅಳಬೇಕೋ ಗೊತ್ತಾಗಲಿಲ್ಲ. ನಗರಸಭೆಗಳು ನಿವೇಶನಗಳನ್ನು ಖರೀದಿಸಿದ ಮಾಲೀಕರಿಗೆ ಖಾತಾ ನೀಡುವುದೇ ಸಂಬಂಧಿತ ಯೋಜನಾ ಅಭಿವೃದ್ಧಿ ಪ್ರಾಧಿಕಾರದ ಅನುಮತಿ ಪಡೆದಿರುವ ಬಡಾವಣೆಗಳಲ್ಲಿನ ನಿವೇಶನಗಳಿಗೆ ಮಾತ್ರ ಎಂದಾದರೆ, ಅಂತಹ ಅನುಮತಿರಹಿತ ಬಡಾವಣೆಗಳಲ್ಲಿನ ನಿವೇಶನಗಳನ್ನು ಬಡಾವಣೆ ನಿರ್ಮಾಪಕರು ಹೇಗೆ ಮಾರುತ್ತಿದ್ದಾರೆ ಮತ್ತು ಸರ್ಕಾರದ್ದೇ ಆದ ಉಪನೋಂದಣಿ ಕಚೇರಿಗಳಲ್ಲಿ ಹೇಗೆ ಆ ಮಾರಾಟವನ್ನು ನೋಂದಾಯಿಸಲಾಗುತ್ತದೆ?

ಇದು ಕೇವಲ ನೋಂದಣಾ ಶುಲ್ಕ ವಸೂಲಿ ಮೂಲಕ ಸರ್ಕಾರಿ ಖಜಾನೆ ತುಂಬಿಸುವ ಇರಾದೆಯಲ್ಲದೆ ಮತ್ತೇನು? ಸರ್ಕಾರದ್ದೇ ಕಚೇರಿಗಳಿಗೆ ದ್ವಂದ್ವದ ಆದೇಶಗಳೇ? ಉಪನೋಂದಣಿ ಕಚೇರಿಗೆ ವ್ಯವಹಾರ ಸರಿ ಎನಿಸಿದ್ದು ಯೋಜನಾ ಅಭಿವೃದ್ಧಿ ಪ್ರಾಧಿಕಾರಕ್ಕೆ ಸರಿಯಲ್ಲವೇ? ನಿವೇಶನ ಖರೀದಿ ಪತ್ರಗಳಲ್ಲಿ ಯಾವ ಸರ್ವೆ ಸಂಖ್ಯೆಯಲ್ಲಿ ಬಡಾವಣೆ ನಿರ್ಮಿಸಿ ಎಷ್ಟು ನಿವೇಶನಗಳನ್ನು ವಿಂಗಡಿಸಲಾಗಿದೆ, ನಿವೇಶನದ ಸಂಖ್ಯೆ, ಚೆಕ್ಕುಬಂದಿ ವಿವರಗಳಿರುತ್ತವೆಯಲ್ಲವೇ! ಇಷ್ಟಿದ್ದೂ ಯೋಜನಾ ಅಭಿವೃದ್ಧಿ ಪ್ರಾಧಿಕಾರದ ಅನುಮತಿ ಪತ್ರ ಮತ್ತಿತರ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸದೆ ನೋಂದಣಾಧಿಕಾರಿಗಳು ಅಂತಹ ದೋಷಪೂರಿತ ವ್ಯವಹಾರವನ್ನು ಹೇಗೆ ಅನುಮೋದಿಸಿ ನೋಂದಣಿ ಮಾಡುತ್ತಾರೆ? ಯೋಜನಾ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳಿಗೆ ಮಾತ್ರ ಶಿಕ್ಷೆ, ನೋಂದಣಿ ಅಧಿಕಾರಿಗಳು ಮತ್ತು ಅಂತಹ ನಿವೇಶನಗಳನ್ನು ಮಾರಾಟ ಮಾಡಿದ ಬಡಾವಣೆ ನಿರ್ಮಾಪಕರಿಗೆ ಶಿಕ್ಷೆ ಇಲ್ಲವೇ?

ರಮೇಶ್, ಬೆಂಗಳೂರು

ಭಿನ್ನಾಭಿಪ್ರಾಯ ಬಗೆಹರಿಯಲಿ

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಬೆಂಬಲಿಗರು, ಅಭಿಮಾನಿಗಳ ಬಳಗ ಹಾಗೂ ಜನಸಾಹಿತ್ಯ ಸಮ್ಮೇಳನದ ಬೆಂಬಲಿಗರು, ಅಭಿಮಾನಿಗಳ ನಡುವೆ, ಪತ್ರಿಕೆಗಳ ಮೂಲಕ ನಡೆಯುತ್ತಿರುವ ಪರಸ್ಪರ ಕೆಸರೆರಚಾಟವು ಸಾರ್ವಜನಿಕ ನಲ್ಲಿ ಬಳಿಯ ಜಗಳ, ಕಚ್ಚಾಟದ ಮಟ್ಟವನ್ನು ತಲುಪಿದೆ. ಇದು ಜನರಿಗೆ ಪುಕ್ಕಟೆ ಮನರಂಜನೆ ಒದಗಿಸುತ್ತಿದೆಯೇ ವಿನಾ ಕನ್ನಡ ನಾಡು-ನುಡಿಯ ಹಿತಸಾಧನೆಯ ದೃಷ್ಟಿಯಿಂದ ಹೆಚ್ಚಿನದ್ದೇನನ್ನೂ ಸಾಧಿಸುತ್ತಿಲ್ಲ. ಈ ಬೆಳವಣಿಗೆ ಇವರೆಲ್ಲರ ಅಮೂಲ್ಯವಾದ ಸಮಯ ಮತ್ತು ಸಂಪನ್ಮೂಲಗಳ ಅಪವ್ಯಯಕ್ಕೆ ಕಾರಣವಾಗಿರುವುದು ಅತ್ಯಂತ ಆತಂಕಕಾರಿ ವಿಚಾರ. ಕನ್ನಡ ಸಾಹಿತ್ಯ ಸಮ್ಮೇಳನದ ಆಯೋಜಕರು ಹಾಗೂ ಜನಸಾಹಿತ್ಯ ಸಮ್ಮೇಳನದ ಆಯೋಜಕರು ಒಂದೆಡೆ ಕಲೆತು ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಬಾರದೇ? ಕನ್ನಡದ ನುಡಿ ತೇರನ್ನು ಎಳೆಯಲಾಗದೇ? ಎಳೆಯಬಾರದೇ?

ಡಾ. ಎಂ.ರವೀಂದ್ರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕುರುಹು ಪತ್ತೆ ಇಲ್ಲದ 50 ತಾಣಗಳು

ಸ್ಮಾರಕ ಸಂರಕ್ಷಣೆಗೆ ನಿರ್ಲಕ್ಷ್ಯ

ಪ್ರಜಾವಾಣಿ ವಾರ್ತೆ

ದೇಶದ 3,693 ಐತಿಹಾಸಿಕ ಸ್ಮಾರಕಗಳು ಭಾರತೀಯ ಪುರಾತತ್ವ ಇಲಾಖೆಯ (ಎಎಸ್‌ಐ) ಸಂರಕ್ಷಣೆಯಲ್ಲಿವೆ. ಆದರೆ, ಅವುಗಳ ಪೈಕಿ 50 ಸ್ಮಾರಕಗಳು ಎಲ್ಲಿವೆ ಎಂಬುದರ ಕುರುಹೇ ಪತ್ತೆ ಆಗುತ್ತಿಲ್ಲ ಎಂದು ಸಾರಿಗೆ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಂಸದೀಯ ಸಮಿತಿಯು ಸಂಸತ್ತಿಗೆ ಸಲ್ಲಿಸಿದ ವರದಿಯಲ್ಲಿ ಹೇಳಿದೆ. ಸ್ಮಾರಕಗಳ ಸಂರಕ್ಷಣೆಯಲ್ಲಿ ಆಗುತ್ತಿರುವ ಅಸಡ್ಡೆಯ ಕುರಿತು ಸಮಿತಿಯು ತೀವ್ರ ಕಳವಳ ವ್ಯಕ್ತಪಡಿಸಿದೆ.

ಮಹಾಲೇಖಪಾಲರು (ಸಿಎಜಿ) 2013ರಲ್ಲಿಯೇ 'ಸ್ಮಾರಕಗಳು ಮತ್ತು ಪ್ರಾಚೀನ ವಸ್ತುಗಳ ಸಂರಕ್ಷಣೆಯ ಕಾರ್ಯಕ್ಷಮತೆಯ ಪರಿಶೀಲನೆ' ಎಂಬ ವರದಿಯನ್ನು ಸಿದ್ಧಪಡಿಸಿ ಸರ್ಕಾರದ ಗಮನ ಸೆಳೆದಿದ್ದರು. 92 ಸ್ಮಾರಕಗಳ ಕುರುಹು ಪತ್ತೆಯಾಗುತ್ತಿಲ್ಲ ಎಂದು ವರದಿಯಲ್ಲಿ ಹೇಳಲಾಗಿತ್ತು. ಈ ವರದಿಯನ್ನು ಗಂಭೀರವಾಗಿ ಪರಿಗಣಿಸಿದ್ದ ಭಾರತೀಯ ಪುರಾತತ್ವ ಇಲಾಖೆಯು ಎಲ್ಲಿವೆ ಎಂಬುದೇ ಗೊತ್ತಿಲ್ಲದ ಸ್ಮಾರಕಗಳ ಪತ್ತೆಗೆ ಮುಂದಾಗಿತ್ತು. ಹಳೆಯ ದಾಖಲೆಗಳು, ಕಂದಾಯ ನಕ್ಷೆಗಳು ಮತ್ತು ಪ್ರಕಟವಾಗಿದ್ದ ವರದಿಗಳ ಅಧ್ಯಯನ ನಡೆಸಿ 42 ಸ್ಮಾರಕಗಳ ಗುರುತು ಪತ್ತೆ ಮಾಡಿತ್ತು. ತೀವ್ರವಾದ ನಗರೀಕರಣದಿಂದಾಗಿ 14 ಸ್ಮಾರಕಗಳ ಗುರುತು ನಷ್ಟವಾಗಿದೆ, 12 ಸ್ಮಾರಕಗಳು ಅಣೆಕಟ್ಟೆಯೊಳಗೆ ಮುಳುಗಿ ಹೋಗಿವೆ ಮತ್ತು 24 ಸ್ಮಾರಕಗಳು ಎಲ್ಲಿವೆ ಎಂಬುದನ್ನು ಪತ್ತೆ ಮಾಡುವುದಕ್ಕೇ ಸಾಧ್ಯವಾಗಿಲ್ಲ ಎಂಬ ನಿರ್ಧಾರಕ್ಕೆ ಎಎಸ್‌ಐ ಬಂದಿದೆ.

ನಗರೀಕರಣ, ಗಜೆಟ್ ಅಧಿಸೂಚನೆಯಲ್ಲಿ ಸಮರ್ಪಕವಾದ ವಿವರಗಳು ಇಲ್ಲದಿರುವುದು, ಪತ್ತೆ ಮಾಡಲು ಸಾಧ್ಯವೇ ಇಲ್ಲದಂತಹ ಸ್ಥಳದಲ್ಲಿ ಸ್ಮಾರಕಗಳು ಇರುವುದು, ದಟ್ಟ ಅರಣ್ಯದೊಳಗೆ ಇರುವುದು ಇತ್ಯಾದಿ ಸ್ಮಾರಕಗಳ ಕುರುಹು ಪತ್ತೆ ಆಗದೇ ಇರುವುದಕ್ಕಿರುವ ಕಾರಣಗಳಾಗಿವೆ ಎಂದು ಎಎಸ್‌ಐ ಹೇಳಿದೆ. ನಿರ್ದಿಷ್ಟ ಅವಧಿಯವರೆಗೆ ಪತ್ತೆಯಾಗದ ಸ್ಮಾರಕಗಳನ್ನು ಕುರುಹು ಪತ್ತೆಯಾಗದ ಸ್ಮಾರಕ ಎಂಬ ವರ್ಗಕ್ಕೆ ಎಎಸ್‌ಐ ಸೇರಿಸುತ್ತದೆ. ವೈಜ್ಞಾನಿಕ ಸಲಕರಣೆಗಳನ್ನು ಬಳಸಿಕೊಂಡು ದಾಖಲೆಗಳ ಪರಿಶೋಧನೆ ಮತ್ತು ಕ್ಷೇತ್ರ ಕಾರ್ಯದ ಮೂಲಕ ಈ ಸ್ಮಾರಕಗಳ ಕುರುಹು ಪತ್ತೆ ಆಗುವ ಸಾಧ್ಯತೆಯನ್ನು ಎಎಸ್‌ಐ ತಳ್ಳಿ ಹಾಕಿಲ್ಲ.

3,693 ಸ್ಮಾರಕಗಳ ಪೈಕಿ 1,655 ಸ್ಮಾರಕಗಳನ್ನು ಭೌತಿಕವಾಗಿ ಪರಿಶೀಲಿಸಿ 50 ಸ್ಮಾರಕಗಳ ಕುರುಹು ಸಿಕ್ಕಿಲ್ಲ ಎಂಬ ನಿರ್ಧಾರಕ್ಕೆ ಬರಲಾಗಿದೆ. ಹಾಗಾಗಿ, ಎಲ್ಲ 3,693 ಸ್ಮಾರಕಗಳನ್ನು ಭೌತಿಕವಾಗಿ ಪರಿಶೀಲನೆಗೆ ಒಳಪಡಿಸಿದರೆ ಕುರುಹು ಇಲ್ಲದ ಸ್ಮಾರಕಗಳ ಸಂಖ್ಯೆಯು ಇನ್ನಷ್ಟು ಹೆಚ್ಚಲೂಬಹುದು. ಭೌತಿಕ ಸಮೀಕ್ಷೆಯಲ್ಲಿ ಸಿಎಜಿ ಜೊತೆಗೆ ಎಎಸ್‌ಐ ಕೂಡ ಕೈಜೋಡಿಸಿತ್ತು. ಮೊದಲ ಸಮೀಕ್ಷೆಯು 2013ರಲ್ಲಿ ನಡೆದಿತ್ತು. ಈಗ 10 ವರ್ಷಗಳು ಕಳೆದಿವೆ. ಆದರೆ, ಉಳಿದ ಸ್ಮಾರಕಗಳ ಭೌತಿಕ ಪರಿಶೀಲನೆಯ ಕೆಲಸವನ್ನು ಇನ್ನೂ ಕೈಗೆತ್ತಿಕೊಳ್ಳಲಾಗಿಲ್ಲ ಎಂಬ ಕುರಿತು ಸಂಸದೀಯ ಸಮಿತಿಯು ಅಸಮಾಧಾನ ವ್ಯಕ್ತಪಡಿಸಿದೆ.

ರಾಜಧಾನಿ ದೆಹಲಿಯ ಹೃದಯಭಾಗದಲ್ಲಿದ್ದ ಬಾರಾಖಂಬಾ ಸ್ಮಶಾನದ ಕುರುಹು ಕೂಡ ಇಲ್ಲ ಎಂಬುದು ಸ್ಮಾರಕಗಳ ರಕ್ಷಣೆಯ ಕುರಿತು ಎಷ್ಟು ಗಂಭೀರ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದನ್ನು ಸೂಚಿಸುತ್ತದೆ. ರಾಜಧಾನಿಯಲ್ಲಿದ್ದ ಸ್ಮಾರಕವನ್ನು ಸರಿಯಾಗಿ ನೋಡಿಕೊಳ್ಳಲು ಸಾಧ್ಯವಾಗದಿದ್ದರೆ ಕುಗ್ರಾಮಗಳಲ್ಲಿ ಇರುವ ಸ್ಮಾರಕಗಳು ಉಳಿಯಲು ಸಾಧ್ಯವೇ ಎಂಬ ಗಂಭೀರ ಪ್ರಶ್ನೆಯನ್ನೂ ಸಂಸದೀಯ ಸಮಿತಿಯು ವರದಿಯಲ್ಲಿ ಕೇಳಿದೆ.

ಕುರುಹು ಪತ್ತೆಯಾಗದ ಸ್ಮಾರಕಗಳನ್ನು ಪತ್ತೆ ಮಾಡಲು ಎಎಸ್‌ಐ ಕೆಲಸ ಮಾಡಿದೆ ಎಂಬುದು ನಿಜ. ಆದರೆ, ಸ್ಮಾರಕಗಳ ಸಂರಕ್ಷಣೆಯು ಸರಿಯಾಗಿಲ್ಲ ಎಂಬ ಕುರಿತು ವರದಿಯಲ್ಲಿ ಅತೃಪ್ತಿ ವ್ಯಕ್ತಪಡಿಸಲಾಗಿದೆ. ತನ್ನ ಅಧೀನದಲ್ಲಿ ಇದ್ದ ಸ್ಮಾರಕಗಳ ಕುರುಹೇ ಇಲ್ಲ ಎಂಬುದು ಕೂಡ ಎಎಸ್‌ಐಗೆ ತಿಳಿದಿರಲಿಲ್ಲ. ಸಿಎಜಿ ವರದಿಯ ಬಳಿಕವಷ್ಟೇ ಈ ವಿಚಾರ ಎಎಸ್‌ಐಗೆ ತಿಳಿಯಿತು ಎಂಬ ಸೋಜಿಗವನ್ನೂ ವರದಿಯಲ್ಲಿ ವ್ಯಕ್ತಪಡಿಸಲಾಗಿದೆ.



ತುಂಗಭದ್ರಾ ಅಣೆಕಟ್ಟೆಯಿಂದ ನೀರು ಬಿಟ್ಟರೆ ಹಂಪಿಯ ಎದುರು ಬಸವಣ್ಣ ಮಂಟಪದ ಸುತ್ತಲೂ ನೀರು ನಿಲ್ಲುತ್ತದೆ

ಕುರುಹು ಸಿಗದ ಸ್ಮಾರಕ ಸ್ಥಳಗಳು

ಅಸ್ಸಾಂ
ಚಕ್ರವರ್ತಿ ಶೇರ್ ಷಾನ ಬಂದೂಕುಗಳು, ನಾದಿಯಾ, ತಿನ್‌ಸುಕಿಯಾ

ಅರುಣಾಚಲ ಪ್ರದೇಶ
ತಾಮ್ರದ ದೇವಾಲಯದ ಅವಶೇಷಗಳು, ಪಾಯಾ, ಲೋಹಿತ್

ಹರಿಯಾಣ
- ಕೋಸ್ ಮಿನಾರ್, ಮುಜೆಸರ್, ಫರೀದಾಬಾದ್
- ಕೋಸ್ ಮಿನಾರ್, ಶಹಾಬಾದ್, ಕುರುಕ್ಷೇತ್ರ

ಉತ್ತರಾಖಂಡ
ಕುಟುಂಬರಿ ದೇವಸ್ಥಾನ, ದ್ವಾರಹತ್, ಅಲ್ಮೋರಾ

ದೆಹಲಿ
- ಬಾರಾಖಂಬಾ ಸ್ಮಶಾನ, ದೆಹಲಿ
- ಇಂಚ್ಲಾ ವಾಲಿ ಗುಮ್ಟಿ, ಮುಬಾರಕಪುರ ಕೋಟ್ಲಾ

ಮಧ್ಯಪ್ರದೇಶ
ಶಿಲಾಶಾಸನ, ಸತನಾ

ಮಹಾರಾಷ್ಟ್ರ
- ಯುರೋಪಿಯನ್ ಸಮಾಧಿ, ಪುಣೆ
- ಬುರುಜ್, ಅಗರ್‌ಕೋಟ್

ರಾಜಸ್ಥಾನ
- ಕೋಟೆಯಲ್ಲಿರುವ ಶಾಸನ, ಟೊಂಕ್
- 12ನೇ ಶತಮಾನದ ದೇಗುಲ, ಬರಾನ್

ಉತ್ತರ ಪ್ರದೇಶ
- ಲಿಂಗ ದೇವಾಲಯಗಳ ಅವಶೇಷಗಳು, ಮಿರ್ಜಾಪುರ
- ಚಾಂದೌಲಿ ಬೆಟ್ಟದ ಮೂರು ಮಹಾಶಿಲೆಗಳು
- ಖಜಾನೆ ಕಟ್ಟಡದ ಚಾವಣಿ, ವಾರಾಣಸಿ
- ತೇಲಿಯ ನಾಲಾ ಬೌದ್ಧ ಅವಶೇಷಗಳು, ವಾರಾಣಸಿ
- ಪ್ರಾಚೀನ ಕಟ್ಟಡದ ಕುರುಹುಗಳ ಆಲದ ತೋಪು, ಬಲಿಯಾ
- ಸ್ಮಶಾನ, ಕಟರಾ ನಾಕಾ, ಬಂದಾ
- ಗನ್ನರ್ ಬರ್ಕಿಲ್ ಸಮಾಧಿ, ಮೆಹ್ರೋನಿ, ಲಲಿತ್‌ಪುರ
- ಮೂರು ಗೋರಿಗಳು, ಲಖನೌ-ಫೈಜಾಬಾದ್ ರಸ್ತೆ, ಲಖನೌ
- ಸ್ಮಶಾನಗಳು, ಜಹ್ರೈಲಾ ರಸ್ತೆ, ಲಖನೌ
- ಗೌಘಾಟ್‌ನಲ್ಲಿರುವ ಸ್ಮಶಾನ, ಲಖನೌ
- ಪಾಳುಬಿದ್ದಿದ್ದ ಸಂದಿ-ಖೇರಾ, ಶಹಾಬಾದ್, ಹರ್ದೋಯಿ

ಪಶ್ಚಿಮ ಬಂಗಾಳ
ಕೋಟೆಯ ಅವಶೇಷಗಳು, ನಾದಿಯಾ

ಆಧಾರ: 'ಭಾರತದಲ್ಲಿ ಕುರುಹು ಪತ್ತೆ ಇಲ್ಲದ ಸ್ಮಾರಕಗಳು ಮತ್ತು ಸ್ಮಾರಕಗಳ ಸಂರಕ್ಷಣೆ'– ಸಾರಿಗೆ, ಪ್ರವಾಸೋದ್ಯಮ ಮತ್ತು ಸಂಸ್ಕೃತಿಯ ಸಂಸತ್ ಸಮಿತಿಯು ಸಂಸತ್ತಿಗೆ ಸಲ್ಲಿಸಿದ ವರದಿ

ಪ್ರಮುಖ ಶಿಫಾರಸುಗಳು

- ಪುರಾತತ್ವ ಸಂರಕ್ಷಣೆಯ ಪಟ್ಟಿಯಲ್ಲಿ ಇಲ್ಲದ ಆಂಧ್ರದ ಪೆದ್ದತುಂಬಳಂನ ರಾಮ ದೇವಸ್ಥಾನ, ಕೇತವರಂನ ಶಿಲಾಚಿತ್ರಗಳು ಹಾಗೂ ಬೆಲೂಂ ಗುಹೆಯಂತಹ ಸ್ಥಳಗಳು ಐತಿಹಾಸಿಕವಾಗಿ ಮಹತ್ವ ಪಡೆದಿದ್ದು, ಇವುಗಳನ್ನು ಪ್ರವಾಸಿ ತಾಣಗಳಾಗಿ ಅಭಿವೃದ್ಧಿಪಡಿಸುವ ಅಗತ್ಯವಿದೆ. ಇಲ್ಲಿಗೆ ಸಂಪರ್ಕಿಸುವ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಹಾಗೂ ಭದ್ರತೆ ಒದಗಿಸಲು ಸರ್ಕಾರ ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕು
- ಪುರಾತತ್ವ ಇಲಾಖೆಯ ಸಂರಕ್ಷಣೆಗೆ ಒಳಪಟ್ಟ ಸ್ಥಳಗಳಲ್ಲಿ ಒತ್ತುವರಿ ನಡೆದರೆ ನಿರ್ದಾಕ್ಷಿಣ್ಯ ಕ್ರಮ ಜರುಗಿಸಬೇಕು. ಒತ್ತುವರಿ ತಡೆಯಲು ವಿಫಲವಾದ ಅಧಿಕಾರಿಯನ್ನು ಹೊಣೆಗಾರನನ್ನಾಗಿ ಮಾಡಬೇಕು. ಒತ್ತುವರಿ ತಡೆಯುವ ನಿಟ್ಟಿನಲ್ಲಿ, ಎಎಸ್‌ಐ ಅಧಿಕಾರಿಗೆ ಜಿಲ್ಲಾ ಅರಣ್ಯ ಅಧಿಕಾರಿಗೆ ನೀಡಲಾಗಿರುವ ಅಧಿಕಾರಗಳನ್ನು ನೀಡಬೇಕು
- ಸ್ಮಾರಕಗಳ ಒತ್ತುವರಿಯನ್ನು ತಡೆಯಲು ಹಾಗೂ ಸ್ಮಾರಕಗಳ ವ್ಯಾಪ್ತಿಯಲ್ಲಿ ಅಕ್ರಮ ಕಟ್ಟಡ ನಿರ್ಮಾಣವನ್ನು ಗುರುತಿಸಲು, ಉಪಗ್ರಹ ಆಧರಿತ ಚಿತ್ರ ತಂತ್ರಜ್ಞಾನವನ್ನು ಬಳಸಿಕೊಳ್ಳಬಹುದು
- ಕೇಂದ್ರ ಸಂಸ್ಕೃತಿ ಸಚಿವಾಲಯ ಹಾಗೂ ರಾಜ್ಯ ಸರ್ಕಾರಗಳ ನಡುವೆ ಸಂಪರ್ಕ ಏರ್ಪಡಿಸುವ ಸಮನ್ವಯ ಸಮಿತಿಗಳು ಹೆಚ್ಚಿನ ರಾಜ್ಯಗಳಲ್ಲಿ ಇಲ್ಲ. ಇಂತಹ ಸಮಿತಿ ರಚನೆಗೆ ವೇಗ ನೀಡಬೇಕು
- ಸಂರಕ್ಷಿತ ಹಾಗೂ ಐತಿಹಾಸಿಕ ಮಹತ್ವದ ಸ್ಥಳಗಳಲ್ಲಿ ಕೆಲವು ಧಾರ್ಮಿಕ ಕಾರ್ಯಕ್ರಮಗಳಿಗೆ ಅನುಮತಿ ನೀಡುವ ಬಗ್ಗೆ ಎಎಸ್‌ಐ ಗಮನ ಹರಿಸಬಹುದು. ಸ್ಮಾರಕಕ್ಕೆ ಯಾವುದೇ ರೀತಿಯ ಹಾನಿ ಆಗದಂತೆ ಎಚ್ಚರಿಕೆ ವಹಿಸಿ, ಪೂಜೆ, ಉತ್ಸವಗಳಿಗೆ ಅವಕಾಶ ನೀಡಬಹುದು
- 'ಪುರಾತತ್ವ ಸ್ಥಳ ದತ್ತು' ಯೋಜನೆಯ ಪ್ರಸ್ತಾವ ಸೂಕ್ತವಾಗಿದ್ದು, ಅದನ್ನು ಅನುಷ್ಠಾನಗೊಳಿಸಬಹುದು. ಈ ಯೋಜನೆಯಡಿ ಕಾರ್ಪೊರೇಟ್ ಸಂಸ್ಥೆಗಳು ಸ್ಮಾರಕದ ಅಭಿವೃದ್ಧಿ ಹಾಗೂ ನಿರ್ವಹಣೆ, ಪ್ರವಾಸಿಗರ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಬೇಕಿದೆ. ಕೇವಲ ಪ್ರವಾಸೋದ್ಯಮದಿಂದ ಸ್ಮಾರಕಗಳ ಅಭಿವೃದ್ಧಿ ಕಷ್ಟ. ಜನರು ಹಾಗೂ ಕಾರ್ಪೊರೇಟ್ ಸಂಸ್ಥೆಗಳನ್ನು ಈ ದಿಸೆಯಲ್ಲಿ ತೊಡಗಿಸಿಕೊಳ್ಳಬಹುದು.
- ಎನ್‌ಜಿಒ ಹಾಗೂ ಇನ್‌ಟ್ಯಾಕ್‌ನಂತಹ ಸಂಸ್ಥೆಗಳ ಸಹಕಾರದೊಂದಿಗೆ ಕುರುಹು ಸಿಗದ ಸ್ಮಾರಕಗಳನ್ನು ಪತ್ತೆಹಚ್ಚುವ ಕೆಲಸವನ್ನೂ ಮಾಡಬಹುದು. ಪರಿಚಿತವಲ್ಲದ ಐತಿಹಾಸಿಕ ಸ್ಥಳಗಳನ್ನು ಹೊರಜಗತ್ತಿಗೆ ಪರಿಚಯಿಸಲು 'ಹೆರಿಟೇಜ್ ವಾಕ್ ಅಂಡ್ ಟೂರ್', 'ಹೆರಿಟೇಜ್ ಫೆಸ್ಟಿವಲ್'ನಂತಹ ಕಾರ್ಯಕ್ರಮಗಳನ್ನು ಸ್ಥಳೀಯ ಆಡಳಿತಗಳ ಸಹಯೋಗದಲ್ಲಿ ನಡೆಸಬಹುದು
- ಪೇಲವವಾಗಿರುವ ಎಎಸ್‌ಐ ವೆಬ್‌ಸೈಟ್ ಅನ್ನು ಪರಿಷ್ಕರಿಸಬೇಕು. ದೇಶದ ಎಲ್ಲ ಸ್ಮಾರಕಗಳ ಮಾಹಿತಿ ಸುಲಭವಾಗಿ ಸಿಗುವಂತೆ ಪುನರ್ ವಿನ್ಯಾಸ ಮಾಡಬೇಕು

2500 ಹುದ್ದೆಗಳು ಖಾಲಿ

ಸ್ಮಾರಕಗಳನ್ನು ನೋಡಿಕೊಳ್ಳಲು 'ಸ್ಮಾರಕ ಪರಿಚಾರಕ' ಎಂಬ ಹುದ್ದೆಗಳು ಎಎಸ್‌ಐಯಲ್ಲಿ ಇವೆ. ಆದರೆ, ಇಂತಹ 2,500 ಹುದ್ದೆಗಳು ಖಾಲಿ ಇವೆ. ಸ್ಮಾರಕಗಳನ್ನು ನಿತ್ಯವೂ ಸ್ವಚ್ಛಗೊಳಿಸುವುದು ಈ ಪರಿಚಾರಕರ ಕೆಲಸ. ಆದರೆ ಇಷ್ಟೊಂದು ಹುದ್ದೆಗಳು ಖಾಲಿ ಇರುವುದರಿಂದ ಬಹುತೇಕ ಸ್ಮಾರಕಗಳನ್ನು ನಿತ್ಯವೂ ಸ್ವಚ್ಛಗೊಳಿಸುವ ಕೆಲಸ ಆಗುತ್ತಿಲ್ಲ. ಸ್ಮಾರಕಗಳ ಶೋಚನೀಯ ಸ್ಥಿತಿಗೆ ಇದೂ ಒಂದು ಕಾರಣ ಎಂದು ವರದಿಯಲ್ಲಿ ವಿವರಿಸಲಾಗಿದೆ. ಸಾವಿರಾರು ಸಂಖ್ಯೆಯಲ್ಲಿ ಸಿಬ್ಬಂದಿ ಖಾಲಿ ಉಳಿಯುವಂತಹ ಸ್ಥಿತಿ ನಿರ್ಮಾಣ ಆಗಿರುವ ಕುರಿತು ಸಂಸದೀಯ ಸಮಿತಿಯು ಆಶ್ಚರ್ಯವನ್ನೂ ವ್ಯಕ್ತಪಡಿಸಿದೆ. ಮೂರು ವಿಭಾಗೀಯ ಸಂಸ್ಕೃತಿ ಕೇಂದ್ರದ ನಿರ್ದೇಶಕ ಹುದ್ದೆಗಳೂ ಖಾಲಿ ಇವೆ.

ಪಾರಂಪರಿಕ ತಾಣಗಳ ಕೇಂದ್ರ

ಭಾರತದಲ್ಲಿ 40 ಯುನೆಸ್ಕೊ ಪಾರಂಪರಿಕ ತಾಣಗಳು ಇವೆ. ಅವುಗಳ ಪೈಕಿ 32 ಸಾಂಸ್ಕೃತಿಕ ತಾಣಗಳಾಗಿವೆ. ಸ್ಮಾರಕಗಳ ಸಂಖ್ಯೆಯಲ್ಲಿ ಭಾರತಕ್ಕೆ ಜಗತ್ತಿನಲ್ಲಿಯೇ ಆರನೇ ಸ್ಥಾನ ಇದೆ. ವಿವಿಧ ರಾಜವಂಶಗಳು, ಧರ್ಮ, ಪರಂಪರೆ ಮತ್ತು ಪದ್ಧತಿಗೆ ಸಂಬಂಧಿಸಿದ ಸ್ಮಾರಕಗಳು ಭಾರತದಲ್ಲಿ ಇವೆ. ಶಿಲಾ ರಚನೆಗಳು, ದೇವಾಲಯ ವಾಸ್ತುಶಿಲ್ಪ, ಗೋರಿ, ಕೋಟೆ, ಅರಮನೆ, ಮಿನಾರು, ಸ್ತೂಪಗಳು ಇದರಲ್ಲಿ ಸೇರಿವೆ. ಹಂಪಿ, ಮಹಾಬಲಿಪುರಂ ಮತ್ತು ಖಜುರಾಹೊದಂತಹ ಸ್ಮಾರಕ ಸಂಕೀರ್ಣಗಳೂ ಇವೆ.

ಸರ್ಕಾರದ ಅಸಡ್ಡೆ

ಎಎಸ್‌ಐನಿಂದ ಸಂರಕ್ಷಿತವಲ್ಲದ ಸ್ಮಾರಕಗಳು ಅಪಾರ ಸಂಖ್ಯೆಯಲ್ಲಿ ಇವೆ. ಇವುಗಳ ಸಂರಕ್ಷಣೆಗಾಗಿ ಕೇಂದ್ರ ಸರ್ಕಾರವು ಹಣವನ್ನೂ ನೀಡುತ್ತದೆ. 2022–23ನೇ ಸಾಲಿನಲ್ಲಿ ಸಂರಕ್ಷಿತವಲ್ಲದ ಸ್ಮಾರಕಗಳ ಸಂರಕ್ಷಣೆಗೆ ಸರ್ಕಾರವು ₹3.33 ಕೋಟಿ ಹಣ ಮಂಜೂರು ಮಾಡಿದೆ. ಈ ಹಣವು ಎಲ್ಲಿಗೂ ಸಾಲದು ಎಂಬ ಅತೃಪ್ತಿಯನ್ನು ವರದಿಯಲ್ಲಿ ವ್ಯಕ್ತಪಡಿಸಲಾಗಿದೆ. ಕೇಂದ್ರ ಮತ್ತು ರಾಜ್ಯಗಳ ಸಂರಕ್ಷಣೆಯಲ್ಲಿ ಇಲ್ಲದ ಸ್ಮಾರಕಗಳನ್ನೂ ಸಂರಕ್ಷಿಸುವ ದಿಸೆಯಲ್ಲಿ ಗಂಭೀರವಾದ ಕೆಲಸ ಆಗಬೇಕು. ಈ ಸ್ಮಾರಕಗಳನ್ನೂ ಎಎಸ್‌ಐಯೇ ಸಂರಕ್ಷಿಸಬೇಕು. ಇದಕ್ಕೆ ಎಷ್ಟು ಹಣ ಬೇಕಾಗಿದೆಯೋ ಅಷ್ಟನ್ನು ಸರ್ಕಾರವು ಮಂಜೂರು ಮಾಡಬೇಕು ಎಂದೂ ವರದಿಯಲ್ಲಿ ಆಗ್ರಹಿಸಲಾಗಿದೆ.

ಸ್ಮಾರಕಗಳಿಗೆ ಇಲ್ಲ ಭದ್ರತಾ ಸಿಬ್ಬಂದಿ

3,693 ಸ್ಮಾರಕಗಳ ಪೈಕಿ 248 ಸ್ಮಾರಕ ಸ್ಥಳಗಳಲ್ಲಿ ಮಾತ್ರ ಭದ್ರತಾ ಸಿಬ್ಬಂದಿಯ ಕಾವಲು ಇದೆ. ಎಎಸ್‌ಐ ಸುಪರ್ದಿಯಲ್ಲಿರುವ ಒಟ್ಟು ಸ್ಮಾರಕಗಳ ಪೈಕಿ ಶೇ 6.7ರಷ್ಟು ಮಾತ್ರ ಭದ್ರತೆಗೆ ಒಳಪಟ್ಟಿವೆ. ಶೇ 93.3ರಷ್ಟು ಸ್ಮಾರಕಗಳಿಗೆ ಭದ್ರತಾ ಸಿಬ್ಬಂದಿಯ ರಕ್ಷಣೆ ಇಲ್ಲ ಎಂಬುದರತ್ತ ವರದಿ ಬೊಟ್ಟು ಮಾಡಿದೆ.

ಈ 248 ಸ್ಮಾರಕಗಳ ಸ್ಥಳಗಳಲ್ಲಿ 2,578 ಭದ್ರತಾ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಇಲಾಖೆಯ ಸುಪರ್ದಿಯಲ್ಲಿರುವ ಎಲ್ಲ ಸ್ಮಾರಕಗಳು ಹಾಗೂ ಸ್ಥಳಗಳಿಗೆ ರಕ್ಷಣೆ ಒದಗಿಸಬೇಕಾದರೆ, 7,000 ಭದ್ರತಾ ಸಿಬ್ಬಂದಿ ಅಗತ್ಯವಿದೆ ಎಂದು ವರದಿ ಅಭಿಪ್ರಾಯಪಟ್ಟಿದೆ. ಇನ್ನೂ, 4,400ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿ ನೇಮಕಾತಿಯ ಅಗತ್ಯವಿದೆ. ಎಎಸ್‌ಐನಲ್ಲಿ ಖಾಲಿಯಿರುವ ಹುದ್ದೆಗಳನ್ನು ಸಮರೋಪಾದಿಯಲ್ಲಿ ಭರ್ತಿ ಮಾಡಿಕೊಳ್ಳಬೇಕು. ನಿವೃತ್ತ ಸೈನಿಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಪರಿಶೀಲನೆ ನಡೆಸಬಹುದು ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ಕಾಯ್ದೆ ತಿದ್ದುಪಡಿಗೆ ಶಿಫಾರಸು

'ಗುರುತು ಸಿಗದ ಸ್ಮಾರಕಗಳು' ಎಂಬ ಪದಗುಚ್ಛದ ಬಳಕೆಯು ಪ್ರಾಚೀನ ಸ್ಮಾರಕಗಳು, ಪುರಾತತ್ವ ಸ್ಥಳಗಳು ಮತ್ತು ವಸ್ತುಗಳ ಕಾಯ್ದೆಯಲ್ಲಿ (ಎಎಂಎಎಸ್‌ಆರ್) ಇಲ್ಲ ಎಂಬುದನ್ನು ಸಚಿವಾಲಯ ಹೇಳಿದೆ. ಆದರೆ, ಸ್ಮಾರಕಗಳ ಗುರುತು ಸಿಗದಂತೆ ಆಗುತ್ತಿರುವುದು ಗಂಭೀರ ವಿಚಾರವಾಗಿದ್ದು, ಇಂತಹ ಪದಗುಚ್ಛದ ಬಳಕೆ ಇಲ್ಲದಿದ್ದರೆ ಕಾಯ್ದೆ ಅಸಮಂಜಸವಾಗುತ್ತದೆ. 'ಕುರುಹು ಪತ್ತೆಯಾಗದ ಸ್ಮಾರಕಗಳು' ಎಂದು ಉಲ್ಲೇಖಿಸುವುದರಿಂದ, ಅಪಾಯದ ಸ್ಥಿತಿ ಎದುರಿಸುತ್ತಿರುವ ಸ್ಮಾರಕಗಳ ಗಂಭೀರತೆಯನ್ನು ಸೂಚಿಸಿದಂತಾಗುತ್ತದೆ ಎಂದು ವರದಿ ಹೇಳಿದೆ.

1958ರ ಎಎಂಎಎಸ್‌ಆರ್ ಕಾಯ್ದೆಯ 15ನೇ ಸೆಕ್ಷನ್‌ನಡಿ, ಗುರುತು ಪತ್ತೆಯಾಗದ ಸ್ಮಾರಕಗಳನ್ನು ಪಟ್ಟಿಯಿಂದ ತೆಗೆದುಹಾಕುವ ಪ್ರಯತ್ನಗಳನ್ನು ವರದಿ ಗಂಭೀರವಾಗಿ ಪರಿಗಣಿಸಿದೆ. ಅಂತಹ ಸ್ಥಳಗಳನ್ನು ಪಟ್ಟಿಯಿಂದ ತೆಗೆದುಹಾಕುವುದರಿಂದ ನಷ್ಟವೇ ಹೊರತು ಬೇರೇನೂ ಸಾಧಿಸಿದಂತಾಗುವುದಿಲ್ಲ. ಹೀಗೆ ಘೋಷಣೆ ಮಾಡುವುದರಿಂದ ಅಂತಹ ಸ್ಥಳಗಳನ್ನು ಸಂಪೂರ್ಣ ಕಳೆದುಕೊಂಡಂತಾಗುವ ಅಪಾಯವಿರುತ್ತದೆ ಎಂದು ಆತಂಕ ವ್ಯಕ್ತಪಡಿಸಿದೆ.

ಗುರುತು ಪತ್ತೆಯಾಗದ ಸ್ಮಾರಕಗಳ ಸ್ಥಳ ಮುಂದೊಂದು ದಿನ ಸಿಗುವ ಸಾಧ್ಯತೆಯಿದೆ. ಗುರುತು ಪತ್ತೆಯಾಗದ ಸ್ಮಾರಕ ಸ್ಥಳಗಳನ್ನು ಪುರಾತತ್ವ ಇಲಾಖೆಯ ಸಂರಕ್ಷಣೆಯಲ್ಲಿರುವ ಸ್ಮಾರಕಗಳ ಪಟ್ಟಿಯಲ್ಲಿ ಮುಂದುವರಿಸುವುದೂ ಸರಿಯಲ್ಲ ಎಂದು ಸಮಿತಿ ತಾಕೀತು ಮಾಡಿದ್ದು, ಅಗತ್ಯಬಿದ್ದರೆ ಕಾಯ್ದೆಗೆ ತಿದ್ದುಪಡಿ ತರಬೇಕು ಎಂದ ಶಿಫಾರಸು ಮಾಡಿದೆ.

ಅತಿ ಉದ್ದದ ನದಿ ವಿಹಾರಕ್ಕೆ 13ರಂದು ಚಾಲನೆ

● ಸುಮೀರ್ ಕರ್ಮಾಕರ್

ಗುವಾಹಟಿ: ಜಗತ್ತಿನ ಅತ್ಯಂತ ಉದ್ದದ ನದಿ ವಿಹಾರದ ದೋಣಿ ಎಂವಿ ಗಂಗಾ ವಿಲಾಸ್‌ಗೆ ಪ್ರಧಾನಿ ನರೇಂದ್ರ ಮೋದಿ ಅವರು ಇದೇ 13ರಂದು ಚಾಲನೆ ನೀಡಲಿದ್ದಾರೆ. ಭಾರತದ ನದಿ ಪ್ರವಾಸೋದ್ಯಮದ ಸಾಧ್ಯತೆಗಳನ್ನು ಇದು ತೆರೆದಿರಿಸಲಿದೆ.

ಉತ್ತರ ಪ್ರದೇಶದ ವಾರಾಣಸಿಯಿಂದ ಆರಂಭಗೊಳ್ಳುವ ಯಾತ್ರೆಯು 51 ದಿನಗಳ ಬಳಿಕ ಪೂರ್ವ ಅಸ್ಸಾಂನ ದಿಬ್ರೂಗಢಕ್ಕೆ ತಲುಪಲಿದೆ. ಹಾದಿಯ ಉದ್ದಕ್ಕೂ 50 ಪ್ರವಾಸಿ ತಾಣಗಳಿಗೆ ಭೇಟಿ ನೀಡಲು ಅವಕಾಶ ಇದೆ. ಪಾರಂಪರಿಕ ತಾಣಗಳು, ರಾಷ್ಟ್ರೀಯ ಉದ್ಯಾನಗಳು, ಘಾಟ್‌ಗಳು ಇವುಗಳಲ್ಲಿ ಸೇರಿವೆ. ಬಿಹಾರದ ಪಟ್ನಾ, ಜಾರ್ಖಂಡ್‌ನ ಶಿವಗಂಜ್, ಪಶ್ಚಿಮ ಬಂಗಾಳದ ಕೋಲ್ಕತ್ತ, ಬಾಂಗ್ಲಾ ದೇಶದ ಢಾಕಾ, ಅಸ್ಸಾಂನ ಗುವಾಹಟಿಯಂತಹ ನಗರಗಳೂ ಈ ವಿಹಾರದ ಹಾದಿಯಲ್ಲಿ ಇವೆ. ಭಾರತ-ಬಾಂಗ್ಲಾದೇಶ ನದಿ ಮಾರ್ಗದಲ್ಲಿ ಈ ನೌಕೆಯು ಸಾಗಲಿದೆ.

ಎಂವಿ ಗಂಗಾದ ಮೊದಲ ಯಾತ್ರೆಯಲ್ಲಿ ಸ್ವಿಟ್ಜರ್‌ಲ್ಯಾಂಡ್‌ನ 23 ಪ್ರವಾಸಿಗರು ಭಾಗಿಯಾಗಲಿದ್ದಾರೆ. ವಿಶ್ವ ಪ್ರಸಿದ್ಧ ಅಸ್ಸಾಂ ಚಹಾದ ಕೇಂದ್ರವಾಗಿರುವ ದಿಬ್ರೂಗಢದಲ್ಲಿ ಯಾತ್ರೆಯು ಮೇ 1ರಂದು ಪೂರ್ಣಗೊಳ್ಳಲಿದೆ.

ವಾರಾಣಸಿಯಲ್ಲಿ ಗಂಗಾ ಆರತಿಯಾದ ಬಳಿಕ ನೌಕೆಯು, ಬಿಹಾರದಲ್ಲಿರುವ ಬೌದ್ಧ ಯಾತ್ರಾಸ್ಥಳ ಸಾರಾನಾಥಕ್ಕೆ ಹೋಗಲಿದೆ. ಪಶ್ಚಿಮ ಬಂಗಾಳದ ಸುಂದರಬನ್, ಅಸ್ಸಾಂನ ಮಯೊಂಗ್ ಮತ್ತು ಮಜೌಲಿಗೂ ನೌಕೆಯು ಹೋಗಲಿದೆ. ಮಜೌಲಿ ಎಂಬುದು ನದಿಯಲ್ಲಿರುವ ಅತ್ಯಂತ ದೊಡ್ಡ ದ್ವೀಪ ಮತ್ತು ವೈಷ್ಣವ ಸಾಂಸ್ಕೃತಿಕ ಕೇಂದ್ರ. ಅಸ್ಸಾಂನಲ್ಲಿರುವ ಖಡ್ಗಮೃಗ ಆವಾಸಸ್ಥಾನ ಕಾಜಿರಂಗಾ ರಾಷ್ಟ್ರೀಯ ಉದ್ಯಾನ, ಹುಲಿಗಳ ಆವಾಸಸ್ಥಾನವಾಗಿರುವ ಸುಂದರಬನ್‌ನಲ್ಲಿಯೂ ನೌಕೆಗೆ ನಿಲುಗಡೆ ಇದೆ.

ಗಂಗಾ ವಿಲಾಸಕ್ಕೆ ಚಾಲನೆ ದೊರೆಯುವುದರೊಂದಿಗೆ ಇನ್ನಷ್ಟು ಉದ್ಯಮಿಗಳು ನೌಕಾಯಾನ ಆರಂಭಿಸಲು ಉತ್ತೇಜನ ದೊರೆಯಬಹುದು. ಇದರೊಂದಿಗೆ ಉದ್ಯೋಗ ಸೃಷ್ಟಿಯೂ ಆಗಲಿದೆ ಎಂದು ಕೇಂದ್ರ ಬಂದರು, ಹಡಗು ಮತ್ತು ಜಲಸಾರಿಗೆ ಸಚಿವ ಸರ್ಬಾನಂದ ಸೋನೊವಾಲ್ ಹೇಳಿದ್ದಾರೆ. ಜಗತ್ತಿನ ನದಿ ಸಾರಿಗೆಯ ಶೇ 60ರಷ್ಟು ಯುರೋಪ್‌ನಲ್ಲಿಯೇ ಇದೆ. ನದಿ ಸಾರಿಗೆಯು ಆ ದೇಶಗಳ ಪ್ರಗತಿಗೆ ನೆರವಾಗಿದೆ ಎಂದು ಅವರು ತಿಳಿಸಿದ್ದಾರೆ.

ಭಾರತದಲ್ಲಿ ಒಟ್ಟು ಎಂಟು ನದಿ ಸಾರಿಗೆ ಮಾರ್ಗಗಳು ಇವೆ. ಕೋಲ್ಕತ್ತ-ವಾರಾಣಸಿ ನಡುವೆ ನದಿ ಮಾರ್ಗ ಇದೆ. ಬ್ರಹ್ಮಪುತ್ರ ನದಿಯಲ್ಲಿಯೂ ನದಿ ಸಾರಿಗೆ ಇದೆ.

ಗಂಗಾ ವಿಲಾಸದಲ್ಲಿ ಏನಿದೆ?

62 ಮೀಟರ್ ನೌಕೆಯ ಉದ್ದ | **12** ಮೀಟರ್ ನೌಕೆಯ ಅಗಲ | **18** ಕೊಠಡಿಗಳು | **36** ಪ್ರವಾಸಿಗರಿಗೆ ಅವಕಾಶ | **3** ನೌಕೆಯಲ್ಲಿರುವ ಅಂತಸ್ತುಗಳು

ನಮ್ಮ ಶ್ರೀಮಂತ ಪರಂಪರೆಯು ಜಾಗತಿಕ ಮಟ್ಟದಲ್ಲಿ ಬೆಳಗಲಿದೆ. ಭಾರತದ ಜೀವವೈವಿಧ್ಯ, ಆಧ್ಯಾತ್ಮಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ತಿಳಿಯುವ ಅವಕಾಶವನ್ನು ಯಾತ್ರೆಯು ಕೊಡಲಿದೆ

ಸರ್ಬಾನಂದ ಸೋನೊವಾಲ್
ಕೇಂದ್ರ ಬಂದರು, ಹಡಗು ಮತ್ತು ಜಲಸಾರಿಗೆ ಸಚಿವ

ಬೆರಗಿನ ಬೆಳಕು
ಗುರುರಾಜ ಕರಜಗಿ

ಸರ್ವಾತ್ಮ ಭಾವ

ಮೊಳೆವ ಸಸಿಯೊಳು ನಾನು, ತೊಳಗುವಿನನೊಳು ನಾನು |
ಬೆಳೆವ ಶಿಶುವೊಳು ನಾನು, ಕೆಳೆನೋಟ ನಾನು ||
ಕಳಕಳಿಸುವೆಲ್ಲಮುಂ ನಾನೆಂದು ಭಾವಿಸುತೆ |
ಒಳಗೂಡು ವಿಶ್ವದಲಿ - ಮಂಕುತಿಮ್ಮ || 795 ||

ಪದ-ಅರ್ಥ: ಮೊಳೆವ = ಮೊಳೆಯುವ, ತೊಳಗುವಿನನೊಳು = ತೊಳಗುವ(ಬೆಳಗುವ) + ಇನನ(ಸೂರ್ಯನ) + ಒಳು(ಒಳಗೆ), ಕೆಳೆನೋಟ = ಸ್ನೇಹದ ನೋಟ, ಕಳಕಳಿಸುವೆಲ್ಲಮುಂ = ಕಳಕಳಿಸುವ(ಹರ್ಷಿಸುವ, ಮನೋಹರವಾಗಿ ಶಬ್ದಮಾಡುವ) + ಎಲ್ಲಮುಂ(ಎಲ್ಲವೂ), ಒಳಗೂಡು = ಸೇರಿಕೋ.

ವಾಚ್ಯಾರ್ಥ: ಚಿಗುರುವ ಸಸಿಯಲ್ಲಿ ನಾನು, ಬೆಳಗುವ ಸೂರ್ಯನಲ್ಲಿ ನಾನು, ಬೆಳೆಯುವ ಮಗುವಿನಲ್ಲಿ, ಸ್ನೇಹದ ನೋಟದಲ್ಲಿ, ಹರ್ಷಿಸುವ ಪ್ರತಿಯೊಂದರಲ್ಲಿ ನಾನು ಇದ್ದೇನೆ ಎಂದು ಭಾವಿಸುತ್ತ ವಿಶ್ವದಲ್ಲಿ ಸೇರಿಕೋ.

ವಿವರಣೆ: ಅನೇಕ ಉಪನಿಷತ್ತುಗಳ ಸಾರವನ್ನು ನಾಲ್ಕೇ ಸಾಲುಗಳಲ್ಲಿ ವರ್ಣಿಸುವ ಈ ಕಗ್ಗ ಬಹುದೊಡ್ಡ ತತ್ವವೊಂದನ್ನು ತಿಳಿಸುತ್ತದೆ. ಉಪನಿಷತ್ತುಗಳಲ್ಲೆಲ್ಲ ಒಂದು ಊಹನೆ ಸುಸ್ಪಷ್ಟವಾಗಿದೆ. ಅಸ್ತಿತ್ವವುಳ್ಳ ಪ್ರತಿಯೊಂದೂ, ಅದು ದ್ರವ್ಯವಾಗಲಿ, ಚೇತನವಾಗಲಿ, ಯಾವುದೇ ಜೀವಿಯಾಗಲಿ, ಆಕಾಶಕಾಯಗಳಾಗಲಿ ಒಂದೇ ತಳಹದಿಯನ್ನು ಹೊಂದಿವೆ. ಈ ತಳಹದಿ ಇಂದ್ರಿಯಾನುಭವವನ್ನು ಮೀರಿದ್ದು, ಅಪರಿಮಿತವಾದದ್ದು. ನಿಜಾರ್ಥದಲ್ಲಿ, ಅಸ್ತಿತ್ವವುಳ್ಳದ್ದು ಎಂದರೆ ಇದು ಮಾತ್ರ. ಇದನ್ನೇ ಬ್ರಹ್ಮ ಎಂದು ದೃಷ್ಟಾರರು ಕರೆದರು. ಇದಕ್ಕೆ ನಿರೂಪಣೆ ಕೊಡುವುದು ಅಸಾಧ್ಯ. ಯಾಕೆಂದರೆ ಇದುಭಾಷೆಯನ್ನು ಮೀರಿದ್ದು. ಈ ಅತೀತದ ನೆಲೆಗಟ್ಟು ಅಸ್ತಿತ್ವದ ಪ್ರತಿಯೊಂದರಲ್ಲೂ ಒಂದೇ ಆಗಿದೆ. ಛಾಂದೋಗ್ಯ ಉಪನಿಷತ್ತು, "ಸಯ ಏಷೋ ಽ ಣಿಮಾ ಐತದಾತ್ಮ್ಯಂಮಿದಂ ಸರ್ವಂ ತತ್ ಸತ್ಯಂ ಸ ಆತ್ಮಾ ತತ್ವಂ ಮಸಿ ಶ್ವೇತಕೇತೋ" ಎನ್ನುತ್ತದೆ. "ಯಾವುದು ಸೂಕ್ಷ್ಮತಮವಾದ ಈ ಜಗತ್ತಿನ ಮೂಲವೊ, ಅದರಿಂದಲೇ ಈ ಜಗತ್ತೆಲ್ಲ ಆತ್ಮವಂತವಾಗಿದೆ. ಅದು ಸತ್ಯ. ಅದು ಆತ್ಮ. ಓ ಶ್ವೇತಕೇತು, ನೀನು ಅದೇ ಆಗಿರುವೆ". ಈ ಹೇಳಿಕೆ ಉಪನಿಷತ್ತಿನಲ್ಲಿ ಒಂಭತ್ತು ಬಾರಿ ಬರುತ್ತದೆ. ಇದರ ಒಟ್ಟು ಅರ್ಥ, ಜಗತ್ತಿನ ಹಿಂದಿರುವ ಸತ್ಯವೇ ಪ್ರತಿಯೊಂದು ಅಸ್ತಿತ್ವದ ಹಿಂದೆ ಇದೆ. ಅವೆರಡೂ ಸ್ವರೂಪತ: ಒಂದೇ, ಬೇರೆಯಲ್ಲ. ನಾವು ನಮ್ಮ ಸುತ್ತಮುತ್ತಲಿನ ವಸ್ತುಗಳನ್ನು ಕಂಡಾಗ ಮೊದಲು ಸ್ಥೂಲ ರೂಪ ಕಾಣುತ್ತದೆ. ಅದನ್ನು ವಿಶ್ಲೇಷಿಸುತ್ತ ಹೋದರೆ ಅದು ಪರಮಾಣುಗಳಿಂದ ಕೂಡಿರುವುದಾಗಿ ತಿಳಿಯುತ್ತದೆ. ಆ ಪರಮಾಣುಗಳನ್ನು ವಿಶ್ಲೇಷಿಸುತ್ತ ಹೋದರೆ ಅವು ಶಕ್ತಿಕಣಗಳಿಂದಾಗಿವೆ (energy particles) ಎಂದು ಗೋಚರವಾಗುತ್ತದೆ. ಅಂದರೆ ನಮ್ಮ ಇಂದ್ರಿಯಗಳಿಗೆ ಗೋಚರವಾಗುವ ಪ್ರತಿಯೊಂದು ವಸ್ತುವೂ, ನಾವೂ, ಒಂದೇ ಚೈತನ್ಯತತ್ವದಿಂದ ಆದವರು. ಒಬ್ಬ ನಟ ಬೇರೆ ಬೇರೆ ಸಿನಿಮಾಗಳಲ್ಲಿ ಬೇರೆ ಬೇರೆ ಪಾತ್ರಗಳನ್ನು ಮಾಡುತ್ತಾನೆ. ಅವನು ವಹಿಸುವ ಪಾತ್ರಗಳ ವೇಷಭೂಷಣಗಳನ್ನು ತೆಗೆದುಬಿಟ್ಟರೆ ಉಳಿಯುವವನು ಒಬ್ಬನೇ ನಟ. ಅವನ ಪರಿಚಯವಿರುವವರು ಅವನ ಬೇರೆ ಬೇರೆ ಪಾತ್ರಗಳನ್ನು ನೋಡುತ್ತಾರೆ ಮತ್ತು ಪಾತ್ರಗಳ ಹಿಂದಿರುವ ನಟನನ್ನು ನೋಡುತ್ತಾರೆ.
ಈ ತತ್ವವನ್ನು ಕಗ್ಗ ತುಂಬ ಸರಳವಾಗಿ ಹೇಳುತ್ತದೆ. ಮೊಳೆಯುವ ಸಸಿಯಲ್ಲಿ, ಬೆಳಗುವ ಸೂರ್ಯನಲ್ಲಿ, ಬೆಳೆಯುವ ಮಗುವಿನಲ್ಲಿ, ಸ್ನೇಹಿತರಲ್ಲಿ, ಸಂತೋಷಗೊಳಿಸುವ ಪ್ರತಿಯೊಂದರಲ್ಲಿ ಇರುವುದು ನಾನೇ. ಇದೇ ಏಕಾತ್ಮಭಾವ. ಎಲ್ಲವೂ ನಾನೇ, ನಾನೇ ಎಲ್ಲದರಲ್ಲೂ ಎಂಬ ಸರ್ವೈಕ್ಯವನ್ನು ಸಾಧಿಸಿದಾಗ ವಿಶ್ವಜೀವನ ಸುಂದರಮಯವಾಗುತ್ತದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜನವರಿ 9, 2023

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ದ್ವಿತೀಯ ಗಂ. 09-40
ನಕ್ಷತ್ರ: ಆಶ್ಲೇಷ ಅಹೋರಾತ್ರ ಯೋಗ: ವಿಷ್ಕಂಭ ಗಂ. 10-31, ಕರಣ: ಗರಜೆ ಗಂ. 09-40,
ಧನುರ್ ಮಾಸದ 24 ನೇ ದಿನ. ರಾಹುಕಾಲ : ಬೆಳಿಗ್ಗೆ 07-30–09-00
ಸೂರ್ಯೋದಯ : 07-00 ಸೂರ್ಯಾಸ್ತ : 06-16
ಮುಸ್ಲಿಂ ದಿನಾಂಕ : 16 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 1, 6

ಮೇಷ: ಗೃಹ ನಿರ್ಮಾಣ ಮಾಡುವ ಆಲೋಚನೆಯು ಕುಟುಂಬ ಸದಸ್ಯರ ಸಂತಸಕ್ಕೆ ಕಾರಣವಾಗುತ್ತದೆ. ಧರ್ಮ-ಕರ್ಮಗಳಲ್ಲಿ ಆಸಕ್ತಿ ತೋರಿದರೆ, ಕಾರ್ಯಕ್ಷೇತ್ರದಲ್ಲಿ ಅಭೀಷ್ಟ ಫಲ ಪಡೆಯಬಹುದು.

ವೃಷಭ: ಈ ದಿನ ಮಕ್ಕಳಿಂದ ನೆಮ್ಮದಿ ಅಥವಾ ಸಮಾಧಾನದ ಮಾತುಗಳನ್ನು ಕೇಳುವಿರಿ. ಅದರಿಂದಾಗಿ ಮನಸ್ಸು ಉಲ್ಲಾಸದಾಯಕವಾಗಿ ಇರುತ್ತದೆ. ತೈಲ, ಇಂಧನಗಳ ವ್ಯಾಪಾರ ಮಾಡುವವರಿಗೆ ಅಧಿಕ ಲಾಭ.

ಮಿಥುನ: ಕಳೆದು ಹೋದ ಆಸ್ತಿಯ ಬಗ್ಗೆ ಯೋಚಿಸದೇ, ವೃತ್ತಿಯಲ್ಲಿ ಶ್ರಮಪಡುವ ಮನೋಭಾವ ಬೆಳೆಸಿಕೊಳ್ಳಿರಿ. ಸ್ವಂತ ಆಸ್ತಿ ಸಂಪಾದಿಸಬಹುದು. ಈ ದಿನ ನಿರಾಸೆಯ ಜೀವನ ಶೈಲಿ ಮುಕ್ತಾಯವಾಗುವುದು.

ಕರ್ಕಾಟಕ: ಎಷ್ಟೇ ಕಷ್ಟ ಬಂದರೂ ಗುರಿಯನ್ನು ಸಾಧಿಸಿಯೇ ತೀರುತ್ತೀರಿ. ಅದರ ಪರಿಣಾಮ ಜೀವನದ ಮುಂದಿನ ಹಾದಿ ಸುಗಮವಾಗಲಿದೆ. ಶಿಶುವಿನ ಜನನ ಕುಟುಂಬದ ಸರ್ವರ ಸಂತೋಷಕ್ಕೆ ಕಾರಣವಾಗುತ್ತದೆ.

ಸಿಂಹ: ಹಣಕಾಸಿನ ಕೊರತೆ ಅಷ್ಟಾಗಿ ಕಾಡದು. ಮಗನ ಕೆಲಸ ನೆರವೇರಿದ ಕಾರಣಕ್ಕೆ ಹೇಳಿಕೊಂಡ ಹರಕೆಯನ್ನು ಪೂರ್ಣಗೊಳಿಸುವ ಬಗ್ಗೆ ಮಗನಲ್ಲಿ ಪ್ರಸ್ತಾಪಿಸಿ. ಸ್ವಂತವಾಗಿ ಉದ್ಯೋಗ ಮಾಡುವವರು ಪ್ರಗತಿ ಕಾಣಲಿದ್ದೀರಿ.

ಕನ್ಯಾ: ಈ ದಿನ ನಿಮ್ಮ ಬಾಲ್ಯದ ಕನಸು ನನಸಾಗುವ ದಿನ. ಉದ್ಯೋಗದಲ್ಲಿ ಮೇಲಧಿಕಾರಿಗಳಿಂದ ಸಹಕಾರ ಸಿಗುವುದು. ಸಾಹಿತಿಗಳಿಗೆ ಅವಕಾಶಗಳು ಲಭಿಸುವುದು. ಸಣ್ಣ ಕೈಗಾರಿಕೋದ್ಯಮಿಗಳಿಗೆ ಹೇರಳ ಲಾಭ.

ತುಲಾ: ರಿಯಲ್ ಎಸ್ಟೇಟ್ ವ್ಯವಹಾರದವರು ಇಂದು ಉತ್ತಮ ಹಾಗೂ ಧನಾತ್ಮಕವಾದ ವ್ಯವಹಾರ ತಮ್ಮದಾಗಿಸಿಕೊಳ್ಳುವರು. ಕೆಲವು ಬದಲಾವಣೆಗಳು ಸಹವರ್ತಿಗಳ ಮೇಲೆ ಪ್ರಭಾವ ಬೀರುವುದು.

ವೃಶ್ಚಿಕ: ಅನಿರೀಕ್ಷಿತವಾಗಿ ದೊರೆತ ಅವಕಾಶಗಳನ್ನು ಯಾವುದೇ ಮುಜುಗರವಿಲ್ಲದೆ ಬಳಸಿಕೊಳ್ಳಲು ಸಿದ್ಧರಾಗಿ. ಆಸ್ತಿಯನ್ನು ಖರೀದಿ ಮಾಡುವಾಗ ದಾಖಲೆಯ ಎಲ್ಲಾ ವಿವರಗಳ ಬಗ್ಗೆ ಎರಡೆರಡು ಬಾರಿ ಮಾಹಿತಿ ಪಡೆದುಕೊಳ್ಳಿರಿ.

ಧನು: ಸಾಂಸಾರಿಕವಾಗಿ ಸದ್ಯದ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವುದೇ ಉತ್ತಮ ಎಂಬ ನಿಮ್ಮ ಭಾವನೆ ಸರಿಯಾಗಿದೆ. ಸಂಬಂಧಗಳಿಗೆ ಬೆಲೆ ಕೊಡುವ ನೀವು ಮೊಸಳೆ ಕಣ್ಣೀರಿಗೆ ಮರುಳಾಗದಿರಿ.

ಮಕರ: ಸಮಸ್ಯೆಗಳನ್ನು ನಾಜೂಕಾಗಿ ಬಗೆಹರಿಸಿಕೊಳ್ಳುವ ಬಗ್ಗೆ ಗಮನ ನೀಡಿ. ಕುಶಲ ಕರ್ಮಿಗಳಿಗೆ ಪ್ರದರ್ಶನ ಮಾರಾಟಗಳಿಂದ ಅಧಿಕ ಆದಾಯವಿರುವುದು. ಕಳೆದು ಹೋಗಿದ್ದ ವಸ್ತುಗಳು ಪತ್ತೆಯಾಗಿ ಕೈ ಸೇರುವುದು.

ಕುಂಭ: ವಿಚಾರಗಳನ್ನು ವಿವಾದಕ್ಕೊಳಗಾಗದಂತೆ ಅರ್ಥ ಮಾಡಿಸುವಲ್ಲಿ ಯಶಸ್ವಿಯಾಗುವಿರಿ. ಮಕ್ಕಳ ವಿದ್ಯಾಭ್ಯಾಸದಲ್ಲಿನ ಪ್ರಗತಿ ಕಂಡು ಮನೆಯವರಿಗೆಲ್ಲ ಸಮಾಧಾನ. ವಿಮಾ ಸಲಹೆಗಾರರಿಗೆ ಉತ್ತಮವಾಗಿರಲಿದೆ.

ಮೀನ: ವೈಯಕ್ತಿಕ ವಿಷಯಗಳ ಬಗ್ಗೆ ನಿಗಾ ವಹಿಸಬೇಕಾಗುವುದು. ಅನವಶ್ಯಕವಾದ ವಿವಾದಗಳಿಂದ ದೂರ ಉಳಿಯುವ ಪ್ರಯತ್ನ ಮಾಡಿ. ಷೇರು ವ್ಯವಹಾರಗಳಿಂದ ನಿರೀಕ್ಷಿಸಿದ ಲಾಭ ಬರುವುದು.

ಪದಬಂಧ 5194
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪೊಳ್ಳು ಹರಟೆಯಿದು (4)
3.ಉತ್ತ ನೆಲವನ್ನು ಮಟ್ಟಮಾಡುವ ಸಾಧನ (3)
5.ವಿನಾಯಕ ಇಲ್ಲಿಯೇ ಪ್ರತ್ಯಕ್ಷ! (3)
7.ತಿರುಗಿ ಲಾಗ ಹಾಕಿದಾಗ ಆದ ಗದ್ದಲ! (3)
8.ಲೋಹದ ಹಕ್ಕಿಯಲ್ಲಿನ ಪಯಣ (5)
11.ಮುಳ್ಳುಗಳ ನಡುವೆ ಅರಳುವ ಹೂ (3)
12.ಆನೆಯ ಮರಿಯಿದು (3)
15.ಮೆಟ್ಟಿಲಿರುವ ಚೌಕಾಕಾರದ ಕೊಳ (3)
16.ಕೊನೆಗೆ ದನವನ್ನಿಟ್ಟು ತುಂಡು ಮಾಡುವಿಕೆ! (4))

ಮೇಲಿಂದ ಕೆಳಕ್ಕೆ
1.ಯೋಗವಿದ್ದರೂ ಅಗಲಿಕೆಯೇ! (3)
2.ಹದಿನೈದು ದಿನಗಳ ಅವಧಿ (2)
3.ಕೆಲಸಕ್ಕೆ ಬಾರದ ಮಾತಾಡುವಿಕೆ (3)
4.ನಸುನಗೆಯಿಂದ ಮಾಡಿರುವ ಜೋಡಣೆ (3)
6.ಚಿಗುರು ಇಲ್ಲಿ ಕಾಣುತ್ತಿದೆ (3)
7.ಆಕಾಶವನ್ನು ಮುಟ್ಟುವಂಥಾ ಕಟ್ಟಡ (5)
9.ಸೊಂಟದಿಂದ ಪ್ರಾರಂಭವಾದ ಕಂಪನ (3)
10.ಇದು ದೇಹಕ್ಕೆ ಸಂಬಂಧಿಸಿದ್ದು (3)
11.ರಾಣಿ ಹಿಡಿದಿರುವ ಢಾಲು (3)
13.ಕಾಡಿನ ಕೊನೆಗಿರುವ ಮನೆ (3)
14.ಸಂಸಾರ ಬಂಧನಕ್ಕೊಳಗಾದವನು (2)



5193ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಿಸಿಲ್ಗುದುರೆ 3.ಪರಾತ
5.ರತ್ನ 6.ತಿಸ
8.ಪ್ರಭಾತ 9.ಪಟ್ಟಾಭಿಷೇಕ
12.ತರಂಗ 13.ಯತಿ
15.ಇಂಗು 16.ಮಿಸುನಿ
17.ಹರಿನಾಳಿಗೆ

ಮೇಲಿಂದ ಕೆಳಕ್ಕೆ:
1.ಬಿಸಿರಕ್ತ 2.ದುರ್ಗತಿ
4.ತಲಾಂತರ 7.ಸದಭಿಪ್ರಾಯ
8.ಪ್ರತೀಕ 9.ಪರಾಗ
10.ಅಂತರ್ಯಾಮಿ
11.ಲಗುಬಗೆ 14.ತಿಗುರಿ

ಸುಡೊಕು 5580

	4		2		9	6		1
9						2	7	4
	7	2	1		4			8
		4		3		1		2
2	8		6	9			4	
		7					6	5
	5							7
		6	8		2			
4	2			5		8		

5579 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಿನ ದಾಳಿ ಪ್ರಕರಣ: ಮೂವರ ಬಂಧನ

ಬೆಳಗಾವಿ: ಸಮೀಪದ ಹಿಂಡಲಗಾ ಕೇಂದ್ರ ಕಾರಾಗೃಹದ ಬಳಿ ಶನಿವಾರ ರಾತ್ರಿ ಶ್ರೀರಾಮ ಸೇನೆ ಜಿಲ್ಲಾ ಘಟಕದ ಅಧ್ಯಕ್ಷ ರವಿ ಕೋಕಿತ್ಕರ್ ಹಾಗೂ ಹಿಂದೂ ರಾಷ್ಟ್ರ ಸೇನಾ ಮುಖಂಡ ಮನೋಜ್ ದೇಸೂರಕರ್ ಮೇಲೆ ನಡೆದ ಗುಂಡಿನ ದಾಳಿ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಭಾನುವಾರ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ಇಲ್ಲಿನ ಪಾಟೀಲ ಮಾಳದ ನಿವಾಸಿ ಅಭಿಜಿತ ಭಾತಖಾಂಡೆ (41), ತಾಲ್ಲೂಕಿನ ಬಸ್ತವಾಡದ ರಾಹುಲ್ ಕೊಡಚವಾಡ (32), ಜ್ಯೋತಿಬಾ ಮುತಗೇಕರ್ (25) ಬಂಧಿತರು.

'ಆರೋಪಿ ಅಭಿಜಿತ ಹಾಗೂ ರವಿ ಮಧ್ಯೆ ರಿಯಲ್ ಎಸ್ಟೇಟ್ ವ್ಯವಹಾರವಿತ್ತು. ಹಣಕಾಸಿನ ವ್ಯವಹಾರ ಹಾಗೂ ವೈಯಕ್ತಿಕ ದ್ವೇಷವೇ ಘಟನೆಗೆ ಕಾರಣವಾಗಿದೆ. ರವಿ ಕೋಕಿತ್ಕರ್ ಮತ್ತು ಸಂಗಡಿಗರು ವಾಹನದಲ್ಲಿ ಹೋಗುವಾಗ, ಬೈಕ್‌ನಲ್ಲಿ ಬಂದ ಮೂವರು ಈ ಕೃತ್ಯವೆಸಗಿದ್ದಾರೆ. ಆದರೆ, ಗಾಯಾಳುಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ' ಎಂದು ನಗರ ಪೊಲೀಸ್ ಆಯುಕ್ತ ಡಾ.ಎಂ.ಬಿ. ಬೋರಲಿಂಗಯ್ಯ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು..

'2020ರ ಜನವರಿಯಲ್ಲಿ ಅಭಿಜಿತ ಮೇಲೆ ತೀವ್ರ ಹಲ್ಲೆ ನಡೆದಿತ್ತು. ಆಗ, ಕೋಕಿತ್ಕರ್ ಮೊದಲ ಆರೋಪಿಯಾಗಿದ್ದ. ಈ ಪ್ರಕರಣದಲ್ಲಿ ಅಭಿಜಿತ ಪರವಾನಗಿ ಇಲ್ಲದ ಪಿಸ್ತೂಲ್ ಬಳಸಿ ಗುಂಡು ಹಾರಿಸಿದ್ದಾನೆ. ಆರೋಪಿಗಳು ಯಾವುದಾದರೂ ಸಂಘಟನೆಯೊಂದಿಗೆ ಗುರುತಿಸಿಕೊಂಡಿದ್ದಾರೆಯೇ ಎಂದು ಪರಿಶೀಲಿಸಲಾಗುತ್ತಿದೆ' ಎಂದರು.

'ರವಿ ಕೋಕಿತ್ಕರ್ ಆರೋಗ್ಯ ಚೇತರಿಕೆ ಕಂಡಿದ್ದು ಸಂಜೆ ಆಸ್ಪತ್ರೆಯಿಂದ ಅವರು ಬಿಡುಗಡೆಗೊಂಡಿದ್ದಾರೆ' ಎಂದು ಕೆಎಲ್‌ಇ ಆಸ್ಪತ್ರೆ ವೈದ್ಯರು ಹೇಳಿದ್ದಾರೆ.

'ದಾಳಿ ಪ್ರಕರಣದ ಹಿಂದೆ ಯಾವುದೋ ಸಂಘಟನೆ ಕೈವಾಡವಿದೆ. ವಿರಾಟ್ ಹಿಂದೂ ಸಮಾವೇಶಕ್ಕೆ ಅಡ್ಡಿಪಡಿಸಲು ಈ ರೀತಿ ಕೃತ್ಯವೆಸಗಿರುವ ಸಂಶಯವಿದೆ. ಅಭಿಜಿತ ಈ ಹಿಂದೆ ಭಜರಂಗ ದಳದಲ್ಲಿದ್ದ. ಪ್ರಕರಣದ ಹಿಂದೆ ಯಾವ ಸಂಘಟನೆ ಇದೆ ಎಂಬುದರ ಬಗ್ಗೆ ತನಿಖೆ ನಡೆಸಬೇಕು' ಎಂದು ಶ್ರೀರಾಮ ಸೇನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ ಮುತಾಲಿಕ್ ಒತ್ತಾಯಿಸಿದರು.

ಕೊಪ್ಪಳದಲ್ಲಿ ಭಾನುವಾರ ನಡೆದ ಗವಿಸಿದ್ಧೇಶ್ವರ ಮಹಾರಥೋತ್ಸವದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ — ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

'ಅಜ್ಜನ ಜಾತ್ರೆ'ಯಲ್ಲಿ ಜನಸಾಗರ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಇಲ್ಲಿನ ಗವಿಸಿದ್ಧೇಶ್ವರ ಮಠದ ಆವರಣದಲ್ಲಿ ಭಾನುವಾರ ಸಂಜೆ ಸೇರಿದ್ದ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಎರಡು ವರ್ಷಗಳ ಬಳಿಕ 'ಅಜ್ಜನ ಜಾತ್ರೆ' ಅತ್ಯಂತ ಸಂಭ್ರಮದಿಂದ ನೆರವೇರಿತು.

ಮಠದ ಆವರಣದಲ್ಲಿರುವ ಪಾದಗಟ್ಟಿ ಮುಟ್ಟಿ ಬರುವ ಮಹಾರಥೋತ್ಸವದ ಅಪೂರ್ವ ಕ್ಷಣಗಳನ್ನು ಕಣ್ತುಂಬಿಕೊಳ್ಳುವ ಸಲುವಾಗಿ ಭಕ್ತರು ಬೆಳಗಿನ ಜಾವದಿಂದಲೇ ಜಿಲ್ಲೆ, ಹೊರಜಿಲ್ಲೆ ಹಾಗೂ ಹೊರರಾಜ್ಯಗಳಿಂದ ಬಂದಿದ್ದರು. ಅನೇಕರು ಚಕ್ಕಡಿ, ಟ್ರ್ಯಾಕ್ಟರ್‌ಗಳ ಮೂಲಕ ಬಂದರೆ, ಇನ್ನೂ ಕೆಲವರು ಪಾದಯಾತ್ರೆ ಮೂಲಕ ಅಜ್ಜನ ಮಠ ತಲುಪಿದರು.

ಈಶಾ ಫೌಂಡೇಷನ್‌ನ ಸದ್ಗುರು ಜಗ್ಗಿ ವಾಸುದೇವ್ ಅವರು ಮಹಾರಥೋತ್ಸವಕ್ಕೆ ಚಾಲನೆ ನೀಡಿದರು. ಇದಕ್ಕೂ ಮೊದಲು ಗವಿಸಿದ್ಧೇಶ್ವರ ಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಕಣ್ಣು ಹಾಯಿಸಿದಷ್ಟೂ ದೂರ ಕಾಣುತ್ತಲೇ ಇದ್ದ ಜನರಿಗೆ ಕೈಮುಗಿದು, ತಲೆ ಬಾಗಿ ನಮಸ್ಕರಿಸಿದರು. ತೇರು ಸ್ವಲ್ಪ ಮುಂದಕ್ಕೆ ಹೋಗುತ್ತಿದ್ದಂತೆಯೇ ನಿಲ್ಲಿಸುವಂತೆ ಹೇಳಿದ ಸ್ವಾಮೀಜಿ; ಇತ್ತೀಚೆಗೆ ನಿಧನರಾದ ವಿಜಯಪುರದ ಜ್ಞಾನ ಯೋಗಾಶ್ರಮದ ಸಿದ್ಧೇಶ್ವರ ಸ್ವಾಮೀಜಿಗೆ ಶ್ರದ್ಧಾಂಜಲಿ ಸಲ್ಲಿಸೋಣ ಎಂದರು. ಸ್ವಾಮೀಜಿ ಈ ಮಾತು ಹೇಳುತ್ತಿದ್ದಂತೆ ಲಕ್ಷಾಂತರ ಜನ ಮೌನಕ್ಕೆ ಜಾರಿದರು.

ಜಗ್ಗಿ ವಾಸುದೇವ್ ಮಾತನಾಡಿ, 'ನದಿಯಂತೆ ಭಕ್ತರು ಹರಿದು ಬಂದಿದ್ದಾರೆ. ಸಾಧು ಸಂತರು ಭೂಮಿಯಲ್ಲಿ ತಮ್ಮ ಕಾಯಕದ ಮೂಲಕ ನೆನಪು ಉಳಿಸಿ ಹೋಗಿದ್ದಾರೆ. ಅಂಥವರ ನೆನಪಿನ ರೂಪದಲ್ಲಿಯೇ ನೀವೆಲ್ಲರೂ ಇಲ್ಲಿ ಸೇರಿದ್ದೀರಿ' ಎಂದಾಗ ಭಾರಿ ಕರತಾಡನ ವ್ಯಕ್ತವಾಯಿತು.

15 ಲಕ್ಷಕ್ಕೂ ಹೆಚ್ಚು ಜೋಳದ ರೊಟ್ಟಿ, ಏಳು ಲಕ್ಷ ಶೇಂಗಾ ಹೋಳಿಗೆ, 300 ಕ್ವಿಂಟಲ್ ಸಿಹಿ ಮಾದಲಿ ಸೇರಿದಂತೆ ಅನೇಕ ಪದಾರ್ಥಗಳನ್ನು ಭಕ್ತರು ದಾನವಾಗಿ ನೀಡಿದ್ದಾರೆ.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ — ಪ್ರಜಾವಾಣಿ ನೋಡಿಯೊ

ಸುದ್ದಿ 2 ನಿಮಿಷ

14ರಿಂದ ಸಿಗಂದೂರು ಚೌಡೇಶ್ವರಿ ಜಾತ್ರಾ ಮಹೋತ್ಸವ

ತುಮರಿ: ನಾಡಿನ ಪ್ರಸಿದ್ಧ ಶಕ್ತಿ ದೇವತೆ ಸಿಗಂದೂರು ಚೌಡೇಶ್ವರಿ ದೇವಸ್ಥಾನದಲ್ಲಿ ಜನವರಿ 14, 15ರಂದು ಮಕರ ಸಂಕ್ರಮಣದ ಅಂಗವಾಗಿ ಜಾತ್ರಾ ಮಹೋತ್ಸವ ನಡೆಯಲಿದೆ.

ಜ.14ರಂದು ಬೆಳಿಗ್ಗೆ 7ಕ್ಕೆ ಚೌಡೇಶ್ವರಿ ದೇವಿಯ

ಮೂಲ ಸ್ಥಳವಾದ ಸೀಗೆ ಕಣಿವೆಯಲ್ಲಿ ನಟ ರಾಘವೇಂದ್ರ ರಾಜ್‌ಕುಮಾರ್ ಜಾತ್ರೋತ್ಸವ ಉದ್ಘಾಟಿಸುವರು ಎಂದು ಸಿಗಂದೂರು ಕ್ಷೇತ್ರದ ಧರ್ಮಾಧಿಕಾರಿ ಎಸ್. ರಾಮಪ್ಪ ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸೀಗೆ ಕಣಿವೆಯಲ್ಲಿ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಪ್ರಥಮ ಪೂಜೆ ನಡೆಯಲಿದೆ. ನಂತರ ಧರ್ಮಾಧಿಕಾರಿ ನೇತೃತ್ವದಲ್ಲಿ ಜ್ಯೋತಿ ರೂಪದ ದೇವಿಯ ಮೆರವಣಿಗೆ ನಡೆಯಲಿದ್ದು, ವಡನ್‌ಬೈಲ್ ಪದ್ಮಾವತಿ ದೇವಸ್ಥಾನದ ಧರ್ಮದರ್ಶಿ ವೀರರಾಜಯ್ಯ ಜೈನ್ ಚಾಲನೆ ನೀಡಲಿದ್ದಾರೆ.

ಸ್ಯಾಂಟ್ರೊ ರವಿ ಬಂಧನ ವಿಳಂಬ: ಜೆಡಿಎಸ್ ಪ್ರತಿಭಟನೆ

ಮೈಸೂರು: 'ಸ್ಯಾಂಟ್ರೊ ರವಿ ವಿರುದ್ಧ ದೂರು ದಾಖಲಾಗಿ ಆರು ದಿನ ಕಳೆದಿದ್ದರೂ ಆತನ ಬಂಧನಕ್ಕೆ ಮೀನ ಮೇಷ ಎಣಿಸಲಾಗುತ್ತಿದೆ' ಎಂದು ಆರೋಪಿಸಿ ಜೆಡಿಎಸ್ ಜಿಲ್ಲಾ ಘಟಕದ ನೇತೃತ್ವದಲ್ಲಿ ಕಾರ್ಯಕರ್ತರು ಗಾಂಧಿ ಪ್ರತಿಮೆ ಬಳಿ ಭಾನುವಾರ ಪ್ರತಿಭಟನೆ ನಡೆಸಿದರು.

'ಈ ಸರ್ಕಾರದಲ್ಲಿ ದಲಿತರಿಗೆ ರಕ್ಷಣೆ ಇಲ್ಲ. ರೌಡಿಗಳು, ಇಸ್ಪೀಟ್, ಬೆಟ್ಟಿಂಗ್ ದಂಧೆ ನಡೆಸುವ ದಂಧೆಕೋರರಿಗೆ ಆಶ್ರಯ ನೀಡಲಾಗುತ್ತಿದೆ. ಅತ್ಯಾಚಾರವಾಗಿದೆ ಎಂದು ದಲಿತ ಮಹಿಳೆ ದೂರು ನೀಡಿ ಇಷ್ಟು ದಿನವಾದರೂ ಆರೋಪಿಯನ್ನು ಬಂಧಿಸಿಲ್ಲ. ಇದೊಂದು ಲಜ್ಜೆಗೆಟ್ಟ ಸರ್ಕಾರ' ಎಂದು ನಗರಪಾಲಿಕೆ ಸದಸ್ಯೆ ಪ್ರೇಮಾ ಶಂಕರೇಗೌಡ ಕಿಡಿಕಾರಿದರು.

ಸ್ಥಳ ಮಹಜರು: ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಕ್ಷಿ ಕಲೆ ಹಾಕಲು ಪೊಲೀಸರು ಭಾನುವಾರ ಸ್ಥಳ ಮಹಜರು ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸಂತ್ರಸ್ತೆ ಹಾಗೂ ಆರೋಪಿ ಇದ್ದ ಮನೆ, ಮದುವೆಯಾದ ಜಾಗಕ್ಕೆ ಭೇಟಿ ನೀಡಿದ್ದಾರೆ. ಪುರೋಹಿತನಿಂದಲೂ ಮಾಹಿತಿ ಪಡೆದಿದ್ದಾರೆ ಎಂದು ತಿಳಿದುಬಂದಿದೆ.

ಗೃಹ ಸಚಿವರ ಮನೆಯಲ್ಲೇ ಹಣ ಎಣಿಕೆ: ಎಚ್‌ಡಿಕೆ

ಬೀದರ್: 'ಎಸಿಪಿ ಒಬ್ಬರ ವರ್ಗಾವಣೆ ಮಾಡಿಸಲು ಸ್ಯಾಂಟ್ರೊ ರವಿ ಮಧ್ಯಸ್ಥಿಕೆಯಲ್ಲಿ ₹ 15 ಲಕ್ಷ ಹಣಕ್ಕೆ ವ್ಯವಹಾರ ಕುದುರಿಸಲಾಗಿದೆ. ಗೃಹ ಸಚಿವರ ಮನೆಯಲ್ಲೇ ಹಣ ಎಣಿಸಲಾಗಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಈ ಕುರಿತು ಗೃಹ ಸಚಿವ ಆರಗ ಜ್ಞಾನೇಂದ್ರ ತನಿಖೆ ನಡೆಸಲಿ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸವಾಲು ಹಾಕಿದರು.

ಹುಮನಾಬಾದ್ ತಾಲ್ಲೂಕಿನ ರಾಜೇಶ್ವರ ಗ್ರಾಮದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸ್ಯಾಂಟ್ರೊ ರವಿಯನ್ನು ಹಿಡಿಯುವುದು ಸರ್ಕಾರದ ಕೆಲಸ. ಎಲ್ಲಾ ನಾವೇ ಹೇಳುವುದಾದರೆ ಗೃಹ ಸಚಿವರು ಏತಕ್ಕೆ ಇರಬೇಕು' ಎಂದರು.

'ದಾಖಲೆ ಇದ್ದರೆ ಕೊಡಿ ಎನ್ನುತ್ತಿದ್ದಾರೆ. ಹೀಗೆ ಹೇಳುವ ಮೂಲಕ ಪ್ರಕರಣವನ್ನು ಹಳ್ಳ ಹಿಡಿಸಲು ಯತ್ನಿಸುತ್ತಿದ್ದಾರೆ. ದಲ್ಲಾಳಿಗಳೇ ಸರ್ಕಾರದ ಆಡಳಿತ ನಡೆಸುವ ಸ್ಥಿತಿಯನ್ನು ಸಿ.ಎಂ ಸೃಷ್ಟಿ ಮಾಡಿಕೊಂಡಿದ್ದಾರೆ. ಕುಮಾರಕೃಪ ಹೊಸ ಕಟ್ಟಡದಲ್ಲಿ ಏನೆಲ್ಲಾ ನಡೆಯಿತು? ಬೆಂಕಿ ಇಲ್ಲದೆ ಹೊಗೆ ಬರುತ್ತಾ? ನಿಮ್ಮ ತಂದೆಯವರು ಹೇಳಿಕೊಟ್ಟಿದ್ದು ಇದೇನಾ? ಎಂದು ಮುಖ್ಯಮಂತ್ರಿ ಅವರನ್ನು ಪ್ರಶ್ನಿಸಿದರು.

ಆಸ್ಪತ್ರೆಗೆ ಮಗುವಿನ ನೇತ್ರದಾನ

ಹಟ್ಟಿಚಿನ್ನದಗಣಿ (ರಾಯಚೂರು): ಅನುವಂಶಿಕ ಕಾಯಿಲೆಯಿಂದ ಮೃತಪಟ್ಟ ಒಂದೂವರೆ ವರ್ಷದ ಮಗುವಿನ ಕಣ್ಣುಗಳನ್ನು ಪಾಲಕರು ದಾನ ಮಾಡಿದ್ದಾರೆ.

ಬಸವಪ್ರಭು

ರಾಯಚೂರು ಜಿಲ್ಲೆಯ ಚಿನ್ನದ ಗಣಿ ನೌಕರರಾಗಿರುವ ಅಮರೇಶಗೌಡ ಗೆಜ್ಜಲಗಟ್ಟಾ ಹಾಗೂ ವಾಣಿ ದಂಪತಿಗೆ ಮಗು ಜನಿಸಿತ್ತು. ಕಾಯಿಲೆಯಿಂದ ಬಳಲುತ್ತಿದ್ದ ಮಗು ಕೇವಲ ಎರಡು ವರ್ಷ ಬದುಕಿರುತ್ತದೆ ಎಂದು ಬೆಳಗಾವಿಯ ವೈದ್ಯರು ತಿಳಿಸಿದ್ದರು.

ಮಗು ಬಸವಪ್ರಭು ಭಾನುವಾರ ಮೃತಪಟ್ಟಿದ್ದು, ಕಣ್ಣುಗಳನ್ನು ರಾಯಚೂರಿನ ನವೋದಯ ಆಸ್ಪತ್ರೆಗೆ ದಾನ ಮಾಡಿದರು.

'ಬೆಳಗಾವಿ ಹಾಗೂ ರಾಯಚೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದೆವು. ಆದರೂ ಮಗು ಬದುಕಿ ಉಳಿಯಲಿಲ್ಲ. ನೇತ್ರದಾನ ಮಾಡಿದರೆ ಕೆಲವರ ಬಾಳಿಗೆ ಬೆಳಕಾಗಬಹುದು' ಎಂದು ವೈದ್ಯರು ತಿಳಿಸಿದ್ದರು. ಅದಕ್ಕಾಗಿ ದಾನ ಮಾಡಿದ್ದೇವೆ' ಎಂದು ವಾಣಿ ಅಮರೇಗೌಡ ತಿಳಿಸಿದರು.

ಪತ್ರಕರ್ತ ಕೆ.ಸತ್ಯನಾರಾಯಣ ನಿಧನ

ಬೆಂಗಳೂರು: 'ಕನ್ನಡಪ್ರಭ' ದಿನಪತ್ರಿಕೆಯ ಮಾಜಿ ಸಂಪಾದಕ ಕೆ. ಸತ್ಯನಾರಾಯಣ (87) ಅವರು ಭಾನುವಾರ ಜಯನಗರದ ಎಲ್‌ಐಸಿ ಕಾಲೋನಿ ನಿವಾಸದಲ್ಲಿ ನಿಧನರಾದರು.

ಕೆಲ ಕಾಲದಿಂದ ವಯೋಸಹಜ ಅನಾರೋಗ್ಯದಿಂದ ಅವರು ಬಳಲುತ್ತಿದ್ದರು. ಮೃತರಿಗೆ ಪತ್ನಿ ವೆಂಕಮ್ಮ ಹಾಗೂ ಪುತ್ರಿ ಅಪೂರ್ವ ಇದ್ದಾರೆ.

ಪತ್ರಿಕಾ ವಲಯದಲ್ಲಿ 'ಸತ್ಯ' ಎಂದೇ ಹೆಸರುವಾಸಿಯಾಗಿದ್ದ ಅವರು, 'ತಾಯಿನಾಡು' ಪತ್ರಿಕೆ ಮೂಲಕ ಪತ್ರಿಕೋದ್ಯಮ ಪ್ರವೇಶಿಸಿದರು. 'ಕನ್ನಡಪ್ರಭ' ಪತ್ರಿಕೆಯಲ್ಲಿ ಮೂರು ದಶಕ ಅವರು ಕಾರ್ಯನಿರ್ವಹಿಸಿದ್ದರು.

ಸತ್ಯನಾರಾಯಣ ಅವರು ತಮ್ಮ ಅಂಕಣಗಳ ಮೂಲಕ ರಾಜ್ಯ ಮತ್ತು ದೇಶದ ಸಮಕಾಲೀನ ರಾಜಕೀಯ, ವಾಣಿಜ್ಯ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತಿದ್ದರು. ಪತ್ರಿಕೋದ್ಯಮಕ್ಕೆ ನೀಡಿದ ಕೊಡುಗೆಗಾಗಿ ಪ್ರತಿಷ್ಠಿತ 'ಟಿಎಸ್ಸಾರ್ ಪ್ರಶಸ್ತಿ' ಸೇರಿದಂತೆ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಹಣಕಾಸು, ಬಜೆಟ್ ವಿಷಯಗಳ ವರದಿಗಾರಿಕೆಯಲ್ಲಿ ಪರಿಣತರಾಗಿದ್ದರು. ಸಂಜೆ ಚಾಮರಾಜಪೇಟೆಯ ಸ್ಮಶಾನದಲ್ಲಿ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಯಿತು.

ಸಿದ್ಧೇಶ್ವರ ಶ್ರೀಗಳ ಚಿತಾಭಸ್ಮ ವಿಸರ್ಜನೆ

ಕೂಡಲಸಂಗಮ / ಗೋಕರ್ಣ: ವಿಜಯಪುರ ಜ್ಞಾನಯೋಗಾಶ್ರಮದ ಸಿದ್ಧೇಶ್ವರಶ್ರೀಗಳ ಚಿತಾಭಸ್ಮವನ್ನು ಬಸವಲಿಂಗ ಸ್ವಾಮೀಜಿ ನೇತೃತ್ವದಲ್ಲಿ ಭಾನುವಾರ ಕೂಡಲಸಂಗಮ ಹಾಗೂ ಗೋಕರ್ಣದ ಅರಬ್ಬಿ ಸಮುದ್ರದಲ್ಲಿ ವಿಸರ್ಜಿಸಲಾಯಿತು.

ವಿಜಯಪುರದಿಂದ ಭಾನುವಾರ ನಸುಕಿನಲ್ಲಿ ಶ್ರೀಗಳ ಚಿತಾಭಸ್ಮ ಹೊತ್ತ ಅಲಂಕೃತ ವಿಶೇಷ ವಾಹನ ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮಕ್ಕೆ ಬರುತ್ತಿದ್ದಂತೆ ಭಕ್ತರು, ಗ್ರಾಮಸ್ಥರು ಸ್ವಾಗತಿಸಿದರು. ಕೃಷ್ಣಾ, ಮಲಪ್ರಭಾ ನದಿ ದಡದಲ್ಲಿ ಸಿದ್ಧೇಶ್ವರಶ್ರೀ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ವಿಶೇಷ ದೋಣಿ ಮೂಲಕ ಬಸವಣ್ಣನ ಐಕ್ಯ ಮಂಟಪದ ಮುಂಭಾಗಕ್ಕೆ ಸಾಗಿ ಚಿತಾಭಸ್ಮವನ್ನು ನದಿಗೆ ವಿಸರ್ಜಿಸುತ್ತಿದ್ದಂತೆ 'ಓಂ ನಮಃ ಶಿವಾಯ, ಸಿದ್ಧೇಶ್ವರ ಶ್ರೀಗಳಿಗೆ ಜಯವಾಗಲಿ' ಎಂಬ ಘೋಷಣೆಗಳು ಮೊಳಗಿದವು. ನದಿಯ ದಡದಲ್ಲಿ 50ಕ್ಕೂ ಹೆಚ್ಚು ಸ್ವಾಮೀಜಿಗಳು, ರಾಜಕಾರಣಿಗಳು, ಸಾವಿರಾರು ಭಕ್ತರು ಸೇರಿದ್ದರು.

ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯಮೃತ್ಯುಂಜಯ ಸ್ವಾಮೀಜಿ, ಜ್ಞಾನಯೋಗಾಶ್ರಮದ ವಿವಿಧ ಸ್ವಾಮೀಜಿಗಳು, ಶಾಸಕರಾದ ದೊಡ್ಡನಗೌಡ ಪಾಟೀಲ, ಶಿವಾನಂದ ಪಾಟೀಲ, ಜಿಲ್ಲಾಧಿಕಾರಿ ವಿಜಯಮಹಾಂತೇಶ ದಾನಮ್ಮನವರ ಇದ್ದರು.

ಗೋಕರ್ಣ ವರದಿ: ಆಶ್ರಮದ ಅಧ್ಯಕ್ಷ ಬಸವಲಿಂಗ ಶ್ರೀಗಳ ನೇತೃತ್ವದಲ್ಲಿ ಸುಮಾರು 500ಕ್ಕೂ ಹೆಚ್ಚು ವಾಹನದಲ್ಲಿ ಮೂರು ಸಾವಿರಕ್ಕೂ ಅಧಿಕ ಭಕ್ತರು, ಶಿಷ್ಯರು ಸಂಜೆ ಗೋಕರ್ಣಕ್ಕೆ ಆಗಮಿಸಿದ್ದರು. 'ಸಿದ್ಧೇಶ್ವರಶ್ರೀಗಳ ಇಚ್ಛೆಯಂತೆ ಅವರ ಅಸ್ಥಿ ಮತ್ತು ಚಿತಾಭಸ್ಮವನ್ನು ಗೋಕರ್ಣದ ಅರಬ್ಬೀ ಸಮುದ್ರದಲ್ಲಿ ವಿಸರ್ಜಿಸಲಾಯಿತು' ಎಂದು ಬಸವಲಿಂಗ ಶ್ರೀಗಳು ತಿಳಿಸಿದರು.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)

ವಿಜನಿನಿ, ಭ.ಮೇ.ಯೋ. ವಿಭಾಗ, ನಂ.7, ಹಿರಿಯೂರು ಕ್ಯಾಂಪ್, ಚಿತ್ರದುರ್ಗ.

ದೂರವಾಣಿ ಸಂ:08194–200187 Email ID:ubpeediv07@gmail.com

ಸಂ:ಕಾ.ಇಂ/ವಿ.ಜ.ನಿ.ನಿ/ಭಮೇಯೋ/ವಿ.ನಂ.07/ಹಿ/ಕ್ಯಾಂ.ಚಿ/2022–23/18 ದಿ:09.01.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.07, ಹಿರಿಯೂರು ಕ್ಯಾಂಪ್; ಚಿತ್ರದುರ್ಗ ಇವರಿಂದ ಟೆಂಡರನ್ನು ಭದ್ರಾ ಮೇಲ್ದಂಡೆ ಯೋಜನೆಯ ಲೆಕ್ಕಶೀರ್ಷಿಕೆ 4701– ಟಿ.ಎಸ್.ಪಿ ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿರುವವರನ್ನುಕಛೇರಿ ಸಮಯದಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂ:08194–200187 ರಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. **ಕಾಮಗಾರಿಯ ಹೆಸರು:–** Construction of CC road connecting from NH-150A to Babbur village ST colony coming under Hiriyur Municipality limit in Hiriyur for the year 2022-23 under TSP. (VJNL/2022-23/SM/WORK_INDENT2523) **ಟೆಂಡರ್‌ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ:–** 74.61 **ಇ.ಎಂ.ಡಿ.ಮೊತ್ತರೂ.ಲಕ್ಷಗಳಲ್ಲಿ:–** 1.50 **ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ:–** 17.01.2023@17.30 ಗಂಟೆಗೆ ಸಂಜೆ **ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ:–** 19.01.2023@11.00 ಗಂಟೆಗೆ ಬೆಳಿಗ್ಗೆ.

DIPR/CTA/MCA/857/2022-23 ಸಹಿ/– ಕಾರ್ಯಪಾಲಕ ಇಂಜಿನಿಯರ್.

भारत सरकार, अंतरिक्ष विभाग
Government of India, Department of Space
भारतीय अंतरिक्ष अनुसंधान संगठन (इसरो)
INDIAN SPACE RESEARCH ORGANISATION [ISRO]
इसरो केंद्रीकृत भर्ती बोर्ड (आइ.सी.आर.बी.)
ISRO CENTRALISED RECRUITMENT BOARD [ICRB]
सहायक, कनिष्ठ वैयक्तिक सहायक, प्रवर श्रेणी लिपिक एवं आशुलिपिकों की भर्ती
RECRUITMENT OF ASSISTANTS, JUNIOR PERSONAL ASSISTANTS, UPPER DIVISION CLERK AND STENOGRAPHERS

दिनांक 20.12.2022 की विज्ञापन संख्या इसरो:आइ.सी.आर.बी.: 02 (ए-जे.पी.ए.):2022 के दिनांक 09.01.2023 का शुद्धिपत्र

Corrigendum dated 09.01.2023 to Advt No.ISRO:ICRB:02 (A-JPA):2022 dated 20.12.2022.

दिनांक 20.12.2022 की विज्ञापन संख्या इसरो: आइ.सी.आर.बी.: 02 (ए-जे.पी.ए.):2022 से संबंधित शुद्धिपत्र इसरो की वेबसाइट पर उपलब्ध है। शुद्धिपत्र से संबंधित संपूर्ण विवरण के लिए कृपया इसरो की वेबसाइट **www.isro.gov.in** देखें। ऑनलाइन आवेदन प्राप्ति की अंतिम तिथि **16.01.2023** तक बढ़ाई जाती है।

A corrigendum to Advt No. ISRO:ICRB:02 (A-JPA):2022 dated 20.12.2022 is hosted in ISRO website. For complete details on corrigendum please visit ISRO website at **www.isro.gov.in.** The last date for receipt of on-line applications is also extended up to **16.01.2023**.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.

ನಂ/ಇ.ಎಲ್.ಎನ್(1)ಚೆ.ಪೋ.ಟೆಂ.:01/2022–23 ದಿನಾಂಕ : 06–01–2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮುಂಬರುವ ವಿಧಾನಸಭಾ ಸಾರ್ವತ್ರಿಕ ಚುನಾವಣೆ–2023ರ ಹಿನ್ನಲೆಯಲ್ಲಿ ಜಿಲ್ಲೆಯ/ವಿಧಾನಸಭಾ ಕ್ಷೇತ್ರಗಳ ಗಡಿಭಾಗಗಳಲ್ಲಿ ಚೆಕ್ ಪೋಸ್ಟ್ ಗಳನ್ನು ತಾತ್ಕಾಲಿಕವಾಗಿ ನಿರ್ಮಿಸಲು ಇಚ್ಛಿಸುವ ಸಂಸ್ಥೆ /ಟೆಂಡರ್ ದಾರರಿಂದ ಅಲ್ಪಾವಧಿ ಇ–ಟೆಂಡರ್ ಮರು ಆಹ್ವಾನಿಸಲಾಗಿದೆ.

1	ಟೆಂಡರ್ ಪ್ರಕಟಣೆ ದಿನಾಂಕ	ದಿನಾಂಕ : 07–01–2023
2	ಇ–ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 16–01–2023 ಸಂಜೆ: 5.00 ಗಂಟೆಗೆ
3	ತಾಂತ್ರಿಕ ಲಕೋಟೆ ತೆರೆಯುವ ಸ್ಥಳ ಮತ್ತು ದಿನಾಂಕ	ಜಿಲ್ಲಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು ದಿನಾಂಕ: 17–01–2023 ಸಂಜೆ 5.00 ಗಂಟೆ
4	ಹಣಕಾಸಿನ ಲಕೋಟೆಯನ್ನು ತೆರೆಯುವ ಸ್ಥಳ ಮತ್ತು ದಿನಾಂಕ	ಜಿಲ್ಲಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು ದಿನಾಂಕ: 18–01–2023 ಸಂಜೆ 5.00 ಗಂಟೆ
5	ಇ–ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ	ರೂ. 25,000.00
6	ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ ಮತ್ತು ದೂರವಾಣಿ ಸಂಖ್ಯೆ	ಚುನಾವಣಾ ತಹಶೀಲ್ದಾರ್, ಚುನಾವಣಾ ಶಾಖೆ, ಜಿಲ್ಲಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು ದೂರವಾಣಿ ಸಂಖ್ಯೆ : 08262–230647

ಸಹಿ/– ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಳಿಗಾಗಿ ಆಹ್ವಾನ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲ ಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರುಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ(ರೂ.ಗಳಲ್ಲಿ) / ಇಎಂಡಿ ಮೊತ್ತ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಛೇರಿ (ಯೋಜನೆ), 3ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009						
1	ಕೇಂದ್ರ ಉಗ್ರಾಣ	ಬೆಂಜಮಂ/ಕಾನಿಅ(ಕೇಂ.ಉ)/ಸಕಾನಿಅ/ಸಅ/ಉಗ್ರಾಣ/658/2022–23 ದಿನಾಂಕ: 04.01.2023 ಕರೆ–6		ರೂ.. 32,32,000/– / ರೂ. 64,640/–	23.01.2023ರ ಸಂಜೆ 4:00 ಗಂಟೆಯವರೆಗೆ	25.01.2023ರ ಮಧ್ಯಾಹ್ನ 12:00 ಗಂಟೆಗೆ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ ಉಗ್ರಾಣ)						
ಮುಖ್ಯ ಅಭಿಯಂತರರ ಕಛೇರಿ (ಉತ್ತರ), 2ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009						
2	ಕೇಂದ್ರ	ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/2688 2022–23 ದಿನಾಂಕ: 07.01.2023 (ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದೆ) ಕರೆ–2	1	ರೂ. 5,92,563/– / ರೂ. 7,407/–	16.01.2023ರ ಸಂಜೆ 5:00 ಗಂಟೆಯವರೆಗೆ	17.01.2023ರ ಸಂಜೆ 5:01 ಗಂಟೆಯ ನಂತರ
3	ಕೇಂದ್ರ	ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/2690 2022–23 ದಿನಾಂಕ: 07.01.2023 (ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದೆ) ಕರೆ–2	2	ರೂ. 3,92,853/– / ರೂ. 4.,950/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ)						
ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009						
4	ದಕ್ಷಿಣ ಪಶ್ಚಿಮ–1	ಬೆಂಜಮಂ/ಕಾನಿಅ(ದಪ–1)/ತಾಂಅ/ಪಿಬಿ/1346 2022–23 ದಿನಾಂಕ: 06.01.2023	1	ರೂ. 9,97,260/– / ರೂ. 25,000/–	19.01.2023ರ ಸಂಜೆ 4:00 ಗಂಟೆಯವರೆಗೆ	21.01.2023ರ ಮಧ್ಯಾಹ್ನ 3:00 ಗಂಟೆಯ ನಂತರ
5			2	ರೂ. 11,83,076/– / ರೂ. 29,600/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ ಪಶ್ಚಿಮ–1)						
6	ದಕ್ಷಿಣ –2	ಬೆಂಜಮಂ/ಕಾನಿಅ(ದ–2)/ಪಿಬಿ/645 2022–23 ದಿನಾಂಕ: 05.01.2023		ರೂ. 28,16,310/– / ರೂ. 56,400/–	23.01.2023ರ ಸಂಜೆ 4:00 ಗಂಟೆಯವರೆಗೆ	25.01.2023ರ ಸಂಜೆ 4:00 ಗಂಟೆಯ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ–2)						
ಮುಖ್ಯ ಅಭಿಯಂತರರ ಕಛೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009						
7	ಪೂರ್ವ–1	ಬೆಂಜಮಂ/ಕಾನಿಅ(ಪೂ–1)/ಪಿಬಿ/2363/ 2022–23 ದಿನಾಂಕ: 04.01.2023 ಕರೆ–2		ರೂ. 11,81,380/– / ರೂ. 29,535/–	23.01.2023ರ ಸಂಜೆ 4:00 ಗಂಟೆಯವರೆಗೆ	25.01.2023ರ ಸಂಜೆ 5:00 ಗಂಟೆಯ ನಂತರ
8		ಬೆಂಜಮಂ/ಕಾನಿಅ(ಪೂ–1)/ಪಿಬಿ/2365/ 2022–23 ದಿನಾಂಕ: 04.01.2023 (ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ)	1	ರೂ. 45,86,094/– / ರೂ. 45,900/–		
9			2	ರೂ. 23,34,656/– / ರೂ. 25,000/–		
10		ಬೆಂಜಮಂ/ಕಾನಿಅ(ಪೂ–1)/ಪಿಬಿ/2365/ 2022–23 ದಿನಾಂಕ: 04.01.2023 (ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದೆ)	3	ರೂ. 42,41,952/– / ರೂ. 42,420/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ–1)						

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ವಾಸಾಸಂಇ/ವಾಪ್ರ/ಜೆಎ/3960/2022–23

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಚಾಲಕರು ಬೇಕಾಗಿದ್ದಾರೆ ಪ್ರತಿ ತಿಂಗಳು ರೂ. 40,000-50,000 ಗಳಿಸಿ ಕರೆ ಮಾಡಿ: 08069451001 ಅಗತ್ಯವಿದೆ: LMV Driving Licence (3 ವೀಲರ್/ 4 ವೀಲರ್)

General

ಲಿಮಿಟೆಡ್ ಕಂಪನಿಗಳಿಗೆ ಹಾಗು ಆಫೀಸ್‌ಗಳಿಗೆ ಬಿಲ್ಲಿಂಗ್, ಪ್ರೊಡಕ್ಷನ್, ಮ್ಯಾನೇಜ್ಮೆಂಟ್ ಡಿಪಾರ್ಟ್ಮೆಂಟ್ಗಳಿಗೆ ವಿದ್ಯಾರ್ಹತೆಯಿರುವ, ವಿದ್ಯಾರ್ಹತೆಯಿಲ್ಲದಿರುವ ಯುವಕರು/ಯುವತಿಯರು ಬೇಕಾಗಿದ್ದಾರೆ. ಊಟ,ವಸತಿಯೊಂದಿಗೆ 17,000-28,000/- 8884611125, 8884611126.

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿಇದೆ 10,000-15,000. 8951315839, 9880545002

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/ 9611225344

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 16,000-20,000 ಗಳಿಸಿ.(ಕೊರಿಯರ್ ಇದೆ) 8904715353, 8904725353.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

ಪ್ರವಾಸ

Travel

ದೆಹಲಿ ಯುಮುನೋತ್ರಿ ಗಂಗೋತ್ರಿ ಬದರಿನಾಥ್ ಕೇದಾರನಾಥ್ 27.04.2023 03.05.2023 08.05.2023 12.05.2023 ರಿಂದ 14/18 ದಿನಗಳು. ಪುರಿ ಕೊನಾರ್ಕ್ ಭುವನೇಶ್ವರ್ ಕಾಶಿ,ಗಯಾ,ಪ್ರಯಾಗ,ಹರಿದ್ವಾರ್ ದೆಹಲಿ 01.04.2023 07.04.2023 14.04.2023 22.04.2023 ರಿಂದ 14/10 ದಿನಗಳು. ಸೋಮನಾಥ್ ದ್ವಾರಕಾ ಮಾತೃಗಯಾ ಉಜ್ಜಯಿನಿ ಓಂಕಾರೇಶ್ವರ್ 02.02.2023 ರಿಂದ 15/10 ದಿನಗಳು. ವಿಜಯವಾಡ ಭದ್ರಾಚಲಂ ವಿಶಾಖಪಟ್ಟಣಂ ಪಂಚರಾಮ ಮಂದಿರಗಳು 03.02.2023 ರಿಂದ 10 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು18

ಮಹಾಶಿವರಾತ್ರಿ ಪ್ರಯುಕ್ತ 9/2/2023 ಮತ್ತು 24/2/2023ರಿಂದ ವಿಮಾನ ಮತ್ತು ಎ.ಸಿ.ಬಸ್ಸಿನಲ್ಲಿ 13/16 ದಿನಗಳ ನೈಮಿಶಾರಣ್ಯ ಮುಕ್ತಿನಾಥ್,ಪಶುಪತಿನಾಥ್, ಪೋಕ್ರ,ಭಕ್ತಿಪುರ್,ಕಾಶಿ,ಪುರಿ, ಕೋಲ್ಕತ್ತಾ, ಇತ್ಯಾದಿ.ಹಾಗೂ 27/4/2023ರಿಂದ 34ದಿನಗಳ ಚಾರಧಾಮ್ ಸಮೇತ ವೈಷ್ಣೋದೇವಿ,ಅಮೃತ್ ಸರ್,ಕಾಶಿ, ಗುಲ್ಮಾರ್ಗ್,ಕಾಶ್ಮೀರ,ಹರಿದ್ವಾರ, ನವದೆಹಲಿ.~ಏಷ್ಯನ್ ಟ್ರಾವೆಲ್ ಲೈನ್ಸ್ 164/3,ಆರ್.ವಿ.ರಸ್ತೆ ಬೆಂಗಳೂರು.~04,ಸಂಪರ್ಕಿಸಿ: ಷಣ್ಮುಗಾನಂದ:9480182865. 8105657052.

ಶಿವರಾತ್ರಿ, ಪ್ರಯುಕ್ತ ಜನವರಿ ಫೆಬ್ರವರಿ ತಿಂಗಳಲ್ಲಿ 8 ದಿನಗಳ ಕಾಶಿ,ಗಯಾ,ಅಯೋಧ್ಯ ಮಾರ್ಚ್ ಏಪ್ರಿಲ್ ಮೇ ತಿಂಗಳಲ್ಲಿ 12 ದಿನಗಳ ಮುಕ್ತಿನಾಥ ನೇಪಾಳ ನೈಮಿಶಾರಣ್ಯ 14 ದಿನಗಳ ದೆಹಲಿ ಅಮೃತ್‌ಸರ್ ವೈಷ್ಣೋದೇವಿ ಕುಲು ಮನಾಲಿ,ಸಿಮ್ಲಾ 14/21/26 ದಿನಗಳ ಕಾಶಿ,ಗಯಾ ಪ್ರಯಾಗ ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯುಮುನೋತ್ರಿ ದೆಹಲಿ 16 ದಿನಗಳ ಪಂಚದ್ವಾರಕ ಮಾತೃಗಯಾ ಉಜ್ಜಯಿನಿ ಓಂಕಾರೇಶ್ವರ ಅಹಮದಾಬಾದ್ 21.01.2023 ಒಳಗಾಗಿ ಪೂರ್ಣ ಪ್ರಯಾಣ ದರವನ್ನು ಪಾವತಿಸಿದವರಿಗೆ ಬಸ್ ದರದಲ್ಲಿ 10% ರಿಯಾಯಿತಿ ಕೊಡಲಾಗುವುದು ಸಂಪರ್ಕಿಸಿ: 'ಶ್ರೀಸುಧಾ ಟ್ರಾವಲ್ಸ್' 22429289 9019301300 9448119290

★22.02.2023 14ದಿನಗಳು★ ಮಧ್ಯಪ್ರದೇಶ ಗುಜರಾತ್, ರಾಜಸ್ಥಾನ, 4ಜ್ಯೋತಿರ್ಲಿಂಗ ದ್ವಾರಕಾ, ನಿಷ್ಕಳಂಕಮಹಾದೇವ್, ಅಂಬಾಜಿ,ಜೆಸ್ಮಲೇರ್, ಬಿಕಾನೇರ್ ಜೈಪುರ. ಶ್ರೀಗಂಗಾ ಟೂರಿಸ್ಟ್: 9480253807/ 8105522123

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 08/01/23 ಕಾಶಿ, ಗಯ, ಅಯೋಧ್ಯ. 11/02/23 ಪೂರಿ ಜಗನ್ನಾಥ್, ಕೊನರ್ಕ್, ಭುವನೇಶ್ವರ್. 21/02/23 ದೆಹಲಿ, ವೈಷ್ಣೋದೇವಿ. 9591017782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Book Your Classifieds Ads Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH DECCAN HERALD ಪ್ರಜಾವಾಣಿ

ವಿಮಾನದಲ್ಲಿ ಮೂತ್ರ ವಿಸರ್ಜನೆ ಪ್ರಕರಣ: ಟಾಟಾ ಸಮೂಹದ ಮುಖ್ಯಸ್ಥರ ಪ್ರತಿಕ್ರಿಯೆ

'ನಿರೀಕ್ಷೆಗೆ ತಕ್ಕಂತೆ ಪರಿಸ್ಥಿತಿ ನಿಭಾಯಿಸಿಲ್ಲ'

ಮುಂಬೈ (ಪಿಟಿಐ): 'ವಿಮಾನದಲ್ಲಿ ವ್ಯಕ್ತಿಯೊಬ್ಬ ಮಹಿಳಾ ಪ್ರಯಾಣಿಕರೊಬ್ಬರ ಮೇಲೆ ಮೂತ್ರ ವಿಸರ್ಜನೆ ಮಾಡಿದ್ದ ಪ್ರಕರಣದಲ್ಲಿ ಏರ್ ಇಂಡಿಯಾ ಇನ್ನಷ್ಟು ತ್ವರಿತವಾಗಿ ಪ್ರತಿಕ್ರಿಯೆ ನೀಡಬೇಕಿತ್ತು. ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬೇಕಿತ್ತೋ ಹಾಗೆ ನಿಭಾಯಿಸಲು ಆಗಲಿಲ್ಲ. ಈ ಪ್ರಕರಣವನ್ನು ನಾವು ಸರಿಯಾಗಿ ನಿರ್ವಹಿಸಲಿಲ್ಲ' ಎಂದು ಟಾಟಾ ಸಮೂಹದ ಮುಖ್ಯಸ್ಥ ಎನ್.ಚಂದ್ರಶೇಖರನ್ ಭಾನುವಾರ ಹೇಳಿದ್ದಾರೆ.

'ಈ ಘಟನೆ ವೈಯಕ್ತಿಕವಾಗಿ ನನಗೆ ಹಾಗೂ ಏರ್ ಇಂಡಿಯಾದ ಸಹೋದ್ಯೋಗಿಗಳಿಗೆ ತುಂಬಾ ನೋವುಂಟುಮಾಡಿದೆ. ಟಾಟಾ ಸಮೂಹ ಹಾಗೂ ಏರ್ ಇಂಡಿಯಾವು ತನ್ನ ಪ್ರಯಾಣಿಕರು ಮತ್ತು ಸಿಬ್ಬಂದಿಯ ಸುರಕ್ಷತೆ ಹಾಗೂ ಯೋಗಕ್ಷೇಮಕ್ಕೆ ಒತ್ತು ನೀಡಲಿದೆ. ಇಂತಹ ಅಹಿತಕರ ಘಟನೆಯನ್ನು ತಡೆಯುವ ದಿಸೆಯಲ್ಲಿ ನಾವು ಪ್ರತಿಯೊಂದು ಪ್ರಕ್ರಿಯೆಯನ್ನೂ ಪರಿಶೀಲಿಸಲಿದ್ದು, ಅದನ್ನು ಸರಿಪಡಿಸಲೂ ಪ್ರಯತ್ನಿಸುತ್ತೇವೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಕಳೆದ ವರ್ಷದ ನ. 26ರಂದು ನ್ಯೂಯಾರ್ಕ್‌ನಿಂದ ದೆಹಲಿಗೆ ಬರುತ್ತಿದ್ದ ಏರ್ ಇಂಡಿಯಾ ವಿಮಾನದ ಬ್ಯುಸಿನೆಸ್ ಕ್ಲಾಸ್‌ನಲ್ಲಿ ಪ್ರಯಾಣಿಸುತ್ತಿದ್ದ ಹಿರಿಯ ಮಹಿಳೆಯ ಮೇಲೆ ಮದ್ಯದ ಅಮಲಿನಲ್ಲಿದ್ದ ಆರೋಪಿ ಶಂಕರ್ ಮಿಶ್ರಾ ಎಂಬಾತ ಮೂತ್ರ ವಿಸರ್ಜನೆ ಮಾಡಿದ್ದ.

ಪೈಲಟ್‌ಗಳ ಆಕ್ರೋಶ: 'ಪ್ರಕರಣದಲ್ಲಿ ವಿಮಾನದ ಕ್ಯಾಪ್ಟನ್ ಹಾಗೂ ಕೆಲ ಸಿಬ್ಬಂದಿಯನ್ನು ಬಲಿಪಶುಮಾಡುವುದು ಸರಿಯಲ್ಲ' ಎಂದು ಅನುಭವಿ ಹಾಗೂ ನಿವೃತ್ತ ಪೈಲಟ್‌ಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಕರ್ತವ್ಯ ನಿರ್ವಹಿಸಲು ವಿಫಲ'

ನ್ಯೂಯಾರ್ಕ್ (ಪಿಟಿಐ): 'ವಿಮಾನ ಸಿಬ್ಬಂದಿ ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ' ಎಂದು ಆರೋಪಿ ಶಂಕರ್ ಮಿಶ್ರಾ ಅವರ ಪಕ್ಕದ ಆಸನದಲ್ಲಿ ಕುಳಿತಿದ್ದ ಅಮೆರಿಕ ಮೂಲದ ವೈದ್ಯ ಡಾ.ಸುಗತ ಭಟ್ಟಾಚಾರ್ಯ ಭಾನುವಾರ ಆರೋಪಿಸಿದ್ದಾರೆ.

ನ್ಯೂ ಹಾಂಪ್‌ಶೈರ್ ನಿವಾಸಿಯಾಗಿರುವ ಅವರು ಘಟನೆ ಕುರಿತು ಏರ್ ಇಂಡಿಯಾಕ್ಕೆ ವಿವರವಾದ ದೂರು ಸಲ್ಲಿಸಿದ್ದಾರೆ.

'ಊಟದ ವೇಳೆ ಮಿಶ್ರಾ ನಾಲ್ಕು ಪೆಗ್ ಮದ್ಯ ಸೇವಿಸಿದ್ದರು. ವಿಪರೀತ ಕುಡಿದಿದ್ದ ಅವರ ಮೇಲೆ ನಿಗಾ ಇಡುವಂತೆ ವಿಮಾನದಲ್ಲಿದ್ದ ಪುರುಷ ಸಿಬ್ಬಂದಿಯೊಬ್ಬರಿಗೆ ತಿಳಿಸಿದ್ದೆ. ಕುಡಿದಿದ್ದವನಿಗೆ ಪ್ರಜ್ಞೆ ಇರಲಿಲ್ಲ. ಹೀಗಾಗಿ ಮಹಿಳೆ ಮೇಲೆ ಮೂತ್ರ ವಿಸರ್ಜಿಸಿದ. ಸಿಬ್ಬಂದಿ ನನ್ನ ಮಾತನ್ನು ಗಂಭೀರವಾಗಿ ಪರಿಗಣಿಸಿದ್ದರೆ ಇಷ್ಟೆಲ್ಲಾ ಆಗುತ್ತಿರಲಿಲ್ಲ' ಎಂದು ದೂರಿದ್ದಾರೆ.

> ಮೂತ್ರ ವಿಸರ್ಜಿಸಿದ್ದ ಪ್ರಕರಣದ ತನಿಖೆ ಪ್ರಗತಿಯಲ್ಲಿದೆ. ಅದು ಪೂರ್ಣಗೊಂಡ ನಂತರ ತಪ್ಪಿತಸ್ಥರ ವಿರುದ್ಧ ತ್ವರಿತವಾಗಿ ಕ್ರಮ ಕೈಗೊಳ್ಳಲಾಗುವುದು
> **ಜ್ಯೋತಿರಾದಿತ್ಯ ಸಿಂಧಿಯಾ**, ಕೇಂದ್ರ ವಿಮಾನಯಾನ ಸಚಿವ

'ವಿಮಾನದ ಪೈಲಟ್ ಹಾಗೂ ನಾಲ್ವರು ಕ್ಯಾಬಿನ್ ಸಿಬ್ಬಂದಿಗೆ ಶೋಕಾಸ್ ನೋಟಿಸ್ ಜಾರಿಗೊಳಿಸಲಾಗಿದೆ. ತನಿಖೆ ಪೂರ್ಣಗೊಳ್ಳುವವರೆಗೂ ಇವರಿಗೆ ಯಾವುದೇ ಹೊಣೆ ವಹಿಸದಿರಲು ತೀರ್ಮಾನಿಸಲಾಗಿದೆ' ಎಂದು ಏರ್ ಇಂಡಿಯಾ ಸಿಇಒ ಶನಿವಾರ ತಿಳಿಸಿದ್ದರು. 'ಕ್ಯಾಪ್ಟನ್ ಮತ್ತು ಸಿಬ್ಬಂದಿ ತಪ್ಪಿತಸ್ಥರಾಗಿದ್ದರೆ ಘಟನೆಯ ಮರುದಿನವೇ ಕ್ರಮ ಕೈಗೊಳ್ಳಬೇಕಿತ್ತು. ಏರ್ ಇಂಡಿಯಾವು ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಹಾಗೂ ಮುಜುಗರದಿಂದ ಪಾರಾಗುವ ಉದ್ದೇಶದಿಂದ ಪೈಲಟ್ ಹಾಗೂ ಸಿಬ್ಬಂದಿಯನ್ನು ಬಲಿಪಶು ಮಾಡಿದೆ' ಎಂದು ಪೈಲಟ್‌ಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ವಿಮಾನವು ಸಂಚಾರ ಪೂರ್ಣಗೊಳಿಸಿದ ಬಳಿಕ ಅದರಲ್ಲಿರುವ ಸಿಬ್ಬಂದಿಯು ಪ್ರಯಾಣದ ವೇಳೆ ಕ್ಯಾಬಿನ್‌ನಲ್ಲಿ ಏನೆಲ್ಲಾ ಆಯಿತು ಎಂಬುದರ ಕುರಿತ ವರದಿ ಸಿದ್ಧಪಡಿಸಿ, ಪೈಲಟ್ ಸಹಿಯೊಂದಿಗೆ ಅದನ್ನು ಕ್ಯಾಬಿನ್ ಸಿಬ್ಬಂದಿ ಇಲಾಖೆಗೆ ಸಲ್ಲಿಸುವುದು ವಾಡಿಕೆ. ಅದನ್ನು ಕ್ಯಾಬಿನ್ ಸಿಬ್ಬಂದಿ ಇಲಾಖೆ ಹಾಗೂ ಏರ್ ಇಂಡಿಯಾವು ಸರಿಯಾಗಿ ಪರಿಶೀಲಿಸದೇ ಕ್ಯಾಪ್ಟನ್‌ನನ್ನು ದೂಷಿಸುತ್ತಿರುವುದು ಏಕೆ' ಎಂದು ನಿವೃತ್ತ ಪೈಲಟ್ ಪನೇಸರ್ ಪ್ರಶ್ನಿಸಿದ್ದಾರೆ. 'ಪ್ರಕರಣವನ್ನು ಮಾಧ್ಯಮಗಳು ದೊಡ್ಡದಾಗಿ ಬಿಂಬಿಸಿದ ಬಳಿಕ ಎಚ್ಚೆತ್ತಿರುವ ಆಡಳಿತವು ಸಿಬ್ಬಂದಿಯನ್ನು ಹೊಣೆಗಾರರನ್ನಾಗಿ ಮಾಡಲು ಮುಂದಾಗಿರುವುದು ಸರಿಯಲ್ಲ' ಎಂದು ಕ್ಯಾಪ್ಟನ್ ಅಜಯ್ ಅಹ್ಲಾವತ್ ಹೇಳಿದ್ದಾರೆ.

'ಜಗತ್ತಿಗೆ ಭಾರತವು ಕೌಟುಂಬಿಕ ವ್ಯವಸ್ಥೆಯ ಕೊಡುಗೆ ನೀಡಬಹುದು'


ದತ್ತಾತ್ರೇಯ ಹೊಸಬಾಳೆ

ನಾಗ್ಪುರ (ಪಿಟಿಐ): 'ಕೌಟುಂಬಿಕ ಮೌಲ್ಯವನ್ನು ಕಾಪಾಡಿಕೊಳ್ಳಲು ಜಗತ್ತು ಹೆಣಗುತ್ತಿದೆ. ಆದ್ದರಿಂದ, ಜಗತ್ತಿಗೆ ಭಾರತವು ಉತ್ತಮ ಕೌಟುಂಬಿಕ ವ್ಯವಸ್ಥೆಯನ್ನು ಕೊಡುಗೆ ನೀಡಬಹುದು' ಎಂದು ಆರ್‌ಎಸ್‌ಎಸ್‌ನ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅಭಿಪ್ರಾಯಪಟ್ಟರು.

ಆರ್‌ಎಸ್‌ಎಸ್‌ನಿಂದ ಪ್ರೇರಿತವಾದ 'ವಿಶ್ವಮಾಂಗಲ್ಯ ಸಭಾ'ದ ಕಚೇರಿಯನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಅಮೆರಿಕವೂ ಸೇರಿ ಎಲ್ಲಾ ದೇಶಗಳು ತಾಯ್ತನವನ್ನು ಕಾಪಾಡಿಕೊಳ್ಳಲು ಚಿಂತಿಸುತ್ತಿವೆ. ಜಗತ್ತಿನ ಹಲವು ರಾಜಕೀಯ ಪಕ್ಷಗಳು ಕೌಟುಂಬಿಕ ಮೌಲ್ಯಗಳನ್ನು ಕಾಪಾಡುವುದಾಗಿ ತಮ್ಮ ಪ್ರಣಾಳಿಕೆಯಲ್ಲಿ ಹೇಳಿಕೊಳ್ಳುತ್ತಿದ್ದಾರೆ. ಆದ್ದರಿಂದ ಭಾರತವು ಕೌಟುಂಬಿಕ ವ್ಯವಸ್ಥೆಯನ್ನು ಜಗತ್ತಿಗೆ ಕೊಡುಗೆ ನೀಡಬಹುದು' ಎಂದರು.

ಕುರುಕ್ಷೇತ್ರದಲ್ಲಿ ಸಾಗಿದ 'ಭಾರತ್ ಜೋಡೊ ಯಾತ್ರೆ'ಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಸೇನೆಯ ಮಾಜಿ ಮುಖ್ಯಸ್ಥ ದೀಪಕ್ ಕಪೂರ್ ಹಾಗೂ ಮೇಜರ್ ಜನರಲ್ ಸತ್‌ವೀರ್ ಸಿಂಗ್ ಚೌಧರಿ ಅವರು ಭಾನುವಾರ ಪಾಲ್ಗೊಂಡರು –ಪಿಟಿಐ ಚಿತ್ರ

'ಕಾಂಗ್ರೆಸ್‌ಗೆ ತಪಸ್ಸಿನಲ್ಲಿ ನಂಬಿಕೆ'

ಕುರುಕ್ಷೇತ್ರ (ಹರಿಯಾಣ): ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರು ತಮ್ಮನ್ನು 'ಪೂಜಿ'ಸುವಂತೆ ಒತ್ತಾಯಪಡಿಸುತ್ತಿದ್ದಾರೆ. ಇದೇ ವೇಳೆ 'ತಪಸ್ಸು' ಮಾಡುತ್ತಿರುವ ರೈತರು ಹಾಗೂ ಕಾರ್ಮಿಕರನ್ನು ಅಗೌರವದಿಂದ ಕಾಣುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕಿಡಿಕಾರಿದರು.

ಇಲ್ಲಿ ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವು ತಪಸ್ಸಿನಲ್ಲಿ ನಂಬಿಕೆ ಇಟ್ಟಿದೆ ಎಂದರು. ಮಾಧ್ಯಮದವರ ಮುಂದೆ ಪ್ರಧಾನಿ ಮೋದಿ ಅವರು ಬರುವುದಿಲ್ಲ. ಯಾಕೆಂದರೆ, ಮಾಧ್ಯಮದವರು ಸತ್ಯವನ್ನು ಹುಡುಕಿಬಿಟ್ಟರೆ ಎಂಬ ಭಯ ಪ್ರಧಾನಿಯನ್ನು ಕಾಡುತ್ತದೆ. ಆದರೆ, ಆರ್‌ಎಸ್‌ಎಸ್, ಬಿಜೆಪಿಯಂತೆ ಮೋದಿ ಅವರಿಗೂ ಜನರು ತಮ್ಮನ್ನು ಪೂಜಿಸಲಿ ಎಂಬ ಆಸೆ ಇದೆ' ಎಂದರು.

'ಹೋಲಿಸಿಕೊಳ್ಳಲು ನಾನು ಯಾರು?'

ಮೋತಿಹಾರಿ (ಬಿಹಾರ): 'ಅವರು ದೊಡ್ಡ ಜನ. ಅವರೊಂದಿಗೆ ನನ್ನನ್ನು ಹೋಲಿಸಿಕೊಳ್ಳಲು ನಾನು ಯಾರು?' ಎಂದು ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಅವರು ರಾಹುಲ್ ಕುರಿತು ವ್ಯಂಗ್ಯವಾಡಿದರು.

ಪ್ರಶಾಂತ್ ಅವರು ಬಿಹಾರದಲ್ಲಿ 'ಜನ್ ಸೂರಜ್' ಪಾದಯಾತ್ರೆ ನಡೆಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ಉನ್ನತ ಮಟ್ಟ ನಾಯಕರೊಂದಿಗೆ ಎಷ್ಟೇ ಚರ್ಚೆಗಳು ನಡೆಸಿದರೂ ಕಾಂಗ್ರೆಸ್ ಸೇರಬೇಕು ಎನ್ನುವ ಪ್ರಶಾಂತ್ ಆಸೆ ಈಡೇರಲಿಲ್ಲ. 'ರಾಹುಲ್ ಗಾಂಧಿ ಅವರು 3,500 ಕಿ.ಮೀ ಪಾದಯಾತ್ರೆ ನಡೆಸುತ್ತಿದ್ದಾರೆ. ನನಗೆ ಕಿ.ಮೀ ಲೆಕ್ಕವಿಲ್ಲ. ಅಕ್ಟೋಬರ್‌ನಿಂದ ನಡೆಯುತ್ತಿದ್ದೇನಷ್ಟೆ.' ಎಂದರು.

ಮಾಜಿ ರಾಜ್ಯಪಾಲ ಕೇಸರಿನಾಥ್ ತ್ರಿಪಾಠಿ ನಿಧನ

ಪ್ರಯಾಗರಾಜ್/ಲಖನೌ/ಕೋಲ್ಕತ್ತ: ಪಶ್ಚಿಮ ಬಂಗಾಳ, ಬಿಹಾರ, ಮೇಘಾಲಯ ಮತ್ತು ಮಿಜೋರಾಂನ ಮಾಜಿ ರಾಜ್ಯಪಾಲ ಕೇಸರಿನಾಥ್ ತ್ರಿಪಾಠಿ (88) ಅವರು ಉತ್ತರಪ್ರದೇಶದ ಪ್ರಯಾಗರಾಜ್‌ನಲ್ಲಿರುವ ತಮ್ಮ ನಿವಾಸದಲ್ಲಿ ಭಾನುವಾರ ನಿಧನರಾದರು.

ಕೇಸರಿನಾಥ್ ಅವರು ಈಚೆಗೆ ಮನೆಯಲ್ಲಿ ಜಾರಿ ಬಿದ್ದ ಪರಿಣಾಮ ಅವರ ಕತ್ತಿನ ಮೂಳೆಗೆ ಏಟಾಗಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮೂರು ದಿನಗಳ ಹಿಂದಷ್ಟೇ ಮನೆಗೆ ಮರಳಿದ್ದರು ಎಂದು ಅವರ ಸೊಸೆ ಕವಿತಾ ಯಾದವ್ ತ್ರಿಪಾಠಿ ತಿಳಿಸಿದ್ದಾರೆ.

ಕೇಸರಿನಾಥ್ ಅವರು 2014 ಜುಲೈನಿಂದ 2019ರ ಜುಲೈವರೆಗೆ ಪಶ್ಚಿಮಬಂಗಾಳದ ರಾಜ್ಯಪಾಲರಾಗಿದ್ದರು. ಬಿಹಾರ, ಮೇಘಾಲಯ ಮತ್ತು ಮಿಜೋರಾಂನ ರಾಜ್ಯಪಾಲರಾಗಿಯೂ ಅಲ್ಪ ಕಾಲ ಹೆಚ್ಚುವರಿ ಹೊಣೆ ನಿಭಾಯಿಸಿದ್ದರು. ಅವರು ಆರು ಬಾರಿ ಉತ್ತರಪ್ರದೇಶ ವಿಧಾನ ಸಭೆಗೆ ಆಯ್ಕೆಯಾಗಿದ್ದರು.

ಅಸಭ್ಯ ಹೇಳಿಕೆ: ಎಸ್‌ಪಿ ಮುಖಂಡನ ಬಂಧನ

ಲಖನೌ (ಪಿಟಿಐ): ಸಾಮಾಜಿಕ ಮಾಧ್ಯಮದಲ್ಲಿ ಅಸಭ್ಯ ಮತ್ತು ಅವಹೇಳನಕಾರಿ ಹೇಳಿಕೆ ಹಂಚಿಕೊಂಡ ಆರೋಪದ ಮೇಲೆ ಸಮಾಜವಾದಿ ಪಕ್ಷದ ಪದಾಧಿಕಾರಿಯೊಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಪಕ್ಷದ ಸಾಮಾಜಿಕ ಮಾಧ್ಯಮ ವಿಭಾಗದ ಮನೀಶ್ ಜಗನ್ ಅಗರ್‌ವಾಲ್ ಬಂಧಿತ ಆರೋಪಿ. ಈತ ಅಸಭ್ಯ ಮತ್ತು ಅವಹೇಳನಕಾರಿ ಹೇಳಿಕೆಯನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. ಐ.ಟಿ ಕಾಯ್ದೆಯಡಿ ಜ.4ರಂದು ಪ್ರಕರಣ ದಾಖಲಾಗಿತ್ತು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಿಜೆಪಿ ಯುವ ಮೋರ್ಚಾದ ನಾಯಕಿಯೊಬ್ಬರು 'ಸಮಾಜವಾದಿ ಪಕ್ಷದ ಜವಾಬ್ದಾರಿಯುತ ಪದಾಧಿಕಾರಿಯೊಬ್ಬರು ನನ್ನ ಮೇಲೆ ಅತ್ಯಾಚಾರ ಎಸಗುವ ಮತ್ತು ನನ್ನನ್ನು ಕೊಲ್ಲುವ ಬೆದರಿಕೆ ಹಾಕಿದ್ದಾರೆ. ಅಲ್ಲದೇ ನನ್ನ ವಿರುದ್ಧ ಸಾಮಾಜಿಕ ಮಾಧ್ಯಮದಲ್ಲಿಅಸಭ್ಯ ಮತ್ತು ಅಶ್ಲೀಲ ಹೇಳಿಕೆ ನೀಡಿದ್ದಾರೆ' ಎಂದು ಆರೋಪಿಸಿ ದೂರು ನೀಡಿದ್ದರು.

ಮನೀಶ್ ಜಗನ್ ಬಂಧನಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಎಸ್‌ಪಿ ಕಾರ್ಯಕರ್ತರು, ತಕ್ಷಣ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಉತ್ತರಪ್ರದೇಶದ ಪೊಲೀಸ್ ಪ್ರಧಾನ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಬಂಧನ ಖಂಡನೀಯ ಮತ್ತು ತೀವ್ರ ನಾಚಿಕೆಗೇಡು ಎಂದು ಕಿಡಿಕಾರಿದರು.

ಬಂಧನದ ಸುದ್ದಿ ತಿಳಿಯುತ್ತಿದ್ದಂತೆ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಪೊಲೀಸ್ ಪ್ರಧಾನ ಕಚೇರಿಗೆ ದೌಡಾಯಿಸಿದರು. ಜಗನ್ ಅವರನ್ನು ಬಂಧಿಸಿರುವ ಬಗ್ಗೆ ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ) ಪ್ರಶಾಂತ್ ಕುಮಾರ್ ಅವರನ್ನು ಪ್ರಶ್ನಿಸಿದರು. ಜಗನ್ ವಿರುದ್ಧ ಅಸಭ್ಯ ವರ್ತನೆ ಮತ್ತು ಅವಹೇಳನ ಮಾಡಿರುವ ಆರೋಪ ಸಂಬಂಧ ಬಂಧಿಸಿರುವುದಾಗಿ ಸಮಾಜವಾದಿ ಪಕ್ಷದ ನಾಯಕರಿಗೆ ತಿಳಿಸಲಾಗಿದೆ ಎಂದು ಎಡಿಜಿಪಿ ಅವರು ಸುದ್ದಿಗಾರರಿಗೆ ತಿಳಿಸಿದರು.

ಚಹಾ ನಿರಾಕರಿಸಿದ ಅಖಿಲೇಶ್

ಪಕ್ಷದ ಸಾಮಾಜಿಕ ಮಾಧ್ಯಮ ಉಸ್ತುವಾರಿ ಮನೀಶ್ ಜಗನ್ ಅಗರ್‌ವಾಲ್ ಬಂಧನ ಪ್ರಶ್ನಿಸಲು ಪೊಲೀಸ್ ಪ್ರಧಾನ ಕಚೇರಿಗೆ ಭೇಟಿ ನೀಡಿದ್ದ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು, ಪೊಲೀಸರು ತಮಗೆ ನೀಡಲು ಮುಂದಾದ ಚಹಾದಲ್ಲಿ ವಿಷ ಹಾಕಿರಬಹುದೆಂದು ಶಂಕಿಸಿ, ಚಹಾ ನಿರಾಕರಿಸಿದ ಘಟನೆ ನಡೆಯಿತು.

'ಹೊರಗೆ ಚಹಾ ಅಂಗಡಿ ಬಾಗಿಲು ತೆರೆದಿದೆಯೇ ನೋಡು' ಎಂದು ವ್ಯಕ್ತಿಯೊಬ್ಬರಿಗೆ ಸೂಚಿಸಿರುವ ಅಖಿಲೇಶ್, 'ನಾನು ಇಲ್ಲಿನ ಚಹಾ ಸೇವಿಸಲಾರೆ. ವಿಷ ಹಾಕಿದ್ದರೇ?' ಎಂದು ಹೇಳಿದ್ದಾರೆ. ಈ ವಿಡಿಯೊ ಸುದ್ದಿ ವಾಹಿನಿಗಳಲ್ಲಿ ಬಿತ್ತರವಾಗಿದೆ.

ಸಂಕ್ಷಿಪ್ತ ಸುದ್ದಿ

ಕರ್ನಾಟಕ: ಕಳೆದ ವರ್ಷ 15 ಹುಲಿಗಳ ಸಾವು

ನವದೆಹಲಿ: 2022ನೇ ವರ್ಷದಲ್ಲಿ ಕರ್ನಾಟಕ ರಾಜ್ಯದಲ್ಲಿ 15 ಹುಲಿಗಳು ಸಾವನ್ನಪ್ಪಿದರೆ, ಮಧ್ಯಪ್ರದೇಶದಲ್ಲಿ 34 ಹುಲಿಗಳು ಮೃತಪಟ್ಟಿವೆ ಎಂದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ತಿಳಿಸಿದೆ.

ಪ್ರತಿ ನಾಲ್ಕು ವರ್ಷಗಳಿಗೆ ಹುಲಿ ಗಣತಿಯನ್ನು ನಡೆಸಲಾಗುತ್ತದೆ. 2022ರಲ್ಲಿ ಗಣತಿ ನಡೆಸಲಾಗಿದ್ದು ಅದರ ವರದಿಯನ್ನು ಮುಂದಿನ ದಿನಗಳಲ್ಲಿ ಪ್ರಕಟಿಸುವ ಸಾಧ್ಯತೆಗಳಿವೆ.

2018ರ ಗಣತಿ ಪ್ರಕಾರ ದೇಶದಲ್ಲಿ 2967 ಹುಲಿಗಳು ನೆಲೆಸಿವೆ. ಮಧ್ಯ ಪ್ರದೇಶದಲ್ಲಿ 526 ಹುಲಿಗಳಿದ್ದು, ದೇಶದಲ್ಲಿಯೇ ಅತಿ ಹೆಚ್ಚು ಹುಲಿಗಳಿರುವ ರಾಜ್ಯ ಎಂಬ ಹೆಗ್ಗಳಿಕೆ ಪಾತ್ರವಾಗಿದೆ.

'ಬಿಜೆಪಿ ಗಂಗೆ ಇದ್ದಂತೆ– ಪಕ್ಷ ಸೇರಿ ಪಾವನರಾಗಿ'

ಅಗರ್ತಲ (ಪಿಟಿಐ): 'ಬಿಜೆಪಿಯು ಗಂಗಾ ನದಿ ಇದ್ದಂತೆ. ಇದರಲ್ಲಿ ಒಮ್ಮೆ ಮುಳುಗೆದ್ದರೆ ಎಲ್ಲ ಪಾಪಗಳು ಪರಿಹಾರವಾಗುತ್ತವೆ. ಎಡ ಪಕ್ಷಗಳ ನಾಯಕರು ಬಿಜೆಪಿ ಸೇರಿ ಪಾವನರಾಗಲಿ' ಎಂದು ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸಾಹಾ ಭಾನುವಾರ ಹೇಳಿದ್ದಾರೆ.

ದಕ್ಷಿಣ ತ್ರಿಪುರಾದ ಕಾಕ್ರಾಬನ್‌ನಲ್ಲಿ 'ಜನ್ ವಿಶ್ವಾಸ್ ರ‍್ಯಾಲಿ' ಭಾಗವಾಗಿ ನಡೆದ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದ ಅವರು, 'ಸ್ಟಾಲಿನ್ ಮತ್ತು ಲೆನಿನ್ ಸಿದ್ಧಾಂತವಾದಿಗಳನ್ನು ಬಿಜೆಪಿಗೆ ಸೇರುವಂತೆ ಆಹ್ವಾನಿಸುವೆ. ಏಕೆಂದರೆ ನಮ್ಮ ಪಕ್ಷವು ಗಂಗಾ ನದಿಯಂತಿದೆ. ಗಂಗೆಯಲ್ಲಿ ಪವಿತ್ರ ಸ್ನಾನ ಮಾಡಿದರೆ ನಿಮ್ಮ ಎಲ್ಲ ಪಾಪಗಳು ತೊಳೆದು ಹೋಗುತ್ತವೆ' ಎಂದು ಹೇಳಿದರು.

ಗಡಿ ವಿವಾದ: ಹರೀಶ್ ಸಾಳ್ವೆ ಸಲಹೆ ಕೇಳಿದ ಮಹಾರಾಷ್ಟ್ರ

ಮುಂಬೈ: ಮಹಾರಾಷ್ಟ್ರ–ಕರ್ನಾಟಕ ಗಡಿ ವಿವಾದದ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿರುವ ವಿಚಾರಣೆಗೆ ಸಂಬಂಧಿಸಿದಂತೆ ಮಹಾರಾಷ್ಟ್ರ ಸರ್ಕಾರವು ಹಿರಿಯ ವಕೀಲ ಹರೀಶ್ ಸಾಳ್ವೆ ಅವರ ಸಲಹೆ ಪಡೆದಿದೆ.

'ಗಡಿ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಹರೀಶ್ ಸಾಳ್ವೆ ಅವರನ್ನು ಸಂಪರ್ಕಿಸಿದ್ದು, ಅವರು ನಮ್ಮ ಪರವಾಗಿ ಕೋರ್ಟ್‌ನಲ್ಲಿ ಹಾಜರಾಗುವ ನಿರೀಕ್ಷೆ ಇದೆ' ಎಂದು ಉಪ ಮುಖ್ಯಮಂತ್ರಿ ಫಡಣವೀಸ್ ಹೇಳಿದ್ದಾರೆ.

ದೆಹಲಿಯಲ್ಲಿ ಭಾನುವಾರ ವಿಪರೀತ ಚಳಿ ವರದಿಯಾಗಿದ್ದು, ಇದರಿಂದ ಪಾರಾಗಲು ಜನರು ಬೆಚ್ಚನೆಯ ಉಡುಪು ಹಾಗೂ ಕೈಗವಸು ಧರಿಸಿ ಸಾಗಿದರು–ಪಿಟಿಐ ಚಿತ್ರ

ದಟ್ಟ ಮಂಜು– ರೈಲು ಸಂಚಾರ ವ್ಯತ್ಯಯ

ನವದೆಹಲಿ: ಉತ್ತರ ಭಾರತ ಮತ್ತು ದೇಶದ ಪೂರ್ವ ಭಾಗದಲ್ಲಿ ಭಾನುವಾರ ತೀವ್ರ ಚಳಿ ಹಾಗೂ ದಟ್ಟ ಮಂಜು ಮುಸುಕಿದ ವಾತಾವರಣವಿದ್ದ ಕಾರಣ ದೆಹಲಿ ಸೇರಿದಂತೆ ಹಲವೆಡೆ 480 ರೈಲುಗಳ ಸಂಚಾರದಲ್ಲಿ ವ್ಯತ್ಯಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೆಹಲಿಯಲ್ಲಿ ಕನಿಷ್ಠ ಉಷ್ಣಾಂಶವು 1.9 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದು, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡಕ್ಕಿಂತಲೂ ಕಡಿಮೆಯಾಗಿದೆ ಎಂದು ಹವಾಮಾನ ಇಲಾಖೆ ಹೇಳಿದೆ.ದೆಹಲಿಯ ಖಾಸಗಿ ಶಾಲೆಗಳ ಚಳಿಗಾಲದ ರಜೆಯನ್ನು ಜನವರಿ 15ರ ವರೆಗೆ ವಿಸ್ತರಿಸಲಾಗಿದೆ ಎಂದು ಸರ್ಕಾರದ ಹೇಳಿಕೆ ತಿಳಿಸಿದೆ.

'ಕೇರಳ ಕಲೋತ್ಸವ: ಕೋಮುವಾದದ ಕರಿನೆರಳು'

ತಿರುವನಂತಪುರ: ಕೇರಳದ ಪ್ರತಿಷ್ಠಿತ ಶಾಲಾ ಯುವ ಉತ್ಸವದ ಮೇಲೆ ಕೋಮುವಾದದ ಕರಿನೆರಳು ಆವರಿಸಿದೆ. ಏಷ್ಯಾದ ಅತಿ ದೊಡ್ಡ ಶಾಲಾ ಉತ್ಸವಕ್ಕೆ ಶನಿವಾರ ತೆರೆಬಿದ್ದಿದೆ. ಆದರೆ ಇದನ್ನು ಗುರಿಯಾಗಿಟ್ಟುಕೊಂಡು ನಡೆಸಲಾಗುತ್ತಿರುವ ಕೋಮುವಾದಿ ಅಭಿಯಾನಗಳು ಮುಂದುವರಿದಿವೆ.

ಕಲೋತ್ಸವದಲ್ಲಿ ಸಸ್ಯಾಹಾರವನ್ನೇ ಪೂರೈಸುವ ಮೂಲಕ ಬ್ರಾಹ್ಮಣರ ಪ್ರಾಬಲ್ಯ ಮುಂದುವರಿಸಲಾಗಿದೆ ಎಂದು ಕೆಲವರು ಅಭಿಯಾನ ಕೈಗೊಂಡಿದ್ದು, ಇದರಿಂದ ಮನನೊಂದಿರುವ ಪಾಕ ಪ್ರವೀಣ ಪಳಯಿಡಂ ಮೋಹನನ್ ನಂಬೂಧರಿ ಅವರು ಇನ್ನು ಮುಂದೆ ಕಲೋತ್ಸವದ ಅಡುಗೆ ಗುತ್ತಿಗೆ ಪಡೆಯದಿರಲು ತೀರ್ಮಾನಿಸಿದ್ದಾರೆ. ಹಿಂದಿನ 16 ವರ್ಷಗಳಿಂದ ಸತತವಾಗಿ ಅವರು ಅಡುಗೆ ಗುತ್ತಿಗೆ ಪಡೆದಿದ್ದರು.

ಕಲೋತ್ಸವದ ಉದ್ಘಾಟನೆ ವೇಳೆ ಪ್ರದರ್ಶನಗೊಂಡಿದ್ದ ನಾಟಕದಲ್ಲಿ ಮುಸ್ಲಿಂ ಸಮುದಾಯದ ಉಡುಪು ತೊಟ್ಟಿದ್ದ ವಿದ್ಯಾರ್ಥಿಯನ್ನು ಭಯೋತ್ಪಾದಕನೆಂದು ಬಿಂಬಿಸಿರುವ ಆರೋಪ ಕೇಳಿಬಂದಿದ್ದು, ಈ ಕುರಿತು ತನಿಖೆ ನಡೆಸುವಂತೆ ಕೇರಳದ ಪ್ರವಾಸೋದ್ಯಮ ಸಚಿವ ಪಿ.ಎ.ಮೊಹಮ್ಮದ್ ರಿಯಾಸ್ ಆಗ್ರಹಿಸಿದ್ದಾರೆ.

ಚಾರ್ಜ್‌ಶೀಟ್ ಸಲ್ಲಿಕೆ

ಜಮ್ಮು/ನವದೆಹಲಿ (ಪಿಟಿಐ): ಕಠುವಾದಲ್ಲಿ 2018ರಲ್ಲಿ ಎಂಟು ವರ್ಷದ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ ಕೊಲೆ ಮಾಡಿದ್ದ ಪ್ರಕರಣದಲ್ಲಿ ಶುಭಂ ಸಂಗ್ರಾ ಎಂಬಾತನ ವಿರುದ್ಧ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ. ಈತ ಕಾನೂನು ಸಂಘರ್ಷಕ್ಕೆ ಸಿಲುಕಿದ ಬಾಲಕನಲ್ಲವೆಂದು ಸುಪ್ರೀಂ ಕೋರ್ಟ್‌ನಲ್ಲಿ ರುಜುವಾತುಗೊಂಡ ಬಳಿಕ ಈ ಕ್ರಮ ಕೈಗೊಳ್ಳಲಾಗಿದೆ.

'ಜೋಶಿಮಠ ಭೂಕುಸಿತ: ಪರಿಸ್ಥಿತಿ ನಿಭಾಯಿಸಲು ಯೋಜನೆ'

ಒಂದನೇ ಪುಟದಿಂದ

ಜೋಶಿಮಠದ ವಸತಿ ಸ್ಥಳದಲ್ಲಿ ಭೂಕುಸಿತ ಮತ್ತು ಬಿರುಕು ಕಾಣಿಸಿಕೊಂಡಿದ್ದು, ಈಗಾಗಲೇ ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆಯ ಒಂದು ತಂಡ ಮತ್ತು ರಾಜ್ಯ ವಿಪತ್ತು ಸ್ಪಂದನಾ ಪಡೆಯ ನಾಲ್ಕು ತಂಡಗಳು ಸ್ಥಳ ತಲುಪಿವೆ. ಸಂತ್ರಸ್ತ ಕುಟುಂಬಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

ಪಿಎಂಒ ಪ್ರಧಾನ ಕಾರ್ಯದರ್ಶಿ ಪಿ.ಕೆ. ಮಿಶ್ರಾ ನಡೆಸಿದ ಪರಿಶೀಲನಾ ಸಭೆಯಲ್ಲಿ ಉತ್ತರಾಖಂಡದ ಮುಖ್ಯ ಕಾರ್ಯದರ್ಶಿ ಪರಿಸ್ಥಿತಿ ವಿವರಿಸಿದರು. ಕೇಂದ್ರ ಸಂಪುಟ ಕಾರ್ಯದರ್ಶಿ, ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಗಳು ಮತ್ತು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸದಸ್ಯರು ಸಭೆಯಲ್ಲಿದ್ದರು. ಜೋಶಿಮಠದ ಜಿಲ್ಲಾಮಟ್ಟದ ಹಿರಿಯ ಅಧಿಕಾರಿಗಳು ವರ್ಚುವಲ್ ಮೂಲಕ ಪಾಲ್ಗೊಂಡರು.

ಜೋಶಿಮಠ ಭೂಕುಸಿತ ವಲಯ ಘೋಷಣೆ: ಜೋಶಿಮಠವನ್ನು ಭೂಕುಸಿತ ವಲಯವೆಂದು ಘೋಷಿಸಲಾಗಿದೆ. ಭೂಕುಸಿತದ ಈ ಪಟ್ಟಣದಲ್ಲಿ ವಾಸಯೋಗ್ಯವಲ್ಲದ ಮನೆಗಳಲ್ಲಿದ್ದ 60ಕ್ಕೂ ಹೆಚ್ಚು ಕುಟುಂಬಗಳನ್ನು ತಾತ್ಕಾಲಿಕ ಪರಿಹಾರ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಗಡವಾಲಿ ಆಯುಕ್ತ ಸುಶೀಲ್ ಕುಮಾರ್ ಭಾನುವಾರ ತಿಳಿಸಿದರು.

ಕನಿಷ್ಠ 90 ಕುಟುಂಬಗಳನ್ನು ತಕ್ಷಣವೇ ಸ್ಥಳಾಂತರಿಸಬೇಕಾಗಿದೆ. ಸ್ಥಳೀಯ ಆಡಳಿತವು ಪಟ್ಟಣದ ನಾಲ್ಕೈದು ಸ್ಥಳಗಳಲ್ಲಿ ಪರಿಹಾರ ಕೇಂದ್ರಗಳನ್ನು ಸ್ಥಾಪಿಸಿದೆ ಎಂದು ಅವರು ಹೇಳಿದರು.

'ನಿಧಾನವಾಗಿ ಭೂಕುಸಿತವಾಗುತ್ತಿದೆ. ಆದರೆ, ಕಳೆದ ವಾರ ಮನೆಗಳು, ಜಮೀನು ಮತ್ತು ರಸ್ತೆಗಳಲ್ಲಿ ಭಾರಿ ಬಿರುಕುಗಳು ಕಾಣಿಸಿವೆ. ನೀರಿನ ಕಾಲುವೆ ಒಡೆದುಹೋದ ನಂತರ ಪರಿಸ್ಥಿತಿ ಹದಗೆಟ್ಟಿದೆ' ಎಂದು ಅವರು ಹೇಳಿದರು.

ಸಮಿತಿ ಸಲ್ಲಿಕೆಗೆ ಅರ್ಜಿ ಸಲ್ಲಿಕೆ: ಜೋಶಿಮಠದ ಸಂತ್ರಸ್ತರ ಪುನರ್ವಸತಿಗಾಗಿ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಉನ್ನತಾಧಿಕಾರ ಜಂಟಿ ಸಮಿತಿ ರಚಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸುವಂತೆ ಕೋರಿ ವಕೀಲ ರೋಹಿತ್ ದಾಂಡ್ರಿಯಲ್ ಅವರು ಹೈಕೋರ್ಟ್‌ನಲ್ಲಿ ಭಾನುವಾರ ಅರ್ಜಿ ಸಲ್ಲಿಸಿದ್ದಾರೆ.

3 ವರ್ಷಗಳ ಬಳಿಕ ವಾಹನ ಮೇಳ

ನವದೆಹಲಿ (ಪಿಟಿಐ): ಮೂರು ವರ್ಷಗಳ ಬಳಿಕ ದೇಶದಲ್ಲಿ ವಾಹನ ಪ್ರದರ್ಶನ ಮೇಳ ಮತ್ತೆ ನಡೆಯಲಿದೆ. ಆದರೆ, ಕೆಲವು ಪ್ರಮುಖ ಕಂಪನಿಗಳು ಈ ಮೇಳದಲ್ಲಿ ಭಾಗವಹಿಸುತ್ತಿಲ್ಲ.

ಗ್ರೇಟರ್ ನೊಯಿಡಾದಲ್ಲಿ ಇದೇ 11ರಿಂದ ಆರಂಭವಾಗುವ ಮೇಳದಲ್ಲಿ ಪ್ರಮುಖ ಕಂಪನಿಗಳಾದ ಮಾರುತಿ ಸುಜುಕಿ, ಹುಂಡೈ, ಟಾಟಾ ಮೋಟರ್ಸ್, ಕಿಯಾ ಇಂಡಿಯಾ, ಟೊಯೋಟ ಕಿರ್ಲೋಸ್ಕರ್ ಮತ್ತು ಎಂಜಿ ಮೋಟರ್ ಇಂಡಿಯಾ ಭಾಗವಹಿಸಲಿವೆ. ಮಹೀಂದ್ರ ಆ್ಯಂಡ್ ಮಹಿಂದ್ರ, ಸ್ಕೋಡಾ, ಫೋಕ್ಸ್‌ವ್ಯಾಗನ್, ನಿಸಾನ್, ಮರ್ಸಿಡಿಸ್ ಬೆಂಜ್, ಬಿಎಂಡಬ್ಲ್ಯು ಮತ್ತು ಔಡಿ ಕಂಪನಿಗಳು ಮೇಳದಿಂದ ದೂರ ಉಳಿಯಲಿವೆ.

ಈ ಮೇಳದಲ್ಲಿ ಜಾಗತಿಕ ಮಾರುಕಟ್ಟೆಗೆ ಐದು ವಾಹನಗಳು ಬಿಡುಗಡೆ ಆಗಲಿದ್ದು 75 ವಾಹನಗಳು ಅನಾವರಣಗೊಳ್ಳಲಿವೆ. 48 ವಾಹನ ತಯಾರಕರನ್ನೂ ಒಳಗೊಂಡು ಒಟ್ಟು 80 ಕಂಪನಿಗಳು ಭಾಗವಹಿಸಲಿವೆ ಎಂದು ಭಾರತೀಯ ವಾಹನ ತಯಾರಿಕಾ ಕಂಪನಿಗಳ ಒಕ್ಕೂಟದ (ಎಸ್‌ಐಎಎಂ) ಅಧಿಕಾರಿಗಳು ತಿಳಿಸಿದ್ದಾರೆ.

ಹೀರೊ ಮೊಟೊಕಾರ್ಪ್, ಬಜಾಜ್ ಆಟೊ ಮತ್ತು ಟಿವಿಎಸ್ ಮೋಟರ್ ಕಂಪನಿಗಳಿಗೆ ಎಥೆನಾಲ್ ಪೆವಿಲಿಯನ್‌ನಲ್ಲಿ ತಮ್ಮ ಫ್ಲೆಕ್ಸ್ ಫ್ಯೂಯೆಲ್ ಮಾದರಿಯ ವಾಹನಗಳನ್ನು ಮಾತ್ರವೇ ಪ್ರದರ್ಶನಕ್ಕೆ ಇಡುವಂತೆ ಮಿತಿ ಹೇರಲಾಗಿದೆ.

ಮಾಧ್ಯಮದವರ ಭಾಗವಹಿಸುವಿಕೆಗೆ 11 ಮತ್ತು 12ರಂದು ಅವಕಾಶ ನೀಡಲಾಗಿದೆ. ವಾಹನ ಮೇಳವು 13ರಿಂದ ಸಾರ್ವಜನಿಕರ ವೀಕ್ಷಣೆಗೆ ಮುಕ್ತವಾಗಲಿದ್ದು, 18ಕ್ಕೆ ಕೊನೆಗೊಳ್ಳಲಿದೆ.

ವಾಹನ ಪ್ರದರ್ಶನ ಮೇಳಕ್ಕೆ ಬರುವವರು ಐಷಾರಾಮಿ ಉತ್ಪನ್ನಗಳ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿರುವುದಿಲ್ಲ. ಹೀಗಾಗಿ ಈ ಬಾರಿ ಮೇಳದಲ್ಲಿ ಭಾಗವಹಿಸದಿರಲು ನಿರ್ಧರಿಸಲಾಗಿದೆ ಎಂದು ಮರ್ಸಿಡಿಸ್ ಬೆಂಜ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಸಂತೋಷ್ ಅಯ್ಯರ್ ಹೇಳಿದ್ದಾರೆ.

ಭಾರತದಲ್ಲಿ ಉತ್ಪನ್ನಗಳನ್ನು ಪರಿಚಯಿಸಲು ತನ್ನದೇ ಆದ ಸಮಯವನ್ನು ತೆಗೆದುಕೊಳ್ಳಲು ನಿರ್ಧರಿಸಲಾಗಿದೆ. ಹೀಗಾಗಿ ಮೇಳದಲ್ಲಿ ಭಾಗವಹಿಸುತ್ತಿಲ್ಲ ಎಂದು ಸ್ಕೋಡಾ ಆಟೊ ಇಂಡಿಯಾದ ನಿರ್ದೇಶಕ ಪೀಟರ್ ಸೋಲ್ಸ್ ತಿಳಿಸಿದ್ದಾರೆ.

ಸೀಲಿಂಗ್ ಫ್ಯಾನ್ ದರ ಶೇ 10ರವರೆಗೆ ಹೆಚ್ಚಳ ಸಾಧ್ಯತೆ

ನವದೆಹಲಿ (ಪಿಟಿಐ): ಸೀಲಿಂಗ್ ಫ್ಯಾನ್‌ಗಳಲ್ಲಿ ವಿದ್ಯುತ್ ಉಳಿತಾಯದ ಕ್ಷಮತೆಯನ್ನು ಸೂಚಿಸುವ ಸ್ಟಾರ್ ರೇಟಿಂಗ್ ನಮೂದಿಸುವುದನ್ನು ಇಂಧನ ಕ್ಷಮತೆ ಬ್ಯೂರೊ (ಬಿಇಇ) ಜನವರಿ 1ರಿಂದ ಕಡ್ಡಾಯ ಮಾಡಿದೆ. ಹೀಗಾಗಿ ಸೀಲಿಂಗ್ ಫ್ಯಾನ್‌ಗಳ ಬೆಲೆಯು ಶೇಕಡ 8–10ರವರೆಗೆ ಏರಿಕೆ ಆಗುವ ನಿರೀಕ್ಷೆ ಮಾಡಲಾಗಿದೆ.

ಕಂಪನಿಗಳು ತಮ್ಮ ಫ್ಯಾನ್‌ಗಳ ಮೇಲೆ 1ರಿಂದ 5ರವರೆಗೆ ಸ್ಟಾರ್ ರೇಟಿಂಗ್ಸ್ ನಮೂದಿಸಬೇಕು. 1 ಸ್ಟಾರ್ ರೇಟಿಂಗ್ ಹೊಂದಿದ್ದರೆ ಅದು ಕನಿಷ್ಠ ಶೇ 30ರಷ್ಟು ವಿದ್ಯುತ್ ಉಳಿತಾಯ ಮಾಡುತ್ತದೆ. 5 ಸ್ಟಾರ್ ರೇಟಿಂಗ್ ಹೊಂದಿದ್ದರೆ ಶೇ 50ಕ್ಕೂ ಅಧಿಕ ವಿದ್ಯುತ್ ಉಳಿತಾಯ ಮಾಡುವ ಕ್ಷಮತೆ ಹೊಂದಿರುತ್ತದೆ.

ಹ್ಯಾವೆಲ್ಸ್, ಓರಿಯಂಟ್ ಎಲೆಕ್ಟ್ರಿಕ್ ಮತ್ತು ಉಷಾ ಇಂಟರ್‌ನ್ಯಾಷನಲ್ ಕಂಪನಿಗಳು ಈ ನಿರ್ಧಾರವನ್ನು ಸ್ವಾಗತಿಸಿವೆ. ಆದರೆ, 5 ಸ್ಟಾರ್ ಹೊಂದಿರುವ ಫ್ಯಾನ್‌ಗಳಿಗೆ ಬಳಸುವ ಮೋಟರ್ ಮತ್ತು ಎಲೆಕ್ಟ್ರಾನಿಕ್ ಬಿಡಿಭಾಗಗಳನ್ನು ಆಮದು ಮಾಡಿಕೊಳ್ಳಬೇಕಾಗಿರುವುದರಿಂದ ತಯಾರಿಕಾ ವೆಚ್ಚವು ಶೇ 5–20ರವರೆಗೂ ಹೆಚ್ಚಾಗಲಿದೆ ಎಂದು ಹೇಳಿವೆ.

ಕಾಲೇಜು ಶಿಕ್ಷಣ: ಅದಾನಿ ವಿಷಾದ

ನವದೆಹಲಿ (ಪಿಟಿಐ): ಕಾಲೇಜು ಶಿಕ್ಷಣವನ್ನು ಪೂರ್ಣಗೊಳಿಸದೆ ಇದ್ದುದಕ್ಕೆ ತಮಗೆ ವಿಷಾದವಿದೆ ಎಂದು ಉದ್ಯಮಿ ಗೌತಮ್ ಅದಾನಿ ಹೇಳಿದ್ದಾರೆ. ಎಳೆ ವಯಸ್ಸಿನಲ್ಲಿ ಸಿಕ್ಕ ಅನುಭವಗಳು ತಮ್ಮನ್ನು ಹೆಚ್ಚು ವಿವೇಕಿಯನ್ನಾಗಿಸಿದರೂ, ತರಗತಿಯಲ್ಲಿ ಸಿಗುವ ಶಿಕ್ಷಣವು ಜ್ಞಾನವನ್ನು ತೀವ್ರವಾಗಿ ಹೆಚ್ಚಿಸಬಲ್ಲದು ಎಂದು ಅವರು ಹೇಳಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅದಾನಿ, 'ಶಿಕ್ಷಣವನ್ನು ಮೊಟಕುಗೊಳಿಸಲು ತೀರ್ಮಾನಿಸಿದಾಗ ನನಗೆ 16 ವರ್ಷ ವಯಸ್ಸಾಗಿತ್ತು. ನಾನು ಕಾಲೇಜು ಶಿಕ್ಷಣವನ್ನು ಪೂರ್ಣಗೊಳಿಸಿದ್ದಿದ್ದರೆ ನನಗೆ ಇನ್ನಷ್ಟು ಪ್ರಯೋಜನವಾಗುತ್ತಿತ್ತು. ಅನುಭವದಿಂದ ಬುದ್ಧಿವಂತಿಕೆ ಸಿಗುತ್ತದೆ, ಅಧ್ಯಯನದಿಂದ ಜ್ಞಾನ ಸಿಗುತ್ತದೆ' ಎಂದಿದ್ದಾರೆ.

'ಬುದ್ಧಿವಂತಿಕೆ ಹಾಗೂ ಜ್ಞಾನ ಪರಸ್ಪರ ಪೂರಕ. ನಾನು ಕಾಲೇಜಿಗೆ ಹೋಗಿದ್ದಿದ್ದರೆ ನನ್ನ ಸಾಮರ್ಥ್ಯವು ಇನ್ನಷ್ಟು ವೇಗವಾಗಿ ಬೆಳೆಯುತ್ತಿತ್ತು ಎಂದು ನಾನು ಆಲೋಚಿಸುವುದಿದೆ' ಎಂದು ಅವರು ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹575
ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹577

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹536-680
ದ್ವಿತಳಿ (ಬಿ.ವಿ)	₹366-796

ನೀವು ಎಷ್ಟು ಬ್ಯಾಂಕ್ ಖಾತೆ ಹೊಂದಿರಬೇಕು?

ಹಣಕಾಸು ಸಾಕ್ಷರತೆ
ರಾಜೇಶ್ ಕುಮಾರ್ ಟಿ.ಆರ್.

ಆನ್‌ಲೈನ್ ಬ್ಯಾಂಕಿಂಗ್ ವ್ಯವಸ್ಥೆಯಿಂದಾಗಿ ಹೊಸ ಖಾತೆ ಆರಂಭಿಸುವುದು ಸಲೀಸಾಗಿದೆ. ಆಧಾರ್ ನೀಡಿದರೆ ಸಾಕು, ಕುಳಿತಲ್ಲೇ ಬ್ಯಾಂಕ್ ಖಾತೆ ತೆರೆಯಬಹುದು. ನಾವು ತಿಳಿದೋ ತಿಳಿಯದೆಯೋ ಹಲವು ಬ್ಯಾಂಕ್ ಖಾತೆಗಳನ್ನು ತೆರೆದು ಬಳಸಲು ಶುರು ಮಾಡುತ್ತೇವೆ. ವಾಸ್ತವದಲ್ಲಿ ಎಷ್ಟು ಬ್ಯಾಂಕ್ ಖಾತೆಗಳಿದ್ದರೆ ಒಳ್ಳೆಯದು ಎಂಬ ನಿರ್ಣಯವನ್ನೇ ತೆಗೆದುಕೊಳ್ಳದೆ ಮುಂದುವರಿದಿರುತ್ತೇವೆ. ಹಾಗಾದರೆ ಎಷ್ಟು ಬ್ಯಾಂಕ್ ಖಾತೆಗಳಿದ್ದರೆ ಉತ್ತಮ?

ಹಲವು ಬ್ಯಾಂಕ್ ಖಾತೆಗಳು ಹೇಗೆ ಸೃಷ್ಟಿಯಾಗುತ್ತವೆ?: ಈಗಾಗಲೇ ಒಂದು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರೆ ಅಲ್ಲೊಂದು ಬ್ಯಾಂಕ್ ಖಾತೆ ಇರುತ್ತದೆ. ಆ ಕೆಲಸ ತೊರೆದು ಮತ್ತೊಂದು ಕೆಲಸಕ್ಕೆ ಸೇರಿದಾಗ ಅಲ್ಲಿ ಬೇರೆ ವೇತನ ಖಾತೆ ತೆರೆಯಬೇಕಾಗಬಹುದು. ಹೀಗೆ ಹಲವು ಕಾರಣಗಳಿಂದಾಗಿ ಒಂದರ ಮೇಲೊಂದು ಖಾತೆಗಳು ಸೃಷ್ಟಿಯಾಗುತ್ತವೆ. ಕೆಲವರು ಡಿ-ಮ್ಯಾಟ್ ಖಾತೆಗಾಗಿ ಒಂದು ಪರ್ಯಾಯ ಬ್ಯಾಂಕ್ ಖಾತೆ ಹೊಂದಿರುತ್ತಾರೆ. ಇನ್ನಷ್ಟು ಮಂದಿ, ಗೃಹ ಸಾಲ, ವಾಹನ ಸಾಲ ಹೀಗೆ ಬೇರೆ ಬೇರೆ ಕಾರಣಗಳಿಗೆ ಖಾತೆಗಳನ್ನು ತೆರೆದಿರುತ್ತಾರೆ.

ಹೆಚ್ಚು ಖಾತೆಗಳಿದ್ದರೆ ಅನುಕೂಲವೇನು?

1. ಹಣಕ್ಕೆ ಹೆಚ್ಚು ಸುರಕ್ಷತೆ : ಬ್ಯಾಂಕಿನಲ್ಲಿ ನೀವು ಎಷ್ಟೇ ಹಣ ಇಟ್ಟಿದ್ದರೂ ₹ 5 ಲಕ್ಷದವರೆಗೆ ಮಾತ್ರ ವಿಮೆಯ ರಕ್ಷೆ ಇರುತ್ತದೆ. ಒಂದೊಮ್ಮೆ ಬ್ಯಾಂಕ್ ದಿವಾಳಿಯಾದರೆ ₹ 5 ಲಕ್ಷಕ್ಕಿಂತ ಹೆಚ್ಚಿನ ಹಣಕ್ಕೆ ರಕ್ಷೆ ಇರುವುದಿಲ್ಲ. ಹೀಗಿರುವಾಗ ಹೆಚ್ಚು ಬ್ಯಾಂಕ್ ಖಾತೆಗಳಿದ್ದು ಯಾವುದೇ ಬ್ಯಾಂಕಿನಲ್ಲಿ ನಿಮ್ಮ ಒಟ್ಟು ಠೇವಣಿ ₹ 5 ಲಕ್ಷ ಮೀರದಂತೆ ನೋಡಿಕೊಂಡರೆ ನಿಮ್ಮ ಹಣ ಹೆಚ್ಚು ಸುರಕ್ಷಿತ.

2. ಸುಗಮ ಯುಪಿಐ ವಹಿವಾಟು: ಇದು ಯುಪಿಐ ಯುಗ. ಬಹುತೇಕ ಪಾವತಿಗಳನ್ನು ನಾವು ಗೂಗಲ್ ಪೇ, ಫೋನ್‌ಪೆ, ಪೇಟಿಎಂ ಮತ್ತಿತರ ಆ್ಯಪ್‌ಗಳ ಮೂಲಕ ಮಾಡುತ್ತೇವೆ. ಹೀಗಿರುವಾಗ ಹೆಚ್ಚು ಬ್ಯಾಂಕ್ ಖಾತೆಗಳಿದ್ದರೆ ಹೆಚ್ಚು ಯುಪಿಐ ಪಾವತಿ ಆಯ್ಕೆಗಳು ಇರುತ್ತವೆ. ಆನ್‌ಲೈನ್ ಪಾವತಿ ಮಾಡುವಾಗ ಒಂದು ಬ್ಯಾಂಕಿನಲ್ಲಿ ತಾಂತ್ರಿಕ ಸಮಸ್ಯೆ ಇದ್ದರೆ ಮತ್ತೊಂದು ಬ್ಯಾಂಕ್ ಮೂಲಕ ಯುಪಿಐ ಪಾವತಿ ಮಾಡಬಹುದು. ಹೆಚ್ಚು ಬ್ಯಾಂಕ್ ಖಾತೆಗಳಿದ್ದಾಗ ಎಲ್ಲಾ ಖಾತೆಗಳಲ್ಲೂ ಸ್ವಲ್ಪ ಸ್ವಲ್ಪ ಹಣ ಇಟ್ಟು ದೊಡ್ಡ ಮೊತ್ತದ ಸಂಭಾವ್ಯ ಆನ್‌ಲೈನ್ ವಂಚನೆ ತಡೆಯಬಹುದು.

3. ಹೆಚ್ಚು ಅನುಕೂಲ ಪಡೆಯುವ ಅವಕಾಶ: ಹೆಚ್ಚು ಬ್ಯಾಂಕ್ ಖಾತೆಗಳಿದ್ದು ವಿವಿಧ ರೀತಿಯ ಡೆಬಿಟ್ ಕಾರ್ಡ್‌ಗಳನ್ನು ಹೊಂದಿದ್ದಾಗ ಅವುಗಳಿಂದ ಸಿಗುವ ರಿಯಾಯಿತಿಗಳ ಅನುಕೂಲ ಪಡೆಯಬಹುದು. ಕೆಲ ಡೆಬಿಟ್ ಕಾರ್ಡ್‌ಗಳು ಪೆಟ್ರೋಲ್ ಖರೀದಿಗೆ ರಿವಾರ್ಡ್ ನೀಡುತ್ತವೆ ಮತ್ತೆ ಕೆಲವು ಕಾರ್ಡ್‌ಗಳು ಆನ್‌ಲೈನ್ ಶಾಪಿಂಗ್, ಟಿಕೆಟ್ ಕಾಯ್ದಿರಿಸುವಿಕೆಗೆ ಆಕರ್ಷಕ ಕೊಡುಗೆಗಳನ್ನು ನೀಡುತ್ತವೆ. ಹೆಚ್ಚು ಖಾತೆಗಳೊಂದಿಗೆ ಹೆಚ್ಚು ಕಾರ್ಡ್‌ಗಳಿದ್ದಾಗ ಮಾತ್ರ ಇದು ಸಾಧ್ಯ.

4. ಒಂದೇ ಬ್ಯಾಂಕ್ ಮೇಲೆ ಅವಲಂಬಿತರಾಗಬೇಕಿಲ್ಲ: ಬ್ಯಾಂಕುಗಳು ಈಗಿನ ಸ್ಥಿತಿಯಲ್ಲಿ ಹೆಚ್ಚು ತಂತ್ರಜ್ಞಾನ ಕೇಂದ್ರಿತವಾಗಿವೆ. ತಂತ್ರಜ್ಞಾನದಿಂದ ಎಷ್ಟು ಅನುಕೂಲವಿದೆಯೋ ತಂತ್ರಜ್ಞಾನಕ್ಕೆ ಅಷ್ಟೇ ಮಿತಿಯೂ ಇದೆ. ಒಮ್ಮೊಮ್ಮೆ ಬ್ಯಾಂಕಿನ ಸರ್ವರ್ ಡೌನ್ ಆದರೆ ಅದು ನಿಮ್ಮ ಬ್ಯಾಂಕಿಂಗ್ ವ್ಯವಹಾರದ ಮೇಲೆ ಪರಿಣಾಮ ಉಂಟುಮಾಡುತ್ತದೆ. ಹೆಚ್ಚು ಖಾತೆಗಳಿದ್ದರೆ ಒಂದಲ್ಲ ಒಂದು ಬ್ಯಾಂಕ್ ಖಾತೆ ಮೂಲಕ ತುರ್ತು ವಹಿವಾಟು ಸಾಧ್ಯವಾಗುತ್ತದೆ.

ಹೆಚ್ಚು ಖಾತೆಗಳಿದ್ದರೆ ಅನನುಕೂಲವೇನು?

1. ಕನಿಷ್ಠ ಮೊತ್ತ: ಹಲವು ಬ್ಯಾಂಕ್ ಖಾತೆಗಳಿದ್ದಾಗ ಎಲ್ಲದರಲ್ಲಿಯೂ ಕನಿಷ್ಠ ಮೊತ್ತ ಇರಿಸಬೇಕಾಗುತ್ತದೆ. ಕನಿಷ್ಠ ಮೊತ್ತ ಕಾಯ್ದುಕೊಳ್ಳದಿದ್ದರೆ ಬ್ಯಾಂಕಿನವರು ದಂಡ ವಿಧಿಸುತ್ತಾರೆ. ಕೆಲವು ಬ್ಯಾಂಕುಗಳಲ್ಲಿ ಕನಿಷ್ಠ ಮೊತ್ತ ₹ 5 ಸಾವಿರ ಇದ್ದರೆ, ಇನ್ನು ಕೆಲವು ಬ್ಯಾಂಕ್‌ಗಳಲ್ಲಿ ₹ 10 ಸಾವಿರ ಇರುತ್ತದೆ. ಹೆಚ್ಚು ಬ್ಯಾಂಕ್ ಖಾತೆಗಳಿದ್ದರೆ ಕನಿಷ್ಠ ಮೊತ್ತ ಎಂದು ಹೆಚ್ಚು ಹಣವನ್ನು ತೆಗೆದಿರಿಸಬೇಕಾಗುತ್ತದೆ. ಒಂದೇ ಬ್ಯಾಂಕ್ ಖಾತೆ ಇದ್ದರೆ ಕನಿಷ್ಠ ಮೊತ್ತದ ನಿರ್ವಹಣೆಗೆ ತೊಡಗಿಸಬೇಕಾದ ಹಣ ಕಡಿಮೆ ಇರುತ್ತದೆ.

2. ನಿರ್ವಹಣೆ ಸವಾಲು: ಆರ್ಥಿಕ ಶಿಸ್ತು ಹೊಂದಿಲ್ಲದಿದ್ದರೆ ಹಲವು ಬ್ಯಾಂಕ್ ಖಾತೆಗಳನ್ನು ನಿರ್ವಹಣೆ ಮಾಡುವುದು ಕಷ್ಟ. ಎಲ್ಲಾ ಬ್ಯಾಂಕುಗಳ ಚೆಕ್ ಪುಸ್ತಕ, ಪಾಸ್‌ವರ್ಡ್, ಡೆಬಿಟ್ ಕಾರ್ಡ್‌ಗಳನ್ನು ಸೂಕ್ತ ರೀತಿಯಲ್ಲಿ ವಿಂಗಡಣೆ ಮಾಡಿ ಇಟ್ಟುಕೊಳ್ಳದಿದ್ದರೆ ಸವಾಲು ಎದುರಾಗುತ್ತದೆ. ಇನ್ನು ಆದಾಯ ತೆರಿಗೆ ವಿವರ ಸಲ್ಲಿಸುವಾಗ ಎಲ್ಲಾ ಬ್ಯಾಂಕ್‌ಗಳಲ್ಲಿನ ವಹಿವಾಟುಗಳನ್ನು ಒಗ್ಗೂಡಿಸಿ ಲೆಕ್ಕಾಚಾರ ಮಾಡುವುದು ಸಹ ಕಷ್ಟ. ಒಂದೇ ಬ್ಯಾಂಕ್ ಖಾತೆ ಇದ್ದರೆ ಈ ಸವಾಲು ಇರದು.

3. ಖಾತೆ ನಿಷ್ಕ್ರಿಯವಾಗುವ ಸಾಧ್ಯತೆ: ಹಲವು ಬ್ಯಾಂಕ್ ಖಾತೆಗಳಿದ್ದು ಅವನ್ನು ಸಕ್ರಿಯವಾಗಿ ಬಳಕೆ ಮಾಡದಿದ್ದರೆ ಆ ಖಾತೆಗಳು ನಿಷ್ಕ್ರಿಯ ಖಾತೆಗಳಾಗುತ್ತವೆ. ಆರ್‌ಬಿಐ ನಿಯಮದ ಪ್ರಕಾರ ಒಂದು ಖಾತೆ ಎರಡು ವರ್ಷಗಳಿಗಿಂತ ಹೆಚ್ಚು ಅವಧಿಗೆ ಬಳಕೆಯಲ್ಲಿ ಇರದಿದ್ದರೆ ಅಂಥವುಗಳನ್ನು ಬ್ಯಾಂಕುಗಳು 'ನಿಷ್ಕ್ರಿಯ' ಎಂದು ಪರಿಗಣಿಸಬಹುದು. ಹೀಗಾದಾಗ ಬ್ಯಾಂಕಿನ ಸೇವೆಗಳು ನಿಮಗೆ ಸಿಗುವುದಿಲ್ಲ. ಜೊತೆಗೆ ದಂಡ ಪಾವತಿಸಬೇಕಾಗುತ್ತದೆ. ಇದರ ಜೊತೆಗೆ ಹೆಚ್ಚು ಬ್ಯಾಂಕ್ ಖಾತೆಗಳಿದ್ದಾಗ ಅಷ್ಟೂ ಖಾತೆಗಳ ಡೆಬಿಟ್ ಕಾರ್ಡ್‌ಗಳಿಗೆ ಪ್ರತ್ಯೇಕವಾಗಿ ವಾರ್ಷಿಕ ಶುಲ್ಕ ಕಟ್ಟಬೇಕಾಗಿ ಬರುತ್ತದೆ.

ನೆನಪಿಡಿ: ಮೇಲಿನ ಮಾಹಿತಿ ಗಮನಿಸಿದಾಗ ವ್ಯಕ್ತಿಯೊಬ್ಬ ಇಂತಿಷ್ಟೇ ಬ್ಯಾಂಕ್ ಖಾತೆ ಹೊಂದಿರಬೇಕು ಎಂಬುದಕ್ಕೆ ಯಾವುದೇ ಮಾನದಂಡವಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಎಷ್ಟು ಬ್ಯಾಂಕ್ ಖಾತೆಗಳಿರಬೇಕು ಎನ್ನುವುದು ವ್ಯಕ್ತಿಗತ ಆರ್ಥಿಕ ಅಗತ್ಯಗಳನ್ನು ಅವಲಂಬಿಸಿದೆ. ಅವರವರ ಅನುಕೂಲಕ್ಕೆ ತಕ್ಕಂತೆ ಬ್ಯಾಂಕ್ ಖಾತೆಗಳು ಎಷ್ಟಿರಬೇಕು ಎನ್ನುವುದನ್ನು ತೀರ್ಮಾನಿಸಬೇಕಾಗುತ್ತದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಕುಸಿತದ ಹಾದಿ ತುಳಿದ ಸೂಚ್ಯಂಕಗಳು

ಜನವರಿ 6ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಇಳಿಕೆ ದಾಖಲಿಸಿವೆ. ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಶೇಕಡ 1ಕ್ಕಿಂತ ಹೆಚ್ಚು ಕುಸಿದಿವೆ. 59,900 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.54ರಷ್ಟು ತಗ್ಗಿದೆ. 17,859 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 1.35ರಷ್ಟು ಇಳಿಕೆಯಾಗಿದೆ.

ಹೂಡಿಕೆದಾರರಿಂದ ಲಾಭಾಂಶ ನಗದೀಕರಣ, ಅಮೆರಿಕ ಫೆಡರಲ್ ಬ್ಯಾಂಕ್ ಬಡ್ಡಿದರವನ್ನು ಮತ್ತಷ್ಟು ಹೆಚ್ಚಳ ಮಾಡಬಹುದು ಎಂಬ ಆತಂಕ, ಜಾಗತಿಕ ಆರ್ಥಿಕ ಹಿಂಜರಿತದ ಬಗ್ಗೆ ರೇಟಿಂಗ್ ಕಂಪನಿಗಳು ಮಾತನಾಡಿರುವುದು ಸೇರಿ ಹಲವು ಅಂಶಗಳು ಮಾರುಕಟ್ಟೆ ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಹಿತಿ ತಂತ್ರಜ್ಞಾನ ಮತ್ತು ಮಾಧ್ಯಮ ವಲಯ ತಲಾ ಶೇ 2.3ರಷ್ಟು ಕುಸಿದಿವೆ. ನಿಫ್ಟಿ ಬ್ಯಾಂಕ್ ಸೂಚ್ಯಂಕ ಶೇ 2ರಷ್ಟು ಮತ್ತು ನಿಫ್ಟಿ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 1.4ರಷ್ಟು ತಗ್ಗಿವೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಕಳೆದ ವಾರ ₹ 7,813.44 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 2,756.58 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಬಜಾಜ್ ಫೈನಾನ್ಸ್, ಅದಾನಿ ವಿಲ್ಮರ್, ಬಜಾಜ್ ಫಿನ್‌ಸರ್ವ್, ಜೊಮಾಟೊ, ಇನ್ಫೊಎಜ್ ಇಂಡಿಯಾ, ಅವೆನ್ಯೂ ಸೂಪರ್ ಮಾರ್ಟ್ಸ್, ಜೆಎಸ್‌ಡಬ್ಲ್ಯು ಸ್ಟೀಲ್ ಕುಸಿತ ಕಂಡಿವೆ. ಹ್ಯಾವೆಲ್ಸ್ ಇಂಡಿಯಾ, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿ, ಗೋದ್ರೆಜ್ ಕನ್ಸ್ಯೂಮರ್ ಪ್ರಾಡಕ್ಟ್ಸ್, ಐಸಿಐಸಿಐ ಪ್ರೂಡೆನ್ಶಿಯಲ್ ಲೈಫ್ ಇನ್ಶೂರೆನ್ಸ್ ಕಂಪನಿ, ಇಂಡಿಯನ್ ಆಯಿಲ್ ಕಾರ್ಪೊರೇಷನ್ ಮತ್ತು ಭಾರತ್ ಪೆಟ್ರೋಲಿಯಂ ಗಳಿಕೆ ಕಂಡಿವೆ.

ಮುನ್ನೋಟ: ಈ ವಾರ ಇನ್ಫೊಸಿಸ್, ಫೈ ಪೈಸೇ , ಟಿಸಿಎಸ್, ಬಿರ್ಲಾ ಮನಿ, ವಿಪ್ರೊ, ಡಿ–ಮಾರ್ಟ್, ಎಚ್‌ಡಿಎಫ್‌ಸಿ ಬ್ಯಾಂಕ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಜಾಗತಿಕ ವಿದ್ಯಮಾನಗಳ ಜೊತೆಗೆ ದೇಶಿಯ ಬೆಳವಣಿಗೆಗಳು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಲಿವೆ.

ನನ್ನ ಮೇಲೆಯೇ ಒತ್ತಡ ಹೇರುವೆ: ಸೂರ್ಯ

ರಾಜ್‌ಕೋಟ್ (ಪಿಟಿಐ): 'ಪಂದ್ಯಕ್ಕೆ ಮುನ್ನ ನನ್ನ ಮೇಲೆ ನಾನೇ ಒತ್ತಡ ಹೇರುವೆ. ಇದರಿಂದ ಉತ್ತಮವಾಗಿ ಆಡಲು ಸಾಧ್ಯವಾಗುತ್ತದೆ' ಎಂದು ಭಾರತ ಕ್ರಿಕೆಟ್ ತಂಡದ ಸ್ಫೋಟಕ ಬ್ಯಾಟರ್ ಸೂರ್ಯಕುಮಾರ್ ಯಾದವ್ ಹೇಳಿದ್ದಾರೆ.

ಸೂರ್ಯ

'ಪಂದ್ಯಕ್ಕೆ ಸಜ್ಜಾಗುವ ವೇಳೆ ನಮ್ಮ ಮೇಲೆಯೇ ಒತ್ತಡ ಹೇರುವುದು ತುಂಬಾ ಮುಖ್ಯ. ಒತ್ತಡ ಹೆಚ್ಚಿದಷ್ಟು ನಿಮ್ಮ ಪ್ರದರ್ಶನವೂ ಉತ್ತಮವಾಗುತ್ತದೆ. ಅದರ ಜತೆ ಕಠಿಣ ಪರಿಶ್ರಮ ಮತ್ತು ಸತತ ಅಭ್ಯಾಸವೂ ಅಗತ್ಯ' ಎಂದಿದ್ದಾರೆ.

ರಾಜ್‌ಕೋಟ್‌ನಲ್ಲಿ ಶನಿವಾರ ನಡೆದಿದ್ದ ಶ್ರೀಲಂಕಾ ವಿರುದ್ಧದ ಕೊನೆಯ ಟಿ20 ಪಂದ್ಯದಲ್ಲಿ ಸೂರ್ಯ ಕುಮಾರ್ 51 ಎಸೆತಗಳಲ್ಲಿ ಅಜೇಯ 112 ರನ್ ಗಳಿಸಿದ್ದರು. ಏಳು ಬೌಂಡರಿ ಮತ್ತು ಒಂಬತ್ತು ಸಿಕ್ಸರ್ ಹೊಡೆದಿದ್ದರು.

'ಸಹಜ ಶೈಲಿಯಲ್ಲಿ ಆಡುವ ಸ್ವಾತಂತ್ರ್ಯವನ್ನು ಕೋಚ್ ರಾಹುಲ್ ದ್ರಾವಿಡ್ ನನಗೆ ನೀಡಿದ್ದಾರೆ. ಆದ್ದರಿಂದ ವಿಕೆಟ್ ಹಿಂದುಗಡೆ ಸೇರಿದಂತೆ ಮೈದಾನದ ಎಲ್ಲ ಕಡೆಗೂ ಚೆಂಡನ್ನು ಅಟ್ಟಲು ಪ್ರಯತ್ನಿಸಿದೆ' ಎಂದು ಹೇಳಿದ್ದಾರೆ.

'ಕಳೆದ ಒಂದು ವರ್ಷದ ಅವಧಿಯಲ್ಲಿ ಪ್ರಯೋಗಿಸುತ್ತಿದ್ದ ಹೊಡೆತಗಳನ್ನೇ ಇಲ್ಲೂ ಆಡಿದೆ. ಯಾವುದೇ ಹೊಸ ಪ್ರಯೋಗ ಮಾಡಲಿಲ್ಲ. 2023ರ ಋತುವನ್ನು ಉತ್ತಮವಾಗಿ ಆರಂಭಿಸಿದ್ದೇನೆ. ಅದನ್ನೇ ಮುಂದುವರಿಸುವ ವಿಶ್ವಾಸವಿದೆ' ಎಂದು ತಿಳಿಸಿದ್ದಾರೆ.

ಮೂರನೇ ಶತಕ: ಸೂರ್ಯಕುಮಾರ್ ಅವರು ಚುಟುಕು ಕ್ರಿಕೆಟ್‌ನಲ್ಲಿ ಏಳು ತಿಂಗಳ ಅವಧಿಯಲ್ಲಿ ಮೂರನೇ ಶತಕ ಗಳಿಸಿದ್ದಾರೆ. ಟಿ20 ಮಾದರಿಯಲ್ಲಿ ಆರಂಭಿಕನಾಗಿ ಕಣಕ್ಕಿಳಿಯದೆ ಮೂರು ಶತಕ ಗಳಿಸಿದ ಮೊದಲ ಬ್ಯಾಟರ್ ಎಂಬ ದಾಖಲೆ ಅವರಿಗೆ ಒಲಿದಿದೆ.

843 ಎಸೆತ; 1,500 ರನ್

ಟಿ20 ಕ್ರಿಕೆಟ್‌ನಲ್ಲಿ ಅತಿಕಡಿಮೆ ಎಸೆತಗಳಲ್ಲಿ 1,500 ರನ್ ಪೂರೈಸಿದ ವಿಶೇಷ ದಾಖಲೆಗೆ ಸೂರ್ಯಕುಮಾರ್ ಯಾದವ್ ಭಾಜನರಾದರು. ಅವರು ಕೇವಲ 843 ಎಸೆತಗಳಲ್ಲಿ ಒಂದೂವರೆ ಸಾವಿರ ರನ್‌ಗಳ ಗಡಿ ದಾಟಿದ್ದಾರೆ. ಯಾವುದೇ ಬ್ಯಾಟರ್ ಕೂಡಾ ಇಷ್ಟು ಕಡಿಮೆ ಎಸೆತಗಳಲ್ಲಿ 1,500 ರನ್‌ಗಳ ಗಡಿ ದಾಟಿಲ್ಲ.

ಅತಿಕಡಿಮೆ ಇನಿಂಗ್ಸ್‌ಗಳಲ್ಲಿ 1,500 ರನ್ ಗಳಿಸಿದ ಬ್ಯಾಟರ್‌ಗಳ ಪಟ್ಟಿಯಲ್ಲಿ ಅವರು ಮೂರನೇ ಸ್ಥಾನ ಪಡೆದಿದ್ದಾರೆ.

ಗ್ರೇಟ್ ಬೆಂಗಳೂರು 10ಕೆ ರನ್; ಲಕ್ಷ್ಮೀಶ, ವೈಷ್ಣವಿ ರನ್ನರ್ಸ್ ಅಪ್

ವಿಜಯ್, ನೀತುಗೆ ಅಗ್ರಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯ್‌ಕುಮಾರ್ ಗುಪ್ತಾ ಹಾಗೂ ನೀತು ಕುಮಾರಿ ಅವರು ಮೊದಲ ಬಾರಿಗೆ ನಡೆದ ಗ್ರೇಟ್ ಬೆಂಗಳೂರು 10ಕೆ ಸ್ಪರ್ಧೆಯಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ರಾಜ್ಯ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಮತ್ತು ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಸ್ಪರ್ಧೆಯು ಭಾನುವಾರ ನಡೆಯಿತು.

ಕಂಠೀರವ ಕ್ರೀಡಾಂಗಣದಿಂದ ಸ್ಪರ್ಧೆಗಳು ಆರಂಭವಾಗಿ ವಿಧಾನಸೌಧ, ಕಬ್ಬನ್ ಪಾರ್ಕ್ ಮತ್ತು ಎಂ.ಜಿ. ರಸ್ತೆಯ ಮೂಲಕ ಓಟಗಾರರು ಸಾಗಿದರು.

10ಕೆ ಸ್ಪರ್ಧೆಯಲ್ಲಿ ವಿಜಯ್‌ಕುಮಾರ್ ಗುಪ್ತಾ 32 ನಿಮಿಷ 28 ಸೆಕೆಂಡುಗಳಲ್ಲಿ ಗುರಿ ತಲುಪಿ ಮೊದಲ ಸ್ಥಾನ ತಮ್ಮದಾಗಿಸಿಕೊಂಡರು.

ಈ ವಿಭಾಗದಲ್ಲಿ ಲಕ್ಷ್ಮೀಶ (33 ನಿ.34 ಸೆ.) ಎರಡನೇ ಸ್ಥಾನ ಗಳಿಸಿದರೆ, ರಾಜೇಶ್ ಕುಮಾರ್ (33 ನಿ. 54 ಸೆ.) ಮೂರನೇ ಸ್ಥಾನ ಪಡೆದರು.

ಮಹಿಳೆಯರ ವಿಭಾಗದಲ್ಲಿ ನೀತು ಕುಮಾರಿ ಅವರು 40 ನಿಮಿಷ 53 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಮೊದಲ ಸ್ಥಾನ ಗಳಿಸಿದರು. ವೈಷ್ಣವಿ ನವೀನ್ (42 ನಿ. 01 ಸೆ.) ಮತ್ತು ಫರೀನ್ ಫಿರ್ದೋಸ್ (42 ನಿ.01 ಸೆ.) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಪುರುಷರ 5ಕೆ ಸ್ಪರ್ಧೆಯ ಪ್ರಶಸ್ತಿಯು ಹರ್‌ಪ್ರೀತ್ ಸಿಂಗ್ ಅವರ ಪಾಲಾಯಿತು. 16 ನಿಮಿಷ 35.9 ಸೆಕೆಂಡುಗಳಲ್ಲಿ ಗುರಿ ತಲುಪಿದ ಅವರು ಮೊದಲ ಸ್ಥಾನ ಒಲಿಸಿಕೊಂಡರು. ಲಕ್ಷ್ಮಣ್ ಲಮಾಣಿ (16 ನಿ. 39.9 ಸೆ.) ಎರಡನೇ ಮತ್ತು ವಿವೇಕ್ ಪಾಲ್ (16 ನಿ. 42.4 ಸೆ.) ಮೂರನೇ ಸ್ಥಾನ ಗಳಿಸಿದರು.

10ಕೆ ಸ್ಪರ್ಧೆಯಲ್ಲಿ ಅಗ್ರಸ್ಥಾನ ಗಳಿಸಿದ ವಿಜಯ್ ಕುಮಾರ್ ಗುಪ್ತಾ (ಎಡ) ಮತ್ತು ನೀತು ಕುಮಾರಿ– ಪ್ರಜಾವಾಣಿ ಚಿತ್ರ/ ಎಸ್.ಕೆ. ದಿನೇಶ್

ಮುಖ್ಯಾಂಶಗಳು

- ಪುರುಷರ 5ಕೆ ಸ್ಪರ್ಧೆಯಲ್ಲಿ ಹರ್‌ಪ್ರೀತ್‌ಗೆ ಪ್ರಶಸ್ತಿ
- 5ಕೆ ಮಹಿಳೆಯರ ಸ್ಪರ್ಧೆಯಲ್ಲಿ ಶರಣ್ಯಾಗೆ ಮೊದಲ ಸ್ಥಾನ
- ಫನ್ ರನ್‌ನಲ್ಲಿ ಮಕ್ಕಳ ಕಲರವ

ಮಹಿಳೆಯರ 5ಕೆ ವಿಭಾಗದಲ್ಲಿ ಶರಣ್ಯಾ ವಿಜಯರಾಘವನ್ (20 ನಿ. 27.5 ಸೆ.) ಮೊದಲ ಸ್ಥಾನ ತಮ್ಮದಾಗಿಸಿಕೊಂಡರೆ, ತಮನ್ನಾ ಸಿಂಗ್ (21 ನಿ. 7.4 ಸೆ.) ಎರಡನೇ ಮತ್ತು ಅಂಜುಗೌಡ ಎನ್. ಸಿ. (23 ನಿ.36.6 ಸೆ.) ಮೂರನೇ ಸ್ಥಾನ ಗಳಿಸಿದರು.

3ಕೆ ಫನ್ ರನ್‌ನಲ್ಲಿ ಭಾಗವಹಿಸಿದ್ದ ಮಕ್ಕಳು ಖುಷಿಪಟ್ಟರು.

ಒಲಿಂಪಿಯನ್ ಅಥ್ಲೀಟ್ , ಕೂಟದ ಪ್ರಚಾರ ರಾಯಭಾರಿ ಅಂಜು ಬಾಬಿ ಜಾರ್ಜ್, ಅಂತರರಾಷ್ಟ್ರೀಯ ಅಥ್ಲೀಟ್ ರೀತ್ ಅಬ್ರಹಾಂ, ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಕೆ.ಗೋವಿಂದರಾಜ್, ಪ್ರಧಾನ ಕಾರ್ಯದರ್ಶಿ ಟಿ. ಅನಂತರಾಜು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರು ಸ್ಪರ್ಧೆಗೆ ಚಾಲನೆ ನೀಡಿದ್ದರು.

ಸುದ್ದಿ 2 ನಿಮಿಷ

ಅಭ್ಯಾಸ ಆರಂಭಿಸಿದ ದೀಪಿಕಾ

ಕೋಲ್ಕತ್ತ (ಪಿಟಿಐ): ಆರ್ಚರಿ ಸ್ಪರ್ಧಿ ದೀಪಿಕಾ ಕುಮಾರಿ ಅವರು ಹೆರಿಗೆಯ 20 ದಿನಗಳಲ್ಲೇ ಅಭ್ಯಾಸಕ್ಕೆ ಮರಳಿದ್ದಾರೆ!

28 ವರ್ಷದ ದೀಪಿಕಾ ತಿಂಗಳ ಹಿಂದೆಯಷ್ಟೇ ಹೆಣ್ಣು ಮಗುವಿಗೆ ಜನ್ಮ ನೀಡಿದ್ದರು. ಕಳೆದ 10 ದಿನಗಳಿಂದ ಅವರು ಕೋಲ್ಕತ್ತದ ಸಾಯ್ ಸೆಂಟರ್‌ನಲ್ಲಿ ಅಭ್ಯಾಸ ನಡೆಸುತ್ತಿದ್ದಾರೆ.

ಇದೇ 10 ರಿಂದ 17ರ ವರೆಗೆ ನಡೆಯಲಿರುವ ಸೀನಿಯರ್ ನ್ಯಾಷನಲ್ ಟ್ರಯಲ್ಸ್‌ನಲ್ಲಿ ಪಾಲ್ಗೊಂಡು ಭಾರತ ತಂಡದಲ್ಲಿ ಸ್ಥಾನ ಪಡೆಯುವುದು ಅವರ ಗುರಿ. 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಬೇಕೆಂಬ ತುಡಿತ ಅವರನ್ನು ಬೇಗನೇ ಅಭ್ಯಾಸಕ್ಕೆ ಮರಳುವಂತೆ ಮಾಡಿದೆ.

'ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳದೇ ಇದ್ದರೆ ಇಡೀ ವರ್ಷ ತಂಡದಿಂದ ಹೊರಗಿರಬೇಕಾಗುತ್ತದೆ. ನನ್ನ ಮುಂದೆ ಬೇರೆ ಆಯ್ಕೆಗಳಿಲ್ಲ' ಎಂದು ದೀಪಿಕಾ ಹೇಳಿದರು.

'ಗರ್ಭಿಣಿ ಆಗಿದ್ದಾಗ 7 ತಿಂಗಳವರೆಗೂ ಅಭ್ಯಾಸ ಮಾಡುತ್ತಿದ್ದೆ. ಆ ಬಳಿಕ ಆರೋಗ್ಯದಲ್ಲಿ ಏರುಪೇರು ಆದ್ದರಿಂದ ತರಬೇತಿ ನಿಲ್ಲಿಸಿದೆ. ಅನಂತರ ಮೂರು ತಿಂಗಳು ಅಭ್ಯಾಸದಿಂದ ಸಂಪೂರ್ಣ ದೂರ ಇದ್ದೆ. ಸಹಜ ಹೆರಿಗೆ ಆದ್ದರಿಂದ 20 ದಿನಗಳಲ್ಲೇ ಅಭ್ಯಾಸಕ್ಕೆ ಮರಳಲು ಸಾಧ್ಯವಾಗಿದೆ' ಎಂದರು.

ಟ್ರಯಲ್ಸ್‌ನಲ್ಲಿ ಕಾಣಿಸಿಕೊಂಡು ಭಾರತ ತಂಡದಲ್ಲಿ ಸ್ಥಾನ ಪಡೆಯುವ ವಿಶ್ವಾಸ ಅವರದ್ದು.

ಟ್ರಯಲ್ಸ್‌ನಲ್ಲಿ 16 ಮಂದಿಯ ತಂಡವನ್ನು ಆಯ್ಕೆ ಮಾಡಿ, ಆ ಬಳಿಕ ಸದಸ್ಯರ ಸಂಖ್ಯೆಯನ್ನು ಎಂಟಕ್ಕೆ ಇಳಿಸಲಾಗುತ್ತದೆ. ಅವರು ವಿಶ್ವ ಚಾಂಪಿಯನ್‌ಷಿಪ್ ಹಾಗೂ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಹಾಕಿ: ಸಂದೀಪ್ ಹ್ಯಾಟ್ರಿಕ್ ಗೋಲು

ಬೆಂಗಳೂರು: ಎಸ್. ಸಂದೀಪ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಗುರು ಹಾಕಿ ಕ್ಲಬ್ ತಂಡವು ರಾಜ್ಯ ಬಿ ಡಿವಿಷನ್ ಹಾಕಿ ಚಾಂಪಿಯನ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಗುರು ಹಾಕಿ ಕ್ಲಬ್ 8-3ರಿಂದ ಓಂ ಸಾಯಿ ಹಾಕಿ ಕ್ಲಬ್ ಧಾರವಾಡ ತಂಡವನ್ನು ಸೋಲಿಸಿತು. ಸಂದೀಪ್ ಅವರು 12, 15 ಮತ್ತು 21ನೇ ನಿಮಿಷಗಳಲ್ಲಿ ಕೈಚಳಕ ತೋರಿದರು. ಜಸ್ವಂತ್ ಕುಮಾರ್ (48, 49ನೇ ನಿ.), ಟಿ. ರಾಜು (31ನೇ ನಿ.), ವಿಷ್ಣು ಯಾದವ್ (32ನೇ ನಿ.) ಮತ್ತು ರಂಜೀತ್ ಚಂದ್ (43ನೇ ನಿ.) ವಿಜೇತ ತಂಡದ ಪರ ಗೋಲು ದಾಖಲಿಸಿದರು.

ಓಂ ಸಾಯಿ ತಂಡದ ಪರ ಮನು ವಿ.ಟಿ. (18ನೇ ನಿ.), ಶಾನ್ ಕರಿಯಪ್ಪ (22ನೇ ನಿ.), ಯಶ್ವಿನ್ (41ನೇ ನಿ.) ಗೋಲು ಗಳಿಸಿದರು.

ಪ್ರಶಸ್ತಿಯೊಂದಿಗೆ ನೊವಾಕ್ ಜೊಕೊವಿಚ್ ಮತ್ತು ಅರಿನಾ ಸಬಲೆಂಕಾ– ಎಎಫ್‌ಪಿ ಚಿತ್ರಗಳು

ಅಡಿಲೇಡ್ ಇಂಟರ್‌ನ್ಯಾಷನಲ್ ಟೆನಿಸ್ ಟೂರ್ನಿ

ಜೊಕೊವಿಚ್, ಅರಿನಾಗೆ ಕಿರೀಟ

ಅಡಿಲೇಡ್ (ಎಪಿ): ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಗೆದ್ದ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಅಡಿಲೇಡ್ ಇಂಟರ್‌ನ್ಯಾಷನಲ್ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಭಾನುವಾರ ನಡೆದ ಫೈನಲ್ನಲ್ಲಿ ಜೊಕೊವಿಚ್ 6-7 (8), 7-6 (3), 6-4ರಿಂದ ಅಮೆರಿಕದ ಸೆಬಾಸ್ಟಿಯನ್ ಕೊರ್ಡಾ ಅವರನ್ನು ಸೋಲಿಸಿದರು. ಸೆಮಿಫೈನಲ್ ಪಂದ್ಯದ ವೇಳೆ ಗಾಯಗೊಂಡಿದ್ದ ಜೊಕೊವಿಚ್ ಪ್ರಶಸ್ತಿ ಸುತ್ತಿನಲ್ಲಿ ಆಡುವ ಅನುಮಾನವಿತ್ತು. ಆದರೆ ಕಣಕ್ಕಿಳಿದ ಅವರು 3 ತಾಸಿಗಿಂತ ಹೆಚ್ಚು ಕಾಲ ನಡೆದ ಹಣಾಹಣಿಯಲ್ಲಿ ಜಯ ಒಲಿಸಿ ಕೊಂಡರು.

ಜೊಕೊವಿಚ್ ಅವರಿಗೆ ಅಡಿಲೇಡ್‌ನಲ್ಲಿ ಇದು 2ನೇ ಪ್ರಶಸ್ತಿ. 2007ರಲ್ಲಿ 19ನೇ ವಯಸ್ಸಿನಲ್ಲಿ ಅವರು ಮೊದಲ ಪ್ರಶಸ್ತಿ ಗೆದ್ದಿದ್ದರು. ಸರ್ಬಿಯಾ ಆಟಗಾರನಿಗೆ ವೃತ್ತಿಜೀವನದ 92ನೇ ಕಿರೀಟ ಇದು.

ಮಹಿಳಾ ವಿಭಾಗದ ಪ್ರಶಸ್ತಿಯು ಬೆಲಾರಸ್‌ನ ಅರಿನಾ ಸಬಲೆಂಕಾ ಅವರಿಗೆ ಒಲಿಯಿತು. ಫೈನಲ್‌ನಲ್ಲಿ ಅವರು 6-2 7-6 (4)ರಿಂದ ಜೆಕ್ ಗಣರಾಜ್ಯದ ಲಿಂಡಾ ನೊಸ್ಕೊವಾ ಎದುರು ಗೆದ್ದರು.

ಆಸ್ಟ್ರೇಲಿಯಾ– ದಕ್ಷಿಣ ಆಫ್ರಿಕಾ ಪಂದ್ಯ ಡ್ರಾ

ಸಿಡ್ನಿ (ರಾಯಿಟರ್ಸ್): ಆಸ್ಟ್ರೇಲಿಯಾ ವಿರುದ್ಧದ ಮೂರನೇ ಹಾಗೂ ಅಂತಿಮ ಕ್ರಿಕೆಟ್ ಟೆಸ್ಟ್ ಪಂದ್ಯವನ್ನು ಡ್ರಾ ಮಾಡಿಕೊಂಡ ದಕ್ಷಿಣ ಆಫ್ರಿಕಾ, 'ಕ್ಲೀನ್‌ಸ್ವೀಪ್' ಅವಮಾನದಿಂದ ಪಾರಾಯಿತು.

ಮೊದಲ ಎರಡು ಟೆಸ್ಟ್ ಗೆದ್ದಿದ್ದ ಆತಿಥೇಯ ತಂಡ 2–0 ರಲ್ಲಿ ಸರಣಿ ಜಯಿಸಿತು. ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯ ಡ್ರಾದಲ್ಲಿ ಕೊನೆಗೊಂಡಾಗ ಪ್ರವಾಸಿ ತಂಡ ತನ್ನ ಎರಡನೇ ಇನಿಂಗ್ಸ್‌ನಲ್ಲಿ 2 ವಿಕೆಟ್‌ಗಳಿಗೆ 106 ರನ್ ಗಳಿಸಿತ್ತು.

ಇದಕ್ಕೂ ಮುನ್ನ 6 ವಿಕೆಟ್‌ಗಳಿಗೆ 149 ರನ್‌ಗಳಿಂದ ಭಾನುವಾರ ಆಟ ಮುಂದುವರಿಸಿದ್ದ ದಕ್ಷಿಣ ಆಫ್ರಿಕಾ ಮೊದಲ ಇನಿಂಗ್ಸ್‌ನಲ್ಲಿ 255 ರನ್ ಗಳಿಸಿ ಆಲೌಟಾಗಿತ್ತು. ಸಿಮೊನ್ ಹಾರ್ಮರ್ (47) ಮತ್ತು ಕೇಶವ್ ಮಹಾರಾಜ್ (53) ಅವರು ಭೋಜನ ವಿರಾಮದವರೆಗೆ ಎದುರಾಳಿ ತಂಡವನ್ನು ಕಾಡಿದರು. ಇವರು 9ನೇ ವಿಕೆಟ್‌ಗೆ 85 ರನ್ ಸೇರಿಸಿದರು.

ಫಾಲೋಆನ್ ಪಡೆದು ಎರಡನೇ ಇನಿಂಗ್ಸ್ ಆರಂಭಿಸಿದ ದಕ್ಷಿಣ ಆಫ್ರಿಕಾ ತಂಡ, ನಾಯಕ ಡೀನ್ ಎಲ್ಗರ್ (10) ಅವರನ್ನು ಬೇಗನೇ ಕಳೆದುಕೊಂಡಿತು. ಆದರೆ ಸಾರೆಲ್ ಎರ್ವಿ (ಔಟಾಗದೆ 42), ಹೆನ್ರಿಚ್ ಕ್ಲಾಸೆನ್ (35) ಮತ್ತು ತೆಂಬಾ ಬವುಮಾ (ಔಟಾಗದೆ 17) ಛಲದ ಆಟವಾಡಿ ಆಸ್ಟ್ರೇಲಿಯಾಕ್ಕೆ ಗೆಲುವು ನಿರಾಕರಿಸಿದರು.

2017ರ ಬಳಿಕ ಮೊದಲ ಡ್ರಾ: ದಕ್ಷಿಣ ಆಫ್ರಿಕಾ ತಂಡ 2017ರ ಬಳಿಕ ಟೆಸ್ಟ್ ಪಂದ್ಯವೊಂದನ್ನು ಡ್ರಾ ಮಾಡಿಕೊಂಡದ್ದು ಇದೇ ಮೊದಲು. 2017ರ ಮಾರ್ಚ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಡ್ರಾ ಸಾಧಿಸಿತ್ತು. ಆ ಬಳಿಕ ಆಡಿದ್ದ 47 ಟೆಸ್ಟ್‌ಗಳಲ್ಲೂ ಸ್ಪಷ್ಟ ಫಲಿತಾಂಶ (ಸೋಲು ಅಥವಾ ಗೆಲುವು) ಮೂಡಿಬಂದಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 4 ವಿಕೆಟ್‌ಗಳಿಗೆ 475 ಡಿಕ್ಲೇರ್ಡ್. ದಕ್ಷಿಣ ಆಫ್ರಿಕಾ108 ಓವರ್‌ಗಳಲ್ಲಿ 255 (ಸಿಮೊನ್ ಹಾರ್ಮರ್ 47, ಕೇಶವ್ ಮಹಾರಾಜ್ 53, ಜೋಶ್ ಹ್ಯಾಜೆಲ್‌ವುಡ್ 48ಕ್ಕೆ 4, ಪ್ಯಾಟ್ ಕಮಿನ್ಸ್ 60ಕ್ಕೆ 3) ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ 41.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 106 (ಸಾರೆಲ್ ಎರ್ವಿ ಔಟಾಗದೆ 42, ಹೆನ್ರಿಚ್ ಕ್ಲಾಸೆನ್ 35, ತೆಂಬಾ ಬವುಮಾ ಔಟಾಗದೆ 17, ಪ್ಯಾಟ್ ಕಮಿನ್ಸ್ 16ಕ್ಕೆ 1) ಫಲಿತಾಂಶ: ಪಂದ್ಯ ಡ್ರಾ

ಕ್ರಾಸ್ ಕಂಟ್ರಿ: ಶಿವಾಜಿಗೆ ಚಿನ್ನ

ಸುವಾಲ್ಕುಚಿ, ಅಸ್ಸಾಂ: ಕರ್ನಾಟಕದ ಶಿವಾಜಿ ಪರಶುರಾಮ ಮಾದಪ್ಪಗೌಡ್ರ ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರಾಸ್‌ಕಂಟ್ರಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕಕ್ಕೆ ಮುತ್ತಿಟ್ಟರು.

20 ವರ್ಷದೊಳಗಿನವರ ವಿಭಾಗದಲ್ಲಿ ಶಿವಾಜಿ 8 ಕಿಲೊ ಮೀಟರ್ ಸ್ಪರ್ಧೆಯನ್ನು 24 ನಿಮಿಷ 56 ಸೆಕೆಂಡುಗಳಲ್ಲಿ ಕೊನೆಗೊಳಿಸಿ ಅಗ್ರಸ್ಥಾನ ಗಳಿಸಿದರು. ಮಹಾರಾಷ್ಟ್ರದ ಓಂಕಾರ್ ರಾಜೇಂದ್ರ ಫನಲ್ಕರ್ (25 ನಿ. 5 ಸೆ.) ಎರಡನೇ ಮತ್ತು ಉತ್ತರ ಪ್ರದೇಶದ ದಿವ್ಯಾಂಶು ಕುಮಾರ್ (25 ನಿ. 29 ಸೆ.) ಮೂರನೇ ಸ್ಥಾನ ಗಳಿಸಿದರು.

18 ವರ್ಷದೊಳಗಿನಗಿನ ಬಾಲಕಿಯರ 4 ಕಿ.ಮೀ. ವಿಭಾಗದಲ್ಲಿ ಕರ್ನಾಟಕದ ಪ್ರಣತಿ ಕಂಚಿನ ಪದಕ ಜಯಿಸಿದರು. ಅವರು 15 ನಿ. 12 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಈ ವಿಭಾಗದಲ್ಲಿ ಮಹಾರಾಷ್ಟ್ರದ ಪ್ರಾಚಿ ಅಂಕುಶ್ ದೇವಕರ್ ಚಿನ್ನ (14 ನಿ. 50 ಸೆ.) ಮತ್ತು ಗುಜರಾತ್‌ನ ಶಿಲ್ಪಾ ದಿಯೊರಾ (14 ನಿ. 53 ಸೆ.) ಬೆಳ್ಳಿ ಗೆದ್ದರು.

ಶಿವಾಜಿ ಮಾದಪ್ಪಗೌಡ್ರ

ಪ್ರಣತಿ

ಪುರುಷರ 10 ಕಿ.ಮೀ. ವಿಭಾಗದಲ್ಲಿ ರಾಜಸ್ಥಾನದ ಹೇಮರಾಜ್ ಗುರ್ಜರ್ (30 ನಿ. 24 ಸೆ.) ಮೊದಲ ಸ್ಥಾನ ಗಳಿಸಿದರು. ಸರ್ವಿಸಸ್‌ನ ಆನಂದ್ ಸಿಂಗ್ ರಾವತ್ ಮತ್ತು ನಿತೀಶ್ ಕುಮಾರ್ ರೂಪ್‌ಸಿಂಗ್ ರಾಥ್ವಾ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು.

ಮಹಿಳೆಯರ 10 ಕಿ. ಮೀ. ವಿಭಾಗದ ಪ್ರಶಸ್ತಿಯು ರೈಲ್ವೇಸ್‌ನ ಚವಿ ಯಾದವ್ (35 ನಿ.5 ಸೆ.) ಅವರ ಪಾಲಾಯಿತು. ಮಹಾರಾಷ್ಟ್ರದ ಸಂಜೀವನಿ ಜಾಧವ್ ಎರಡನೇ ಮತ್ತು ರೈಲ್ವೇಸ್‌ನ ಮುನ್ನಿ ದೇವಿ ಮೂರನೇ ಸ್ಥಾನ ಗಳಿಸಿದರು.

ರಾಷ್ಟ್ರೀಯ ರಸ್ತೆ ಸೈಕ್ಲಿಂಗ್: ಕರ್ನಾಟಕಕ್ಕೆ 4 ಬೆಳ್ಳಿ, 1 ಕಂಚು

ಬೆಂಗಳೂರು: ಕರ್ನಾಟಕದ ಸೈಕ್ಲಿಸ್ಟ್‌ಗಳು ರಾಷ್ಟ್ರೀಯ ರಸ್ತೆ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ನಾಲ್ಕು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಜಯಿಸಿದ್ದಾರೆ.

ಮಹಾರಾಷ್ಟ್ರದ ನಾಸಿಕ್‌ನ ಸಿನ್ನರ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ 60 ಕಿಲೊ ಮೀಟರ್ಸ್ ಮಿಕ್ಸೆಡ್ ಟೀಮ್ ರಿಲೇಯಲ್ಲಿ ನವೀನ್ ಜಾನ್, ರಾಜು ಭಾಟಿ, ಗಗನ್‌ರೆಡ್ಡಿ, ಸೌಮ್ಯಾ ಅಂತಾಪುರ, ಚೈತ್ರಾ ಬೋರ್ಜಿ ಮತ್ತು ಸಾವಿತ್ರಿ ಹೆಬ್ಬಾಳಟ್ಟಿ ಅವರನ್ನೊಳಗೊಂಡ ತಂಡವು 1 ತಾಸು 22 ನಿಮಿಷ 14.91 ಸೆಕೆಂಡುಗಳಲ್ಲಿ ಗುರಿ ತಲುಪಿ ಬೆಳ್ಳಿ ಗೆದ್ದಿತು.

16 ವರ್ಷದೊಳಗಿನ ಬಾಲಕರ ತಂಡ ವಿಭಾಗದ 30 ಕಿ.ಮೀ. ಟೈಮ್ ಟ್ರಯಲ್‌ನಲ್ಲಿ ಸುಜಲ್ ಜಾಧವ, ರಾಹುಲ್ ರಾಥೋಡ್ ಮತ್ತು ಧನಂಜಯ ತಿಪ್ಪನ್ನವರ ಅವರಿರುವ ತಂಡವು 40 ನಿ. 30.12 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಬೆಳ್ಳಿ ಜಯಿಸಿತು. 16 ವರ್ಷದೊಳಗಿನ ಬಾಲಕಿಯರ ತಂಡ ವಿಭಾಗದ 20 ಕಿ.ಮೀ. ಟೈಮ್ ಟ್ರಯಲ್ಸ್‌ನಲ್ಲಿ ಅನುಪಮಾ ಗುಳೇದ, ಪಾಯಲ್ ಚವ್ಹಾಣ ಮತ್ತು ಕೀರ್ತಿ ನಾಯಕ ಅವರ ತಂಡ 30 ನಿ. 56.10 ಸೆಕೆಂಡುಗಳಲ್ಲಿ ತಲುಪಿ ಬೆಳ್ಳಿ ತಮ್ಮದಾಗಿಸಿಕೊಂಡರು. ಇದೇ ಸ್ಪರ್ಧೆಯ ಬಾಲಕರ ವಿಭಾಗದಲ್ಲಿ ತರುಣ್ ನಾಯಕ, ಯಲ್ಲೇಶ್ ಹುಡೇದ ಮತ್ತು ಹೊನ್ನಪ್ಪ ಧರ್ಮಟ್ಟಿ ಅವರಿರುವ ತಂಡ 29 ನಿ. 52.72 ಸೆಕೆಂಡುಗಳ ಸಾಧನೆ ಮಾಡಿ ಬೆಳ್ಳಿ ಜಯಿಸಿತು.

14 ವರ್ಷದೊಳಗಿನ ಬಾಲಕಿಯರ ತಂಡ ವಿಭಾಗದ 15 ಕಿ.ಮೀ. ಟೈಮ್ ಟ್ರಯಲ್‌ನಲ್ಲಿ ದೀಪಿಕಾ ಫಡತಾರೆ, ಜ್ಯೋತಿ ಲಮಾಣಿ ಮತ್ತು ಕೋಕಿಲಾ ಚವ್ಹಾಣ ಅವರು 26 ನಿ. 1.59 ಸೆಕೆಂಡುಗಳಲ್ಲಿ ಗುರಿ ತಲುಪಿ ಕಂಚು ಜಯಿಸಿದರು. ಜನವರಿ 10ರವರೆಗೆ ಚಾಂಪಿಯನ್‌ಷಿಪ್ ನಡೆಯಲಿದೆ.

ಬ್ರಿಟಿಷ್ ಸ್ಕ್ವಾಷ್: ಅನಾಹತ್‌ಗೆ ಪ್ರಶಸ್ತಿ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಯುವ ಆಟಗಾರ್ತಿ ಅನಾಹತ್ ಸಿಂಗ್ ಅವರು ಪ್ರತಿಷ್ಠಿತ ಬ್ರಿಟಿಷ್ ಜೂನಿಯರ್ ಓಪನ್ ಸ್ಕ್ವಾಷ್ ಟೂರ್ನಿಯ ಬಾಲಕಿಯರ 15 ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್ ಆದರು.

ಅನಾಹತ್

ಭಾನುವಾರ ನಡೆದ ಫೈನಲ್‌ನಲ್ಲಿ 14 ವರ್ಷದ ಅನಾಹತ್ 3–1 ರಲ್ಲಿ ಈಜಿಪ್ಟ್‌ನ ಸೊಹೈಲಾ ಹಜೆಮ್ ಅವರನ್ನು ಮಣಿಸಿದರು. ಅವರು ಕ್ವಾರ್ಟರ್ ಫೈನಲ್‌ನಲ್ಲಿ 3–0 ರಲ್ಲಿ ಮಲೇಷ್ಯಾದ ಹರ್ಲೀನ್ ತಾನ್ ವಿರುದ್ಧವೂ, ಸೆಮಿಫೈನಲ್‌ನಲ್ಲಿ 3–0 ರಲ್ಲಿ ಈಜಿಪ್ಟ್‌ನ ಮಲಕ್ ಸಮೀರ್ ಎದುರೂ ಜಯಿಸಿದ್ದರು.

ಬ್ರಿಟಿಷ್ ಓಪನ್‌ನಲ್ಲಿ ಇದು ಅವರ ಮೂರನೇ ಫೈನಲ್ ಆಗಿತ್ತು. 2019 ರಲ್ಲಿ ಅವರು 11 ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್ ಆಗಿದ್ದರು.

ವಾಲಿಬಾಲ್: ಕುರುಕ್ಷೇತ್ರ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಉಡುಪಿ: ಹರಿಯಾಣದ ಕುರುಕ್ಷೇತ್ರ ವಿಶ್ವವಿದ್ಯಾಲಯ ತಂಡ ಇಲ್ಲಿನ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಭಾನುವಾರ ಮುಕ್ತಾಯವಾದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಪುರುಷರ ವಾಲಿಬಾಲ್ ಟೂರ್ನಿಯ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ಫೈನಲ್ ಪಂದ್ಯದಲ್ಲಿ ಚೆನ್ನೈನ ಎಸ್‌ಆರ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ ವಿವಿ ವಿರುದ್ಧ ಕುರುಕ್ಷೇತ್ರ ವಿವಿ 25-20, 25-17, 25-18ರಿಂದ ಜಯ ಗಳಿಸಿತು.

ಸೆಮಿಫೈನಲ್ ಪಂದ್ಯದಲ್ಲಿ ಎಸ್‌ಆರ್‌ಎಂ ಇನ್‌ಸ್ಟಿಟ್ಯೂಟ್ 25-22, 25-22, 25-20ರಿಂದ ಮಂಗಳೂರು ವಿವಿಯನ್ನು ಮಣಿಸಿತು. ಮೂರನೇ ಸ್ಥಾನಕ್ಕೆ ನಡೆದ ಪೈಪೋಟಿಯಲ್ಲೂ ಮಂಗಳೂರು ವಿವಿ ನಿರಾಸೆ ಅನುಭವಿಸಿತು. ಕೊಲ್ಕತ್ತಾ ವಿವಿ ವಿರುದ್ಧದ ಪಂದ್ಯದಲ್ಲಿ 25-27, 25-21, 25-16, 25-22ರಲ್ಲಿ ಮಂಗಳೂರು ವಿವಿ ಸೋಲನುಭವಿಸಿತು.

ಟ್ರ್ಯಾಕ್‌ನಲ್ಲಿ ಅವಘಡ: ರೇಸ್ ಸ್ಪರ್ಧಿ ಕುಮಾರ್ ಸಾವು

ಚೆನ್ನೈ (ಪಿಟಿಐ): ರೇಸಿಂಗ್ ವಲಯದಲ್ಲಿ ಎಲ್ಲರ ಗೌರವಕ್ಕೆ ಪಾತ್ರರಾಗಿದ್ದ ಕಾರು ರೇಸ್ ಸ್ಪರ್ಧಿ ಕೆ.ಇ.ಕುಮಾರ್ ಅವರು ಭಾನುವಾರ ರೇಸಿಂಗ್ ವೇಳೆ ನಡೆದ ಅವಘಡದಲ್ಲಿ ಮೃತಪಟ್ಟಿದ್ದಾರೆ.

ಕೆ.ಇ.ಕುಮಾರ್

59 ವರ್ಷದ ಕುಮಾರ್, ಚೆನ್ನೈನ ಮದ್ರಾಸ್ ಇಂಟರ್‌ನ್ಯಾಷನಲ್ ಸರ್ಕಿಟ್‌ನಲ್ಲಿ ನಡೆದ ಎಂಆರ್‌ಎಫ್ ಎಂಎಂಎಸ್‌ಸಿ ಎಫ್‌ಎಂಎಸ್‌ಸಿಐ ಇಂಡಿಯನ್‌ನ್ಯಾಷನಲ್‌ಕಾರುರೇಸಿಂಗ್‌ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡಿದ್ದರು.

ಭಾನುವಾರ ಬೆಳಿಗ್ಗೆ ನಡೆದ 'ಸಲೂನ್ ಕಾರು' ವಿಭಾಗದ ಸ್ಪರ್ಧೆಯ ವೇಳೆ ದುರಂತ ಸಂಭವಿಸಿದೆ. ಕುಮಾರ್ ಚಾಲನೆ ಮಾಡುತ್ತಿದ್ದ ಕಾರು ಸಹ ಸ್ಪರ್ಧಿಯ ಕಾರಿಗೆ ಡಿಕ್ಕಿಯಾಗಿ ಜಾರಿಕೊಂಡು ಟ್ರ್ಯಾಕ್‌ನಿಂದ ಹೊರಕ್ಕೆ ಹೋಗಿದೆ. ಆ ಬಳಿಕ ರಭಸದಿಂದ ತಡೆಗೋಡೆಗೆ ಅಪ್ಪಳಿಸಿ ಪಲ್ಟಿಯಾಗಿದೆ.

ಗಂಭೀರ ಗಾಯಗೊಂಡಿದ್ದ ಕುಮಾರ್ ಅವರಿಗೆ ಟ್ರ್ಯಾಕ್‌ನಲ್ಲಿರುವ ವೈದ್ಯಕೀಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಲಾಯಿತು. ಆ ಬಳಿಕ ಸಮೀಪದ ಆಸ್ಪತ್ರೆಗೆ ದಾಖಲಿಸಿದರೂ, ಅಲ್ಲಿ ನಿಧನರಾದರು.

'ಇದು ಅತ್ಯಂತ ದುರದೃಷ್ಟಕರ ಘಟನೆ. ಕುಮಾರ್ ಅನುಭವಿ ರೇಸರ್ ಆಗಿದ್ದಾರೆ. ಒಬ್ಬ ಸ್ಪರ್ಧಿ ಹಾಗೂ ಗೆಳೆಯನಾಗಿ ನಾನು ಅವರನ್ನು ಹಲವು ವರ್ಷಗಳಿಂದ ಬಲ್ಲೆ. ಎಂಎಂಎಸ್‌ಸಿ ಹಾಗೂ ಇಡೀ ರೇಸಿಂಗ್ ವಲಯವು ಅವರ ನಿಧನಕ್ಕೆ ಸಂತಾಪ ಸೂಚಿಸುತ್ತದೆ' ಎಂದು ಇಂಡಿಯನ್ ನ್ಯಾಷನಲ್ ಕಾರು ರೇಸಿಂಗ್ ಚಾಂಪಿಯನ್‌ಷಿಪ್‌ನ ಮುಖ್ಯಸ್ಥ ವಿಕ್ಕಿ ಚಾಂಧೋಕ್ ಹೇಳಿದ್ದಾರೆ.

ಎಫ್‌ಎಂಎಸ್‌ಸಿಐ ಹಾಗೂ ಈ ರೇಸಿಂಗ್‌ನ ಸಂಘಟಕರಾದ ಎಂಎಂಎಸ್‌ಸಿ, ದುರ್ಘಟನೆ ಬಗ್ಗೆ ತನಿಖೆ ಆರಂಭಿಸಿದೆ ಎಂದಿದ್ದಾರೆ.

ಅಪಘಾತ ನಡೆದ ಕೂಡಲೇ ಇಡೀ ದಿನದ ರೇಸ್‌ಗಳನ್ನು ರದ್ದುಗೊಳಿಸಲಾಯಿತು.

ಸಂಕ್ಷಿಪ್ತ ಸುದ್ದಿ

ಶ್ರೀಲಂಕಾಗೆ 75 ಬಸ್ ಹಸ್ತಾಂತರಿಸಿದ ಭಾರತ

ಕೊಲಂಬೊ (ಪಿಟಿಐ): ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಶ್ರೀಲಂಕಾದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಭಾರತವು 75 ಬಸ್‌ಗಳನ್ನು ಹಸ್ತಾಂತರಿಸಿದೆ.

'ನೆರೆ ಹೊರೆ ಪ್ರಥಮ' ಎಂಬ ನೀತಿಯಂತೆ ಭಾರತದಿಂದ ಈ ನೆರವು ದೊರೆತಿದ್ದು, ಒಟ್ಟು 500 ಬಸ್‌ಗಳನ್ನು ನೀಡಲಿದೆ. ಅದರ ಭಾಗವಾಗಿ 75 ಬಸ್‌ಗಳನ್ನು ನೀಡಲಾಗಿದೆ ಎಂದು ಭಾರತೀಯ ಹೈಕಮಿಷನರ್ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಳೆದ ತಿಂಗಳು ಭಾರತವು ಲಂಕಾದ ಪೊಲೀಸ್ ಇಲಾಖೆಗೆ 125 ಎಸ್‌ಯುವಿಗಳನ್ನು ನೀಡಿತ್ತು.

ನ್ಯೂಜಿಲೆಂಡ್: ಭೂಕಂಪ– ಸುನಾಮಿ ಎಚ್ಚರಿಕೆ

ವೆಲ್ಲಿಂಗ್ಟನ್, ನ್ಯೂಜಿಲೆಂಡ್ (ಎಪಿ): ವನವಾಟುವಿನ ಪೆಸಿಫಿಕ್ ದ್ವೀಪಸಮೂಹದಲ್ಲಿ ಭಾನುವಾರ ರಿಕ್ಟರ್ ಮಾಪಕದಲ್ಲಿ 7.0 ತೀವ್ರತೆಯ ಭೂಕಂಪ ಸಂಭವಿಸಿದ್ದು, ಸುನಾಮಿಯ ಅಪಾಯವಿದೆ ಎಂದು ಅಮೆರಿಕದ ಭೂಸರ್ವೇಕ್ಷಣಾ ಇಲಾಖೆ ಎಚ್ಚರಿಕೆ ನೀಡಿದೆ.

ಭೂಕಂಪದ ಕೇಂದ್ರ ಬಿಂದು ಓಲ್ರಿ ಬಂದರಿನಿಂದ 23 ಕಿಲೋಮೀಟರ್ ದೂರದಲ್ಲಿತ್ತು ಹಾಗೂ 27 ಕಿ.ಮೀ. ಆಳದಲ್ಲಿ ಇತ್ತು. ಸುನಾಮಿ ಎದುರಾದರೆ 300 ಕಿ.ಮೀ. ಇರುವ ಕರಾವಳಿಗೆ ಅಪಾಯ ಇದೆ ಎಂದು ತಿಳಿಸಲಾಗಿದೆ. ಸದ್ಯ ಯಾವುದೇ ಸಾವು, ನೋವಿನ ವರದಿಯಾಗಿಲ್ಲ.

ವನವಾಟುವಿನಲ್ಲಿ ಸುಮಾರು 2.80 ಲಕ್ಷ ಜನ ವಾಸಿಸುತ್ತಿದ್ದು, ಭೂಕಂಪ ಹಾಗೂ ಜ್ವಾಲಾಮುಖಿಗಳು ಈ ಭಾಗದಲ್ಲಿ ಸಮಾನ್ಯವಾಗಿವೆ.

ಸೆನೆಗಲ್‌ನಲ್ಲಿ ಬಸ್‌ಗಳ ಡಿಕ್ಕಿ: 40 ಸಾವು

ಡಕಾರ್, ಸೆನೆಗಲ್ (ಎಪಿ): ಆಫ್ರಿಕಾದ ಪಶ್ಚಿಮ ಭಾಗದ ರಾಷ್ಟ್ರವಾದ ಸೆನೆಗಲ್‌ನ ಮಧ್ಯ ಭಾಗದ ಗ್ನಿವಿ ಗ್ರಾಮದ ಕಫ್ರಿನ್ ಪ್ರದೇಶದಲ್ಲಿ ಎರಡು ಬಸ್‌ಗಳು ಪರಸ್ಪರ ಡಿಕ್ಕಿ ಹೊಡೆದುದರಿಂದ 40 ಮಂದಿ ಸಾವನ್ನಪ್ಪಿದ್ದು, 70ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ.

ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುತ್ತಿದ್ದ ಒಂದು ಬಸ್‌ನ ಟೈರ್ ಪಂಕ್ಚರ್ ಆಗಿ, ನಿಯಂತ್ರಣ ತಪ್ಪಿ ಎದುರಿನಿಂದ ಬರುತ್ತಿದ್ದ ಇನ್ನೊಂದು ಬಸ್‌ಗೆ ಡಿಕ್ಕಿ ಹೊಡೆದುದರಿಂದ ಈ ಅಪಘಾತ ಸಂಭವಿಸಿತು ಎಂದು ದೇಶದ ಅಧ್ಯಕ್ಷ ಮೇಕಿ ಸಾಲ್ ತಿಳಿಸಿದ್ದಾರೆ.

ಕ್ವಾರಂಟೈನ್ ನಿರ್ಬಂಧ ಅಂತ್ಯ

ಚೀನಾ: 3 ವರ್ಷಗಳ ಬಳಿಕ ಕಠಿಣ ನಿಯಮ ತೆರವು

ಬೀಜಿಂಗ್ (ಪಿಟಿಐ): ಚೀನಾದಲ್ಲಿ ಕೋವಿಡ್ ಪಿಡುಗು ಕಂಡುಬಂದ ಬಳಿಕ ಕಳೆದ ಮೂರು ವರ್ಷಗಳಿಂದ ಇದ್ದಂತಹ ಕ್ವಾರಂಟೈನ್ ಕಡ್ಡಾಯ ನಿಯಮವನ್ನು ಭಾನುವಾರದಿಂದ ಸಂಪೂರ್ಣವಾಗಿ ತೆಗೆದುಹಾಕಲಾಗಿದ್ದು, ದೇಶಕ್ಕೆ ಬರಲು ಕಾತರವಾಗಿದ್ದ ಸಾವಿರಾರು ಮಂದಿ ತಾಯ್ನಾಡಿಗೆ ಆಗಮಿಸಿ ಸಂಭ್ರಮಿಸಿದರು.

ಚೀನಾದಲ್ಲಿ ಕೋವಿಡ್ ಮತ್ತೆ ಉಲ್ಬಣಿಸಿದ್ದು, ಇದೇ ಸಂದರ್ಭದಲ್ಲಿ ಹೊಸ ವರ್ಷದ ಸಂಭ್ರಮವೂ ಬಂದಿದೆ. ಚೀನಾದಲ್ಲಿ ಭಾರಿ ಪ್ರಮಾಣದಲ್ಲಿ ಕೋವಿಡ್ ವ್ಯಾಪಿಸಿರುವುದರಿಂದ ಹಲವು ದೇಶಗಳು ಚೀನಾದಿಂದ ಬರುವ ಜನರಿಗೆ ನಿರ್ಬಂಧ ಹೇರಿದ ಸಂದರ್ಭದಲ್ಲೇ ಚೀನಾದಿಂದ ಈ ಪ್ರಯಾಣ ನಿರ್ಬಂಧ ತೆರವು ಘೋಷಣೆಯಾಗಿದೆ.

ಭಾನುವಾರ ನಸುಕಿನಲ್ಲಿ ಟೊರಂಟೊ ಮತ್ತು ಸಿಂಗಪುರದಿಂದ ಬಂದ, 387 ಪ್ರಯಾಣಿಕರಿದ್ದ ಎರಡು ವಿಮಾನಗಳು ದಕ್ಷಿಣ ಗ್ವಾಂಗ್‌ಡಂಗ್ ಪ್ರಾಂತ್ಯದ ಗ್ವಾಂಗ್‌ಝೌ ಮತ್ತುಇ ಶೆಂಝೆನ್ ವಿಮಾನ ನಿಲ್ದಾಣಗಳಲ್ಲಿ ಬಂದಿಳಿದವು ಎಂದು ಸರ್ಕಾರಿ ಸ್ವಾಮ್ಯದ ಸಿಜಿಟಿಎನ್ ಟಿವಿ ವರದಿ ಮಾಡಿದೆ.

ಬೀಜಿಂಗ್, ಟಿಯಾಂಜಿನ್, ಕ್ಷಿಯಾಮಿನ್‌ಗಳ ವಿಮಾನನಿಲ್ದಾಣಗಳಲ್ಲಿ ಸಹ ಪ್ರಯಾಣಿಕರ ದೊಡ್ಡ ಸರದಿ ಕಂಡುಬಂತು. ಹಾಂಕಾಂಗ್‌ನಿಂದ ಸಹ ಚೀನಾಕ್ಕೆ ಪ್ರಯಾಣವನ್ನು ಮುಕ್ತಗೊಳಿಸಲಾಗಿದೆ. ಚೀನಾದ ಇತರ ಗಡಿಗಳಲ್ಲಿ ಸಹ ಮುಕ್ತ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ಚೀನಾದ ಪೂರ್ವ ಭಾಗದ ಜೆಜಿಯಾಂಗ್ ಪ್ರಾಂತ್ಯದ ಹಾಂಗ್‌ಜೌ ಈಸ್ಟ್ ರೈಲು ನಿಲ್ದಾಣದಲ್ಲಿ ಕಂಡುಬಂದ ಪ್ರಯಾಣಿಕರ ದಟ್ಟಣೆ –ಎಎಫ್‌ಪಿ ಚಿತ್ರ

ಕಳೆದ ತಿಂಗಳು ಚೀನಾದ ಕಟ್ಟುನಿಟ್ಟಿನ ಕೊರೊನಾ ನಿರ್ಬಂಧ ವಿರುದ್ಧ ಜನರು ದಂಗೆ ಎದ್ದಿದ್ದರು. ಬಳಿಕ ತನ್ನ ಕಠಿಣ ನಿಲುವು ಸಡಿಲಿಸಿದ್ದ ಚೀನಾ, ಜನವರಿ 7ರ ನಂತರ ಪ್ರಯಾಣ ನಿರ್ಬಂಧವನ್ನು ತೆರವುಗೊಳಿಸುವ ಭರವಸೆ ನೀಡಿತ್ತು. ದೇಶಕ್ಕೆ ಹೊರಡುವ 48 ಗಂಟೆಗಳ ಮೊದಲು ಪಿಸಿಆರ್ ಪರೀಕ್ಷೆ ಮಾಡಿಸಿಕೊಂಡರೆ ಸಾಕು ಎಂದು ಹೇಳಿತ್ತು.

ಕೊರೊನಾ ಸಂಬಂಧಿತ ಪ್ರಕರಣಗಳಲ್ಲಿ ಬಂಧಿತರಾಗಿದ್ದ ನೂರಾರು ಜನರನ್ನು ಬಿಡುಗಡೆಗೊಳಿಸಲು ಚೀನಾ ಸರ್ಕಾರ ಶನಿವಾರ ಆದೇಶ ನೀಡಿದೆ.

ಜಗತ್ತಿನಿಂದ ದೂರ: ಚೀನಾದ ವುಹಾನ್‌ನಿಂದ ಕೋವಿಡ್ ಉಗಮವಾಯಿತು ಎಂಬುದು ಈಗಾಗಲೇ ಸಾಬೀತಾಗಿದ್ದು, ಕೋವಿಡ್ ನಿಯಂತ್ರಿಸಲು ತಾನು ಅಗತ್ಯದ ಎಲ್ಲಾ ಕ್ರಮ ಕೈಗೊಳ್ಳುವುದಾಗಿ ಸರ್ಕಾರ ಹೇಳಿತ್ತು. ಅದರಂತೆ ಕಳೆದ 3 ವರ್ಷಗಳಿಂದ ಕಠಿಣ ನಿರ್ಬಂಧ ಹೇರಿತ್ತು. ಇದರಿಂದಾಗಿ ಚೀನಾದ ಪ್ರಜೆಗಳು ಜಗತ್ತಿನ ಇತರ ಭಾಗಗಳಿಂದ ಪ್ರತ್ಯೇಕಗೊಂಡಂತಹ ಭಾವದಲ್ಲಿದ್ದರು. ಈ ಬಾರಿ ಹೊಸ ವರ್ಷದ 40 ದಿನಗಳ ಸಂಭ್ರಮಾಚರಣೆ ಅವಧಿಯಲ್ಲಿ 200 ಕೋಟಿ ಪ್ರಯಾಣಗಳು ದಾಖಲಾಗುವ ನಿರೀಕ್ಷೆ ಇದೆ. ಕಳೆದ ವರ್ಷದ ಜನರ ಸಂಚಾರಕ್ಕೆ ಹೋಲಿಸಿದರೆ ಇದು ದುಪ್ಪಟ್ಟು ಆಗಿರಲಿದ್ದು, 2019ಕ್ಕೆ ಹೋಲಿಸಿದರೆ ಶೇ 70ರಷ್ಟು ಆಗಿರಲಿದೆ ಎನ್ನಲಾಗಿದೆ.

ಕೋವಿಡ್ ಪರೀಕ್ಷೆ ಕಿಟ್ ಕಾರ್ಖಾನೆಯಲ್ಲಿ ಕಾರ್ಮಿಕರ ಜಗಳ

ಬೀಜಿಂಗ್ (ಎಎಫ್‌ಪಿ): ಚೀನಾದ ನೈರುತ್ಯ ಭಾಗದ ಚಾಂಗ್‌ಕಿಂಗ್ ನಗರದಲ್ಲಿನ ಕೋವಿಡ್ ಪರೀಕ್ಷೆ ಕಿಟ್ ತಯಾರಿಕಾ ಕಾರ್ಖಾನೆಯಲ್ಲಿ ನೂರಾರು ಕಾರ್ಮಿಕರು ಪೊಲೀಸರೊಂದಿಗೆ ನಡೆಸಿರುವ ಘರ್ಷಣೆ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಭಾನುವಾರ ಹರಿದಾಡಿದೆ.

ಮತ್ತೆ ವ್ಯಾಪಕವಾಗಿರುವ ಕೋವಿಡ್ ಪಿಡುಗಿನಿಂದ ದೇಶವು ಹೊರಬರಲು ಪ್ರಯತ್ನಿಸುತ್ತಿರುವ ಸಂದರ್ಭದಲ್ಲೇ ಈ ಘಟನೆ ನಡೆದಿದೆ.

ಪೊಲೀಸರ ಮೇಲೆ ಮೇಲೆ ಕಾರ್ಮಿಕರು ಬುಟ್ಟಿಗಳನ್ನು ಎಸೆಯುವ ಹಾಗೂ ಪರೀಕ್ಷಾ ಕಿಟ್‌ಗಳನ್ನು ತೋರಿಸುವ ದೃಶ್ಯ ಕಂಡುಬಂದಿದೆ. ಇನ್ನೊಂದು ದೃಶ್ಯದಲ್ಲಿ 'ಅಕ್ರಮ ಚಟುವಟಿಕೆಗಳನ್ನು ನಿಲ್ಲಿಸಿ' ಎನ್ನುವ ಧ್ವನಿ ಕೇಳಿಸುತ್ತದೆ. ವಿಡಿಯೊ ಹಂಚಿಕೊಂಡ ವ್ಯಕ್ತಿ 'ಅನೇಕರಿಗೆ ವೇತನ ನೀಡಿಲ್ಲ' ಎಂದು ಬರೆದುಕೊಂಡಿದ್ದಾರೆ ಎಂಬುದಾಗಿ ಸುದ್ದಿಸಂಸ್ಥೆ ವರದಿ ಮಾಡಿದೆ.

ಶವಸಂಸ್ಕಾರ ಮೆರವಣಿಗೆ ಮೇಲೆ ಟ್ರಕ್ ಹರಿದು 19 ಸಾವು

ಬೀಜಿಂಗ್ (ಎಎಫ್‌ಪಿ): ಚೀನಾದ ಜಿನ್‌ಕ್ಸಿ ಪ್ರಾಂತ್ಯದ ನಾಂಚಾಂಗ್ ಕೌಂಟಿಯಲ್ಲಿ ಭಾನುವಾರ ಶವಸಂಸ್ಕಾರ ಮೆರವಣಿಗೆ ಮೇಲೆ ಟ್ರಕ್ ಹರಿದ ದುರಂತದಲ್ಲಿ 19 ಮಂದಿ ಮೃತಪಟ್ಟು, 20 ಮಂದಿ ಗಾಯಗೊಂಡಿದ್ದಾರೆ.

600 ಉಕ್ರೇನಿ ಸೈನಿಕರ ಸಾವು

ಮಾಸ್ಕೊ (ರಾಯಿಟರ್ಸ್): ಕ್ರಾಮರಸ್ಕ್‌ನಲ್ಲಿನ ತಾತ್ಕಾಲಿಕ ಸೇನಾ ನೆಲೆಯ ಮೇಲೆ ಸಶಸ್ತ್ರ ಪಡೆಗಳು ಭಾರಿ ಕ್ಷಿಪಣಿ ದಾಳಿ ನಡೆಸಿ 600ಕ್ಕೂ ಹೆಚ್ಚು ಉಕ್ರೇನ್ ಸೈನಿಕರನ್ನು ಕೊಂದಿವೆ ಎಂದು ರಷ್ಯಾ ರಕ್ಷಣಾ ಸಚಿವಾಲಯದ ವಕ್ತಾರ ಲೆಫ್ಟಿನೆಂಟ್ ಜನರಲ್ ಐಗೊರ್ ಕೊನಶೆಂಕೋವ್ ಭಾನುವಾರ ತಿಳಿಸಿದ್ದಾರೆ.

ಡೊನೆಟ್‌ಸ್ಕ್ ಗಣರಾಜ್ಯದ ಮಕೀವ್ಕಾದಲ್ಲಿ ರಷ್ಯಾ ಸೈನಿಕರು ಬೀಡು ಬಿಟ್ಟಿದ್ದ ತಾತ್ಕಾಲಿಕ ಸೇನಾ ನೆಲೆಯ ಮೇಲೆ ಉಕ್ರೇನ್ ಸೇನೆ ಹೊಸ ವರ್ಷದ ವೇಳೆ ಹಿಮಾರ್ಸ್ ಕ್ಷಿಪಣಿ ದಾಳಿ ನಡೆಸಿ 89 ಮಂದಿ ರಷ್ಯಾ ಸೈನಿಕರನ್ನು ಕೊಂದಿತ್ತು.

ಶನಿವಾರ ನಡೆದ ಕ್ಷಿಪಣಿ ದಾಳಿಯು ಪ್ರತೀಕಾರದ ಕಾರ್ಯಾಚರಣೆಯ ಭಾಗವಾಗಿತ್ತು. ಕ್ರಾಮರಸ್ಕ್‌ನ ಸೇನಾ ನೆಲೆಯ ವಸತಿ ನಿಲಯದ ಸಂಖ್ಯೆ 28ರಲ್ಲಿ 700ಕ್ಕೂ ಹೆಚ್ಚು ಮತ್ತು ವಸತಿ ನಿಲಯದ ಸಂಖ್ಯೆ 47ರಲ್ಲಿ 600ಕ್ಕೂ ಹೆಚ್ಚು ಉಕ್ರೇನ್ ಸೈನಿಕರು ತಂಗಿದ್ದರು ಎಂದು ಐಗೋರ್ ಹೇಳಿರುವುದಾಗಿ ರಷ್ಯಾದ ಸುದ್ದಿ ಸಂಸ್ಥೆ 'ಟಾಸ್' ವರದಿ ಮಾಡಿದೆ.